ಪ್ರವಾಸಿಯ ಪ್ರಬಂಧಗಳು

ಪ್ರವಾಸಾನುಭವ ಆಧಾರಿತ ಲಲಿತ ಪ್ರಬಂಧಗಳು



ಡಾ. ಕೃಷ್ಣಾನಂದ ಕಾಮತ್

ಪ್ರವಾಸಿಯ ಪ್ರಬಂಧಗಳು

ಪ್ರವಾಸಾನುಭವ ಆಧಾರಿತ ಲಲಿತ ಪ್ರಬಂಧಗಳು

ಡಾ। ಕೃಷ್ಣಾನಂದ ಕಾಮತ್

ಶ್ರೀವಾರಿ ಪ್ರಕಾಶನ
ಬೆಂಗಳೂರು - 560 003

Pravasiya Prabandagalu - A collection of essays based on Travel Experiences by **Dr. Krishnananda Kamat** in Kannada language, PPVI+126, 1/8th Demy Size, Price Rs. 70/- (Rupees Seventy only) Printed at Sharadh Enterprises, Nagappa Street, Bangalore - 560 003 and Published by M/s. Srivari Prakashana, Bangalore - 560 003

ಬೆಲೆ : ರೂ. 70/-

ಪ್ರಕಾಶನ :
ಶ್ರೀವಾರಿ ಪ್ರಕಾಶನ
ನಂ. 19/6, ನಾಗಪ್ಪ ಬೀದಿ,
ಪ್ಯಾಲೆಸ್ ಗುಟ್ಟಹಳ್ಳಿ, ಬೆಂಗಳೂರು-560 003
ದೂರವಾಣಿ : 3444311
e-mail : srivaripusthaka@hotmail.com

ಮುಖಪುಟ : ರಚನ
ಮುಖಪುಟ ಛಾಯ ಚಿತ್ರ : ಡಾ। ಕೃಷ್ಣಾನಂದ ಕಾಮತ್

ಮುದ್ರಕರು :
ಶರದ್ ಎಂಟರ್‌ಪ್ರೈಸಸ್
ನಾಗಪ್ಪ ಬೀದಿ, ಪ್ಯಾಲೆಸ್ ಗುಟ್ಟಹಳ್ಳಿ,
ಬೆಂಗಳೂರು-560 003
ದೂರವಾಣಿ : 3310023

ಬಿನ್ನಹ

ಈಚಿನ ದಿನಗಳಲ್ಲಿ ಕನ್ನಡ ಪುಸ್ತಕಗಳ ಪ್ರಕಾಶನ ಬಹು ಸುಂದರವಾಗಿ ಮೂಡಿ ಬರುತ್ತಿದೆ. ಹಲವಾರು ವರ್ಷಗಳಿಂದ ಮುದ್ರಣ ಹಾಗೂ ಪುಸ್ತಕ ಮಾರಾಟ ಕ್ಷೇತ್ರಗಳಲ್ಲಿ ಅನುಭವ ಹೊಂದಿರುವ ಮೂರು ನಾಲ್ಕು ಗೆಳೆಯರು, ಪ್ರಕಾಶನ ಉದ್ಯಮ ಆರಂಭಿಸಿ, ತನ್ಮೂಲಕ ಆಂಗ್ಲಭಾಷೆಯಲ್ಲಿ ಬರುತ್ತಿರುವ ವೈವಿಧ್ಯಮಯ, ಸುಂದರ ವಿನ್ಯಾಸ ಮುದ್ರಣದ ಮಟ್ಟದಲ್ಲಿ ಕನ್ನಡದಲ್ಲಿಯೂ ಪುಸ್ತಕಗಳನ್ನು ಪ್ರಕಾಶಿಸಬೇಕೆಂದು ಕನಸು ಕಾಣುತ್ತಿದ್ದೆವು. ಅದೀಗ ಶ್ರೀವಾರಿ ಪ್ರಕಾಶನದ ಹೆಸರಿನಲ್ಲಿ ಕೈಗೂಡುತ್ತಿದೆ.

'ಪ್ರವಾಸಿಯ ಪ್ರಬಂಧಗಳು' ನಮಗೆ ಖುಷಿ ನೀಡಿರುವ ಪ್ರಕಟಣೆಯಾಗಿದೆ. ಕನ್ನಡ ಸಾಹಿತ್ಯದಲ್ಲಿ ಪ್ರವಾಸ ಸಾಹಿತ್ಯ ಹಾಗೂ ಪ್ರಬಂಧ ಸಾಹಿತ್ಯ ಪ್ರಕಾರಗಳು ಕ್ಷೀಣಿಸಿವೆ. ಪ್ರವಾಸ ಸಾಹಿತ್ಯವೆಂದರೆ ಯಾವುದೋ, ಪ್ರವಾಸಿ ಗೈಡ್ ಓದಿದಂತೆ ಅಥವಾ, ಆ ಪ್ರದೇಶದ ಚರಿತ್ರೆ ಓದಿದಂತೆ ಅನ್ನಿಸುವ ಬರಹಗಳೇ ಬಹುತೇಕ. ಆದರೆ ಕಾಮತ್‌ರ ಬರವಣಿಗೆ ಅದಕ್ಕಪವಾದ. ಜನ ಜೀವನದ ಒಳ ಹೊಕ್ಕು, ಸಾಮಾನ್ಯ ನಾಗರೀಕನಾಗಿ, ಸಾಮಾನ್ಯ ಜನರಿಗಾಗಿ ಅವರು ಬರೆಯುತ್ತಾರೆ. ಅಮೇರಿಕಾಗೆ ಹೋಗಿ ಬಂದವರೆಲ್ಲಾ ಯಥಾಶಕ್ತಿ ಪ್ರವಾಸಕಥನ ಬರೆದು ಪ್ರಕಟಿಸಿದ್ದಾರೆ. 'ನಾನೂ ಅಮೇರಿಕೆಗೆ ಹೋಗಿದ್ದೆ' ಎಂಬ ಕಾಮತ್‌ರ ಪ್ರವಾಸಾನುಭವ ಕಥನ ೩೦ ವರ್ಷ ಕಳೆದಿದ್ದರೂ ಜನಪ್ರಿಯತೆ ಉಳಿಸಿಕೊಂಡು ಮರುಮುದ್ರಣ ಕಾಣುತ್ತಲೇ ಇದೆ. ಅವರ ಸರಸಮಯ ನಿರೂಪಣಾ ಶೈಲಿಗೆ ಮಾರು ಹೋಗದಿರುವವರು ಯಾರು? ಎಂತಹ ಗಂಭೀರ ವಿಷಯಗಳನ್ನೂ ಅವರು ಲಾಲಿತ್ಯ ಪೂರ್ಣವಾಗಿ ನಿರೂಪಿಸುತ್ತಾರೆ. ಅಮೇರಿಕೆಯಲ್ಲಿ ಹಜಾಮತಿ, ಭಿಕ್ಷಾಟನೆಯ ಪರಂಪರೆ ಮುಂತಾದ ಬಿಡಿ ಬರಹಗಳನ್ನು ಪತ್ರಿಕೆಗಳಲ್ಲಿ ಓದಿದವರು, ಅಂತಹ ಸಂಕಲನಕ್ಕಾಗಿ ಕಾದಿದ್ದಾರೆ. ಪರೋಪಕಾರಿ ಪರಕೆ, ನಾ ಕಂಡ ಬೆಂಗಳೂರು, ಮುಂತಾದ ಪ್ರಬಂಧಗಳು, ಅವರ ಪ್ರವಾಸಿ ಜೀವನದ ಅನುಭವಗಳನ್ನು ಬೇರೆಯದೇ ರೀತಿ ನಮಗೆ ನೀಡಿ ಮುದಗೊಳಿಸುತ್ತವೆ. ಪ್ರವಾಸ ಮುಗಿಸಿ ಬಂದ ಮನೆಯ ಹಿರಿಯರು ಊಟ ಮಾಡುತ್ತ ಮನೆಯವರಲ್ಲರಿಗೆ ಕೊಡುವ ವಿವರಣೆಯಂತೆ ಅವು ನಮ್ಮನ್ನು ಆವರಿಸುತ್ತವೆ.

ಇಂತಹ ಒಂದು ಪ್ರಬಂಧ ಸಂಕಲನವೊಂದನ್ನು ಹೊರ ತರಬೇಕೆಂದು ಬಹು ಆಶಿಸಿ ನಾವು ಅವರ ಬೆನ್ನ ಬಿದ್ದೆವು. ತಮ್ಮ ಮಗನ ಮೂಲಕ ಅವರು ಸಾದರ ಪಡಿಸುತ್ತಿರುವ

ಅಂತರ್ಜಾಲ ಪತ್ರಿಕೆಯ ಸಂಬಂಧ ಕಾಮತ್‌ರು ಬಹು ಬಿಜಿ ಆಗಿದ್ದರೂ ನಮ್ಮ ಮೇಲೆ ಅಮಿತ ವಿಶ್ವಾಸ ತೋರಿ ಸಂಕಲನವನ್ನು ಸಿದ್ಧ ಮಾಡಿಕೊಟ್ಟಿದ್ದಾರೆ.

ಸ್ವಭಾವತಃ ಅವರು ಏಕಾಂತ ಪ್ರಿಯರು. ಪ್ರಚಾರ ಅವರಿಗಿಷ್ಟವಿಲ್ಲ. ವೇದಿಕೆಗಂತೂ ಬರುವುದೇ ಇಲ್ಲ ಎನ್ನುತ್ತಾರೆ. ಆದಾಗ್ಯೂ, ಪುಸ್ತಕದ ವಿವಿಧ ಹಂತಗಳಲ್ಲಿ ಅವರೊಂದಿಗೆ, ಚರ್ಚಿಸಲು ಹೋದಾಗ, ಅವರ ಶ್ರೀ 'ಮತಿ' ಡಾ। ಜ್ಯೋತ್ಸ್ನಾ ಕಾಮತ್‌ರು ತಿಂಡಿ ಕಾಫಿಗಳ ಉಪಚಾರ ನೀಡಿದ್ದಾರೆ. ಮೇಲಾಗಿ, ಕಾಮತ್ ದಂಪತಿಗಳ ಸರಸ ಸಂಭಾಷಣೆ, ಪ್ರೇಮ ಕಲಹಗಳಿಗೆ ನಾವು ಸಾಕ್ಷಿಯಾಗಿ ಪಾರು ಹೋಗಿದ್ದೇವೆ. ಆಧುನಿಕ ಮುದ್ದಣ ಮನೋರಮೆಯರಂತೆ ಅವರು, ಓದು-ಬರಹ, ಸರಸ-ಸಂಭಾಷಣೆಯಲ್ಲಿ ತೊಡಗಿರುವ ಧನ್ಯ ದಂಪತಿಗಳಾಗಿದ್ದಾರೆ. ಇವರಿಗೆ ನಮ್ಮ ಹೃದಯಾಂತರಾಳದ ಕೃತಜ್ಞತೆಗಳು.

ಪುಸ್ತಕಕ್ಕೆ ಸುಂದರ ರಕ್ಷಾಪುಟ ವಿನ್ಯಾಸ ಮಾಡಿದ ಗೆಳೆಯ ಶ್ರೀ ಮಧುಗೆ, ಡಿ.ಟಿ.ಪಿ. ನಿರ್ವಹಿಸಿದ ಮಹೇಶ್‌ಗೆ, ಅಂದಾವಾಗಿ ಮುದ್ರಿಸಿದ ಶರದ್ ಎಂಟರ್‌ಪ್ರೈಸಸ್‌ನ ಶ್ರೀನಿವಾಸ್, ರಾಧಾಕೃಷ್ಣ ಮುಂತಾದ ಗೆಳಯರಿಗೆ ನಮ್ಮ ಕೃತಜ್ಞತೆಗಳು. ಕೊಂಡು ಓದುತ್ತಿರುವ ಸಹೃದಯ ಕನ್ನಡಿಗನಿಗೆ ನಮ್ಮ ನಮನಗಳು.

ಪ್ರಕಾಶಕರು

ಮೊದಲ ಮಾತು

ತಮ್ಮ ಬಾಲ್ಯದಲ್ಲಿಯೇ ನನ್ನ ಬರವಣಿಗೆಯನ್ನು ಓದಿ ಮೆಚ್ಚಿಕೊಂಡ ಉತ್ಸಾಹಿ ಯುವ ಪ್ರಕಾಶಕ ಶ್ರೀ ದಯಾಶಂಕರರು ನನ್ನ ಕೃತಿಯೊಂದನ್ನು ಪ್ರಕಟಿಸಲು ಆತುರತೆ ವ್ಯಕ್ತ ಪಡಿಸಿದಾಗ, ಹಸ್ತ ಪ್ರತಿಗಳನ್ನು ಮುಂಚಿತವಾಗಿ ಬರೆದು ಕೂಡಹಾಕುವ ಹವ್ಯಾಸ ಇರದ್ದರಿಂದ, ಕಷ್ಟಕ್ಕಿಟ್ಟುಕೊಂಡಿತು. 'ಸಾಹಿತ್ಯದ ಪ್ರಬಂಧ ಪ್ರಕಾರ, ಸಾವಿನ ಅಂಚಿನಲ್ಲಿದೆ! ಇಂಥ ಪ್ರಕಟಿತ ಪ್ರಬಂಧಗಳಿದ್ದರೂ ನಡೆದೀತು! ಕೊಡಿ' ಎಂದಾಗ ನೆಮ್ಮದಿ ಅನಿಸಿತು. 'ಪ್ರವಾಸಿಯ ಪ್ರಬಂಧಗಳು' ಸಂಘಟಿತವಾಯಿತು.

ಈ ಇಪತ್ತಾಮುರು ಪ್ರಬಂಧಗಳು, ಕಳೆದ ಮೂರು ದಶಕಗಳಲ್ಲಿ ಕರ್ಮವೀರ, ಕಸ್ತೂರಿ, ಸುಧಾ, ಪ್ರಜಾವಾಣಿ, ಮಯೂರ, ಮಲ್ಲಿಗೆ, ಉದಯವಾಣಿ, ತರಂಗ, ತುಷಾರ, ಮೊದಲಾದ ಪ್ರಮುಖ ಕನ್ನಡ ಪತ್ರಿಕೆಗಳಲ್ಲಿ ಪ್ರಕಟವಾದವುಗಳು. ವಿವಿಧ ಪತ್ರಿಕೆಗಳ ಪ್ರಕಟಣಾ ಅವಶ್ಯಕತೆಗೆ ಅನುಸಾರವಾಗಿ ಇವುಗಳನ್ನು ಬರೆದಿದ್ದರಿಂದ, ಇವುಗಳಲ್ಲಿ ಏಕಸೂತ್ರತೆ ಬರುವ ಸಾಧ್ಯತೆ ಇರಲೇ ಇಲ್ಲ. ವಿಷಯದ ಆಯ್ಕೆಯಲ್ಲಿ, ಮಂಡನೆಯಲ್ಲಿ, ವಿವೇಚನೆಯಲ್ಲಿಯೂ ವ್ಯತ್ಯಾಸ ಕಾಣುವಂತೆ ಇದೆ. ಹಾಸ್ಯಪ್ರಬಂಧಗಳಿಂದ ಪ್ರಾರಂಭಿಸಿ ವಿಚಾರ ಮಂಥನದತ್ತ ಎಳೆದೊಯ್ಯುವ ಪ್ರಯತ್ನ ಇದೆ. ಈ ಪ್ರಬಂಧಗಳ ಕಾಲಾವಧಿಯಲ್ಲಿ ಅನೇಕ ಬದಲಾವಣೆಗಳಾಗಿವೆ. ಆದರೆ ಬರೆದ ಕಾಲದ ಸ್ಥಿತಿ-ಗತಿಗಳನ್ನು ಅವು ಬಿಂಬಿಸುತ್ತವೆ. ಆದ್ದರಿಂದ ವರ್ತಮಾನದ ಬದಲಾವಣೆ ಮಾಡದೇ ಹಾಗೇ ಇಡಲಾಗಿದೆ. ಉದಾಹರಣೆಗೆ, ಅಮೇರಿಕೆಯಲ್ಲಿ ಹಜಾಮತಿ, ಲೇಖ ಬರೆದಾಗ, ಒಂದು ಡಾಲರ್‌ದ ಬೆಲೆ ಐದು ರೂಪಾಯಿಗಳಿದ್ದದ್ದು ಇಂದು ಐವತ್ತಕ್ಕೇರಿದೆ! ಹಜಾಮತಿಯ ಬೆಲೆಯೂ ಅದಕ್ಕನುಗುಣವಾಗಿ ಬೆಳೆದಿದೆ.

ಅಂದವಾದ ಮುದ್ರಣ ಸೊಗಸಾದ ಮುಖಪುಟಗಳನ್ನು ಹೊಂದಿಸಿ, ಅತ್ಯಲ್ಪ ಅವಧಿಯಲ್ಲಿ ಅಚ್ಚುಕಟ್ಟಾಗಿ ಪ್ರಕಟಿಸಿದ ಶ್ರೀ ದಯಾಶಂಕರ ಹಾಗೂ ಶ್ರೀವಾರಿ ಪ್ರಕಾಶನದ ಸಿಬ್ಬಂದಿ ವರ್ಗದವರಿಗೆ ಅನಂತ ಕೃತಜ್ಞತೆಗಳು.

ಕೃಷ್ಣಾನಂದ ಕಾಮತ್
೧೧೦ ಶಶಿಕಿರಣ, ೧ಲನೇ ಅಡ್ಡರಸ್ತೆ,
ಮಲ್ಲೇಶ್ವರಂ, ಬೆಂಗಳೂರು-೫೫

ಪರಿವಿಡಿ

ಅಮೇರಿಕೆಯಲ್ಲಿ ಹಜಾಮತಿ

ಹಜಾಮನನ್ನು ಮನೆಗೇ ಕರೆಸಿಕೊಂಡು ಎಲ್ಲ ರೀತಿಯ ಹಜಾಮತಿಯ ಸೇವೆ ಮಾಡಿಸಿಕೊಂಡು ಎಂಟಾಣೆ ಕೈಯಲ್ಲಿಟ್ಟು ಕಳಿಸುವ ದೇಶದಿಂದ ಅಮೇರಿಕಕ್ಕೆ ಬಂದವರ ಗೋಳು ಹೇಳತೀರದು. ಹಜಾಮನ ಅಂಗಡಿಗೆ ಹೋಗಿ ಹದಿನೈದು ನಿಮಿಷಗಳಲ್ಲಿ ವಿದ್ಯುತ್ ಯಂತ್ರದಿಂದ ಮಾಡಿದ ಹಜಾಮತಿಗೆ ಎರಡು ಡಾಲರು (೧೫ ರೂಪಾಯಿ) ಕೊಟ್ಟು ಮೇಲೆ ಮನಸ್ಸಿಲ್ಲದ ಮನಸ್ಸಿನಿಂದ ಬಕ್ಷೀಸ್ (Tips) ಎಂದು ಅರ್ಧ ಡಾಲರು ಹಜಾಮನ ಕೈಯಲ್ಲಿ ಹಾಕಿ ಮನೆಗೆ ಬಂದಾಗ ಇದು ದೊಡ್ಡ ದುಂದುಗಾರಿಕೆ ಎನಿಸಿ ಬಿಡುತ್ತದೆ. ಸುಲಭವಾಗಿ ಹಣ ದೊರೆಯುತ್ತದೆಂದು ಬಂದ ನಾಡಿನಲ್ಲಿ ಅದಕ್ಕಿಂತ ಹೆಚ್ಚು ಸುಲಭವಾಗಿ ಹಣ ಖರ್ಚಾಗುತ್ತದೆಂದು ತಿಳಿದಾಗ ಕಳವಳವಾಗದೇ ಇರುವುದೆ? ಕೇಶಕರ್ತನದ ಈ ಖರ್ಚು ಉಳಿಸುವುದು ಹೇಗೆ ಎನ್ನುವ ಸಮಸ್ಯೆ ನನ್ನ ಮತ್ತು ನನ್ನ ಮೂವರು ಸ್ನೇಹಿತರ ತಲೆ ತಿನ್ನ ಹತ್ತಿತು.

ನಾವಾಗ ನಾಲ್ವರು ಭಾರತೀಯರು ಒಟ್ಟಾಗಿ ಇರುತ್ತಿದ್ದೆವು. ಬಿಷಣ್ ಕಪೂರ್ ಪಂಜಾಬಿ, ತುಷಾರ್ ಚಟರ್ಜಿ ಬಂಗಾಲಿ, ಮೂರ್ತಿ ತಮಿಳು ನಾಡಿನವ. ನಮ್ಮ ಪ್ರಾಂತ ಭಾಷೆಗಳು ಭಿನ್ನವಾಗಿದ್ದರೂ ವಿದೇಶ ವಾಸ ನಮ್ಮೆಲ್ಲರಲ್ಲಿ ಐಕ್ಯ ತಂದಿತ್ತು. ಅದರಲ್ಲಿಯೂ ಸಾಮಾನ್ಯ ಸಮಸ್ಯೆಗಳನ್ನು ಎದುರಿಸಬೇಕಾದಾಗ ನಾವೆಲ್ಲ ಒಟ್ಟಾಗಿಯೇ ಚರ್ಚಿಸುತ್ತಿದ್ದೆವು. ಈ ಬಾರಿ ನಾವೆಲ್ಲ ಈ ಹಜಾಮತಿಯ ರೊಕ್ಕ ಹೇಗೆ ಉಳಿಸುವುದೆಂದು ಲೆಕ್ಕ ಹಾಕಿದೆವು.

ಚಟರ್ಜಿ ಹೊಸ ವಿಚಾರಗಳನ್ನು ಹುಡುಕಿ ತೆಗೆಯುವುದರಲ್ಲಿ ಕುಶಾಗ್ರಮತಿ. ತನ್ನ ಎಂಜನಿಯರಿಂಗ್ ಸಹಪಾಠಿಗಳಲ್ಲಿ ಅನೇಕರಿಗೆ ಕೇಶಕರ್ತನ ಗೊತ್ತಿರುವುದನ್ನು ನೋಡಿದ್ದ. ಹಜಾಮತಿಯ ಹತ್ತು ಪಾಠಗಳು (Ten Lessons in Hair Cutting) ಎಂಬ ಪುಸ್ತಕವೊಂದನ್ನು ತಂದ. ಅದನ್ನು ಸರಿಯಾಗಿ ಓದಿಕೊಡು ನಾವೇ ಮನೆಯಲ್ಲಿ ಒಬ್ಬರಿಗೊಬ್ಬರು ಹಜಾಮತಿ ಮಾಡಬಹುದೆಂದ. ಕಪೂರ್ ಪೇಟೆಗೆ ಹೋಗಿ ವಿದ್ಯುತ್ ಕ್ಲಿಪ್ಪರ್ (Clipper), ರೇಝರ್, ಮೂರು ತರಹದ ಕತ್ತರಿಗಳು, ಒಂದು ಬಾಚಣಿಗೆ ಮತ್ತು ಕೂದಲು ಝಾಡಿಸುವ ಬ್ರಶ್ ತಂದ.

ಈ ಹೊಸ ಸಾಹಸಕ್ಕೆ ಪ್ರಯೋಗ ಭೂಮಿ ಬೇಕಲ್ಲ? ಕಪೂರನಿಗೆ ಸೊಂಪಾದ ಕೇಶಶ್ರೀ ಇತ್ತು. ಆದ್ದರಿಂದ ಹೆಚ್ಚಿನ ಧೈರ್ಯದಿಂದ ತಲೆಯನ್ನು ಚಟರ್ಜಿಗೆ ಒಡ್ಡಿದ. ಕ್ಲಿಪ್ಪ್‌ರ್ ಗೊಂಯ್ ಸಪ್ಪಳ ಪ್ರಾರಂಭಿಸಿತು ಕಪೂರನಿಗೆ ಎಂಥ 'ಕಟ್' ಬೇಕೆಂದು ವಿಚಾರಿಸಿಕೊಂಡು ಲೀಲಾಜಾಲವಾಗಿ ಕ್ಲಿಪರ್ ಕಪೂರನ ತಲೆ ತುಂಬ ಓಡಾದಿಸಿದ.

ಐದು ನಿಮಷಗಳ ನಂತರ ಕಪೂರ್ ಎದ್ದು ಕನ್ನಡಿಯಲ್ಲಿ ನೋಡಿದಾಗ ತನ್ನ ಗುರುತೇ ಸಿಗುವಂತೆ ತೋರಲಿಲ್ಲ! ಕತ್ತರಿಯಿಂದ ಕತ್ತರಿಸಬೇಕಾದ ಕೂದಲಿಗೆ ಕ್ಲಿಪರ್ ಪ್ರಯೋಗಿಸಿ ತಲೆಗೂದಲು ವಿದ್ರೂಪವಾಗಿ ಕಟ್ ಆಗಿತ್ತು. ತಲೆ, ಗುಡ್ಡ ಪರ್ವತ ನದಿ ಕೊಳ್ಳಗಳೆಲ್ಲ ಚಿತ್ರಿಸಲ್ಪಟ್ಟ

ಏಶಿಯದ ಪ್ರಾಕೃತಿಕ ಸ್ವರೂಪದ ನಕಾಶೆಯಾಗಿತ್ತು! ಸಿಟ್ಟು-ಕ್ಷೋಭೆಗಳಿಂದ ಕಪೂರ್ ಚಟರ್ಜಿಯನ್ನು ಗುದ್ದಿದ. ಕೈಗೆ ಕೈ ಹತ್ತಿತು. ನನಗೂ ಮೂರ್ತಿಗೂ ಅವರನ್ನು ಸಮಾಧಾನ ಮಾಡುವುದೇ ಕಷ್ಟವಾಯಿತು. ಅನಂತರ ಕಪೂರನು ಸಲೂನಿಗೆ ಹೋಗಿ ಕೂದಲು ಸರಿಪಡಿಸಿಕೊಳ್ಳಬೇಕೆಂದೂ ಅವನ ಈ ಕ್ಷೌರದ ಖರ್ಚನ್ನು ಚಟರ್ಜಿಕೊಡಬೇಕೆಂದೂ ನಿರ್ಧಾರವಾಯಿತು. ಆದರೆ ಹಜಾಮನಿಗೆ ಏನು ಕಾರಣ ಹೇಳಬೇಕೆಂದು ಕಪೂರನಿಗೆ ಹೊಳೆಯದಾಯಿತು. ನಿಜವನ್ನು ಹೇಳಿ 'ಬದನಾಮ್' ಆಗುವುದು ಅವನಿಗೆ ಬೇಕಿರಲಿಲ್ಲ. ಇದ್ದುದರಲ್ಲಿಯೇ ರಿಪೇರಿ ಮಾಡಲು ಯತ್ನಿಸಬೇಕಾಯಿತು. ಈ ಬಾರಿ ಮೂರ್ತಿ ಕ್ಷೌರಿಕನಾದ. ಒಂದು ತಾಸು ಗುದ್ದಾಡಿ ಕಪೂರನ ತಲೆಯನ್ನು ತಿರುಪತಿ ದೇವಸ್ಥಾನದ ಮೆಟ್ಟಲುಗಳಾಗಿ ಪರಿವರ್ತಿಸಿದ. ಕಪೂರ ಮತ್ತೆ ತನ್ನ ಬೆಪ್ಪು ತನಕ್ಕೆ ಮರಗುವಂತಾಯಿತು. ಕೊನೆಗೆ ಕಪೂರನ ಅನುಮತಿ ಪಡೆದು ಮೂರ್ತಿಯೇ ರೇಝರ್ ಉಪಯೋಗಿಸಿ ತಲೆಯನ್ನು ನುಣ್ಣಗೆ ಮಾಡಿಬಿಟ್ಟ.

ಮರುದಿನ ಕಾಲೇಜಿಗೆ ಹೋಗುವುದು ಕಪೂರನಿಗೊಂದು ಸಮಸ್ಯೆ. ಟ್ರಂಕಿನಲ್ಲಿಯ ಅರಿವೆಗಳನ್ನು ಕಿತ್ತಾಡಿ ಗಾಂಧಿ ಟೋಪಿಯೊಂದನ್ನು ತೆಗೆದ. ವಿದೇಶಕ್ಕೆ ಹೋಗುವಾಗ ನಮ್ಮ ರಾಷ್ಟ್ರೀಯ ವೇಷಭೂಷಣ ತರಬೇಕೆಂದು ನಮ್ಮ ಸರಕಾರ ಒತ್ತಿ ಹೇಳಿದ್ದರೂ ಅದರ ಉಪಯೋಗ ಮಾಡುವ ಸಂದರ್ಭ ಬಂದಿದ್ದಿಲ್ಲ. ಈಗ ಬೋಳು ತಲೆಗೆ ಅದೇ ಭೂಷಣವಾಯ್ತು!

ಕಪೂರನಿಗೆ ಈಗ ಹೆಚ್ಚಿನ ಸಮಸ್ಯೆಯೆಂದರೆ ತನ್ನ ಸ್ನೇಹಿತೆಯರಿಗೆ ಏನು ಹೇಳುವುದೆಂದು. "ಹಾಯ್ ಕಪೂರ್" ನಿಮ್ಮ ಪರಿಚಯವೇ ಸಿಗಲಿಲ್ಲ. 'ಹಿಂಡು' (ಹಿಂದು)ಗಳು ಹೀಗೆ ತಲೆಬೋಳಿಸಿಕೊಳ್ಳುತ್ತಾರೆಯೇ?" ಎಂದು ರುಥ್ ಕೇಳಿದಳಂತೆ! "ಹೌದು ಆತ್ಮೀಯರನ್ನು ಕಳೆದುಕೊಂಡರೆ ತಲೆ ಬೋಳಿಸುವ ಪರಿಪಾಠವಿದೆ" ಯೆಂದು ಕಪೂರ್ ಹೇಳಿದರೆ ರುಥ್, "ನೀನು ಯಾರನ್ನು ಕಳೆದುಕೊಂಡೆ?" ಎಂದು ಕೇಳಿದಳಂತೆ. "ನನ್ನ ಪ್ರೀತಿಯ ನಾಯಿ ಮೊನ್ನೆ ತೀರಿಕೊಂಡಿತು ಎಂದು ಮನೆಯಿಂದ ಪತ್ರ ಬಂದಿದೆ," ಎಂದಾಗ ರುಥ್ ಬಿದ್ದು ಬಿದ್ದು ನಕ್ಕಳಂತೆ! ಬರಿ ತಲೆ ಹೇಗೆ ಕಾಣಿಸುವುದೆಂದು ನೋಡಲು ತನಗೆ ಕೂತೂಹಲವೆಂದು ಹೇಳಿ ಟೋಪಿ ತೆಗೆಸಿ, ಅವನ ಅಪ್ಪಣೆ ಪಡೆದು ತಲೆಯ ಮೇಲೆ ಎರಡು ಮೂರು ಬಾರಿ ಕೈಯಾಡಿಸಿ ಮನದಣಿಯೇ ನಕ್ಕಳಂತೆ. ಗಾಂಧಿ ಟೊಪ್ಪಿಗೆಯ ಬಗ್ಗೆಯೂ ನೂರಾರು ಪ್ರಶ್ನೆಗಳು ಬರುವವೇ! ಕೊನೆಗೆ ಚಟರ್ಜಿಯಿಂದ ಪಡೆದ ಎರಡೂವರೆ ಡಾಲರು 'ತಪ್ಪುಕಾಣಿಕೆ' ಯಿಂದ ಒಂದು ಫೆಲ್ಟ್ ಹ್ಯಾಟ್ ತಂದ. ಬೋಳು ತಲೆಯ ಮಾನವನ್ನು ಫೆಲ್ಟ್‌ಹ್ಯಾಟ್ ಕಾಯ್ದಿತು. ಅನಂತರ ಹಜಾಮತಿಯ ಸಾಮಾನು ಯಾರೂ ಮುಟ್ಟಲಿಲ್ಲ. ನಿಗ್ರೊ ವಸತಿಯಲ್ಲಿ ಒಬ್ಬ ಹಜಾಮನು ಒಂದೇ ಡಾಲರಿಗೆ ಹಜಾಮತಿ ಮಾಡುತ್ತಾನೆ! ಎಂಬ ಸುದ್ದಿಯನ್ನು ಯಾರೋ ಪತ್ತೆ ಹಚ್ಚಿದರು. ರಜೆಯ ದಿನ ಎಲಾರಮ್ ಇಟ್ಟು, ಬೆಳಿಗ್ಗೆ ಎದ್ದು ಲಗುಬಗೆಯಿಂದ ನಾಸ್ತಾ ಮುಗಿಸಿ, ಹತ್ತಿರದ ಬಸ್ ನಿಲ್ದಾಣಕ್ಕೆ ಹೋಗಿ ಹಜಾಮನನ್ನು ಹುಡುಕುವುದರಲ್ಲಿ ತಾಸೊಂದು ಕಳೆಯಿತು.

ಅಲ್ಲಿ ಹೋದರೆ ಬಿಳಿ-ಕರಿ ಮುಖಗಳ ಜಾತ್ರೆಯೇ ನೆರದಿತ್ತು. ಚೆನ್ನಾಗಿ ಕುಡಿದಿದ್ದ ಬಿಳಿಯ ಮುದುಕನೊಬ್ಬ (ಅಮೇರಿಕನರು ಸೆರೆ ಕುಡಿಯುತ್ತಾರಾದರೂ ಅವರೆಲ್ಲ ಕುಡುಕರಲ್ಲ) ತೊದಲು ಮಾತನಾಡುತ್ತ ಇರುವೆ ವೇಗದಲ್ಲಿ ಹಜಾಮತಿ ನಡೆಸಿದ್ದ. ಅಂದಿನ ಹಜಾಮತಿ ಮುಗಿಸಿ ಮನೆಗೆ ಬರಬೇಕಾದರೆ ಹನ್ನೆರಡು ಗಂಟೆಯಾಗಿ ಹೋಗಿತ್ತು. ಮತ್ತೆ ಅವನ ಹತ್ತಿರ ಎಂದೂ

ಹೋಗಬಾರದೆಂದು ತೀರ್ಮಾನಿಸಿದೆವು. ಊರಿನಲ್ಲಿ ಹಜಾಮತಿ ಶಾಲೆಯಿದ್ದು ಅಲ್ಲಿ ಅಗ್ಗದಲ್ಲಿ ವಿದ್ಯಾರ್ಥಿಗಳಿಂದ ಕೇಶಕರ್ತನ ಮಾಡಿಸಲಾಗುತ್ತದೆಯೆಂಬ ಸುದ್ದಿ ಚಟರ್ಜಿ ತಂದ. ಫೋನ್ ಮಾಡಿ ಕೇಳಿದಾಗ, ಹೆಂಗಸರಿಗೆ, ಗಂಡಸರಿಗೆ, ಮಕ್ಕಳಿಗೆ ಎಲ್ಲರಿಗೂ ೫೦ ಸೆಂಟಿಗೆ ಹಜಾಮತಿ ಒದಗಿಸಲಾಗುವುದೆಂದು ಗೊತ್ತಾಯಿತು. ಅಲ್ಲಿ ಹೋಗಿ ನೋಡಿದಾಗ ಸುಸಜ್ಜಿತ ಹಾಲಿನಲ್ಲಿ ಹಜಾಮ ವಿದ್ಯಾರ್ಥಿಗಳು ಯುನಿಫಾರ್ಮು ಧರಿಸಿ ಶಿಸ್ತಿನಿಂದ ಹಜಾಮತಿ ನಡೆಸಿದ್ದರು. ಅವರಲ್ಲಿ ಒಬ್ಬ ತರುಣಿಯೂ ಇದ್ದಳು. ತೆಳುವಾದ ಮೈಕಟ್ಟಿನ, ಬೊಗಸೆಗಣ್ಣಿನ ಹೊಂಗೂದಲ ಚೆಲುವೆ. ಕೈಗಳು ಮುದುಕನೊಬ್ಬನಿಗೆ ಕ್ಷೌರ ಮಾಡುತ್ತಿದ್ದರೂ ಕಣ್ಣುಗಳು ಅಲ್ಲಿದ್ದ ಯುವಕರ ಕಡೆ ಹಾಯ್ದಾಡುತ್ತಿದ್ದವು. ತುಟಿಯ ಮೇಲೆ ನಗೆ ಮಿಂಚುತ್ತಿತ್ತು. ಕಪೂರ್ ಅವಳನ್ನೇ ದಿಟ್ಟಿಸಿ ನೋಡುತ್ತ ಹಿಂದಿಯಲ್ಲಿ ಒಂದೇ ಸಮನೆ ಬಡಬಡಿಸುತ್ತಿದ್ದ - "ಮುಂಬೈ-ದಿಲ್ಲಿಗಳಲ್ಲಿ ಸ್ತ್ರೀ ಕ್ಷೌರಿಕರು ಇರುವುದನ್ನು ಕೇಳಿದ್ದೆ. ಪ್ರತ್ಯಕ್ಷ ಕಂಡಿರಲಿಲ್ಲ! ಈ ಕೋಮಲ ಕೈಗಳಿಂದ ದಾಡಿಯ ಸೇವೆ ಪಡೆಯುತ್ತಿರುವುವವರೇ ಧನ್ಯರು! ಅದೋ ನಾನಂತೂ ಅವಳ ಕೈಯಿಂದಲೇ ಕ್ಷೌರ ಮಾಡಿಸುವವ," ಎನ್ನುತ್ತಿದ್ದ. ಮುದುಕನದು ಮುಗಿದ ಮೇಲೆ next ಎಂದಳು. Token (ಬಿಲ್ಲೆ) ಪ್ರಕಾರ ಚಟರ್ಜಿಯ ನಂಬರು ಬಂದಿತ್ತು! ಕಪೂರ್ ಹೆಚ್ಚಿನ ಅಸಮಾಧಾನದಿಂದ ಇನ್ನೊಬ್ಬ ವಿದ್ಯಾರ್ಥಿಯ ಕಡೆಯಿಂದ ತನ್ನ ಕೆಲಸ ಮುಗಿಸಿಕೊಂಡು ಹೊರಬಿದ್ದ.

ಒಂದು ತಿಂಗಳು ಕಳೆಯಿತು. ತಿರುಗಿ ಕ್ಷೌರ ಶಾಲೆ ಸಂದರ್ಶಿಸುವ ದಿನ ಬಂದಿತ್ತು. ಕಪೂರ್ ಬೆಳಗಿನಿಂದ ಹೆಚ್ಚಿನ ಹುಮ್ಮಸದಲ್ಲಿ ಇದ್ದ. ಒಳ್ಳೇ ಬಟ್ಟೆ ಹಾಕಿಕೊಂಡು ತಯಾರಾದ. ಕನ್ನಡಿಯಲ್ಲಿ ಮುಖ ನೋಡಿಕೊಳ್ಳುತ್ತಿದ್ದಂತೆ, 'ಚಟರ್ಜಿ, ನಿನ್ನೊಡನೆ ಆ 'ಕೆಥಿ' ಅವತ್ತು ಮೀಸೆಯ ಬಗ್ಗೆ ತನ್ನ ಅಭಿಪ್ರಾಯ ಹೇಳಿದ್ದಳಲ್ಲವೇ? ಮೀಸೆಯ ಪತಿಯನ್ನು ಭಾರತೀಯ ಪತ್ನಿ ಹೇಗೆ ಸಹಿಸುತ್ತಾಳೆ ಎಂದು ಕೇಳಿದ್ದಳಲ್ಲವೇ?" ಎಂದು ಕೇಳಿ ಹೂಂಕಾರ ಪಡೆದು ಮಾಯವಾದ. ಕೆಲಹೊತ್ತಿನ ಮೇಲೆ ಮತ್ತೆ ಕಾಣಿಸಿಕೊಂಡ. ಈಗ ಘನವಾದ ಮೀಸೆ ಬೋಳಾಗಿತ್ತು. ಇಂದು ಕೆಥಿಯಿಂದಲೇ ಕ್ಷೌರ ಮಾಡಿಸಿಕೊಳ್ಳುವ ತನ್ನ ಉದ್ದೇಶವನ್ನು ತಿಳಿಸಿ ಮೂರ್ತಿ, ಚಟರ್ಜಿಯವರಿಗೆ ಸಹಕಾರ ನೀಡಿರೆಂದು ಕೇಳಿಕೊಂಡ. ಕ್ಷೌರಶಾಲೆಗೆ ಹೋಗಿ ತಿರುಗಿ ಬಿಲ್ಲೆಗಳನ್ನು ಪಡೆದು ಕುಳಿತದ್ದಾಯಿತು. ದೂರದಲ್ಲಿದ್ದ ಅವಳ ಕೇಶಕರ್ತನ ವಿನ್ಯಾಸವನ್ನು ಎವೆಯಿಕ್ಕದೆ ನೋಡುತ್ತಿದ್ದ ಕಪೂರ್ ನಂಬರ್ ೬೨ ಎಂದು ಮೆನೇಜರ್ ಕೂಗಿದಾಗ ತನ್ನ ಬಿಲ್ಲೆಯನ್ನು ಬದಲಾಯಿಸಿ ಸರತಿ ಬಂದಾಗ ಕೆಥಿಯ ಪಾಲಿನ ಖುರ್ಚಿಯಲ್ಲೆ ಕಪೂರ ಪವಡಿಸಿದ. ಕೆಥಿ ನಸುನಕ್ಕು ಯಾವ ಕಟ್ ಬೇಕೆಂದಾಗ ಕಪೂರನಿಗೆ ಸ್ವರ್ಗ ಮೂರೇ ಬೆರಳಿತ್ತು. ಸರಿ, ಶುಭ್ರ ಬಟ್ಟೆಯನ್ನು ಕಪೂರನ ಮೈಗೆ ಸುತ್ತಿ ಕೆಲಸಕ್ಕೆ ಅಣಿಯಾದಳು. ಎಲ್ಲ ಗಿರಾಕಿಗಳಂತೆ ಕಪೂರ್ ಕನ್ನಡಿಯಲ್ಲಿ ನೋಡುತ್ತಿದ್ದರೆ ಅಲ್ಲಿ ಯಾರ ಪ್ರತಿ ಬಿಂಬ ಕಾಣಿಸುತ್ತಿತ್ತೆಂದು ನಮಗೆ ತಿಳಿದೇ ಇತ್ತು! ಪಕ್ಕದ ವಿದ್ಯಾರ್ಥಿ ಎರಡು 'ತಲೆ' ಮುಗಿಸಿದರೂ ಕೆಥಿಯದು ಒಂದೂ ಮುಗಿಯದಾಗ ಈ ಹುಡುಗಿಯೂ ಕಪೂರನಲ್ಲಿ ಅಸಕ್ತಿಯುಳ್ಳವಳಿರಬೇಕೆಂದು ನಮಗನಿಸಿತು. ಕೆಲ ನಿಮಿಷಗಳ ಮೇಲೆ ಅಲ್ಲಿಂದ ಹಾದುಬಂದ ಅವರ ಶಿಕ್ಷಕನು ಪಕ್ಕದಲ್ಲಿ ಬಂದು ಅವಳ ಕಲಾಕೃತಿಯನ್ನು ಕಂಡು ಸಿಟ್ಟಿನಿಂದ, "ನಿನಗೆ ಕೇವಲ ದಾಡಿ ಮತ್ತು ಕಟ್‌ಮಾಡು ಎಂದು ಹೇಳಿತ್ತು. ಇಲ್ಲದ ಕಾರಭಾರ ಮಾಡಲು ಯಾರು ಹೇಳಿದರು? ವಿದ್ಯಾರ್ಥಿ ಡಾಕ್ಟರರಂತೆ ವಿದ್ಯಾರ್ಥಿ ಹಜಾಮರು ತಮಗೆ ಅರಿಯದ ಕೆಲಸಕ್ಕೆ ಕೈಹಾಕಬಾರದು!"

ಎಂದು ಗದರಿಸಿ, ನಂತರ ಕಪೂರನ ಹತ್ತಿರ ತಿರುಗಿ, "ಕ್ಷಮಿಸಿ ಮಿಸ್ಟರ್ ಆಕೆಯಿನ್ನೂ ಚಿಕ್ಕವಳು. ತಪ್ಪು ಮಾಡಿದ್ದಾಳೆ. ಈ ತಪ್ಪು ಸುಧಾರಿಸಲು ಉಳಿದ ಉಪಾಯ 'ನೆವೀ ಕಟ್' ಒಂದೇ! ನಿಮ್ಮ ಆಕ್ಷೇಪಣೆ ಇಲ್ಲವೆಂದು ನಂಬಲೇ?" ಎಂದು ಕೇಳಿದ ಅನಂತರ ಅಪ್ಪಣೆ ಪಡೆದು ಸುಂದರಿ ಮಾಡಿದ ವಿಕಾರಕೃತಿಯನ್ನು ಒಂದು ತಾಸಿನ ಪರಿಶ್ರಮದ ನಂತರ ಸರಿಪಡಿಸಿದ. ಎಲ್ಲ ಮುಗಿದ ಮೇಲೆ ಇನ್ನೊಮ್ಮೆ ಕ್ಷಮೆ ಕೇಳಿ ಅರ್ಧ ಡಾಲರನ್ನೂ ಪಡೆಯದೇ ಕಪೂರನನ್ನು ಬೀಳ್ಕೊಟ್ಟ!

ಮನೆಗೆ ಹೋಗುತ್ತಿದ್ದಂತೆ ಚಟರ್ಜಿ. "ನಿನ್ನ ಗಾಂಧಿ ಟೋಪಿಯ ಸಂಪೂರ್ಣ ಲಾಭ ಆಗುವಂತೆ ತೋರುತ್ತದೆ" ಎಂದು ಗೇಲಿಮಾಡಿದ. "ಒಂದೇ ರೀತಿ ಹಿಡಿದು ಕಪೂರನ ಗೋಣು ಜಿರಾಫ್‌ನಂತಾಗಿದೆ, ಮೂರ್ತಿಯೆಂದ. ತನ್ನ ಸೋಲನ್ನು ಒಪ್ಪಿಕೊಳ್ಳದೇ, "ನಿಮಗೇನು ಗೊತ್ತು, ಆ ಸುಖ! ಆಕೆ ಕೂದಲು ಕತ್ತರಿಸುತ್ತಿದ್ದಾಗ ಕುತ್ತಿಗೆಯ ಹಿಂಭಾಗದಲ್ಲಿ ಆಕೆಯ ಬಿಸಿಯುಸಿರು ಕಚಕುಳಿಯಿಡುತ್ತಿತ್ತು! ಆಕೆಯ ಹೃದಯಸ್ಪಂದನ ಹಿತವಾಗಿ ಕೇಳಿಸುತ್ತಿತ್ತು. ಮುಂದಿನ ತಿಂಗಳೂ ಆಕೆಯ ಕೈಯಿಂದಲೇ ಕ್ಷೌರ ಮಾಡಿಸಲಿದ್ದೇನೆ," ಎಂದ ಆ ರಸಿಕ ಶಿರೋಮಣಿ!

ಬಂಗಾಲಿಗಳ ಕಲಹ

ವಂಗದೇಶ, ಭಾರತದಲ್ಲೇ ಜಾಗೃತವಾದ ರಾಜ್ಯವೆಂದು ನಿಮಗೆ ಭಟ್ಟಿಯಾದ ಯಾವ ಬಂಗಾಲಿಯೂ ಹೇಳದೇ ಇರಲಾರ. ತಮ್ಮ ಹಕ್ಕು-ಅಧಿಕಾರಗಳಿಗಾಗಿ ಎಂಥ ಬೆಲೆಯನ್ನೂ ತೆರಬಲ್ಲೆವೆಂಬುದು ಇವರ ವಿಶ್ವಾಸ. ಅಧಿಕಾರಕ್ಕೆ ಬಡಿದಾಡುವ ಜನ ಇವರೆಂದು ಇಲ್ಲಿ ಬಂದಾಗಿನಿಂದ ನಾನು ಕಂಡುಕೊಂಡಿದ್ದೇನೆ. ಆದರೆ ಆ ಅಧಿಕಾರಗಳಿಗಾಗಿ ಬಡಿದಾಡುವ ಜಾಗೃತ ಬುದ್ಧಿ ತನ್ನ ಕರ್ತವ್ಯಗಳನ್ನು ಮರೆತಿದೆಯೆಂದು ಇಲ್ಲಿಯ ವರ್ತಮಾನ ಪತ್ರಗಳನ್ನು ಓದುವವರಿಗೆ, ರೇಡಿಯೋ ಕೇಳುವವರಿಗೆ ಇಲ್ಲವೇ ಈ ರಾಜ್ಯಕ್ಕೆ ಭೆಟ್ಟಿ ಕೊಟ್ಟವರಿಗೆ ತಿಳಿಯದೇ ಇರಲಾರದು. ಬೌದ್ಧಿಕ ಜಾಗೃತಿಯನ್ನು ಭಾರತಕ್ಕೆ ನೀಡಿದ ಬಂಗಾಲ, ಕೊಲೆ ಸುಲಿಗೆ ಹಿಂಸಾಕೃತಿಗಳಲ್ಲೂ ಮಾರ್ಗದರ್ಶನ ನೀಡುತ್ತಿದೆಯೆಂದು ಬಹಳಷ್ಟು ಜನ ಒಪ್ಪುತ್ತಾರೆ.

ಒಂದು ಸಣ್ಣ ಕಾರಣಕ್ಕಾಗಿ ಬಂಗಾಲಿಗಳ ಕ್ಷೋಭೆ ಗಗನಕ್ಕೇರುತ್ತದೆ. ತಪ್ಪುಗಾರರನ್ನು ಅಧಿಕಾರಿಗಳು ಶಿಕ್ಷಿಸುವ ಮುನ್ನವೇ ಜನರು ತಾವೇ ಆ ಕೆಲಸ ಮುಗಿಸಿಬಿಡುತ್ತಾರೆ. ಆತ ಬದುಕಿ ಉಳಿದರೆ ನಂತರ ನ್ಯಾಯವಿಚಾರಣೆ! ತಿಕ್ಕಾಟ ಯಾವ ಕಾರಣಕ್ಕಾಗಿಯೇ ಪ್ರಾರಂಭವಾಗಲಿ, ಕೊನೆಗೆ ಅದು ರಾಜಕೀಯ ರೂಪ ತಾಳಿ ಇಬ್ಬರು ಸತ್ತು ನಾಲ್ವರು ಗಾಯಗೊಂಡಾಗಲೇ ಅಂತ್ಯವಾಗುವುದೆಂದು ಹೇಳಬಹುದು. ಎಂತಹ ಚಕಮಕಿಯೇ ಇರಲಿ ಚಾಕು, ಚೂರಿ, ಸೋಡಾಬಾಟ್ಲ, ಬಾಂಬುಗಳು ಪ್ರತ್ಯಕ್ಷವಾಗುತ್ತವೆ. ಈ ರಾಜ್ಯಕ್ಕೆ ಬರುವ ಮೊದಲು ಬಾಂಬುಗಳ್ನು ಯುದ್ಧದಲ್ಲಿ ಮಾತ್ರ ಉಪಯೋಗಿಸುತ್ತಾರೆಂದು ಭಾವಿಸಿದ್ದೆ. ಆದರೆ ಬಂಗಾಲಿಗಳು ದರೋಡೆ, ರಾಜಕಾರಣ, ಅಂತಃಕಲಹ ಮುಂತಾದವನ್ನೆಲ್ಲ ಬಾಂಬಿನಿಂದಲೇ ಯಶಸ್ವಿಯಾಗಿ ನಿರ್ಧರಿಸುತ್ತಾರೆ ಎಂದು ಕಂಡುಕೊಂಡೆ. ಬಾಂಬುಗಳನ್ನು ತಯಾರಿಸುವ ರಹಸ್ಯ ಖಾನೆಗಳು ಓಣಿಓಣಿಗಳಲ್ಲಿ, ಮನೆಮನೆಗಳಲ್ಲಿ ಇರುತ್ತವೆ. ಬಹುಶಃ ತಮ್ಮನ್ನು ತುಂಬ ಕಾಡುತ್ತಿರುವ ನಿರುದ್ಯೋಗದ ಸಮಸ್ಯೆಯನ್ನು ಈ ಕೈಗಾರಿಕೆಯಿಂದ ಬಿಡಿಸಲು ಯತ್ನಿಸುತ್ತಿರಬೇಕು ಈ ಜನ!

ಇವರಲ್ಲಿ ಕಲಹ ಹೇಗೆ ಪ್ರಾರಂಭವಾಗುತ್ತದೆ? ಎಂದು ನಿರೀಕ್ಷಿಸುವುದು ಒಂದು ಮೋಜಿನ ವಿಷಯವಾದರೂ ಅದರ ಪರಿಣಾಮದ ಭಯಂಕರತೆಯನ್ನು ನೋಡಿದರೆ ಎದೆ ಝುಲ್ಲೆನ್ನುತ್ತದೆ. ಒಮ್ಮೆ ತಡವಾದ ಟ್ರೇನಿಗಾಗಿ ಕಾಯುತ್ತ ಕುಳಿತಿದ್ದೆ. ಹತ್ತು ಮಾರು ದೂರದಲ್ಲಿ ಒಬ್ಬ ಬಾಳೆಹಣ್ಣು ಮಾರುತ್ತ ಕುಳಿತಿದ್ದ. ಶುಭ್ರವಾದ ಪ್ಯಾಂಟುಶರ್ಟು ಬೂಟು ಮತ್ತು ಚಷ್ಮಾ ಧರಿಸಿದ ಒಬ್ಬ ಬಾಬು ಬಂದು ಬಾಳೇಹಣ್ಣಿನ ಖರೀದಿ ಪ್ರಾರಂಭಿಸಿದ. ಮಾರುವವನು ಬೇರೆ ಗಿರಾಕಿಯ ಹತ್ತಿರ ಮಾತು ನಡೆಸಿದ್ದಾಗ ಬಾಬು ಒಂದು ಹಣಿಗೆ ಬಾಳೆಹಣ್ಣುಗಳನ್ನು ಎತ್ತಿ ಅದರಲ್ಲಿಯ ಒಂದೆರಡನ್ನು ತೆಗೆದುಹಾಕಿದ.

ವ್ಯಾಪಾರಿ, "ಬಾಬು, ಹಣ್ಣು ಬೇಕಾದರೆ ತೆಗೆದುಕೊ, ಬೇಡವಾಗಿದ್ದರೆ ಬಿಡು. ಆದರೆ ಕಿತ್ತು ಹಾಕಬೇಡ" ಎಂದ.

ಬಾಬು, "ಕುರುಡನಂತೆ ಮಾತನಾಡಬೇಡವೊ. ಹಣ್ಣು ಮೊದಲೇ ಕಿತ್ತಿತ್ತು," ಎಂದು ತಾನು ಕಿತ್ತು ಬಾಳೆಹಣ್ಣುಗಳನ್ನು ನಿಂತಲ್ಲಿಂದಲೇ ಬುಟ್ಟಿಗೆ ಒಗೆದ. ಅದರಲ್ಲಿಯ ಒಂದು ಹಣ್ಣು ಉರುಳಿಪ್ಲಾ ಟ್‌ಫಾರಂ ಮೇಲೆ ಬಿತ್ತು.

"ಇದೇನು ನಡೆಸಿದ್ದಿ ಬಾಬು, ಹಾಗೇಕೆ ಹಣ್ಣು ಒಗೆದೆ?" ಎಂದು ಹಣ್ಣಿನವ ಎದ್ದುನಿಂತ.

"ಮಗನೇ! ಸಂಭಾಳಿಸಿಕೊಂಡು ಮಾತನಾಡು. ಬಾಳೆಹಣ್ಣು ನಾನು ಕೊಂಡಿದ್ದೇನೆ. ಬೇಕಾದರೆ ತಿನ್ನುತ್ತೀನೆ ಬೇಡಾಗಿದ್ದರೆ ಒಗೆಯುತ್ತೇನೆ. ನಿನ್ನಪ್ಪನ ಗಂಟೇನು ಖರ್ಚಾಯಿತು?" ಎಂದು ಗಿರಾಕಿ ಗುಡುಗಿದ.

ಸರಿ ಚಕಮಕಿ ಪ್ರಾರಂಭವಾಯಿತು. ಹಣ್ಣು ಮಾರುವವನ ಸಹಾಯಕ್ಕೆ ನಾಲ್ವರು ಬಂದರೆ ಗಿರಾಕಿಯ ಸಹಾಯಕ್ಕೆ ಎಂಟು ಜನ ಬಂದರು. ಅರ್ಧ ಗಂಟೆಯಲ್ಲಿ ಪ್ಲಾಟ್‌ಫಾರ್ಮು ಮಿಡತೆಗಳಿಂದೆಂಬಂತೆ ಜನರಿಂದ ತುಂಬಿಹೋಯಿತು. ಅಷ್ಟರಲ್ಲಿ ನನ್ನ ಟ್ರೇನ್ ಬಂದದ್ದರಿಂದ ನಾನಲ್ಲಿಂದ ಏಳಬೇಕಾಯಿತು. ಮರುದಿನದ ವರ್ತಮಾನ ಪತ್ರದಲ್ಲಿ ಇದರ ಉಲ್ಲೇಖವಿತ್ತು. ಹಣ್ಣುಮಾರುವವ ಮಾರ್ಕ್ಸ್‌ವಾದಿ ಕಮ್ಯುನಿಸ್ಟನಂತೆ: ಗಿರಾಕಿ ಭಾರತೀಯ ಕಮ್ಯುನಿಸ್ಟ್ ಪಾರ್ಟಿಗೆ ಸೇರಿದವ ನಂತೆ. ಎರಡೂ ಪಂಗಡಗಳಲ್ಲಿ ತಿಕ್ಕಾಟವಾಯಿತು. ಟ್ರೇನಿಗೆ ಬೆಂಕಿ ಹಚ್ಚಿದರು. ಸ್ಟೇಶನ್ ಮಾಸ್ತರರ ಆಫೀಸು ಹೊಕ್ಕು ಟೆಲಿಫೋನ್ ತಂತಿ ಕಡಿದು ಹಾಕಿದರು. ಗಾಯಾಳುಗಳು ಆಸ್ಪತ್ರೆ ಸೇರಿದರು. ಹೊಡೆಸಿಕೊಂಡವರು ಸೇಡಿನ ಪಣ ತೊಟ್ಟರು.

ಒಂದು ಸಂಜೆ ಗಂಗಾತೀರಕ್ಕೆ ತಿರುಗಾಡುತ್ತ ತಲುಪಿದ್ದೆ. ಒಂದೆಡೆ ದಟ್ಟಾಗಿ ಜನ ಕೂಡಿತ್ತು. ಎಲ್ಲರೂ ಕೂಗಿ ಮಾತಾಡುತ್ತಿದ್ದರು. ಐದು ನಿಮಿಷ ನಿಂತು ನೋಡಿದರೂ ಏನಾಗಿದೆಯೆಂದು ತಿಳಿಯದ್ದರಿಂದ ಪಕ್ಕದಲ್ಲಿ ನಿಂತವನನ್ನು ವಿಚಾರಿಸಿದೆ. "ಬಾಚಾ ಮರಗಯಾ" ಎಂದ. ಕಬ್ಬು ತುಂಬಿದ ಲಾರಿಗಳು ಎಡೆಬಿಡದೇ ಹೋಗುತ್ತಿದ್ದಾಗ ನಡುವೆ ಮಗು ಹಾಯ್ದು ಅಪಘಾತ ಸಂಭವಿಸಿರಬೇಕೆಂದು ಊಹಿಸಿ ಮುಂದುವರೆದೆ. ಎರಡು ಫರ್ಲಾಂಗು ತನಕ ಜನಜಂಗುಳಿ ಸೇರಿ ಕೊಲೆಗಡಕನನ್ನು ಶಿಕ್ಷಿಸುವ ಮಂತ್ರಾಲೋಚನೆ ನಡೆಸಿತ್ತು. ಕೊನೆಗೆ ಫ್ಯಾಕ್ಟರಿ ಮೆನೇಜರರ ಜೀಪು ಗಾಡಿ ಕಾಣಿಸಿತು. ಮ್ಯಾನೇಜರರು ದಿಙ್ಮೂಢರಾಗಿ ಒಂದೆಡೆ ನಿಂತಿದ್ದರು. ಬಹುಶಃ ಈ ಜೀಪಿನಿಂದಲೇ ಮಗು ಸತ್ತಿರಬಹುದೇ? ಎಂದು ಒಂದು ವಿಚಾರ ಸುಳಿದು ಹೋಯಿತು. ಅವರು ಡ್ರೈವರನಿಗೆ ಹಲವಾರು ಸೂಚನೆಗಳನ್ನು ಕೊಡುತ್ತಲಿದ್ದರು.. ಪ್ಯಾದೆಯೊಡಗೂಡಿ ಡ್ರೈವರನು ಮಾತುಕತೆಗೆಂದು ಜನ ಜಂಗುಳಿಯತ್ತ ಸಾಗಿದ. ಆಗ ವಿಷಯ ಗೊತ್ತಾಯಿತು. ಮ್ಯಾನೇಜರರ ಜೀಪುಗಾಡಿ ವೇಗವಾಗಿ ಬರುತ್ತಿದ್ದಾಗ ಒಂದು ಎಳೆಯ ಆಡಿನಮರಿ ಗಾಡಿಯ ಬುಡಕ್ಕೆ ಸಿಕ್ಕಿ ಸತ್ತಿತಂತೆ. ಆಡಿನ ಮರಿಗೇ ಇಷ್ಟು ಆಕ್ರೋಶಗೊಂಡರೆ, ಮಗುವೊಂದು ಸತ್ತರೆ ಇವರೇನು ಮಾಡುತ್ತಿದ್ದರೋ! ಎಂದು ಅನಿಸಿತು. ಹದಿನೈದು ನಿಮಿಷಗಳಲ್ಲಿ ಡ್ರೈವರನು ನಗುಮುಖನಾಗಿ ಹಿಂತಿರುಗಿದ. ಆಡಿನ ಮರಿಯ ಮಾಲಕ ಮೂವತ್ತು ರೂಪಾಯಿ ಪರಿಹಾರ ಧನವನ್ನು ಕೇಳಿದನಂತೆ; ತಾನು ಇಪ್ಪತ್ತಕ್ಕೆ ಒಪ್ಪಿಸಿದೆನೆಂದು ಹೇಳಿದ. ತಿನ್ನಲು ಆಡಿನ ಮಾಂಸದೊಡನೆ ಹಣವೂ ದೊರೆಯಿತೆಂದು ಅದರ ಮಾಲಕ ಒಳಗೊಳಗೇ ತುಂಬಾ ಖುಷಿಯಾಗಿದ್ದಿರಬೇಕು.!

ಪ್ಲಾಸಿಯಲ್ಲಿ ಬೇಸಿಗೆಯಲ್ಲಿ ಭಾಗೀರಥಿಯ ನೀರು ತೀರ ಕೆಳಗೆ ಇಳಿಯುತ್ತದೆ. ಆಗ ಜನ ಮತ್ತು ಕಬ್ಬು ತುಂಬಿದ ಗಾಡಿಯ ಎತ್ತುಗಳು ಸಹಜವಾಗಿಯೇ ನದಿಯನ್ನು ದಾಟುತ್ತವೆ. ಆದರೂ ಜನರನ್ನು ದಾಟಿಸಲು ನಾವೆಯ ಏರ್ಪಾಡಿದೆ. ಒಂದು ದಡದಿಂದ ಇನ್ನೊಂದು ದಡ ಮುಟ್ಟಲು ಎಂಟು ನಿಮಿಷ ಸಹ ತಗಲುವುದಿಲ್ಲ. ಆದರೂ ಬಿಡುವ ನಾವೆಯನ್ನು ನಿಲ್ಲಿಸುವ ಸಲುವಾಗಿ ಒಬ್ಬ ಎರಡು ಫರ್ಲಾಂಗು ದೂರದಿಂದಲೇ ಕೂಗಿ ಹೇಳುವ. ಅವನ ಸಂಗಡ ಸೈಕಲ್ಲಿನವ ಒಂದೇ ಸವನೆ ಗಂಟೆ ಬಾರಿಸುತ್ತಾನೆ. ಸತತವಾಗಿ ಬರುತ್ತಲೇ ಇರುವ ಜನರಿಗಾಗಿ ನಾವಿಕ ಎಷ್ಟು ಹೊತ್ತು ನಿಂತಾನು? ತೀರ ಸನಿಹದಲ್ಲಿದ್ದವರು ಕುಳಿತೊಡನೆ ನಾವೆಯನ್ನು ಬಿಡುತ್ತಾನೆ. ಕೂಗಿ ಹೇಳಿದವನಿಗೆ ತಾನು ಹತ್ತೇ ಮಾರು ದೂರದಲ್ಲಿದ್ದರೂ ನಿಲ್ಲಿಸಲಿಲ್ಲವೆಂದು ಸಿಟ್ಟು. ಅಂತೆಯೇ ನಾವಿಕನ ಅಜ್ಜ ಮುತ್ತಜ್ಜನ ಹೆಸರು ತೆಗೆದು ಬಯ್ಯುತ್ತಾನೆ. ಪ್ರತಿಬೈಗಳೂ ಬರುತ್ತವೆ. "ಮಗನೇ, ನನಗಾಗಿ ಎರಡು ಮಿನಿಟು ಕಾದರೆ ಆಗುತ್ತಿರಲಿಲ್ಲವೇ?" ಎಂದರೆ, "ನಿನಗಾಗಿ ಕಾಯಲು ನಿನ್ನಜ್ಜ ನನ್ನನ್ನು ಸಾಕಿದ್ದಾನೆಯೇ?" ಎಂದು ಉತ್ತರ.

"ನಿಮಗೆಲ್ಲ ಪಿತ್ತ ನೆತ್ತಿಗೇರಿದೆ, ಸರಿಯಾಗಿ ಬುದ್ಧಿ ಕಲಿಸಬೇಕು"

"ಹೋಗೋ ಸ್ವತಃ ಬುದ್ಧಿ ಇಲ್ಲದವ ಬುದ್ಧಿ ಕಲಿಸಲು ಬಂದಿದ್ದಾನೆ."

"ಎಷ್ಟು ಸೊಕ್ಕೋ ನಿನಗೆ ತಿರುಗಿ ಬಾ, ತೋರಿಸುತ್ತೇನೆ"

"ತಿರುಗಿ ಬಾರದೆ ಇರುತ್ತೇನೆಯೆ! ಇಷ್ಟೊಂದು ಜನ ತೋರಿಸಿಯಾಯಿತು. ನೀನೊಬ್ಬ ತೋರಿಸುವುದು, ಉಳಿದಿದೆ," ಎನ್ನುತ್ತ ನಾವೆಯವ ಆಚೆಯ ದಡ ಸೇರಿದ. ಆದರೆ ಈಚೆಯವನಿಗೆ ಬುದ್ಧಿ ಕಲಿಸಲೆಂದು ಆತ ಬೇಗನೇ ಹೊರಡುವುದೇ ಇಲ್ಲ.

ಈತ ಈ ತೀರದಿಂದಲೇ ಕೂಗುತ್ತಾನೆ: "ಬೇಗ ಬಾರೊ ಮಗನೇ."

"ಹೌದು! ನಿನಗಾಗಿ ಆಗ ನಾನು ಕಾಯಬೇಕಾಗಿತ್ತು. ಈಗ ಇತರರಿಗಾಗಿ ಕಾಯುವುದೇ ಬೇಡವೇ?" ಮರುಸವಾಲು.

ಅಷ್ಟರಲ್ಲಿ ಇನ್ನಿಬ್ಬರು ಸೈಕಲ್ ಸವಾರರೂ ದಾರಿಹೋಕರೂ ಬಂದು ನಾವಿಕನಿಗಾಗಿ ಕೂಗಿಕೊಂಡರು. ವಾಗ್ಯುದ್ಧ ನದಿಯ ಆಚೆ-ಈಚೆ ಸರಾಗವಾಗಿ ಸಾಗಿತ್ತು. ಕೊನೆಗೆ ಹೊಸದಾಗಿ ಬಂದ ಇಬ್ಬರು ಹೊಸಬರು ನಾವಿಕನನ್ನು ಸಮಾಧಾನ ಮಾಡಿ ಈಚೆಗೆ ಬರುವಂತೆ ಕೇಳಿಕೊಂಡರು. ಪುಣ್ಯಕ್ಕೆ ಅಲ್ಲಿ ನವ ಯುವಕರ ತಂಡವಿರಲಿಲ್ಲ. ಇಲ್ಲದಿದ್ದರೆ ಇಂತಹ ಕಲಹಗಳನ್ನು ಬಗೆಹರಿಸುವ ಜವಾಬ್ದಾರಿ ತಾವೇ ಹೊತ್ತುಕೊಂಡು ಬಿಡುತ್ತಿದ್ದರವರು.

ಚಿಕ್ಕ ಪುಟ್ಟ ಕಲಹಗಳೂ ಕೊನೆಗೆ ರಾಜಕೀಯ ರೂಪ ತಾಳುತ್ತವೆ. ಇಂತಹ ಕಲಹಗಳಲ್ಲಿ ಬಡವರು (ಕುರಿಮರಿಯ ಮಾಲಕ, ಹಣ್ಣಿನವ, ನಾವಿಕ) ತಮ್ಮ ಪಕ್ಷಕ್ಕೆ ಸೇರಿದವರೆಂದೂ ಸುಲಿಗೆಗಾರ ಸಾಹುಕಾರರು ಅವರ ಮೇಲೆ ದಬ್ಬಾಳಿಕೆ ಮಾಡುತ್ತಾರೆಂದೂ ಕಮ್ಯುನಿಸ್ಟ್ ಮುಖಂಡರು ದೊಡ್ಡ ವ್ಯಾಖ್ಯೆಯನ್ನೇ ಕೊಟ್ಟುಬಿಡುತ್ತಾರೆ. ಎಲ್ಲ ಒಳ ಜಗಳಗಳಲ್ಲೂ ಇಂಥವರಿಗೆ ಸದಾ ಆ ಪಾರ್ಟಿಯ ಆಶ್ರಯವಿರುವುದರಿಂದ ಎಂಥ ದುಷ್ಕೃತ್ಯಗಳೂ ಮರೆಮಾಚಿ ಹೋಗುವವು.

ಸ್ತ್ರೀ ಸೌಂದರ್ಯದ ಶೋಧನೆಯಲ್ಲಿ

"ಈ ಭೂಲೋಕದಲ್ಲಿ ರಂಭೆ, ಊರ್ವಶಿ, ತಿಲೋತ್ತಮೆಯರಂತಹ ಸುರಸುಂದರಿಯರು ಏಕೆ ಇಲ್ಲ? ಇಂತಹ ಸುಂದರಿಯೊಬ್ಬಳು ವಿಶ್ವದ ಯಾವ ದೇಶದಲ್ಲಿದ್ದರೂ ಸರಿ, ಅವಳನ್ನು ಒಲಿಸಿ ನನ್ನವಳನ್ನಾಗಿ ಮಾಡಿಕೊಳ್ಳಲೇಬೇಕು", ಎಂದು ಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ಪಣತೊಟ್ಟಿದ್ದೆ! ಈ ಅಪೂರ್ವ ಸುಂದರಿ ಹೇಗಿರಬಹುದು? ಎಂದು ಊಹಿಸಲಾರಂಭಿಸಿದಾಗ ಕನ್ನಡ ಕವಿಗಳ ವರ್ಣನೆ ನೆನಪಿಗೆ ಬಂದಿತು. ಎಲ್ಲೋ ಓದಿ ಮರೆತದ್ದು, ನೆನಪಿಸಿಕೊಂಡೆ. 'ಮೊಳಕಾಲು ಚುಂಬಿಸ ಹೊರಟ, ಹುಲುಸಾಗಿ ಬೆಳೆದ ಕಪ್ಪಾದ ಕೇಶರಾಶಿ, ಮೀನಿನಾಕಾರದ ಸುಂದರ ಕಣ್ಣುಗಳು, ಬಿಲ್ಲಿನಾಕಾರದ ಹುಬ್ಬು, ಸಂಪಿಗೆ ಮೊಗ್ಗಿನ ಆಕಾರದ ಮೂಗು, ವೀಳ್ಯಮೆದ್ದಂತೆ ಭ್ರಮೆ ಹುಟ್ಟಿಸುವ ಕೆಂದುಟಿ, ಉಬ್ಬಿದೆದೆ, ಸಿಂಹಕಟಿ, ಗೌರವರ್ಣ.... ಆಹಾ! ಇಂಥ ದಿವ್ಯ ಸೌಂದರ್ಯವುಳ್ಳ ಕನ್ಯೆಯೊಬ್ಬಳು ನನಗಾಗಿಯೇ ಇದಾಗಲೇ ಈ ಭೂಮಂಡಲದಲ್ಲಿ ಹುಟ್ಟಿ ಬಂದಿರಬಹುದೇ! ಎಂದು ಬಿಡುವಿನಲ್ಲಿ ಸದಾಕಾಲ ಯೋಚಿಸಲಾರಂಭಿಸಿದೆ. ಅಂತೆಯೇ ಪರಿಚಿತ, ಅಪರಿಚಿತ ಕುವರಿಯರನ್ನು, ಅವರರಿಯದಂತೆ ದಿಟ್ಟಿಸಿ ನೋಡುವ ಕಲೆಯನ್ನು ರೂಢಿಸಿಕೊಂಡೆ. ಹುಟ್ಟೂರಾದ ಹೊನ್ನಾವರ, ಕಾಲೇಜ ಕಲಿತ ಕುಮಟಾ, ಸ್ನಾತಕೋತ್ತರ ಶಿಕ್ಷಣ ಪಡೆದ ಧಾರವಾಡದಲ್ಲಿ ದಿಟ್ಟಿಸಿದ್ದೇ ಬಂತು. ಅಪೇಕ್ಷಿತ ಸುಂದರಿ ಕಂಡುಬರಲಿಲ್ಲ. ಮುಂದೆ ಅಮೇರಿಕೆಗೆ ತೆರಳಿದಾಗಲೂ ಶೋಧ ಮುಂದರಿಯಿತು.

ಆದರೆ ಆ ಮೋಹಿನಿಯರ ನಾಡಲ್ಲೂ, ನಿರಾಸೆಯೇ ಕಾದಿತ್ತು. ಅಲ್ಲಿಯ ಸಬಲೆಯರು ತೀರ ಅಪರಿಚಿತನೊಂದಿಗೂ 'ಹಾಯ್!' ಎಂದು ರಾಗವೆಳೆಯುತ್ತ ಹಸ್ತಲಾಘುವ ಮಾಡುವುದು ಸೌಕುಮಾರ್ಯದ ಕೊರತೆ ಎನಿಸಿತು. ಮುಂದೆ ಲಂಡನ್ನಿನಲ್ಲಿ . ಆದರೆ ಅಲ್ಲಿಯ ಯುವತಿಯರು ತಾವಿನ್ನೂ ಬ್ರಿಟಿಶ್ ಸಾರ್ವಭೌಮರ ಪ್ರಜೆಗಳೆಂದು ನಂಬಿ ಭಾರತೀಯರನ್ನು ಕಡೆಗಣ್ಣಿನಿಂದ ನೋಡಲೂ ತಯಾರಿಲ್ಲ! ಎಂಬುದು ಖಚಿತವಾಯಿತು. ಅಲ್ಲಿಂದ ಪ್ಯಾರಿಸಿಗೆ ಪಲಾಯನ ಮಾಡಿದೆ. ಥಳಕು ಬೆಳಕಿನ ಆ ನಗರದ ಕನ್ಯೆಯನ್ನು ವರಿಸಿದರೆ, ಆಕೆಯ ಶೃಂಗಾರ ಸಾಧನಗಳನ್ನು ಕೊಳ್ಳುವುದರಲ್ಲಿಯೇ ಗಳಿಕೆಯೆಲ್ಲ ಪೋಲಾಗುವ ಸಾಧ್ಯತೆ ನಿಚ್ಚಳವಾಯಿತು! ಹಾಲಂಡಿನಲ್ಲಿ ದೈವ ಪರೀಕ್ಷೆಗೆ ತೆರಳಿದೆ. "ಹಾಲು ಹಿಂಡಿ" ವಿಶ್ವಖ್ಯಾತಿ ಪಡೆದ ನೆದರ್‌ಲ್ಯಾಂಡ್ ನಾರಿ, ಹಾಲೇ ಇಲ್ಲದ ಹೊನ್ನಾವರದ ದನಕರು ನೋಡಿ ಹೌಹಾರುವುದು ಖಚಿತ ಎಂದು ದಿಗಿಲಾಯಿತು. ಪಾಶ್ಚಿಮಾತ್ಯರಲ್ಲಿ ಜರ್ಮನ್ ಸ್ತ್ರೀ ಅತ್ಯಾಕರ್ಷಕಳು. ಒಳ್ಳೆ ಗೃಹಿಣಿ ಕೂಡ, ಎಂಬ ನಂಬಿಗೆಯಿದೆ. ಹೀಗಾಗಿ ಬರ್ಲಿನ್ ನಗರದ ಬೀದಿ ಬೀದಿಗಳಲ್ಲಿ ಅಲೆದರೂ ಹುಡುಕುತ್ತಿದ್ದ ಹುಡುಗಿ ಗೋಚರಿಸಲೇ ಇಲ್ಲ.!

ಹಿಂದೊಮ್ಮೆ ಗ್ರೀಕ್, ರೋಮನ್ ರಾಜ್ಯಗಳು ಭಾರತದಂತೆ ವೈಭವ ಶಿಖರಕ್ಕೆ ಏರಿದ್ದರಿಂದ ಅಲ್ಲಿಯ ಕನ್ಯಾರತ್ನಗಳು ಅಪೂರ್ವವಿರಲು ಸಾಕು, ಎಂದು ಒರೆಗಲ್ಲಿಗೆ ತಿಕ್ಕಿ ನೋಡಲು ಸಾಧ್ಯವೇನೋ ಎಂದು ಕಣ್ಣು ಬಿಟ್ಟು ನೋಡಿದಾಗ, ರತ್ನ ಹೋಗಲಿ, ಅಪ್ಪಟ ಬಂಗಾರದಂತೆ

ತೋರುವ ಒಬ್ಬಳೂ ಕಾಣಿಸಲಿಲ್ಲ. ಅಪೂರ್ವ ಸುಂದರಿ ಕ್ಲಿಯೋಪಾತ್ರಗಳ ಬಗ್ಗೆ ಓದಿದ್ದೆ. ಅವಳ ವಂಶಜರು ಯಾರಾದರೂ ಈಜಿಪ್ತದ ಕಾಯ್‌ರೋದಲ್ಲಿ ಕಂಡಾಳು! ಎಂಬ ಆಸೆಯಿಂದ ಹುಡುಕ ಹೋದರೆ, ಅಲ್ಲಿಯ ಸುಂದರಿಯರೆಲ್ಲ ದಪ್ಪ 'ಚಾದರ್'ಗಳಲ್ಲಿ ತಮ್ಮ ಮೈಮುಖ ಮುಚ್ಚಿಕೊಂಡು ತಾವು ಮಾತ್ರ ಪರಪುರುಷರನ್ನು ಕಣ್ಣು ಬಿಟ್ಟು ನೋಡುತ್ತ ಓಡಾಡುತ್ತಿದ್ದರು! ಪಾಕಿಸ್ತಾನದ ಕರಾಚಿಯಲ್ಲಿ ಫಕ್ತೂನ್, ಪಠಾಣ್, ಸಿಂಧಿ, ಪಂಜಾಬಿ ಹೆಂಗಳೆಯರೆಲ್ಲ ದೃಢಕಾಯರಾದರೂ ಸುಂದರಿಯರಲ್ಲ. 'ಸೌಂದರ್ಯದ ಹುಡುಕಾಟ, ಬಂಡವಲುದಾರರ ಗೀಳು" ಎಂದು ನಂಬಿದ ಕಮ್ಯುನಿಸ್ಟ್ ರಾಷ್ಟ್ರಗಳಲ್ಲಿ ನನ್ನ ಶೋಧ ಮುಂದುವರಿಸುವುದು ಸಮಂಜಸವಲ್ಲ ಎಂದುಕೊಂಡು ಸ್ವದೇಶಕ್ಕೆ ಮರಳಿದ್ದಾಯಿತು.

ಮೊಗಲ್ ಅರಸರೆಲ್ಲ, ತಮ್ಮ ಸಂತಾನ ಸುರೂಪಿಯಾಗಬೇಕೆಂದು ಹಂಬಲಿಸಿ ಕಾಶ್ಮೀರಿ ಕುಮಾರಿಯರನ್ನು ವಿವಾಹವಾಗುತ್ತಿದ್ದರಂತೆ! ಅಲ್ಲಿಯ ನಾರೀ ಸೌಂದರ್ಯದ ಸತ್ಯಾಂಶ ಪರೀಕ್ಷೆಗೆಂದು ಆ ಕೊಳ್ಳಕ್ಕೆ ತೆರಳಿ, ಶ್ರೀನಗರದ ಕಿರಿದಾದ ಗಲ್ಲಿಗಳಲ್ಲಿ ಗಸ್ತಿ ಹೊಡೆದದ್ದಾಯಿತು. ಅಲ್ಲಿಯ ಚಲುವೆಯರು ತಮ್ಮ ಧರ್ಮದವರಲ್ಲದ, ವರನೊಡನೆ ಮದುವೆಯ ವಿಚಾರವನ್ನು ಕನಸಿನಲ್ಲಿಯೂ ಊಹಿಸಲಾರರು! ಎಂದು ಹಿರಿಯನೊಬ್ಬ ಕಡ್ಡಿ ಮುರಿದಂತೆ ಹೇಳಿಬಿಟ್ಟ. ಬಂಗಾಲಿಗಳು ಕೊಂಕಣಿಗರಿಗೆ ಹತ್ತಿರದವರು, ಎನ್ನುತ್ತಾರಾದ್ದರಿಂದ ಕಲಕತ್ತಾ ಕನ್ನೆಯರನ್ನು ಪರೀಕ್ಷಿಸುವ ಯತ್ನ ನಡೆಸಿದಾಗ, ಗುಳಿಬಿದ್ದ ಕಣ್ಣು, ಸುಕ್ಕು, ಬಿದ್ದ ಮುಖ, ತೀರ ಬಡಕಲು ದೇಹದವರೇ ಬಹುಸಂಖ್ಯೆಯಲ್ಲಿ ಕಂಡರು. ರಾಜಸ್ಥಾನದ ಪದ್ಮಿನಿ ರಾಣಿಯ ವಂಶಸ್ಥರು ಸಾಮಾನ್ಯರ ಕಣ್ಣಿಗೆ ಬೀಳುವವರಲ್ಲ. ಓಡಾಡಿಕೊಂಡಿರುವ ಇತರ ಕುವರಿಯರು ಎಣ್ಣೆ, ತುಪ್ಪದಲ್ಲಿ ಕರಿದ ಪೂರಿಗಳಂತೆ ಉಬ್ಬಿದ ಮೈಕಟ್ಟಿನವರು, ಹೀಗಾಗಿ ಅಲ್ಲಿಂದಲೂ ಕಂಬಿ ಕೀಳುವಂತೆ ಆಯಿತು. ಕರ್ನಾಟಕದ ಕರಾವಳಿ, ಅಪೂರ್ವ ಸೌಂದರ್ಯಕ್ಕೆ ಹೆಸರಾದಂತೆ, ಸುಂದರಿಯರಿಗೂ ಪ್ರಸಿದ್ಧವಾಗಿದೆ ಎಂದು ಬಯಲು ಸೀಮೆಯ ಮಿತ್ರರು ಹೇಳಿದ್ದು ನೆನಪಾಗಿ ಪುನರಾವಲೋಕನ ನಡೆಸಿದೆ. 'ನಿನ್ನ ಇಪ್ಪತ್ತು ಅಂಶಗಳ ಸೂತ್ರಕ್ಕೆ ಸರಿಹೋಗುವ ಸಂದರಿ, ಇಲ್ಲಿ, ಅಲ್ಲಿ, ಎಲ್ಲೆಲ್ಲೂ ಹುಟ್ಟಿಬರುವ ಸಾಧ್ಯತೆ ಇಲ್ಲವೇ ಇಲ್ಲ! ಇದ್ದುದರಲ್ಲಿಯೇ ಹೆಚ್ಚಿನ ಅಂಶಗಳನ್ನು ಹೊಂದಿದ ವಿದ್ಯಾಬುದ್ಧಿಗಳ್ಳುಳ್ಳ ಹುಡುಗಿಯನ್ನು ಆರಿಸು' ಎಂಬ ಹಿರಿಯರ ಹಿತೋಕ್ತಿಗೆ ಮಣಿದು ಸಹಧರ್ಮಿಣಿಗಾಗಿ ಶೋಧವನ್ನು ಮುಂದರಿಸಿದೆ.

ಭಾರೀ ಶ್ರೀಮಂತ ಹೋಟೇಲ ಮಾಲಿಕರ ಪುತ್ರಿಯೊಬ್ಬಳು ಅನ್ನ ಬಸಿದ ತಿಳಿಗೆ ಘಮಘಮಿಸುವ ಒಗ್ಗರಣೆಕೊಟ್ಟು ಬೇಳೆತೊವ್ವೆಯೊಂದಿಗೆ ಬೆರಿಸಿ ಬಡಿಸಿ, ತಂದೆ ಸಾವುಕಾರನಾಗಲು ಸಹಾಯ ಮಾಡಿದ ಶ್ರೇಯಸ್ಸು ಪಡೆದಿದ್ದಳು. ಆದರೆ ಈ ಕನ್ಯಾರ್ಥಿಗೆ ಗೃಹಕೃತ್ಯದ ಇಂಥ ತಂತ್ರಜ್ಞಾನ ನಿರುಪಯೋಗಿ ಎಂದು ಮನೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಕಾರವಾರದ ಕನ್ಯೆ ವರನಿಗಿಂತ ಹಿರಿಯಳು ಎಂದು ಪತ್ತೆ ಹತ್ತಿದ್ದರಿಂದ ಒಪ್ಪಿಕೊಳ್ಳಲಾಗಲಿಲ್ಲ. ಹಿರೇಮಕ್ಕಿಯ ಹೆಣ್ಣು, ಎಮ್ಮೆಗಳ ಫೈಲನ್ನು ಅತ್ಯಂತ ದಕ್ಷರೀತಿಯಲ್ಲಿ ಸಂಭಾಳಿಸಿದರೂ ನೂರು ಊರು ತಿರುಗಿದ ಗಂಡನನ್ನು ನಿಯಂತ್ರಿಸಲು ಈ ಕಲೆ ಬಳಸಿದರೆ! ಎಂದು ದಿಗಿಲಾಯಿತು.

'ಕಂಕುಳಲ್ಲಿದ್ದ ಕೂಸಿಗೆ ಕೇರಿಯೆಲ್ಲ ಹುಡುಕಿದಂತೆ' ಕೊನೆಗೆ ಸಿಕ್ಕ ಕೂಸು (ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲವೆಡೆ ಹೆಂಡತಿಗೆ "ಕೂಸೇ" ಎಂದು ಕರೆಯುವದುಂಟು!) ಕೇವಲ ಹನ್ನೆರಡು ಮೈಲು ದೂರವಿತ್ತು! ಕನ್ಯಾಪಿತರು ಅದಾಗಲೇ ಸವೆದು ಹೋದ ಪಾದರಕ್ಷೆಗಳನ್ನು ಇನ್ನಷ್ಟು ಸವೆಸುತ್ತ ವರನ ಮನೆಗೆ ಬಂದಿಳಿದದ್ದು ನೋಡಿ ಕನಿಕರವೆನಿಸಿತು. "ನನ್ನ ಮಗಳು ಶಾಲಾ ಕಾಲೇಜು ಶಿಕ್ಷಣವನ್ನು ಶಿಷ್ಯವೇತನದಿಂದಲೇ ಮುಗಿಸಿದ್ದಾಳೆ. ಚರ್ಚಾಕೂಟ-ಆಟ-ಪಾಟ, ಸಾಂಸ್ಕೃತಿಯ ಚಟುವಟಿಕೆಗಳಲ್ಲಿ ಯಾವಾಗಲೂ ಮುಂದಿದ್ದಾಳೆ. ಸರಸ್ವತಿಯ ಆರಾಧನೆಯಲ್ಲಿ ಮುಂದಿದ್ದ ನನಗೆ ಲಕ್ಷ್ಮಿ ಎಂದೂ ಒಲಿಯಲಿಲ್ಲ. ವರದಕ್ಷಿಣೆ, ವರೋಪಚಾರಗಳಿರಲಿ, ವೈಭವದ ವಿವಾಹ ಕೂಡ ಏರ್ಪಡಿಸುವದು ಅಸಾಧ್ಯ. ಆದರೆ ಹುಡುಗಿ ಚೆನ್ನಾಗಿದ್ದಾಳೆ!" ಎಂದು ಮೊದಲ ಭೇಟಿಯಲ್ಲೇ ಅಸಹಾಯಕತೆ ತೋಡಿಕೊಂಡ ಆಗಂತುಕರಲ್ಲಿ ಕರಣೆಯೂ, ಅಸಾಮಾನ್ಯಳೆಂದು ಅನಿಸಿದ ಕನ್ಯೆಯಲ್ಲಿ ಕುತೂಹಲವೂ ಏಕಕಾಲಕ್ಕೆ ಕೆರಳಿದ್ದರಿಂದ ಕನ್ಯಾ ವೀಕ್ಷಣೆಯನ್ನು ಮಾಡಿದ್ದಾಯಿತು. ದುಷ್ಯಂತನನ್ನು ಮರಳು ಮಾಡಿದ ಶಕುಂತಲೆಯ ಸೌಂದರ್ಯ ಅವಳಲ್ಲಿ ಇಲ್ಲದಿದ್ದರೂ ಗೌರವರ್ಣ, ದಟ್ಟವಾದ ಕೇಶರಾಶಿ, ಆಡಂಬರರಹಿತವಾದ ಸುರೂಪಗಳು ಇದ್ದುದರಿಂದ ವಿವಾಹ ಬಂಧನದಲ್ಲಿ ಬಂಧಿತನಾಗಿ ಬಿಟ್ಟೆ! ಕನ್ಯಾಪಿತರು ಅವಳ ಎತ್ತರವನ್ನು ಎರಡು ಇಂಚಿನಷ್ಟು ಹಿಗ್ಗಿಸಿ, ವಯಸ್ಸನ್ನು ಎರಡು ವರ್ಷಗಳಷ್ಟು ಕುಗ್ಗಿಸಿದ್ದು ಆ ನಂತರ ಗಮನಕ್ಕೆ ಬಂದಿತು. ಆದರೆ ಇವೆರಡೂ ಮೂರು ದಶಕಗಳಷ್ಟು ದೀರ್ಘವಾದ ಸುಖ ಸಂಸಾರ ನಡೆಸಲು ಆತಂಕವಾಗಲೇ ಇಲ್ಲ. ಈ ಅವಧಿಯಲ್ಲಿ ಏಕಮೇವ, ಅದ್ವಿತೀಯ ಪುತ್ರನನ್ನು ಪಡೆದು, ಅವನು ಮದುವೆಗೆ ನೆರೆದು ಈಗ ಕನ್ಯಾಪಿತರಲ್ಲಿ ನಮ್ಮೊಂದಿಗೆ ವೈವಾಹಿಕ ನಂಟನ್ನು ಬೆಳೆಸುವ ಪೈಪೋಟಿ ಅಬ್ಬರದಿಂದ ನಡೆದಿದೆ. ಇದರಿಂದಾಗಿ ಹೊಸ ಸಮಸ್ಯೆಗಳನ್ನು ದಿನೇ ದಿನೇ ಬಗೆಹರಿಸಬೇಕಾಗಿದೆ.

ಕಾಲ ಬದಲಾಗಿದೆ! ಎಂದು ಎಲ್ಲರೂ ಘಂಟಾಘೋಷವಾಗಿ ಸಾರುವದು ನಿಜವೆಂಬಂತೆ ಕಾಣುತ್ತಿದೆ. ಹಿಂದಿನ ಯಾವ ಸೂತ್ರಗಳೂ ಇಂದಿನ ಮದುವೆಗೆ ಅನ್ವಯಿಸುವಂತೆ ಇಲ್ಲ. ರುಚಿಕಟ್ಟಾದ ಅಡಿಗೆ ಬರುತ್ತದೆಯೇ? ಸುಶ್ರಾವ್ಯವಾಗಿ ವೀಣೆ ನುಡಿಸಬಲ್ಲಳೇ? ಭರತನಾಟ್ಯ ಕಲಿತಿದ್ದಾಳೆಯೇ? ಹೊಲಿಗೆ ರೂಢಿಸಿಕೊಂಡಿದ್ದಾಳೆಯೇ? ಕಂಠ ಇಂಪಾಗಿದೆಯೇ? ಎಂಬ ಪ್ರಶ್ನೆಗಳನ್ನು ವಧು ಪರೀಕ್ಷೆಯಲ್ಲಿ ಕೇಳುವಂತಿಲ್ಲ. ವಧು ಪರೀಕ್ಷೆ ಎಂಬ ವಿಚಾರವೇ ಪೂರ್ವಯುಗದ್ದು. ಸ್ತ್ರೀಯರಿಗೆ ಅವಹೇಳನಕಾರಿ ಎಂದು ನನ್ನವಳ ನಂಬಿಗೆಗೆ ಮಾನ್ಯತೆ ಕೊಟ್ಟು, ವರಾರ್ಥಿಯಾಗಿ ಬಂದವರಿಗೆ "ನಿಮ್ಮ ಮಗಳ ಕನಸು ಮತ್ತು ಸಾಧನೆಗಳ ಕುರಿತಾದ ಕಿರುಪರಿಚಯಾತ್ಮಕ ಪತ್ರ ಕಳಿಸಿಕೊಡಿ" ಎಂದು ಹೊಸಪ್ರಥೆ ಪ್ರಾರಂಭಿಸಿದೆ. ವರನ ಬದಲಾಗಿ ನಮ್ಮ ನಿರ್ಧಾರ ತಿಳಿಸಿ, ಎಂದು ಪೀಡಿಸಿದಾಗ, 'ನೋಡಿ, ಇಂದಿನ ದಿನಗಳಲ್ಲಿ ಎಸ್.ಎಸ್.ಎಲ್.ಸಿ. ಪಾಸು ಮಾಡದವನೂ ತಂದೆ ತಾಯಿಗಳ ಆಯ್ಕೆಯನ್ನು ಒಪ್ಪಿಕೊಳ್ಳುವುದಿಲ್ಲ! ಹೀಗಿರುವಾಗ ಕಂಪ್ಯೂಟರ್ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದು ಕೈತುಂಬಾ ಸಂಪಾದಿಸುವ ಹುಡುಗನಿಗೆ ಸ್ವಂತಿಕೆ ಎಂಬುದು ಇದೆಯಲ್ಲ?" ಎಂದು ಅವರ ಬಾಯಿ ಮುಚ್ಚಿಸಿದ್ದಾಯ್ತು.

ಆಧುನಿಕ ಕನ್ಯಾಮಣಿಗಳನ್ನು ಕುರಿತು ಹೇಳಿದಷ್ಟು ಕಡಿಮೆಯೇ! ಕೆಲ ಮಾದರಿಗಳು ಹೀಗಿವೆ: ಮುಂಬೈಯ ರೂಪದರ್ಶಿಯೊಬ್ಬಳು ಸ್ವಹಸ್ತಾಕ್ಷರಗಳಲ್ಲಿ ತನ್ನನ್ನು ಹೀಗೆ

ಪರಿಚಯಿಸಿಕೊಂಡಿದ್ದಳು. "ನಾನು ೩೪-೨೨-೩೪ ಇದ್ದು ಜಾಹೀರಾತು ಜಗತ್ತಿನಲ್ಲಿ ವಿಪರೀತ ಬೇಡಿಕೆಯಿದ್ದವಳು. ಬರುವ ಬೊಗಸೆತುಂಬ ಸಂಪಾದನೆಗೆ, ಮದುವೆ, ಸಂಸಾರಗಳು ಅಡ್ಡಿ ಬಾರದಿದ್ದರೆ ಮಾತ್ರ ಒಪ್ಪಿಕೊಳ್ಳುವೆ". ಜೊತೆಗೆ ಕಳಿಸಿದ ವರ್ಣ ಭಾವಚಿತ್ರದಲ್ಲಿ ಒಂದಿಷ್ಟೂ ಚೆಲುವೆಯಾಗಿ ಕಾಣದ್ದರಿಂದ, "ಈಕೆ 'ಮಾಡೆಲ್' ಹೇಗೆ ಆದಳು?" ಎಂದು ನನ್ನ ಗೃಹ ಸುಂದರಿಯನ್ನು ವಿಚಾರಿಸಿದೆ. 'ನಿರಾಡಂಬರದ ಹುಟ್ಟಾ ಚೆಲುವೆಯರ ಯುಗ ಮುಗಿದುಹೋಗಿದೆ. ಅಂಗಾಂಗಗಳ ಪಾಲನೆ ಪೋಷಣೆ ಹೇಗೆ ಮಾಡಿಕೊಳ್ಳಬೇಕು?, ಎಂದು ಮಹಿಳಾ ಪತ್ರಿಕೆಗಳು ಸಾರಿ ಸಾರಿ ಹೇಳುತ್ತವೆ. ಅವಳು ಇಲ್ಲಿ ತನ್ನ ಎದೆ, ನಡು, ನಿತಂಬಗಳ ಅಳತೆಗಳನ್ನು ಬರೆದಿದ್ದಾಳೆ. ಜೊತೆಯಲ್ಲಿ ಶರೀರದ ತೂಕವೂ ಹಿಗ್ಗದಂತೆ, ಕುಗ್ಗದಂತೆ ಸದಾ ಜೋಕೆಯಿಂದ ಇರಬೇಕಾಗುತ್ತದೆ. ಇಂಥವಳಿಂದ ಮನೆ, ಗಂಡ, ಮಕ್ಕಳ ಜೋಪಾನ ಸಾಧ್ಯವೇನ್ರಿ?" ಎಂದು ನನಗೇ ಸವಾಲು ಸಾರಿದಳು. ಅಮೇರಿಕೆಯ ನ್ಯೂಯಾರ್ಕದಲ್ಲಿ ವಾಣಿಜ್ಯ ಕಲಾ ವಿದ್ಯಾರ್ಥಿನಿಯಾಗಿ ಯಶಸ್ವಿಯಾದ ಕನ್ಯೆಯ ಒಕ್ಕಣಿಕೆ ಹೀಗೆ ಇತ್ತು. "ನನ್ನ ಸರಳ ಸೌಂದರ್ಯಕ್ಕೆ ಆಕರ್ಷಿತರಾದ ಅನೇಕ ಅಮೇರಿಕನ್ ತರುಣರು ಬಾಳಸಂಗಾತಿ ಮಾಡಿಕೊಳ್ಳಲು ಮುಂದೆ ಬಂದರು. ನಾನು ಮಾತ್ರ ಭಾರತೀಯನನ್ನೇ ವಿವಾಹವಾಗಬೇಕೆಂದು ನಿರ್ಧರಿಸಿದ್ದೇನೆ. ಇದರಿಂದ ಮುಂದೆ ಎಂದಾದರೂ ಭಾರತಕ್ಕೆ ಮರಳಿ, ಹಿಮಾಲಯದ ಪರ್ವತಾವಳಿಗಳನ್ನು, ಹಾವಾಡಿಗರನ್ನು, ಹುಲಿಗಳನ್ನು, ಕಡುಬಡವರನ್ನು ಚಿತ್ರಿಸುವ ಕನಸುಗಳನ್ನು ನೆನಸಾಗಿ ಮಾಡಲು ಸಾಧ್ಯವಾಗುವುದು. ಅಂತೆಯೇ ನನ್ನ ವರನು ಸದಾಕಾಲ ಬೆಂಗಾವಲಿಗೆ ಇದ್ದು ಅಲೆಯಲು ಸಿದ್ಧನಿರಬೇಕಾಗುವದು!" ಅವಳ ಇಂಗಿತವನ್ನು ಅರಿತ ನನ್ನಾಕೆ, "ಅವಳು ಒಬ್ಬ ಕಾವಲುಗಾರನನ್ನು ಮದುವೆಯಾಗುವುದು ಮೇಲಲ್ಲವೇ?" ಎಂದು ತೀರ್ಪನಿತ್ತಳು. ಕರಾವಳಿಯ ಹಳ್ಳಿಯ ಹುಡುಗಿಯೊಬ್ಬಳು ಬರೆದುಕೊಂಡ ವಿವರಗಳು ಹೀಗಿದ್ದವು. "ಬರೇ ಎಸ್.ಎಸ್.ಎಲ್.ಸಿ ಓದಿದ್ದಾಳೆ ಎಂದು ಜಿಗುಪ್ಸೆ ಪಡದಿರಿ! ವರನು ದೊಡ್ಡ ನೌಕರಿಯಲ್ಲಿದ್ದಾನಲ್ಲವೇ? ಆಗಾಗ ಭೋಜನ ಕೂಟಗಳನ್ನು ಏರ್ಪಡಿಸದೇ ನಿರ್ವಾಹವಿರುವುದಿಲ್ಲ. ಹತ್ತಿಪ್ಪತ್ತು ಜನರಿಗೆ ಶಾಕಾಹಾರಿ, ಸಾಮಿಷ ಅಡಿಗೆ ಮಾಡುವಷ್ಟು ಪಾಕಕುಶಲತೆ ನನ್ನದು. ಹಳ್ಳಿಯ ಗುಗ್ಗು ನಾನಲ್ಲ. ಚೆನ್ನಾಗಿ ಅಲಂಕರಿಸಿಕೊಂಡಾಗ ಅತ್ಯಾಧುನಿಕರನ್ನೂ ಮೀರಿಸುತ್ತೇನೆ, ಎಂದು ಸ್ನೇಹಿತೆಯರು ಹೇಳುತ್ತಾರೆ. ನಿಮ್ಮ ಮಗನಿಗೆ ಸರ್ವವಿಧದಲ್ಲೂ ಯೋಗ್ಯಳಿದ್ದೇನೆ" ಎಂದು ಬರೆದಿದ್ದಳು. "ಇಂಥವಳನ್ನು ಮನೆ ತುಂಬಿಸಿಕೊಂಡರೆ ಮನೆಯೆಂಬುದು ಹೋಟೇಲಾದೀತು!" ಎಂದಳು ಪತ್ನಿ ಬೇಸರದ ಧ್ವನಿಯಲ್ಲಿ.

ಅಂಚೆ ಮೂಲಕ ಬಂದ ವಿವರಗಳಿಂದ ವಧುವನ್ನು ಆರಿಸುವುದು ಮನಸ್ಸಿಗೆ ಬಾರದ್ದರಿಂದ ಸುಂದರಿಯಾದ ಸೊಸೆಯನ್ನು ಪ್ರತ್ಯಕ್ಷಕಂಡು ಆಯ್ಕೆ ಮಾಡುವುದೆಂದು ಯೋಚಿಸಿ ಕಾರ್ಯೋನ್ಮುಖಿಯಾದೆವು. ಆದರೆ ಆಧುನಿಕ ಕನ್ಯೆಯರ ಸೌಂದರ್ಯವನ್ನು ಪತ್ತೆ ಹಚ್ಚಲು ಬಳಸುವ ಸೂತ್ರಗಳು ಯಾವವು? ಎಂದು ತಿಳಿಯದೇ ದಿಗ್ಭ್ರಾಂತರಾದೆವು.ಕೇಶರಾಶಿಯ ಮೌಲ್ಯಮಾಪನವೇನು? ಅದು ಸ್ವಂತದ್ದಾಗಿರದೇ, ತಿರುಪತಿ ತಿಮ್ಮಪ್ಪನಿಗೆ ಭಕ್ತಾದಿಗಳು ಅರ್ಪಿಸಿದ ಪ್ರಸಾದದ 'ವಿಗ್' ಆಗಿರಬಹುದು. ಕೂದಲ ಹೊಳಪಿನ ಗುಟ್ಟೇನು? ನಿರ್ಜೀವವಾದ ಬಣ್ಣಗೇಡಿ ಕೂದಲಿಗೆ ಕಪ್ಪು ಮೆರಗು, ಲೇಪನವಾಗಿರಬಹುದು. 'ಬಾಯ್‌ಕಟ್'ಗೆ ಕಾರಣವೇನು? ವಿರಳ ಕೇಶಿಯು ಕೈಕೊಂಡ ತಂತ್ರ ಇದಾಗಿರಬಹುದು. ಇನ್ನೊಬ್ಬಾಕೆಯ ಹುಬ್ಬುಗಳು ನಿಜಕ್ಕೂ ಬಿಲ್ಲಿ

ನಾಕಾರ ಹೊಂದಿವೆಯೇ? ಛೇ ಛೇ! ಬ್ಯೂಟಿಪಾರ್ಲರಿನ ಸ್ತ್ರೀ ನಾಪಿತಳ ಕರ ಕುಶಲತೆಯ ಪರಿಣಾಮವಿರಬಹುದು! ಕೃತಕ ರೆಪ್ಪೆಗಳೂ ಮಾರಲು ಸಿಗುತ್ತವಂತೆ! ಕಣ್ಣಿನ ದೋಷವಿದೆಯೇ? 'ಕೊಂಟ್ಯಾಕ್ಟ್ ಲೆನ್ಸ್' ಬಳಸುತ್ತಿದ್ದರೆ ಗೊತ್ತಾಗುವುದಾದದರೂ ಹೇಗೆ? ತುಟಿಯ ಬಣ್ಣ ಬಿಡಿ. ಗುಲಾಬಿಯಿಂದ ಕಡುಗೆಂಪು ಹತ್ತಾರು ಬಣ್ಣಗಳ ಲಿಪ್‌ಸ್ಟಿಕ್ ದೊರೆಯುತ್ತವೆ. ಎದೆಯ ಮಾಟ ನೈಸರ್ಗಿಕವಾದದ್ದೇ? ಅಥವಾ 'ಬ್ರಾ' ಕಂಪನಿಯವರು ವಿಶೇಷ ನಿಗಾವಹಿಸಿ ತಯಾರಿಸಿದ ಕವಚಗಳದ್ದೇ? ಮೈ ಕೈ ಹೊಳಪು, ಸ್ವಾಭಾವಿಕವಾಗಿ ತೋರುವದಿಲ್ಲವಲ್ಲ? ರೋಮಾವಳಿಯನ್ನು ಬೋಳಿಸಿಕೊಂಡು ಥಳ ಥಳ ಮಿಂಚಿಸಲು ಅದೆಷ್ಟು ದ್ರವ್ಯಗಳನ್ನು ಕ್ರೀಮುಗಳನ್ನು ಬಳಸುತ್ತಾಳೋ! ಕೈ-ಕಾಲುಗಳ, ಉಗುರುಗಳ ಬಣ್ಣವಂತೂ ತರಹೇವಾರಿ. ದೇವದತ್ತ ಸೌಂದರ್ಯವೆಷ್ಟು? ಹಣಸುರಿದು ತನ್ನದಾಗಿಸಿದ ಸೌಂದರ್ಯ ಎಷ್ಟು? ಎಂದು ಅರಿಯಲಾಗದೇ ಪೇಚಾಡಬೇಕಾಯಿತು. ಕನ್ನೆಯಲ್ಲಿ ಇಲ್ಲದ ಸೌಂದರ್ಯಕ್ಕಾಗಿ ಅಡಿಗೆ ಬಾರದ ಮುಗ್ಧತೆಗಾಗಿ, ಅಂಗ ಸೌಂದರ್ಯದ ರಕ್ಷಣೆಗೆಂದು ಮನೆ ಮಕ್ಕಳತ್ತ ಗಮನ ಕೊಡಲಾಗದ ಅಸಹಾಯಕತೆಗಾಗಿ, ವಧುವನ್ನು ಅರಿಸುವುದುಂಟೆ? ಪುನಃ ವಿಚಾರವಿನಿಮಯ ಪ್ರಾರಂಭವಾಯಿತು. 'ಜೀವನ ಸಂಗಾತಿಯನ್ನು ಆರಿಸುವ ಸರ್ವಾಧಿಕಾರವನ್ನು ಮಗನಿಗೇ ಒಪ್ಪಿಸುವುದು ಮೇಲು', ಎಂದು ನಿರ್ಧರಿಸಿದೆವು. ಅವನಾದರೂ ಎಂಥ ಅಪ್ಪಂತನೆಂದಿರಿ! ಓರ್ವ ಸುಂದರ ಅತ್ಯಾಧುನಿಕಳನ್ನು ವರಿಸಲು ಅಡ್ಡಿಯಿಲ್ಲ. ಆದರೆ ಅಮ್ಮಾಳಂತೆಯೇ ಸಾದಾ ಇರಬೇಕು! ಎನ್ನುತ್ತಾನೆ. ಅಪ್ಪನು ಮೂವತ್ತು ವರ್ಷಕ್ಕೆ ಚತುರ್ಭುಜನಾಗಿದ್ದ. ಮಗನು ಆ ವಯಸ್ಸಿನಲ್ಲೂ ದ್ವಿಭುಜನಾಗಿ ಮುಂದುವರಿಯವಂತಾದರೆ ಆಶ್ಚರ್ಯವಿಲ್ಲ.

ನಾ ಕಂಡ ಬೆಂಗಳೂರು

ಮಲ್ಲೇಶ್ವರದಲ್ಲಿ ಇಳಿದು ಎಲ್ಲಿಗೆ ಹೋಗಬೇಕೆಂದು ತೋಚದೆ ಅತ್ತಿಂದಿತ್ತ ನೋಡುತ್ತಿರುವಾಗ ಮುಂಡುಧಾರಿಯೊಬ್ಬ, "ಏನು ಯೋಚನೆ, ಎಲ್ಲಿ ಹೋಗಬೇಕು ಸಾರ್" ಎಂದ (ಬೆಂಗಳೂರಲ್ಲಿ ವಿಚಾರಿಸಿದ ಎನ್ನಬೇಕು). ನನ್ನ ಮಿತ್ರ ಡಾಕ್ಟರರ ಮನೆ ಎಲ್ಲಿ ಎಂದಾಗ, "ಸ್ಟ್ರೇಟ್ ಆಗಿ ಹೊರಟುಹೋಗ್ಬಿಡಿ. ಲೆಫ್ಟ್ ಟರ್ನ್ ಮಾಡಿದ್ರೆ ಅಲ್ಲೊಂದು ಓಟ್‌ಹೌಸ್ ಕಾಣುತ್ತೆ. ಅದರ ಪಕ್ಕದಲ್ಲಿ ಶಾಪ್ ಮಡಕೊಂಡವ್ರೆ" ಎಂದು ಬಂದ ಉತ್ತರವನ್ನು ಧಾರವಾಡದ ಭಾಷೆಯಲ್ಲಿ ಪರಿವರ್ತಿಸಿ ಅರ್ಥ ಮಾಡಿಕೊಳ್ಳಬೇಕಾದರೆ ನನಗೆ ಐದು ನಿಮಿಷಗಳೇ ಬೇಕಾಯಿತು. "ಇಲ್ಲಿಂದ ಎಷ್ಟು ದೂರ ಇದೆ?" ಎಂದು ಪ್ರಶ್ನಿಸಿದೆ. "ಈ ತರ್ಟಿಒನ್ ನಂಬರ್ ಬಸ್ ಹೋಗುತ್ತೆ ನೋಡಿ, ಹತ್ತಕಂಡ್‌ಬಿಡಿ" ಎಂದು ಹೊರಟುಹೋಗಿಬಿಟ್ಟ. ಕೈಚೀಲವೊಂದೇ ಇದ್ದದರಿಂದ ಬಸ್ ಹತ್ತಿದೆ. ಮುಂದಿನ ನಿಲ್ದಾಣದಲ್ಲಿ ಇನ್ನಷ್ಟು ಜನರು ಹತ್ತಿದ್ದರಿಂದ ಸ್ಥಳಾಭಾವವಾಗಿ, ನನ್ನನ್ನು ದ್ದೇಶಿಸಿ ಒಬ್ಬ, "ಒತ್ತ್‌ಕೊಳ್ಳಿ ಸಾರ್" ಎಂದ, ಏನು ಒತ್ತಿಕೊಳ್ಳುವುದು ಎಂದುತಿಳಿಯದೇ ಅವನನ್ನೇ ನೋಡಿದಾಗ, "ಏನ್ ಸಾರ್, ಕನ್ನಡ ಬರಾಕಿಲ್ವಾ?" ಎಂದು ತಮಿಳಿನಲ್ಲಿ ಏನೋ ಗೊಣಗಿದ. ಇವನಿಗೆ ಕೂಡಲು ಸ್ಥಳ ಬೇಕಾಗಿರಬಹುದೆಂದು ಸರದು ಕೂತಾಗ, "ಥ್ಯಾಂಕ್ಸ್ ಸಾರ್," ಎಂದ. ಇಷ್ಟಾದರೂ ಅವನಿಗೆ ಸರಿಯಾಗಿ ಕೂಡಲಾಗದ್ದರಿಂದ, "ಹಿಂದೆ ಮುಂದಾಗಿ" ಎಂದು ಕುಳಿತವರಿಗೆ ಅಜ್ಞೆಯಿತ್ತ. ಅರ್ಧ ಜನರು ಸೀಟಿನ ಹಿಂಭಾಗದಲ್ಲಿಯೂ, ಉಳಿದವರು ಮುಂಭಾಗದಲ್ಲಿಯೂ ಕುಳಿತಾಗ ಅವನ ಮಾತಿನ ಅರ್ಥವಾಯಿತು.

ಡಾಕ್ಟರರ ಹತ್ತಿರ ಹರಟುತ್ತ ಕುಳಿತಾಗ ಆಳು ಬಂದು, "ಯಾರೋ ಕೂಗಿಕೊಳ್ಳುತ್ತಾರೆ ಸಾರ್," ಎಂದ. ಏನಾಯಿತೋ ಏನೋ ಎಂದು ಹೊರಗೆ ಧಾವಿಸುವುದರಲ್ಲಿದ್ದೆ. ಅಷ್ಟರಲ್ಲಿ ಡಾಕ್ಟರು, "ಕೂಗಿಕೊಳ್ಳುತ್ತಾರೆ ಎಂದರೆ ಕರೆಯುತ್ತಾರೆ ಎಂಬರ್ಥ," ಎಂದಾಗ ಮೋಜೆನಿಸಿತು. ಕರೆದಾಗ ಒಳಗೆ ಬಂದವಳು ಒಳ್ಳೆ ಕಾಂಜೀವರ ಸೀರೆ ಉಟ್ಟಿದ್ದರೂ ಕಾಲಿಗೆ ಚಪ್ಪಲಿ ಇರಲಿಲ್ಲ; ಕಾಲು ಹಳದಿ ಬಣ್ಣಕ್ಕೆ ತಿರುಗಿದ್ದವು. "ಡಾಕ್ಟರ್ರೆ, ನಿಮ್ಮ ವೆಲ್ ವಾಟರ್ ಯೂಜ್ ಮಾಡಬಹುದಾ?" ಎಂದು ಕೇಳಿದಾಗ "ಅವರು ಇಂಗ್ಲೀಷಿನಲ್ಲಿ ಕನ್ನಡ ಶಬ್ದಗಳನ್ನು ಸೇರಿಸುತ್ತಾರೋ ಅಥವಾ ಕನ್ನಡದಲ್ಲಿ ಇಂಗ್ಲೀಷ್ ಸೇರಿಸುತ್ತಾರೋ ಎಂದು ತಿಳಿಯಲಿಲ್ಲ" ಎಂದೆ. ಕಂಪೌಂಡರ ನಡುವೆ ಬಾಯಿ ಹಾಕಿ, "ನಾವೆಲ್ಲ ಹಾಗೆ ಮಿಕ್ಸ್ ಮಾಡೋಲ್ಲಾ ಸಾರ್. ಓಲ್ಡ್ ಮೈಸೂರಿನವರು ಮಾತಾಡೋದು ಪ್ಯೂರ್ ಕನ್ನಡ," ಎಂದು ಘೋಷಿಸಿದ. ಕಾಫಿ ಕುಡಿಯುತ್ತಿದ್ದಂತೆ, "ಬಂದವಳು ಯಾರೋ ಬಡವಳಿರಬೇಕು. ಕಾಲಿಗೆ ಚಪ್ಪಲಿಗಳಿಲ್ಲ, ಮದುವೆಯ ರೇಶಿಮೆ ಸೀರೆಯನ್ನೇ ನೀರು ಸೇದುವಾಗಲೂ ಉಟ್ಟುಕೊಂಡಿದ್ದಾಳೆ. ಮುಖ ಕಾಲು, ಹಳದಿ ಆಗಿವೆ. ರಕ್ತದೌರ್ಬಲ್ಯದಿಂದಲೋ ಜಾಂಡಿಸ್‌ನಿಂದಲೋ ಬಳಲುತ್ತಿರಬೇಕು", ಎಂದು ಉದ್ಗರಿಸಿದೆ. ಡಾಕ್ಟರ್ ದಂಪತಿಗಳು ಹೊಟ್ಟೆ ಬಿರಿಯುವಂತೆ ನಕ್ಕರು. "ಅವಳು ಕೌನ್ಸಿಲ್ಲರನ ಪತ್ನಿ. ನೆಳದ ನೀರು ಮಡಿಗೆ ಬರುವುದಿಲ್ಲವೆಂದು ಬಾವಿಯ ನೀರು ಒಯ್ಯುತ್ತಾಳೆ, ನಾಲ್ಕೈದು ರೇಶಿಮೆ ಸೀರೆಗಳಿದ್ದರೆ.ಜನ್ಮದುದ್ದಕ್ಕೂ ಅವು ತಾಳಿಕೆ ಬರುವುದರಿಂದ ಹಣದ ಉಳಿತಾಯವಾಗುತ್ತದೆಂದು ಅವರ ಅಂಬೋಣ. ನಾವು ನೂಲ ಸೀರೆ

ಉಟ್ಟು ವೃಥಾ ಹಣ ಹಾಳು ಮಾಡುತ್ತೇವಲ್ಲ ಎಂದು ಅವರು ಮರುಗುವುದೂ ಉಂಟು. ಅವಳು ಸೌಂದರ್ಯಕ್ಕಾಗಿ ಮುಖಕ್ಕೂ ಕಾಲಿಗೂ ಅರಿಶಿಣ ಸವರಿಕೊಂಡಿದ್ದಾಳೆ. ಜಾಂಡಿಸ್ ಆಗಲಿಕ್ಕೆ ಅವಳಿಗೆ ಏನಾಗಿದೆ ಧಾಡಿ!" ಎಂದು ಡಾಕ್ಟರರ ಗೃಹಿಣಿ ಹೇಳಿದಾಗ ನನ್ನ ಮಂಕುತನದ ಅರಿವಾಯಿತು.

ಆ ಸಂಜೆ ಡಾಕ್ಟರು ಇನ್ನೂ ದವಾಖಾನೆಗೆ (ಶಾಪಿಗೆ ಅನ್ನಬೇಕಲ್ಲವೆ?) ಬಂದಿರಲಿಲ್ಲ, ಅಂತೆಯೇ ಕಂಪೌಂಡರನ ಹತ್ತಿರ ಹರಟುತ್ತ ಕುಳಿತೆ. ಅವನು ನಮ್ಮೂರ ಬಗ್ಗೆ ವಿಚಾರಿಸಿದಾಗ, ನಾನು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದವನು, ಶರಾವತಿ ನದಿಗೆ ನಮ್ಮೂರ ಹತ್ತಿರವೇ ಬ್ರಿಜ್ (ಸೇತುವೆ ಅಂದರೆ ಅವನಿಗೆ ತಿಳಿಯಲಿಕ್ಕಿಲ್ಲ ಎಂದು ಇಂಗ್ಲೀಷ್ ಶಬ್ದಗಳನ್ನು ಹೆಚ್ಚಾಗಿ ಬಳಸಲು ಆದಾಗಲೇ ಪ್ರಾರಂಭಿಸಿದ್ದೆ) ಕಟ್ಟಿದ್ದಾರೆ. ಅಲ್ಲಿಂದ ಬಿ.ಎಚ್. ರೋಡು ಬೆಂಗಳೂರನ್ನು ನಮ್ಮೂರಿಗೆ ಜೋಡಿಸುತ್ತದೆ.... ಎಂದು ಏನೇನೋ ಹೇಳುತ್ತಿರುವಾಗ ನಡುವೆಯ ಬ್ರೆಕ್ ಹಾಕಿ ಅವನು, "ಅದೇನು ಹಳ್ಳಿಗರ ಹಾಗೆ ಬ್ರಿಜ್, ಎಚ್. ಅಂತೀರಾ? ಬ್ರಿಡ್ಜ್, ಹೆಚ್ ಅನ್ನಬಾರದೇ? ಇಂಗ್ಲೀಷ್ ಸ್ಕೂಲಿಗೆ ಹೋಗಲಿಲ್ಲವೆ?" ಎಂದು ಕೇಳಿದ. ಅವನ ಮಾತಿನಿಂದ ಮೋಜನಿಸಿದರೂ ತೋರಗೊಡದೆ ಅವನ ಬಗ್ಗೆ ವಿಚಾರಿಸಿದೆ. "ನಮ್ಮ ಫಾದರ್ರು ನಂಜನಗೂಡಿನಲ್ಲಿ ಜಡ್ಜ ಆಗಿದ್ರು. ಆದರೇನು ಮಾಡುವುದು, ನಾವು ಸಣ್ಣವರಿರುವಾಗಲೇ ಹೋಗಿಬಿಟ್ರು (ತೀರಿಕೊಂಡರು). ತುಂಬಾ ಪೂರ್ (ಬಡವರು) ಅದ್ದರಿಂದ ಕಾಲೇಜಿಗೆ ಸೇರಲಾಗಲಿಲ್ಲ, ಕಂಪೌಂಡರನಾಗಬೇಕಾಯಿತು," ಎಂದು ತನ್ನ ಇಂದಿನ ಸ್ಥಿತಿಗೆ ಕಾರಣ ವಿವರಿಸಿದ. ನಂತರ ಏನು ಕಂಡಿತೋ ಏನೋ, "ಡಾಕ್ಟರ್ರು ಬರೋಕೆ ಇನ್ನೂ ಟೈಮ್ ಇದೆ; ಒಂದಿಷ್ಟು ಕಾಫಿ ಕುಡಿದುಬಿಟ್ಟು ಬರೋಣವೇ?" ಎಂದು ಬೇಡವೆಂದರೂ ಹತ್ತಿರದ ಬ್ರಾಹ್ಮಣರ ಕಾಫಿ ಅಂಗಡಿಗೆ ಎಳಿಕೊಂಡು ಹೋದ. ಮಾಣಿ "ಏನು ಕೊಡಲಿ?" ಎಂದಾಗ "ಒನ್ ಬೈಟು ದೋಸೆ," ಎಂದ, ಇದೆಂತಹ ದೋಸೆ ಎಂದು ಯೋಚಿಸುವಷ್ಟರಲ್ಲಿ ನನ್ನ ಪಾಲಿಗೆ ಅರ್ಧ ದೋಸೆಯಷ್ಟೇ ಬಂತು. ದೋಸೆ ತಿನ್ನುವಷ್ಟರಲ್ಲಿ ಯಾರೋ ಅವನ ಸ್ನೇಹಿತ ಬಂದು ಮಾತಾನಾಡುತ್ತ ಕುಳಿತ್ತಿದ್ದರಿಂದ, "ಟು ಬೈ ತ್ರಿ" ಕಾಫಿಗೆ ಆರ್ಡರ್ ಕೊಟ್ಟ. ನನ್ನ ಮುಂದೆ ಒಂದು ಮೂರಾಂಶ ಕಪ್ ಕಾಫಿ ಬಂದಾಗ ಅವನ ಮಾತಿನ ಅರ್ಥವಾಯಿತು. ನಂತರ ಹಣ ನಾನೇ ಕೊಟ್ಟಿದ್ದರಿಂದ ಒನ್ ಬೈ ಟು, ಟು ಬೈ ತ್ರೀ ಹೇಳಿದ್ದಕ್ಕಾಗಿ ಅವನು ಮರುಗಿರಬೇಕು.

ಡಾಕ್ಟರು, ಕಂಪೌಂಡರು ತಮ್ಮ ಕೆಲಸದಲ್ಲಿ ತೊಡಗಿದಾಗ ನಗರದ ದರ್ಶನಕ್ಕಾಗಿ ಕಾಲುನಡಿಗೆಯಲ್ಲಿ ಹೊರಟೆ. ಮನೆಯಿಂದ ಹೊರಬೀಳುತ್ತಿದ್ದಂತೆ ಹಳ್ಳಿಗನೊಬ್ಬ "ಟೈಮ್ ಪ್ಲೀಸ್" ಎಂದಾಗ ನಾನು ಇಂಗ್ಲೀಷಿನಲ್ಲಿ ಉತ್ತರವಿತ್ತೆ, "ಎಷ್ಟು ಸಾರ್?" ಎಂದು ಅವನು ಮತ್ತೊಮ್ಮೆ ಕೇಳಿದಾಗಲೇ ಅವನಾಡಿದ್ದು ಕನ್ನಡವೆಂದು ತಿಳಿಯಿತು. ನಗರದ ರಸ್ತೆಗಳಿಗೆ ಯಾವುದೊಂದು ಹೆಸರು ಕೊಡುವ ಬದಲು ಫಸ್ಟ್ ಮೇನ್, ತರ್ಡ್‌ಮೇನ್ (ಮುಖ್ಯಬೀದಿ) ಏಟ್ತ್‌ಕ್ರಾಸ್, ಫಿಫ್‌ಟೀನ್ತ್ ಕ್ರಾಸ್ (ಉಪರಸ್ತೆ) ಎಂದುಕರೆಯುವದು ವಾಡಿಕೆ. ಹನ್ನೊಂದನೇ ಕ್ರಾಸ್ ರಸ್ತೆಯಿಂದ ಮಲ್ಲೇಶ್ವರಮ್‌ಗೆ ಹೊರಟಿದ್ದೆ. ಸಿಟಿ ಮಾರ್ಕೆಟ್ಟಿಗೆ ಹೋಗುವ ಸಿಟಿ ಬಸ್ಸುಗಳು ಇದೇ ಮಾರ್ಗದಿಂದ ಓಡುತ್ತವೆ. ಅದರ ಒಂದು ಕಡೆಗೆ ರಸ್ತೆಯ ಮಧ್ಯದಲ್ಲಿ ದೇವರ ಗುಡಿಯೊಂದನ್ನು ಕಟ್ಟಿದ್ದರಿಂದ ರಸ್ತೆ ತೀರ ಇಕ್ಕಟ್ಟಾಗಿಬಿಟ್ಟಿದೆ. "ದೇವರಿಗೆ ಆಚೆ ಈಚೆ ಸ್ಥಳ ಬಿಟ್ಟು ಜನರಿಗೆ ನಮಸ್ಕರಿಸಲು ಬರುತ್ತಿರಲಿಲ್ಲವೇ?" ಎಂದು ವಿಚಾರಿಸಿದೆ. ಐದು ವರ್ಷಗಳ ಹಿಂದೆ ಅಲ್ಲಿ ಒಂದು ಪಾಷಾಣ

ಮಾತ್ರವಿತ್ತಂತೆ. ಮುನಸಿಪಲ್ ಕಾರ್‌ಪರೇಶನ್ನಿನವರು ಅದನ್ನು ಹಾಗೇ ಬಿಟ್ಟಿದ್ದರು. ಆದರೆ ಯಾರಿಗೋ ದೇವಸ್ಥಾನ ಕಟ್ಟುವ ಹಂಬಲವುಂಟಾಗಿ ಚಂದಾಕೂಡಿಸಿ ಕಟ್ಟಿಸಿಯೇ ಬಿಟ್ಟರಂತೆ. ದೇವರನ್ನು ಪೂಜಿಸುವದು ಲಾಭದಾಯಕ ಎಂದು ಅನಿಸಿದ್ಧರಿಂದ ಒಂದು ವರ್ಷದ ಹಿಂದೆ ಗಣಪತಿಗಾಗಿ ಗುಡಿಯೊಂದನ್ನು ಕಟ್ಟಿಸಿದ್ದಾರೆ. ಈಗ ದೇವರನ್ನಲ್ಲಿಂದ ಓಡಿಸುವ ಧೈರ್ಯ ಯಾರಿಗೂ ಇಲ್ಲವಂತೆ!

ಇಲ್ಲಿ ಅಂಗಡಿಗಳು ಬೇರೆ, ಮನೆಗಳು ಬೇರೆ ಎಂದು ವಿಂಗಡಿಸುವುದು ಅಸಾಧ್ಯವಾದ ಮಾತು. ವ್ಯಾಪಾರಿ ದೃಷ್ಟಿಕೋನ ಉಳ್ಳವರು ಮನೆಯ ಮುಂದೆ ಮೊಮ್ಮಗನು ಅಮೇರಿಕದಿಂದ ತರಬಹುದಾದ ಕಾರಿಡಲು ಗ್ಯಾರೇಜೊಂದನ್ನು ಕಟ್ಟುವರು. ಅಲ್ಲಿಯ ತನಕ ಖಾಲಿ ಇಡುವದೇಕೆ ಎಂದು ಅಂಗಡಿಕಾರನಿಗೆ ಬಾಡಿಗೆಗೆ ಕೊಡುವರು. ಬೆಂಗಳೂರಿನಲ್ಲಿ ನೀವು ಸಿರಿವಂತರು ಎಂದು ತೋರಿಸಿಕೊಳ್ಳಬೇಕಾದರೆ ನಿಮ್ಮ ಸ್ವಂತದ್ದೊಂದು ಮನೆ ಇರಬೇಕು ಮತ್ತು ಪ್ರತಿ ತಿಂಗಳು ಬಾಡಿಗೆ ಬರುತ್ತಿರಬೇಕು. ಹೀಗಿದ್ದರೆ ಮಾತ್ರ ಹೆಣ್ಣು, ಸಾಲ ಕೊಡಲು ಯಾರೂ ಹಿಂದೆ ಮುಂದೆ ನೋಡುವುದಿಲ್ಲ. ದೊಡ್ಡ ಮನೆಯಲ್ಲಿ ಒಬ್ಬಿಬ್ಬರೇ ವಾಸಿಸಿದರೆ ಅವರಿಗೆ ಸೇರದು. ಅಂತೆಯೇ ಅರ್ಧಭಾಗವನ್ನು ಬಾಡಿಗೆಗೆ ಕೊಡಿರೆಂದು ತಪ್ಪದೇ ಯಾಚಿಸುವರು.

ಬೀದಿಗಳಲ್ಲಿ ಸಂಚರಿಸುತ್ತಿದ್ದಂತೆ ಕಾಫಿಯ ಸುಗಂಧ ಹಠಾತ್ತನೇ ಬಂದು ಮೂಗು ಸೇರಿಕೊಂಡಿತು. ಕಾಫಿಯ ಆಕರ್ಷಣೆಯಿಂದ ಬಿಡಿಸಿಕೊಳ್ಳಲಾಗದೆ ಹತ್ತಿರವೇ 'ಕಾಫಿ' ಎಂದು ಬೋರ್ಡ್ ತೂಗುಹಾಕಿದ ಅಂಗಡಿಯತ್ತ ಸಾಗಿದೆ. ಅಲ್ಲಿ ಹತ್ತಾರು ಜನರು ನಿಂತುಕೊಂಡುದನ್ನು ಕಂಡು, ಸ್ಥಳದ ಅಭಾವದ ಮೂಲಕ ಇಲ್ಲಿ ನಿಂತೇ ಕಾಫೀ ಕುಡಿಯಬೇಕೆಂಬ ನಿಯಮವಿರಬಹುದು ಎಂದುಕೊಂಡೆ. "ಕಾಫೀ ಕೊಡಿ" ಎಂದಾಗ, "ಎಷ್ಟು ಸಾರ್?" ಎಂದು ಬಂದ ಮರುಪ್ರಶ್ನೆಯಿಂದ ಕಣ್ಣು ತೆರೆದು ನೋಡಿದೆ. ಕಾಫೀ ಬೀಜ ಹುರಿದು ಪುಡಿಮಾಡಿ ಮಾರುತ್ತಿದ್ದರು! ಅಲ್ಲೊಂದು ಇಲ್ಲೊಂದು 'ಬ್ರಾಹ್ಮಣರ ರೊಟ್ಟಿ ಅಂಗಡಿ'ಗಳು ತಲೆ ಎತ್ತಿ ನಿಂತಿದ್ದವು. ಬರೇ ಅನ್ನ ಸಿಗುತ್ತದೆಂದು ಭಾವಿಸಿದ ಬೆಂಗಳೂರಿನಲ್ಲಿ ರೊಟ್ಟಿಗಳು ಸಿಗುತ್ತವೆಂದು ತಿಳಿದು ಆನಂದವಾಯಿತು. ಆದರೆ ಇವು ಜೋಳದ ರೊಟ್ಟಿ, ಸೆಜ್ಜೆ ರೊಟ್ಟಿಯಾಗಿರದೇ ಬ್ರೆಡ್ ಬಿಸ್ಕಿಟುಗಳ ಅಂಗಡಿಗಳೆಂದಾಗ ಮೋಸಹೋದೆನಲ್ಲಾ ಅನಿಸಿತು. ಅಂಗಡಿಗಳು ಸಣ್ಣವಾದರೂ ಇಲ್ಲಿ ಮಸಾಲೆ ಹಾಲು, ಬಾದಾಮಿ ಹಾಲು, ಆರೆಂಜ್, ಕೋಕಾಕೋಲಾ ಎಲ್ಲವೂ ಸಿಗುತ್ತವೆ. ಪರದೆಯ ಹಿಂದಿನಿಂದ ತಂದು ಕೊಟ್ಟ ಪಾನೀಯಗಳನ್ನು ರಸ್ತೆಯ ಅಂಚಿಗೆ ನಿಂತು ಕುಡಿಯಬೇಕು. ರೊಟ್ಟಿ ಅಂಗಡಿಯವರಿಗೆ ಫೋನ್ ಯಾಕೆ? ಎಂದು ಅಚ್ಚರಿಪಡುತ್ತಿದ್ದಾಗ ದಾರಿ ಹೋಕನೊಬ್ಬ ನನ್ನ ಸಂಶಯ ಪರಿಹರಿಸಿದ.

ಅವರ ಬಳಿ ಫೋನ್ ಮಾಡಲು ಬರುವ ಪ್ರತಿಯೊಬ್ಬರೂ ಮೂವತ್ತೈದು ಪೈಸಾ ಕೊಡಬೇಕಾಗುತ್ತದೆ. ಈ ವ್ಯವಹಾರ ಬೆಂಗಳೂರಲ್ಲಿ ಸಾಕಷ್ಟು ವ್ಯಾಪಕವಾಗಿದೆ. ಕಿರಿಯರಿಂದ ಹಿರಿಯರ ತನಕ ಕಡಲೆಕಾಯಿ (ಸೇಂಗಾ), ಬೋಂಡಾ, ಭಜಿ ಇತ್ಯಾದಿಗಳನ್ನು ಕೊಂಡು ರಸ್ತೆಯಲ್ಲಿಯೇ ತಿನ್ನುತ್ತ ತಿರುಗುವುದು ಇಲ್ಲಿನ ಇನ್ನೊಂದು ವೈಶಿಷ್ಟ್ಯ. ಅಂತೆಯೇ ಪ್ರತಿಯೊಂದು ರಸ್ತೆಯ ಮೂಲೆಯಲ್ಲಿ, ಅಂಗಡಿಯ ಎದುರಿನಲ್ಲಿ, ಸಣ್ಣ ಜಾಗದಲ್ಲಿಯೇ ಸ್ಟೋವ್ ಇಟ್ಟುಕೊಂಡು ಚಕ್ಕುಲಿ, ಕೋಡಬಳೆ, ವಡೆ, ಬೋಂಡಾ, ಗೋಡಂಬಿ, ಏನೆಲ್ಲ ತಯಾರಿಸುತ್ತಾರೆ. ಹುರಿಗಾಳ ಅಂಗಡಿಯಲ್ಲಿ ವಠಾಣೆಯಿಂದ ಹಿಡಿದು ಪಚ್ಚೆ ಹೆಸಿರಿನ ತನಕ ಹುರಿದು ಇಟ್ಟಿದ್ದರು. ಯಾವನೊಬ್ಬನು ಐದು ಅಥವಾ ಹತ್ತು ಪೈಸಾದ್ದಕ್ಕಿಂತ ಹೆಚ್ಚು ಖರೀದಿಸುವುದಿಲ್ಲ. ಅದು ತೀರಿತೆಂದರೆ ಇನ್ನೊಂದು

ಐದು ಪೈಸಾ ಖರ್ಚು ಮಾಡಬಹುದು. ಇಲ್ಲಿಯವರು ಇದರ ಜೊತೆಗೆ ವಾಚನಾಭಿರುಚಿಯನ್ನೂ ಸಾಕಷ್ಟು ಬೆಳೆಸಿಕೊಂಡಿದ್ದಾರೆ. ರದ್ದಿ ಅಂಗಡಿಯಲ್ಲಿ ಮಾರುವ ಪುಸ್ತಕಗಳನ್ನು ಕಲೆಹಾಕಿ 'ವಾಚನಾಲಯ' ಎಂದು ತೆರೆದರೆ ಸ್ತ್ರೀ ಪುರುಷರು ಸದಸ್ಯರಾಗಿ ಫೀ ಕೊಟ್ಟು ಓದಲು ಪುಸ್ತಕಗಳನ್ನು ಕೊಂಡೊಯ್ಯುತ್ತಾರೆ. ಹತ್ತಿರದ ಹೋಟೆಲಿಗೆ ಕಾಫಿಗಾಗಿ ಹೋಗಿ ಕೇಶರಿಭಾತ ಕೇಳಿ ತರಿಸಿದಾಗ ಶಿರಾ ತಂದುದನ್ನು ಕಂಡು ಬೆರಗಾದೆ. ಬೇರೇನಿದೆಯೆಂದು ಕೇಳಿದಾಗ 'ಚೌಚೌ' ಇದೆಯೆಂದ. ಇದಾವುದೋ ಚೀನಾದ ತಿಂಡಿ ಇರಬೇಕೆಂದು ತರಿಸಿದರೆ ಅವನು ಸೇವು ಚೂಡಾ ತಂದು ಕೊಟ್ಟಿದ್ದ. ಚೌಚೌ ಬೇಡವಾದರೆ ಚೌಚೌಭಾತ್ ಇದೆಯೆಂದ. ಇದಾದರೂ ಚೆನ್ನಾಗಿರಬಹುದೆಂದು ತರಿಸಿದರೆ, ಒಂದೇ ತಟ್ಟೆಯಲ್ಲಿ ಅರ್ಧ ಉಪ್ಪಿಟ್ಟು ಅರ್ಧ ಶಿರಾ ಹಾಕಿ ತಂದಿದ್ದ. ಕೊನೆಗೆ, ಬೆಂಗಳೂರಲ್ಲಿ ತಿಂಡಿಗಳಿಗಿದ್ದ ಈ ಅಪರಿಚಿತ ಹೆಸರುಗಳನ್ನು ಅರಗಿಸಿಕೊಳ್ಳಲಾರದೆ ಸೋತು ತಾಜಾ ತಾಜಾ ತಯಾರಾಗಿ ಬರುತ್ತಿದ್ದ 'ಭಜಿ'ಯನ್ನಾದರೂ ತಂದು ಕೊಡಲು ವಿನಂತಿಸಿದಾಗ, ಅದಿಲ್ಲವೆಂದ. ಬೆರಳು ಮಾಡಿ ತೋರಿಸಿದಾಗ, 'ಪಕೋಡಾನೋ!' ಎಂದು ನಕ್ಕು ತಂದುಕೊಟ್ಟ.

ಕಿರಿ ರಸ್ತೆ ಮತ್ತು ಹಿರಿ ರಸ್ತೆ ಕೂಡುವಲ್ಲಿ "ನಿಂತು ಹೋಗಿ" ಎಂದು ಬೋರ್ಡು ಕಾಣಿಸಿತು. ನಾನು ನಿಂತೇ ಹೋಗುತ್ತಿದ್ದರೂ ಈ ಬೋರ್ಡು ಏಕೆ ಹಾಕಿದ್ದಾರೆಂದು ಆಲೋಚಿಸಿದೆ. ಬಹುಶಃ ಸ್ವಲ್ಪ ಕಾದು ಮುಂದೆ ಹೋಗಿ ಎಂಬ ಅರ್ಥದಲ್ಲಿ ಬಳಸಿರಬಹುದೆಂದು ಐದು ನಿಮಿಷ ಅಲ್ಲಿ ಕಾದು ಮುಂದೆ ಹೋದರೂ ಇದರ ಗುಟ್ಟು ನನಗೆ ಅರ್ಥವಾಗಲಿಲ್ಲ. ನಂತರ ಡಾಕ್ಟರನ್ನು ವಿಚಾರಿಸಿದಾಗ, "ಮುಂದೆ ಹೆದ್ದಾರಿಯಿದೆ, ನಿಧಾನವಾಗಿ ಚಲಿಸಿರಿ" ಎಂಬ ಅರ್ಥದಲ್ಲಿ ಅದನ್ನು ಬರೆಯಲಾಗಿದೆ ಎಂದು ತಿಳಿದು ತುಂಬ ನಕ್ಕೆ. ಆಚೆಗೊಂದು, ಈಚೆಗೊಂದು ವಾಣಿಜ್ಯ ಕ್ಲಾಸು, ಟೈಪಿಂಗ್ ಕ್ಲಾಸುಗಳು ಹರಡಿಕೊಂಡಿವೆ.

ಓಣಿ ಓಣಿಗಳಲ್ಲಿ ಮದ್ರಾಸಿನಿಂದ ಬೆಳಗಾಂವಿಯ ತನಕ ಪ್ರಯಾಣಿಕರನ್ನು ಸಾಗಿಸುವ ಖಾಸಗಿ ಮೋಟಾರ ಕಂಪನಿಗಳ ಏಜಂಟರು ಹರಡಿಕೊಂಡಿದ್ದಾರೆ. ಅವರಲ್ಲಿ ಇರುವ ಫೋನ್ ಹಾಗೂ ಟಿಕೆಟ್ ಪುಸ್ತಕಗಳೇ ಅವರ ಭಾಂಡಾರ. ಇಲ್ಲಿ ಬೀಡಿ, ಚುಟ್ಟ ಸೇದುವುದು ಕಡಿಮೆ ಇರಬೇಕು ಅಂತೆಯೇ ಅಂತಹ ಅಂಗಡಿಗಳಲ್ಲಿ ಪಾಟಿ ಕಡ್ಡಿಯಿಂದ ಹಿಡಿದು ಕಸ್ತೂರಿ, ರೀಡರ್ಸ್ ಡೈಜೆಸ್ಟುಗಳ ತನಕ ಎಲ್ಲ ತರದ ಸಂಚಿಕೆಗಳೂ ದೊರೆಯುತ್ತವೆ. ಎರಡು ರಸ್ತೆಗಳು ಕೂಡುವಲ್ಲಿ ಬಣ್ಣದಲ್ಲಿ 'ಹರಿಶ್ಚಂದ್ರ ಕಾವ್ಯ'ದಲ್ಲಿಯ 'ಹೊಲತಿ'ಯರನ್ನು ಹೋಲುವ ನಾರಿಯರು ಕಬ್ಬಿನ ತುಣುಕು, ಕಡಲೇಕಾಯಿ, ಹಳಸಿದ ಪೇರಲ ಇಟ್ಟು ಮಾರುವರು. ಅವರಲ್ಲಿ ಇದ್ದ ಸಾಮಗ್ರಿಗಳ ಬೆಲೆ ಒಂದು ರೂಪಾಯಿಯೂ ಆಗದಾಗ ಅವರ ಲಾಭ ಎಷ್ಟು ಎಂದು ಊಹಿಸುವದೂ ಕಷ್ಟ! ಹೂವು ಮಾರುವ ಹೆಂಗಳೆಯರು ಮಾಟವಾಗಿ ಸೀರೆ ಉಟ್ಟು, ತಾಂಬೂಲ ಸೇವನೆಯಿಂದ ಕೆಂಪೇರಿದ ತುಟಿಗಳನ್ನೇ ಮರೆಯುತ್ತ ಸೌಂದರ್ಯಕ್ಕಾಗಿ ಬೆಳೆಸಿದ ಗಿಡಗಳ ಹೂಗಳನ್ನು ಕದ್ದು ತಂದು ರಸಿಕರಿಗೆ ಮೊಳದ ಲೆಕ್ಕದಲ್ಲಿ ಮಾರುವರು. ಹೂವುಗಳನ್ನು ದಂಡೆಯಾಗಿ ಕಟ್ಟದೇ ಮಾಲೆಯಾಗಿ ಕಟ್ಟುವದರಿಂದ ಪ್ರತಿದಿನವೂ ಮಾಲೆ ಹಾಕಿಸಿಕೊಳ್ಳುವ ಭಾಗ್ಯ ಇಲ್ಲಿಯ ಹೆಣ್ಣು ಮಕ್ಕಳಿಗೆ ಇದ್ದಿರಬೇಕು ಎನಿಸಿತು.!

ಅಲ್ಲಲ್ಲಿ 'ಹಾಲಿನ ಡೈರಿ' (ಡೈರಿ ಹಾಲಿನದಲ್ಲದಿದ್ದರೆ ಮತ್ತೆ ಯಾತರದಿರುತ್ತದೆ!) ಅಂಗಡಿಗಳಲ್ಲಿ ಹಾಲು, ಮೊಸರು, ಮಜ್ಜಿಗೆ ಎಲ್ಲವನ್ನೂ ಮಾರುತ್ತಾರೆ. ಬೆಣ್ಣೆ-ತುಪ್ಪದ ಅಂಗಡಿಗಳೂ ಸಾಕಷ್ಟು ಪ್ರಮಾಣದಲ್ಲಿ ಇವೆ. ಶುದ್ಧ ಹಾಲು ಬೇಕೆನ್ನುವವರಿಗೆ ದನಗಳನ್ನು ಮನೆಯ ಮುಂದೆ ತಂದು

ಹಾಲು ಹಿಂಡಿ ಕೊಡುವ ಮಹಿಳೆಯರ ತಂಡವೂ ಇದೆ. ಇವರೆಲ್ಲ ಅಲ್ಲೊಂದು ಇಲ್ಲೊಂದು ಕೊಂಪೆ, ಕೊಳಚೆ ಮಾಡಿಕೊಂಡು ಅದರಲ್ಲಿ ವಾಸಿಸುತ್ತಾರೆ. ಇಂಥವರು ಕೆಲವರು ಕಳ್ಳವ್ಯಾಪಾರ ಮಾಡಿ ಧನಿಕರೂ ಆಗಿದ್ದಾರೆ. ತೀರ ಗುಡಿಸಲೆಂದು ಕಾಣುವ ಒಳಗಿನ ಮನೆಯಲ್ಲಿ ಧನಿಕರ ಮನೆಯಲ್ಲಿರುವ ಬೆಲೆಬಾಳುವ ಸಾಮಾನಗಳನ್ನು ಕಲೆಹಾಕಿರುವುದನ್ನು ಕಾಣಬಹುದು.

ಊಟಕ್ಕಾಗಿ ಹೊಟೆಲೊಂದಕ್ಕೆ ಹೋದಾಗ ಮೆನೇಜರನು, "ಫುಲ್ ಮೀಲ್ಸ್," ಪ್ಲೇಟ್ ಮೀಲಾ?" ಎಂದು ಕೇಳಿದ್ದಕ್ಕೆ ಬಾಳೆಯ ಎಲೆಯಲ್ಲಿ ಉಣ್ಣುವ ಪ್ರಸಂಗ ಬಂದೀತೆಂದು, "ಪ್ಲೇಟ್ ಮೀಲ್" ಎಂದೆ. ಊಟದ ಮನೆಗೆ ಹೋದಾಗ ಮಾಣಿ ದೊಡ್ಡದೊಂದು ಬಾಳೆ ಎಲೆಯನ್ನೇ ತಂದಿಟ್ಟ! ಇದರಲ್ಲಿ ಹೇಗೆ ಊಟ ಮಾಡುವುದು ಎಂದು ಆರೋಚಿಸುತ್ತಿರುವಾಗ, ಉಳಿದವರಿಗೆ ಬಡಿಸುತ್ತಿದ್ದ ಮಾಣಿ ನನಗೆ ಮಾತ್ರ ಬಡಿಸಲೇಯಿಲ್ಲ. ನಾನು ಸ್ಪೆಶಲ್ ಊಟ ಹೇಳಿರಬೇಕೆಂದು ಭಾವಿಸಿ ಅದರ ದಾರಿಯನ್ನೇ ಕಾಯುತ್ತಿದೆ. ಅರ್ಧ ತಾಸಾದರೂ ಹಾಗೆಯೆ ಕುಳಿತಿದ್ದರಿಂದ ಮಾಣಿಯೇ ಎಲೆಯನ್ನು ತೊಳೆದು ಬಡಿಸಿದ! ಬಾಳೆಯೆಲೆಯಲ್ಲುಂಡು ಅಭ್ಯಾಸವಿರದ ನನಗೆ ಅಂದು ಊಟ ಮುಗಿಸಬೇಕಾದರೆ ಸಾಕುಬೇಕಾಯಿತು. ಅಂದಿನಿಂದ ಪ್ಲೇಟಿನಲ್ಲಿ ಬಡಿಸುವ ಅರ್ಧ ಚಪಾತಿ ಅರ್ಧ ಅನ್ನ ಕೊಡುವ 'ಬೊಂಬಾಯಿ ಮೀಲನ್ನೇ' ತರಿಸತೊಡಗಿದೆ.

ನಿವಾಸಕ್ಕಾಗಿ ಮನೆಯೊಂದನ್ನು ಹಿಡಿಯಬೇಕಾಗಿದ್ದರಿಂದ ಕೇರಿ ಕೇರಿ ತಿರುಗಿದೆ. "ತಾವು ಬ್ರಾಹ್ಮಣರೇ? ಈರುಳ್ಳಿ, ಬೆಳ್ಳುಳ್ಳಿ ತಿನ್ನುವಿರಾ?" ಎಂದು ವಿಚಾರಿಸಿ ಹೌದೆಂದಾಗ ಈರುಳ್ಳಿ, ಬೆಳ್ಳುಳ್ಳಿ ತಿನ್ನುವವನು ಎಂತಹ ಬ್ರಾಹ್ಮಣನೆಂದು ತಿಳಿಯದೇ "ಮನೆ ಕೊಟ್ಟಾಗಿದೆ" ಎನ್ನುವರು. ಕೊನೆಗೊಮ್ಮೆ ಒಬ್ಬರು ಮನೆಬಿಡುವವರಿದ್ದರಿಂದ ಅವರ ಮುಖಾಂತರವೇ ಮಾಲಿಕರ ಭೇಟಿ ಮಾಡಿದೆ. ತುಂಬಾ ಆತ್ಮೀಯತೆಯಿಂದ ಬರಮಾಡಿಕೊಂಡು, ಉಪ್ಪಿಟ್ಟು ಕಾಫಿ ಕೊಟ್ಟು ಮಾತನಾಡಿಸಿದರು. ಆರು ತಿಂಗಳ ಹಿಂದೆ ಕ್ಷಯರೋಗದಿಂದ ಪತ್ನಿಯನ್ನು ಕಳಕೊಂಡಿದ್ದರಿಂದ ಜೀವನದಲ್ಲಿ ವೈರಾಗ್ಯ ಬಂದಿದೆಯಂತೆ. ದೇವರು ಬೇಕಾದಷ್ಟು ಕೊಟ್ಟಿದ್ದರಿಂದ ಹಣದ ಆಶೆಯೇ ಇಲ್ಲವಂತೆ. ಅಲ್ಲದೇ ಒಳ್ಳೇ ಬಾಡಿಗೆದಾರರು ಬಂದ ಹೊರತು ಮನೆ ಬಾಡಿಗೆಗೆ ಕೊಡುವುದಿಲ್ಲವೆಂದರು. ಮನೆ ನನ್ನದೇ ಆಯಿತೆಂಬ ಹುಮ್ಮಸದಲ್ಲಿ ನಾನಿದ್ದಾಗ "ನಾನೇನೂ ಹೆಚ್ಚು ಕೇಳುವುದಿಲ್ಲ, ಅಕ್ಕಪಕ್ಕದವರು ಎಷ್ಟು ಕೊಡುತ್ತಾರೊ ಅಷ್ಟು ಕೊಡಿ," ಎಂದವರು ನುಡಿದಾಗ ಅವರ ಮಾತಿನ ಅರ್ಥವಾಗದೇ ಪೆಚ್ಚು ಮುಖ ಹಾಕಿಕೊಂಡು, "ಅಂದರೆ ತಿಂಗಳ ಬಾಡಿಗೆ ಎಷ್ಟಾಗಬಹುದು?" ಎಂದು ಕೇಳಿದೆ. "ಅದೊಂದೂ ನನಗೆ ತಿಳಿಯದು. ಅಕ್ಕಪಕ್ಕದವರನ್ನು ವಿಚಾರಿಸಿ ನಾಳೆ ತಿಳಿಸ್ತೀನಿ," ಅಂದರು. ಮರುದಿವಸ ತಾವೇ ಫೋನ್ ಮಾಡಿ, ನಾನಿದ್ದಲ್ಲಿಗೆ ಬಂದು "ಅಕ್ಕಪಕ್ಕದವರೆಲ್ಲಾ ನೂರಾ ಐವತ್ತು, ಇನ್ನೂರು ರೂಪಾಯಿ ಬಾಡಿಗೆ ಕೊಡುತ್ತಾರೆ. ನೀವೇನೂ ಅಷ್ಟು ಕೊಡ ಬೇಕಾಗಿಲ್ಲ ಬರೇ ನೂರಿಪ್ಪತ್ತು ಕೊಡಿ (ಹಿಂದಿನ ಬಾಡಿಗೆದಾರರು ಬರೀ ಅರವತ್ತು ಕೊಡುತ್ತಿದ್ದರು!) ಅಲ್ಲದೇ ನಾಲ್ಕು ಸಾವಿರ ರೂಪಾಯಿ ಗುಡ್‌ವಿಲ್ ಮತ್ತು ಒಂದು ಸಾವಿರ ಮುಂಗಡ ಹಣ ಕೊಟ್ಟರೆ ಸಾಕು. ನಿಮ್ಮನ್ನು ಸುಲಿಯಬೇಕೆಂಬ ಉದ್ದೇಶ ನನಗೇನಿಲ್ಲ," ಎಂದಾಗ ಟಿ.ಪಿ. ಕೈಲಾಸಮ್ ಒಳ್ಳೆಯ ನಾಟಕಕಾರರಾದುದೇಕೆಂಬ ಗುಟ್ಟು ನನಗರ್ಥವಾಯಿತು. ಕೊನೆಗೆ ಜೀವನದಲ್ಲಿ ಕಲಿತ ವ್ಯವಹಾರ ಕುಶಲತೆಯನ್ನೆಲ್ಲಾ ಉಪಯೋಗಿಸಿ ಮುಂಗಡ ಹಣ ಮತ್ತು ಗುಡ್‌ವಿಲ್ ಹಣ ರದ್ದು ಮಾಡಿಸಿದಾಗ ಒಂದು ಯುದ್ಧವನ್ನೇ ಗೆದ್ದಂತಾಗಿತ್ತು.

ಪರೋಪಕಾರಿ ಪರಕೆ

ಬೆಳಕು ಗಾಳಿಗಳಂತೆ, ಅತ್ಯವಶ್ಯವಾದ ಗೃಹಕೃತ್ಯದ ಈ ಸಾಧನವನ್ನು ಕರ್ನಾಟಕದ ಕರಾವಳಿಯವರು 'ಕಸಬರಿಗೆ' ಎಂದು ಹೆಸರಿಸಿದ್ದಾರೆ. ಆದರೆ ರಸಿಕ ಕನ್ನಡಿಗರು 'ಪರಕೆ' ಇಲ್ಲವೆ ಪೊರಕೆ (ಪೂರೆಯುವಾಕೆ!) ಎಂದು ಗೌರವದಿಂದ ಗುಗುತಿಸುತ್ತಾರೆ. ಕಸಬಳಿಯುವ ಕೆಲಸಗಾತಿಯರು, 'ಹಿಡಿಕುಂಟೆ' ಎಂಬ ಕರ್ಕಶ ಹೆಸರಿನಿಂದ ಸಂಬೋಧಿಸುವದೂ ಉಂಟು. ಕೊಂಕಣಿ ಸಾರಸ್ವತರು 'ಸಾರ್ಣೀ' ಎಂಬ ಸಂಗೀತಮಯವಾದ ನಾಮಕರಣ ಮಾಡಿದರೆ, ತೆಲುಗಿ ನವರು 'ಚಿಪುರು' ಎಂದರೆ, ಹಿಂದಿವಾಲಾರು 'ಝಾಡೂ' ಎಂದೂ ಆಂಗ್ಲರು ಬ್ರೂಮ್ ಎಂದೂ ಅನ್ನುವರು. ಹೆಸರಿನಲ್ಲೇನಿದೆ? ಎಂದು ನಿರ್ಲಿಪ್ತತೆಯನ್ನು ತಳೆದ ಪೊರಕೆ, ಗೌರವಾಗೌರವಗಳೆಂಬ ಭೇದಭಾವ ತಳೆಯದೇ ಸರ್ವರಿಗೂ ಸಮಾನವಾದ ಸೇವೆಯನ್ನು ಶತಮಾನಗಳಿಂದ ಸಲ್ಲಿಸುತ್ತಲೇ ಬಂದಿದೆ. ಓರಣವಾಗಿ ಕಟ್ಟಿದ ಹೊಚ್ಚಹೊಸ ಪೊರಕೆಯನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿದಾಗ, ರೂಪಸಿ ತನ್ವಂಗಿಯ ನೆನಪಾಗದೇ ಇರದು! ಒಂದು ಅಂಚು, ಅಭ್ಯಂಜನ ಸ್ನಾನಮಾಡಿ ಹರಡಿದ ಕೇಶರಾಶಿ ಹೊತ್ತ ರೂಪಸಿಯನ್ನು ಹೋಲಿದರೆ, ನಡುವಿನ ಭಾಗ ಸಿಂಹಕಟಿಯನ್ನು ನೆನಪಿಸುತ್ತದೆ. ಅದರ ನಡುವನ್ನು ಕೈಯಲ್ಲಿ ಬಿಗಿದಪ್ಪಿ ಹಿಡಿದು ಹೆಣ್ಣಿನ ಸ್ಪರ್ಶ ನೆನಪಿಸಿಕೊಳ್ಳುವವರು ಇರಬಹುದುಈಗ? ಅಂತೆಯೇ ಹೆಚ್ಚಿನ ಹೆಂಗಳೆಯರು, ಸವತಿ ಮತ್ಸರ ಬೇಡವೆಂದು ಪರಕೆಯ ಬಳಕೆಯನ್ನು ಮಹಿಳೆಯರಿಗಷ್ಟೇ ಸೀಮಿತಗೊಳಿಸಿರಬಹುದೇ? ಎಂದು ಅನಿಸುವದು ಸ್ವಾಭಾವಿಕ!

ತೆಂಗು ಹೇರಳವಾಗಿ ಬೆಳೆಯುವ ಕರಾವಳಿಯಲ್ಲೆಲ್ಲ ಅದರ ಗರಿಯ ಕಡ್ಡಿಗಳ ಪರಕೆಯನ್ನೇ ಬಳಸುವದು ವಾಡಿಕೆ. ಮಾಸಿಕ ರಜೆ ಪಡೆದ ಗರತಿಯರು ತೆಂಗಿನ 'ಹಿಡಿ ಪೆಂಟೆಗಳನ್ನು ಸವರಿ ಗರಿಗಳ ರಾಶಿ ಹಾಕಿ, ಹರಿತವಾದ ಚಾಕುವಿನಿಂದ ಉದ್ದುದ್ದ ಕಡ್ಡಿಗಳನ್ನು ಮಡಲಿನಿಂದ ಬೇರ್ಪಡಿಸುವದರಲ್ಲಿ ತೊಡಗಿರುತ್ತಾರೆ. ಮಡಿವಂತಿಕೆಯ ದಿನಗಳಲ್ಲಿ, ಮಕ್ಕಳನ್ನೂ ತಾಯಿ ಹತ್ತಿರ ಸೇರಿಸುತ್ತಿರಲಿಲ್ಲ. ಹೀಗಾಗಿ ಪುಟ್ಟ ಪುಟ್ಟ ಮಕ್ಕಳೆಲ್ಲ ಹುಟ್ಟುಡೆಯಲ್ಲೇ ಅವಳನ್ನು ಸುತ್ತು ವರಿದಿರುತ್ತಿದ್ದವು. ಅವಕ್ಕೆ ಕಡ್ಡಿ ಹಿರಿದು ಬಿದ್ದ ಮಡ್ಲು ಎಲೆಗಳು ಅತ್ಯಾಕರ್ಷಕ. ಬಣ್ಣದ ತಗಡಿನ ತುತ್ತೂರಿಯ ಬದಲಾಗಿ ಕಾಸೂ ಇಲ್ಲದ ಹಸಿರು ಎಲೆ ಸುತ್ತಿ ಪೀಪೀ ಮಾಡಿ ಊದಿ ದಿನವಿಡೀ ಕೇಳುಗರ ಕಿವಿ ಕಿವುಡು ಮಾಡುತ್ತಿದ್ದವು. ಹೊಸ ಕೈಗಡಿಯಾರ ದೊಡ್ಡ ಮಕ್ಕಳಿಂದ ಮಾಡಿಸಿ ಎರಡೂ ಕೈಗೆ ಕಟ್ಟಿಸಿಕೊಳ್ಳುವವು. ಅರಸ ಅರಸಿಯರು ಚರಿತ್ರೆಗೆ ಸೇರಿಹೋದರೂ, ಈ ಮಕ್ಕಳು ಮಡಲು ಎಲೆಯ ಕಿರೀಟ ಮಾಡಿ ಧರಿಸಿ ಮೆರೆಯಬಲ್ಲವು. ಅಮ್ಮ ಹಿತ್ತಲ ಕಡೆ ಹೋದಾಗೊಮ್ಮೆ ಕೆತ್ತಿ ಇಟ್ಟ ಕಡ್ಡಿಗಳನ್ನು ಕದ್ದು, ಒಂದನ್ನು ಕಮಾನಿನಾಕಾರದಲ್ಲಿ ಬಾಗಿಸಿ ಬಿಲ್ಲು ಮಾಡಿದರೆ, ಇನ್ನೊಂದನ್ನು ಬಾಣವಾಗಿಸಿ, ರಾಮ-ರಾವಣರ ಯುದ್ಧವನ್ನು ಪ್ರಾರಂಭಿಸಿಬಿಡುವರು. ತೆಂಗಿನ ಮರಗಳಿಂದ ಉದುರಿಬಿದ್ದ ಮಿಡಿಗಾಯಿ (ಬೊಂಡೆ)ಗಳನ್ನು ಚಚ್ಚೌಕವಾಗಿಸಿ, ಪರಕೆ ಕಡ್ಡಿಗಳಿಂದ

ಒಂದಕ್ಕೊಂದು ಜೋಡಿಸಿ ತೇರನ್ನು ರಚಿಸುವ ಕಲೆ ಅಪೂರ್ವವಾದದ್ದು. ಅದಕ್ಕೆ ಬಾಳೆನಾರೊಂದನ್ನು ಕಟ್ಟಿದರೆ ತೇರು, ಮನೆ ಹಿತ್ತಿಲು, ಅಂಗಳಗಳಲ್ಲೆ ಓಡಾಡುತ್ತವೆ. ಹುಡುಗಿಯರು ಬಿಳಿ ಸಂಪಿಗೆ ಹೂಗಳನ್ನು ಗರಿಕಡ್ಡಿಗೆ ಜೋಡಿಸಿ ತಮ್ಮತ್ವೇ 'ಬುಕೇ' ಮಾಡಿ ಕೊಟ್ಟುಕೊಳ್ಳುವರು. ಯಾರಿಗೂ ಕಾಣದಂತೆ ಉದ್ದವಾದ ಕಡ್ಡಿಯನ್ನು, ಮಣ್ಣಿನ ಮಡಕೆಯಲ್ಲಿ ಶೇಖರಿಸಿಟ್ಟ ತಿಳಿ ಬೆಲ್ಲದಲ್ಲಿ ಅದ್ದಿ, ಅದನ್ನು ನೆಕ್ಕಿ ಸವಿಯುವ ಹುಡುಗರು ಇಲ್ಲದಿಲ್ಲ. ಊರು ಹೊರಗಿನ ಗೋಡಂಬಿ ಹಕ್ಕಲಿನಿಂದ, ಹಣ್ಣುಗಳನ್ನು ತೆಗೆದು ಕಡ್ಡಿಗೆ ಪೋಣಿಸಿ ಮನೆಗೆ ಸಾಗಿಸುವ ವೈಖರಿ ಕಸಬರಿಗೆಗೆ ಬಳಸುವ ಕಡ್ಡಿಯಿಂದಲೇ ಸಾಧ್ಯ.

ಮೂರು ದಿನಗಳ ರಜಾದಿನಗಳಲ್ಲಿ ಓರ್ವಳು ಹತ್ತು ಪರಕೆಗಳಿಗಾಗುವಷ್ಟು ಕಡ್ಡಿಗಳನ್ನು ಕೆತ್ತ ಬಲ್ಲಳು. ಅವುಗಳನ್ನು ಅಳತೆ ಪ್ರಕಾರ ಬೇರ್ಪಡಿಸಿ ದಾರದಿಂದ ಬಿಗಿದು ಕಟ್ಟಿ, ಬಚ್ಚಲ ಅಟ್ಟಕ್ಕೆ ಸೇರಿಸಿದರೆ, ಹೊಗೆಯಿಂದ ಅವು ದೀರ್ಘಾಯುಗಳಾಗುವವು. ಕೆಲಸದವರಿಂದ ಕಡ್ಡಿಗಳನ್ನು ಕೆತ್ತಿಸಿ, ಅರ್ಧಪಾಲನ್ನು ಅವರಿಗೆ ಕೊಡುವ ವಾಡಿಕೆಯೂ ಇದೆ. ಬೇಸಿಗೆಯ ದಿನಗಳಲ್ಲಿ ಮುಂಬೈ, ಮದ್ರಾಸ್, ಬೆಂಗಳೂರುಗಳಿಂದ ಬಂದ ಅತಿಥಿಗಳು, ಹಪ್ಪಳ, ಸಂಡಿಗೆ, ಅಪ್ಪೆಮಿಡಿ ಉಪ್ಪಿನ ಕಾಯಿಗಳ ಜೊತೆಗೆ ತೆಂಗಿನ ಪರಕೆಗಳನ್ನು ಮರೆಯದೇ ಒಯ್ಯುತ್ತಿದ್ದರು. ಅವನ್ನು ಎಷ್ಟು ರೀತಿಯಲ್ಲಿ ಬಳಸಬಹುದೆಂಬುದು ಗೃಹಿಣಿಯ ಕಲ್ಪನಾಶಕ್ತಿಗೆ ಬಿಟ್ಟಿದ್ದು. ಉದ್ದವಾಗಿದ್ದು ಚಾಮರದಂತೆ ಇದ್ದಾಗ, ದೇವರ ಮನೆ, ಒಳಕೋಣೆಗಳನ್ನು ಗುಡಿಸಲಿಕ್ಕೆ, ಇನ್ನೂ ಮೊಂಡಾಗಿ ಬಿರುಸುಭಾಗ ಕಾಣಿಸಿಕೊಂಡಾಗ ಬಚ್ಚಲು, ಕಕ್ಕಸುಗಳನ್ನು ಸ್ವಚ್ಛಮಾಡಲಿಕ್ಕೆ ಅವುಗಳ ವರ್ಗಾವಣೆಯಾಗುತ್ತದೆ.

ಹಬ್ಬ-ಹುಣ್ಣಿಮೆಗಳಲ್ಲಿ ಕಾಳುಗಳ ಅರಳು ಮಾಡಲು, ಪುಟ್ಟ ಮಡ್ಡಲ ಪರಕೆಗಳು ಅನಿವಾರ್ಯವಾಗಿ ಬಿಡುತ್ತವೆ. ಕಲ್ಲು ನಾಗರನಿಗೆ ತಂಬಿಟ್ಟು ತಿನ್ನಿಸಲು ಗೋದಿ, ಜೋಳದರಳು ಜನ್ಮಾಷ್ಟಮಿಗೆ ಬೆಲ್ಲದುಂಡೆಗೆ ಪುಟಾಣಿ (ಹುರಿಗಡಲೆ), ವಿಶ್ವಕರ್ಮ ದಿನಾಚರಣೆಗೆ ಭತ್ತ ಅರಳಿಸಿ ಅರಳಿಟ್ಟು ಮಾಡುವದು ಗೃಹಿಣಿಯರ ಕೆಲಸ. ಇದಕ್ಕಾಗಿ ಮಣ್ಣಿನ ದೊಡ್ಡ 'ಕ್ಯಾಲಿ'ಯಲ್ಲಿ ರೇವೆ ಸೇರಿಸಿ, ಅದು ಕಾದಾಗ ಕಾಳು ಸೇರಿಸಿ ದಪ್ಪ ಕಡ್ಡಿಯ ಪರಕೆಯಿಂದ ಕೈಯಾಡಿಸುವರು. ಹಬ್ಬದ ಅಡಿಗೆಗೆ ಇಡ್ಲಿಗಳ ಬದಲು 'ಕೊಟ್ಟೆ ಕಡುಬು' ಮಾಡುವದು ಪರಿಪಾಠ. ಹಲಸಿನ ಹಸಿರು ಎಲೆಗಳನ್ನು ತೊಳೆದು ಸ್ವಚ್ಛ ಮಾಡಿ, ನಾಲ್ಕು ಪರ್ಣಗಳನ್ನು ದ್ರೋಣ(ದೊನ್ನೆ)ದಾಕಾರಕೊಡಲು ಪರಕೆಯ ತಡ್ಡಿಗಳದೇ ಉಪಯೋಗವಾಗುತ್ತದೆ. ದ್ರೋಣಕ್ಕೆ 'ಕೊಟ್ಟೆ' ಅನ್ನುತ್ತಾರೆ. ಇದೇ ರೀತಿಯಲ್ಲಿ ದೊನ್ನೆ, ಪತ್ರಾವಳಿಗಳನ್ನೂ ಸಿದ್ಧಮಾಡುತ್ತಾರೆ. ಅಡಿಕೆ ತೋಟ ಇದ್ದವರು ಅದರ ಸೋಗೆಗಳಿಂದ ಕಡ್ಡಿಗಳನ್ನು ಹಿರಿದು ಪರಕೆ ತಯಾರಿಸುತ್ತಾರೆ. ಈ ಕಡ್ಡಿಗಳು ಮೆತ್ತಗೆ ಇರುವದರಿಂದ ಅಷ್ಟಾಗಿ ಬಾಳಿಕೆ ಬರುವದಿಲ್ಲ. ಮಜ್ಜಿಗೆ ಹುಲ್ಲಿನ ಕಿರಿ ಪರಕೆ, ಅಥವಾ "ಪಿಸುಂಡಿ"ಗಳು ಕೇವಲ ಅಡಿಗೆ ಒಲೆಯ ಬಳಿ ಉಪಯೋಗಿಸುವಂಥವು.

ಪರಮಾತ್ಮನಿಗೆ ದಶಾವತಾರಗಳಾದರೆ, ಪರಕೆಗೆ ಶತವತಾರಗಳು. ಸುವರ್ಣಕಾರರು, ಅಕ್ಕಸಾಲಿಗರು, ಬಂಗಾರದ ಅತಿಸೂಕ್ಷ್ಮಕಣವೂ ಹಾರಿಹೋಗದಂತೆ ಒಟ್ಟುಗೂಡಿಸಲು ಸೂಕರ ಕೇಶದ ನಾಜೂಕು ಪರಕೆ (ಬ್ರಶ್)ಗಳನ್ನು ತಮ್ಮವನ್ನಾಗಿಸಿಕೊಂಡಿದ್ದಾರೆ. ಬಯಲು ಸೀಮೆಯವರು

ಈಚಲುಗರಿಗಳನ್ನು ಜೋಡಿಸಿ 'ಝಾಡು' ಮಾಡಿಕೊಳ್ಳುತ್ತಾರೆ. ರಾಜಸ್ಥಾನಿಗಳು ಜವಳು ಪ್ರದೇಶದಲ್ಲಿ ಬೆಳೆಯುವ ಹುಲ್ಲಿನಿಂದ 'ಫೂಲ್ ಝಾಡು' ಮಾಡುವರು. ಬಂಗಾಲಿಗಳು ಮೊಳದುದ್ದ ಬಿದಿರು ತುಂಡನ್ನು ತೀರ ಚಿಕ್ಕ ನೇಳುಗಳನ್ನಾಗಿಸಿ ಪರಕೆ ತಯಾರಿಸುವರು. ರಾಷ್ಟ್ರೀಯಪಕ್ಷಿಯಾದ ನವಿಲು, ಪ್ರತಿವರ್ಷವೂ ತನ್ನ ಆಕರ್ಷಕ ಗರಿಗಳನ್ನು ತ್ಯಜಿಸುವದರಿಂದ ಮಧ್ಯ ಪ್ರದೇಶದ ಆದಿವಾಸಿಗಳು ಅವನ್ನು ಕಲೆಹಾಕಿ, ಅಂದವಾದ ಪರಕೆಗಳನ್ನು ಮಾಡುತ್ತಾರೆ. ತಾಜಮಹಲದ ಕುಸುರಿ ಕೆಲಸವನ್ನು ಧೂಳಿನಿಂದ ಸ್ವಚ್ಛವಾಗಿಡಲು ನವಿಲುಗರಿಗಳ ಪೊರಕೆಯನ್ನೆ ಬಳುಸುವರು. ಪವಿತ್ರವಾದ ಧೂಪದ ಹೊಗೆಯು ಹರಡಿಕೊಳ್ಳುವಂತೆ ಮಾಡಲು ಫಕೀರ ಮೌಲ್‌ವಿಗಳು ಇಂಥ ಪರಕೆಗಳನ್ನು ಉಪಯೋಗಿಸುತ್ತಾರೆ. ದೇಶದಾದ್ಯಂತ ಪುರಕರ್ಮಚಾರಿಗಳು ಆಯಾಪ್ರದೇಶಕ್ಕೆ ತಕ್ಕಂತೆ, ತಮ್ಮ ಸ್ಥಾನಮಾನಕ್ಕೆ ಯೋಗ್ಯವಿದ್ದ ಪೊರಕೆಗಳನ್ನು ನಗರ ಸ್ವಚ್ಛತೆಗಾಗಿ ಬಳಸುವದುಂಟು. ಬೆನ್ನುಬಾಗದವರು, ದೊಣ್ಣೆಗೆ ತೆಂಗಿನ ಗರಿ ಕಡ್ಡಿಗಳನ್ನು ತ್ರಿಕೋನಾಕಾರದಲ್ಲಿ ಜೋಡಿಸಿ ಬಳಸಿದರೆ, ಮೈಸೂರಿನವರು ಪರಕೆಯ ಅಂತರಾಳದಲ್ಲಿ ಬಡಿಗೆಯನ್ನು ಹೋಗಿಸಿ ರಸ್ತೆ ಗುಡಿಸುವರು. ಎಡ-ಬಲ ಕೈಗಳಲ್ಲಿ ಒಂದೊಂದು ಕೋಲು ಪರಕೆ ಹಿಡಿದು ಕಸ ಬಳಿಯುವ ಬೆಂಗಳೂರಿಗರು ವಿಶ್ವಖ್ಯಾತಿ ಪಡೆದಿದ್ದಾರೆ. ಕಡ್ಡಿಗಳೆಲ್ಲ ಹೂವಿನಂತೆ ಅರಳಿ ನಿಲ್ಲಬೇಕೆಂದು ಕಾಲಕಾಲಕ್ಕೆ ಪೊರಕೆಗೆ ಕಲ್ಲಹರಳುಗಳನ್ನು ಸೇರಿಸುವದೂ ಉಂಟು.

'ಪರಕೆಶಾಸ್ತ್ರ'ವನ್ನೇ ಬರೆಯುವಷ್ಟು ಅದರ ಕುರಿತಾದ ನಂಬಿಕೆ, ಅಪನಂಬಿಕೆ, ಮೂಢನಂಬಿಕೆ, ಊಹಾಪೋಹಗಳಿವೆ. ಅವೇಳೆಯಲ್ಲಿ ಅದರ ದರ್ಶನವೇ ಅವಲಕ್ಷಣವಂತೆ. ಅದ್ದರಿಂದ ಕಣ್ಣಿಗೆ ಕಾಣದಂತೆ, ಕತ್ತಲೆ ಮೂಲೆಯಲ್ಲಿ ಬುಡಮೇಲು ಮಾಡಿಯೇ ಇಡಬೇಕು. ಹಿರಿಯರಿಗೆ ಅದು ಸೋಂಕಬಾರದು. ಮಕ್ಕಳಿಗಂತೂ ಅದರ ಗಾಳಿಯೂ ಅಪಥ್ಯ. ಕತ್ತಲಾದ ನಂತರ ಅದರ ಸಹವಾಸಕ್ಕೇ ಹೋಗಕೂಡದು. ಸರಿಯಾಗಿ ನಡೆದುಕೊಳ್ಳದ ಮಕ್ಕಳಿಗೆ ಕೊಂಕಣಿಯಲ್ಲಿ 'ಕಸಬರಿಗೆ' ಎಂಬ ಬೈಗುಳ ಇದೆ! ಮೃತಪಟ್ಟವರಿಗೆ ಸ್ವರ್ಗದಲ್ಲಿ ಉಪಯೋಗಕ್ಕೆ ಬರುವಂತೆ ಅವರ ಇನ್ನಿತರ ನಿತ್ಯಬಳಕೆಯ ಸಾಮಾನುಗಳೊಂದಿಗೆ ಪರಕೆಯನ್ನು ಮನೆಯ ಹೊರಗೆ ಇಡುವದು ಪದ್ಧತಿ. ಗೃಹಜೀವನದ ತುರ್ತು ಪರಿಸ್ಥಿತಿಯಲ್ಲಿ ಪರಕೆ ಒಂದು ಉತ್ತಮ ಆಯುಧವಾಗಿ ಬಲ್ಲದು. ಕಳ್ಳರು, ಕಾಮುಕರು, ಆಕ್ರಮಿಸಲು ಯತ್ನಿಸಿದಾಗ ಪರಕೆ ಏಟಿನಿಂದ ಅವರು ಕಾಲಿಗೆ ಬುದ್ಧಿ ಹೇಳುವಂತೆ ಮಾಡಿದ ಗೃಹಿಣಿಯರೆಷ್ಟೋ! ಯಾರ ಅಪ್ಪಣೆಯೂ ಇಲ್ಲದೇ ಮನೆಯೊಳಗೆ ನುಗ್ಗಿ ಬರುವ ಚೇಳು, ಹಾವು, ಇಲಿ ಶತಪಾದಿಗಳಿಗೆ ಯಮಸದನಕ್ಕೆ ಕಳಿಸಲು ಗಟ್ಟಿಯಾದ ಪರಕೆಗಿಂತ ಸುಲಭ ಸಾಧ್ಯ ಆಯುಧ ಬೇರಾವುದಿದೆ? ಹೆಗ್ಗಣಗಳು ವಿಷ ಸೇರಿಸಿದ ಆಹಾರವನ್ನು ಮೂಸಿಯೂ ನೋಡುವದಿಲ್ಲ. ಪಂಜರಗಳ ಒಳ ಹೋಗುವದಿಲ್ಲ. ಅಂತೆಯೇ ಅವುಗಳ ಕಾಟ, ಮನೆಯಲ್ಲಿ ಹೆಚ್ಚಾದಾಗ, ಕಾಲಕಾಲಕ್ಕೆ ಅವುಗಳ ಬೇಟೆಯ ವ್ಯವಸ್ಥೆ ಮಾಡಬೇಕಾಗುತ್ತದೆ. ಸ್ತ್ರೀ-ಪುರುಷ, ಹಿರಿ-ಕಿರಿಯರೆಂಬ ಭೇದಭಾವವಿಲ್ಲದೇ ಸಕಲರೂ ಕೈಯಲೊಂದೊಂದು ಪರಕೆ ಹಿಡಿದು ಸುಸಜ್ಜಿತರಾಗಿ ಕಾದು ನಿಲ್ಲುತ್ತಾರೆ. ಹೆಗ್ಗಣ ದಂಪತಿ ಪರಿಚಿತ ಖಿಡಕಿ, ತೂಬುಗಳ ಮೂಲಕ ಮನೆಯೊಳಗೆ ಹೊಕ್ಕಾಕ್ಷಣ, ಧೀರನೋರ್ವನು ಅವನ್ನು ಮುಚ್ಚಿಬಿಡುತ್ತಾನೆ. ಹೋರಾಟಗಾರರೆಲ್ಲ ಪರಕೆ, ಬೀಸುತ್ತ ಹೆಗ್ಗಣ ಜೋಡಿಯ ಮೇಲೆ ಆಕ್ರಮಣ ಮಾಡಿದಾಗ, ಪಲಾಯನ ಮಾರ್ಗ

ಕಾಣದೇ ಅವು ಕಂಡ ಕಂಡಲ್ಲಿ ಓಡಿ ಬಳಲಿ ಬೆಂಡಾದಾಗ, ಗೃಹಧೀರರಿಗೆಲ್ಲ ತಮ್ಮ ಸಿಟ್ಟನ್ನು ಪರಕೆಯ ಮೂಲಕ ಅವುಗಳ ಮೇಲೆ ಪ್ರಯೋಗಿಸಿದಾಗಲೇ ನೆಮ್ಮದಿ. ಪೋಲಿಮಕ್ಕಳು ಬಾಯಿಮಾತಿಗೆ ಬಗ್ಗದಿದ್ದಾಗ ಪರಕೆಗೆ ತಗ್ಗಲೇ ಬೇಕಾಗುತ್ತದೆ. ಸವತಿ, ದಾಯಾದಿ, ಇತರ ಗೃಹವೈರಿಗಳು ಬೈಗಳ ಸುರಿಮಳೆ ಅದಲು ಬದಲು ಮಾಡಿಕೊಂಡು ತೃಪ್ತಿಕಾಣದಾಗ ಪೊರಕೆಗೆ ಶರಣು ಹೋಗುವದು ತೀರ ಸಾಮಾನ್ಯ.

ಪತಿ-ಪತ್ನಿಯರು ತಮ್ಮ ಭಿನ್ನಾಭಿಪ್ರಾಯಗಳ, ಒಳಜಗಳಗಳ ನ್ಯಾಯನಿರ್ಣಯಕ್ಕಾಗಿ ಪರಕೆಗೆ ನ್ಯಾಯಾಧೀಶನ ಸ್ಥಾನ ಕೊಡಮಾಡುವದು ಯುಗಯುಗಗಳಿಂದ ನಡೆದುಬಂದ ಪದ್ಧತಿ! ವ್ಯಂಗ್ಯಚಿತ್ರಕಾರರು ಆಗೀಗ ಇದನ್ನು ಬಳಸಿದರೂ ಕರ್ನಾಟಕದ ಶಿಲ್ಪಿ-ಭಿತ್ತಿ ಚಿತ್ರಕಾರರು ಅದೇಕೋ ಈ ಆಯುಧವನ್ನು ಮರೆತಿದ್ದಾರೆ. ಪತ್ರಿಕೆಗಳಲ್ಲಿ ಲಟ್ಟಣಿಗೆ, ಪೊರಕೆಯನ್ನು ಸೋಲಿಸಿದೆ. ನಮ್ಮ ಶಾಲೆಯ ಪಕ್ಕದ ಮನೆಯಲ್ಲಿ ಪುಂಡ (ಲೀಕ) ನಾಯಕನು ಸಂಸಾರ ಹೂಡಿದ್ದ. ಆರು ಅಡಿ ಗಾತ್ರದ ಈ ಆಸಾಮಿ ಗರಡಿ ಮನೆ ಸಾಧನೆಯಿಂದ ಒಳ್ಳೆ ದೃಢಕಾಯನಿದ್ದ. ನೂರು ಕಿಲೋ ಗ್ರಾಮಿನಷ್ಟಾದರೂ ತೂಗುತ್ತಿದ್ದಿರಬೇಕು. ಪುಂಡನ ಪತ್ನಿ ತದ್ವಿರುದ್ಧ. ಒಂದು ತೆಂಗಿನ ಗರಿ ಪರಕೆಯಷ್ಟು ಭಾರವಾಗಿದ್ದು, ಅದರಷ್ಟೇ ಎತ್ತರವಿದ್ದಿರಬೇಕು! ಪುಂಡನ ಪತ್ನಿ, ಊರಿಗೇ ಪರಿಚಿತವಿದ್ದರೆ ಆತ ಅಜ್ಞಾತನಾಗಿದ್ದ. ಅಂತೆಯೇ 'ಪುಂಡಪತ್ನಿಯ ಗಂಡ'ನೆಂದೇ ಜನ ಆತನನ್ನು ಕರೆಯುವದು ರೂಢಿಯಾಗಿತ್ತು. ಅವರ ಬಿಡಾರದಿಂದ ಸದಾ ದೊಡ್ಡದನಿಯೇ ಬೈಗಳ ಸುರಿಮಳೆ ಕರೆಯುತ್ತಿದ್ದು, ನಮ್ಮ ಕಿವಿಗಳನ್ನು ಕ್ಲಾಸಿನಲ್ಲಿ ಕುಳಿತಾಗ ಅಪ್ಪಳಿಸುತ್ತಿತ್ತು ಸಂಸ್ಕೃತ ಸುಭಾಷಿತಗಳಿಗಿಂತ ಇವೇ ನಮಗೆ ಕಂಠಪಾಠವಾಗಿದ್ದವು. ಪಾಕೆಟ್ ಅಳತೆಯ ಪತ್ನಿಗೆ, ದೀರ್ಘಕಾಯ ಪತಿ ಬಗ್ಗಿ ನಡೆಯಲು ಕಾರಣವೇನಿರಬಹುದು? ಎಂದು ಅರಿಯಲು, ಒಂದು ಸಂಜೆ ಬೈಗಳು ತಾರಸ್ವರದಲ್ಲಿದ್ದಾಗ, ಮನೆಗೆ ಹೊರಟ ನಾವು ಕೆಲ ವಿದ್ಯಾರ್ಥಿಗಳು, ಅವರ ಮನೆಯ ಪಾಗಾರದ ಹಿಂದೆ ಅವಿತು ಸಂಶೋಧನೆ ಮಾಡಲಾರಂಭಿಸಿದೆವು. ವಾಗ್ಯುದ್ಧ ಸಾಕಷ್ಟು ಹೊತ್ತು ನಡೆದು ಪತಿ, ಸೋಲು ಒಪ್ಪದ್ದರಿಂದ ಪತ್ನಿ ಕ್ರುದ್ಧಳಾಗಿ ಪರಕೆ ತೆಗೆದುಕೊಂಡು ಬೆನ್ನು, ತೊಡೆ, ಕೈ, ಕಾಲುಗಳ ಮೇಲೆ ಪ್ರಹಾರ ಪ್ರಾರಂಭಿಸಿದಳು! ತಂದೆಯ ಚೀರಾಟ ನರಳಾಟ ಕೇಳಿ, ಅವರ ಮಕ್ಕಳು ಧಾವಿಸಿ ಬಂದು ರುದ್ರಾವತಾರ ತಾಳಿದ್ದ ತಾಯಿಯ ಕೈಯಿಂದ ಪರಕೆ ಕಿತ್ತುಕೊಳ್ಳುವದರಲ್ಲಿ ಯಶಸ್ವಿಯಾದವು. ಬಲಿಷ್ಠ ಪತಿ, ಪತ್ನಿಯ ಮೇಲೆ ಇಂಥ ಸಂದರ್ಭದಲ್ಲಿ ತನ್ನ ಶಕ್ತಿಯನ್ನು ಏಕೆ ಬಳಸುವದಿಲ್ಲವೆಂದು ನಾವೆಲ್ಲ ವಿಸ್ಮಯ ಪಡುತ್ತಿದ್ದಾಗ "ಅವನು ಒಂದೇ ಒಂದು ಬಲವಾದ ಗುದ್ದುಕೊಟ್ಟರೆ ಅವಳೆಲ್ಲಿ ಬದುಕಿ ಉಳಿಯುತ್ತಾಳೋ?" ಎಂದು ಕಿಲಾಡಿಯೊಬ್ಬ ನುಡಿದದ್ದು ನಿಜವೇ ಆಗಿತ್ತು. ಪರಕೆ ಮಹಾತ್ಮೆಗೆ ಅಚ್ಚರಿ ಪಡುತ್ತ ಮನೆಗೆ ತಡವಾಗಿ ತಲುಪಿದಾಗ ನಾವೂ ಬೈಸಿಕೊಂಡರೂ ಪೊರಕೆ ಪ್ರಹಾರದಿಂದ ತಪ್ಪಿಸಿಕೊಂಡಿದ್ದೆವು.

ಪಾಶ್ಚಿಮಾತ್ಯರು ತಾವು ಬೇಟೆಯಾಡಿದ, ವಧಿಸಿತಿಂದು ತೇಗಿದ ಪ್ರಾಣಿಗಳ ಮೈಗೂದಲುಗಳನ್ನೆ ಬ್ರಶ್‌ಗಳಾಗಿ ಮಾಡಿ ಪರಕೆಯಂತೆ ಬಳಸುತ್ತಿದ್ದರು. ಮಾನವನ ಕಾರ್ಯಕ್ಷೇತ್ರ ವಿಸಾರಗೊಳ್ಳುತ್ತ ಬಂದಂತೆ, ಪ್ರಾಣಿಗಳ ಸಂಖ್ಯೆ ಕಡಿಮೆಯಾಗಿ 'ನಿರ್ವಾತ' ಪರಕೆ (ವೆಕ್ಯೂಂ

ಕ್ಲೀನರ್) ಗಳು ಬಳಕೆಗೆ ಬಂದಿವೆ. ವಿದ್ಯುತ್ ಚಾಲಿತ ಯಂತ್ರವನ್ನು ಪ್ರಾರಂಭಿಸಿದಾಕ್ಷಣ, ದೂಳು, ಅದು ತನ್ನ ಶರೀರದಲ್ಲಿ ಸೇರಿಸಿಕೊಂಡು ಬಿಡುತ್ತದೆ. ಇಂಥವೇ ಬೃಹದ್ ಯಂತ್ರಗಳನ್ನು ವಿದೇಶಗಳಲ್ಲಿ ಸಾರ್ವಜನಿಕ ರಸ್ತೆಗಳನ್ನು ಸ್ವಚ್ಛವಿಡಲು ಬಳಸುತ್ತಾರೆ. ಆದರೆ ನಮ್ಮಲ್ಲಿಯಂತೆ ಸೂರ್ಯೋದಯ ಕಾಲಕ್ಕೆ ಧೂಳೆಬ್ಬಿಸದೇ ನಡುರಾತ್ರಿ ಸಂಚಾರ ಕಡಿಮೆಯಿದ್ದಾಗ ಅವನ್ನು ಉಪಯೋಗಿಸುತ್ತಾರೆ. ಬೆಂಗಳೂರಿನಲ್ಲಿ ಸಕಾಲದಲ್ಲಿ ಕೈಕೊಡುವ ಕೆಲಸಗಾತಿಯು ಹೆಚ್ಚಾಗಿ, ಅರ್ಧಾಂಗಿನಿ, ಈ ಆಧುನಿಕ ನಿರ್ವಾತ ಪರಕೆ ಯಂತ್ರವನ್ನು ದುಂಬಾಲು ಬಿದ್ದು ತರಸಿಕೊಂಡಳು. ಆದರೆ ವಿದ್ಯುತ್ ಕಡಿತ ಮತ್ತು ಯಂತ್ರ ತನ್ನೊಳಗೆ ಹೀರಿಕೊಂಡ ಕಸ ಕಡ್ಡಿ ತೆಗೆದು ಸ್ವಚ್ಛಗೊಳಿಸಲು ಹೆಚ್ಚಿನ ಸಮಯ ಹತ್ತುವದರಿಂದ ಬೀರುವಿನ ಮೂಲೆಯಲ್ಲಿ ಅದನ್ನು ಬೆಚ್ಚಗೆ ಮಲಗಿಸಿ ಊರಿನಿಂದ ತಂದ ತೆಂಗಿನ ಪರಕೆಗಳನ್ನೆ ಬಳುಸುತ್ತಿದ್ದಾಳೆ. "ಬೆಲೆಬಾಳುವ ನಿರ್ವಾತ ಪರಕೆಯನ್ನು ಮುಂದೆ ಬರಲಿರುವ ಆಧುನಿಕ ಸೊಸೆಗಾಗಿ ಕಾದಿರಿಸಿದ್ದೇನೆ!" ಎಂದು ಮುಂದಾಲೋಚನೆಗಾಗಿ ಅಭಿಮಾನ ಪಡುತ್ತಿರುತ್ತಾಳೆ.

ಚಕಡಾ ಓಟ

ಕರಾವಳಿಯಲ್ಲಿ ಬೆಳೆದು, ದೋಣಿಗಳ ರೇಸ್ ನೋಡಲಾಗದಿದ್ದರೂ, ಹೊನ್ನಾವರದ ಸಾಯಕಲ್ ರೇಸ್ ನೋಡಲಾಗದಿದ್ದರೂ, ಬೆಂಗಳೂರಿನಲ್ಲಿದ್ದು ಕುದುರೆ ರೇಸ್ ನೋಡದಿದ್ದರೂ ಭಿಂದವಾಡದ 'ಚಕಡಾ' (ಚಿಕ್ಕ ಚಕ್ಕಡಿ) ರೇಸ್ ತಪ್ಪಿಸಿಕೊಳ್ಳಲಿಲ್ಲ. ಈ ಚಕಡಾ ಓಟ ಮಧ್ಯ ಪ್ರದೇಶದಲ್ಲಿಯೇ ಮಹತ್ವದ ಆಟವಾಗಿದೆ. ಮೊದಲು ಚಂದನಗಾಂವದಲ್ಲಿ ನಡೆಯುತ್ತಿದ್ದ ಸ್ಪರ್ಧೆ ಈ ವರ್ಷ ಭಿಂದವಾಡಾದಲ್ಲಿ ನಡೆಯಿತು. ಚಕಡಾಕ್ಕೆ ಜೋಡೆತ್ತು ಕಟ್ಟಿದರೂ ಅವು ನಮ್ಮಲ್ಲಿಯ ಚಕ್ಕಡಿ ಗಾಡಿಗಳಂತೆ ಒಜ್ಜೆ ಒಯ್ಯಲು ರಚಿಸಿರಲಾರದೇ, ಕೃಷಿಕರು ಅವನ್ನು ಕುದುರೆ ಗಾಡಿಗಳಂತೆ ಪ್ರಯಾಣಕ್ಕೆ ಹೆಚ್ಚಾಗಿ ಬಳಸುತ್ತಾರೆ. ಅದರ ಮೇಲೆ ಒಬ್ಬನು ಹೆಚ್ಚೆಂದರೆ ಇಬ್ಬರು ಕೂಡ್ರಬಹುದಲ್ಲದೇ ಯಾವ ಸಾಮಾನೂ ಸಾಗಿಸಲಾಗುವುದಿಲ್ಲ. ನಮ್ಮಲ್ಲಿಯ ಪಾತಿದೋಣಿಯಂತೆ ಬೇಕಾದಾಗ ಅದರಲ್ಲಿ ಪ್ರಯಾಣ ಮಾಡಬಹುದು! ಪ್ರತಿ ತಿಂಗಳೂ ಪೆಟ್ರೋಲು ಬೆಲೆ ಏರುತ್ತಿರುವ ಈ ದಿನಗಳಲ್ಲಿ ಅದೆಷ್ಟೋ, ಪ್ರದೇಶಗಳಲ್ಲಿ 'ಚಕಡಾ' ನಮ್ಮ ಸಾಗಾಟದ ಸಮಸ್ಯೆ ಬಗೆಹರಿಸುವಂತೆ ಇದೆ.

ಎಲ್ಲ ರಸ್ತೆಗಳೂ ರೋಮ ನಗರವನ್ನೇ ಸೇರುವಂತೆ, ಯಾವ ಹಳ್ಳಿಗರ ತಂಡದ ಹಿಂದೆ ಹೊರಟರೂ ಸ್ಪರ್ಧಾ ಸ್ಥಾನಕ್ಕೆ ಹೋಗಿ ಸೇರುವದು ಖಂಡಿತವಾದ್ದರಿಂದ ಗೊತ್ತಿರದ ಪ್ರದೇಶದವನಿಗೂ ಏನೂ ತೊಂದರೆಯಾಗಲಿಲ್ಲ. ಹಳ್ಳಿಗರೆಲ್ಲ ಹತ್ತು - ಹದಿನೈದು ಮೈಲು ದೂರದಿಂದ ಕಾಲು ನಡಿಗೆಯಲ್ಲೇ ಬಂದಿದ್ದರು. ಕುರುಕ್ಷೇತ್ರ ಯುದ್ಧಕ್ಕೆ ಹೊರಟ ರಥಗಳಂತೆ ಚಕಡಾಗಳು ಒಂದನ್ನೊಂದು ಹಿಂದೆ ಹಾಕಿ ಓಟದ ಸ್ಥಳದತ್ತ ಧಾವಿಸುತ್ತಿದ್ದವು. ಕಾಲೇಜಿನ ಬಯಲಲ್ಲಿ ದೊಡ್ಡ ಜನಸಮುದ್ರ ಸೇರಿತ್ತು ಸಮೀಪದ ಎತ್ತರದ ಕಟ್ಟಡಗಳನ್ನೇರಿ 'ಕಾಗೆನೋಟ' ಕ್ಕೆ ಜನ ಕಾದಿದ್ದರು. ಹತ್ತಿರದಿಂದ ನೋಡಬಯಸಿದವರು ಮೈದಾನಿನಲ್ಲಿ ಒಟ್ಟುಗೂಡಿದ್ದರು. ಪ್ರಾರಂಭದಿಂದ ಕೊನೆಯವರೆಗೆ ಎಲ್ಲವನ್ನೂ ಸರಿಯಾಗಿ ಕಾಣಲಿಚ್ಛಿಸುವವರು ಪಕ್ಕದ ಪೀರ ಬಾಬನ ಗುಡ್ಡವೇರಿದ್ದರು. ಕ್ಯಾಮರಾವನ್ನು ಕೊರಳಿಗೆ ತೂಗಿಸಿಕೊಂಡ ನನಗೆ ಎಲ್ಲಿ ಹೋದರೂ ಸ್ವಾಗತವಿತ್ತು.

ಸಾವಿರಕ್ಕೂ ಹೆಚ್ಚು ಚಕಡಾಗಳು ಸ್ಪರ್ಧೆಯಲ್ಲಿ ಭಾಗವಹಿಸಲು ಬೀಡು ಬಿಟ್ಟಿದ್ದವು. ಹತ್ತಿರದ ಹಳ್ಳಿಯವರು ಎತ್ತುಗಳು ಓಟಕ್ಕೆ ಸಿದ್ಧವಾಗಲಿ! ಎಂದು ಓಡಿಸಿಕೊಂಡು ಬಂದರೆ ದೂರದವರು ಅವುಗಳಿಗೆ ಶ್ರಮವಾಗದಂತೆ ಟ್ರಕ್‌ಗಳಲ್ಲಿ ತಂದಿದ್ದರು. ಒಬ್ಬನು ಚಕಡಾಕ್ಕೆ ಬಣ್ಣ ಬಳಿದರೆ, ಇನ್ನೊಬ್ಬನು ಎತ್ತುಗಳ ಕೋಡುಗಳಿಗೆ ಬಳಿದಿದ್ದ. ಮತ್ತೊಬ್ಬ ಎತ್ತುಗಳಿಗೆ ರಬ್ಬಾದ ಬಟ್ಟೆ ಹೊದಿಸಿದ್ದ. ಓಟವನ್ನು ನೋಡಲು ಬಂದವರ ಚಕ್ಕಡಿಗಳೂ ಅಲ್ಲಿ ಸೇರಿದ್ದರಿಂದ ಎಲ್ಲೆಲ್ಲೂ ಚಕಡಾ-ಚಕಡಿಗಳ ಜಾತ್ರೆಯೇ ಕಾಣಿಸುತ್ತಿತ್ತು. ಒಂದೆಡೆಗೆ ನಿಂತು ಮೆಲುಕಾಡಿಸುತ್ತಿದ್ದ, ಎತ್ತುಗಳು ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುತ್ತ ನಿಂತಿದ್ದವೇನೋ! ಕಳೆದ ಬಾರಿ ವಿಜಯ ಹೊಂದಿದ ಜೋಡಿ ಇತರರತ್ತ ಅಲಕ್ಷ್ಯ ಭಾವದಿಂದಿತ್ತು. ಪ್ರಾಯದ ಹೋರಿಗಳು ಮೊದಲ ಬಾರಿಗೆ ಪಂದ್ಯದ ಉತ್ಸಾಹದಲ್ಲಿದ್ದವು. ದಿನನಿತ್ಯದ ಕೆಲಸವೇ ಬೇಕಾದಷ್ಟು ಇದ್ದಾಗ ಈ ಓಟ ಯಾರಿಗೆ ಬೇಕು? ಎಂದು ದುರ್ಬಲ

ಜೋಡಿಯೊಂದು ಗೊಣಗಿತು. ಇಷ್ಟೊಂದು ಜನಸಮೂಹವನ್ನು ಮೊದಲ ಬಾರಿಗೆ ಕಂಡ ಎತ್ತುಗಳು ತಬ್ಬಿಬ್ಬಾಗಿ ನಿಂತವು. ಕಪ್ಪು, ಬಿಳಿ, ಹಂಡಬಂಡ ವರ್ಣಗಳ ಎತ್ತುಗಳೆಲ್ಲ ಅಲ್ಲಿದ್ದವು.

ಪಂದ್ಯದಲ್ಲಿ ಭಾಗವಹಿಸುವವರು ಎರಡು ರೂಪಾಯಿ ಕೊಟ್ಟು ಹೆಸರು ನೋಂದಾಯಿಸಬೇಕಿತ್ತು. ಬಂದ ಬಹುಸಂಖ್ಯಾತ ಜೋಡಿಗಳು ಸ್ಪರ್ಧೆಗೆ ನಿರುಪಯೋಗಿಯಾಗಿದ್ದರೂ, ಕೇವಲ ವಿನೋದಕ್ಕೆಂದು ಅವನ್ನು ದೂರದೂರದಿಂದ ಕೃಷಿಕರು ತಂದಿದ್ದರು. ಓಟಕ್ಕಾಗಿಯೇ ಬೆಳೆಸಿದ ಎತ್ತುಗಳನ್ನು ಹೂಡಿಸಿಕೊಂಡು ಧನಿಕರು ಬಂದಿದ್ದರು. ಕೆಲವನ್ನು ದೂರದಿಂದ ಟ್ರಕ್ಕಿನಲ್ಲಿ ತರಲಾಗಿತ್ತು. ಕುದುರೆಗಳಂತೆ ಎತ್ತುಗಳನ್ನು ಶಿಸ್ತಿನಿಂದ ಓಡಿಸುವುದು ಅಸಾಧ್ಯವಾದ ಮಾತಾದ್ದರಿಂದ ಒಮ್ಮೆ ಎರಡು ಜೋಡಿಗಳಿಗಿಂತ ಹೆಚ್ಚು ಓಡಿಸಲಾಗುವುದಿಲ್ಲ. ಒಂದು ಇನ್ನೊಂದನ್ನು ಹಾಯಬಾರದು. ಅಡ್ಡಗಟ್ಟಬಾರದೆಂದು ಬಹಳ ಅಂತರದ ಮೇಲೆ ಅವನ್ನು ನಿಲ್ಲಿಸಿರುತ್ತಾರೆ. ಸೀಟಿ, ಸಿಳ್ಳು, ಸಂಜ್ಞೆಗಳಿಗೆ ಮನ್ನಣೆ ನೀಡದ ಎತ್ತುಗಳು, ಹೊರಡುವ ಸ್ಥಾನದಲ್ಲಿ ತಂದ ಕೂಡಲೇ ಓಡಲು ಪ್ರಾರಂಭಿಸುವದರಿಂದ, ಅವನ್ನು ತಡೆಹಿಡಿಯಲು ಏಳೆಂಟು ಪೈಲವಾನರು ನಿಂತಿದ್ದರು. ಪಂದ್ಯ ಅಂತ್ಯಗೊಳ್ಳುವಲ್ಲಿ ನಿಂತ ನಿರ್ಣಾಯಕರು ಹಸಿರು ಝೇಂಡಾ ತೋರಿಸಿದಾಗ, ಹೋಗಲು ಆಜ್ಞೆ ಸಿಕ್ಕ ಚಕಡಾಗಳು ನಾಗಾಲೋಟದಿಂದ ಓಡಲು ಪ್ರಾರಂಭಿಸುವವು. ಕಟ್ಟಲೆ ಕಾನೂನುಗಳು ಪಂದ್ಯ ನಡೆಸುವವರಿಗೇ ಸರಿಯಾಗಿ ತಿಳಿಯದಿದ್ದಾಗ ಎತ್ತುಗಳಿಗೇನು ಅರಿವಿರಬೇಕು? ಹಳ್ಳಿಗಳಲ್ಲಿ ಒಂದು ಚಕಡಾ ಹಿಂಬಾಲಿಸಿ ಇನ್ನೊಂದು ಹೋಗುವುದನ್ನು ರೂಢಿ ಮಾಡಿಕೊಂಡದ್ದರಿಂದ ಎಷ್ಟು ದೂರ ದೂರ ನಿಲ್ಲಿಸಿದರೂ ಒಂದೆಡೆಗೆ ಬಂದೇ ಓಡಲಾರಂಭಿಸುತ್ತಿದ್ದವು! ನೇರ ಓಡುವ ಬದಲು ಎಡಕ್ಕೋ ಬಲಕ್ಕೋ ತಿರುಗಿ ನಿಂತ ಪ್ರೇಕ್ಷಕರನ್ನು ಚದುರಿಸಿದವು. ಕೆಲವರು ಎತ್ತುಗಳಿಂದ ತುಳಿಸಿಕೊಂಡರು. ಕೆಲವರ ಮೈಮೇಲಿಂದಲೇ ಚಕಡಾ ಹೊರಟು ಹೋಯಿತ್ತು. ಅವು ಸಾಕಷ್ಟು ಹಗುರವಾಗಿದ್ದರೂ ಒಬ್ಬ ಬಾಲಕ ಕಾಲು ಮುರಿದುಕೊಂಡ. ಇಷ್ಟಾದರೂ ಪ್ರೇಕ್ಷಕರಿಗೆ ಬುದ್ಧಿಯೇ ಇಲ್ಲ. ತೀರ ಹತ್ತಿರ ಬಂದು ನಿಲ್ಲುತ್ತಿದ್ದರು. ಎತ್ತುಗಳು ಗಾಬರಿಗೊಂಡು ಅಡ್ಡತಿಡ್ಡ ಓಡುತ್ತಿದ್ದವು. ಕೂಗುವವರು ಕೆಲವರಿದ್ದರೆ ಕಲ್ಲು ತೂರುವವರು ಹಲವರು.

ಸರ್ವಸಾಮಾನ್ಯವಾಗಿ ಎತ್ತುಗಳನ್ನು ಓಡಿಸಲು ತೆಳ್ಳಗಿನ ಬೆತ್ತ ಇಲ್ಲವೇ ಬಾರುಕೋಲು ಬಳಸುವುದು ವಾಡಿಕೆಯಲ್ಲವೇ? ಆದರೆ ಗೊಂಡವನದ ಈ ಪ್ರಜೆಗಳು ಪೋಲೀಸರು ಉಪಯೋಗಿಸುವ ಲಾಠಿಯಂತಹದನ್ನು ನುಣುಪು ಮಾಡಿ, ಪೊಲಿಶ್ ತೆಗೆದು ಜಾರದಂತೆ ಹಗ್ಗಸುತ್ತಿ ಅದರ ತುದಿಗೆ ಚೂಪಾದ ಮೊಳೆಯನ್ನು ಜೋಡಿಸಿರುತ್ತಾರೆ. ಅದರಿಂದ ಎತ್ತುಗಳಿಗೆ ಚುಚ್ಚುವುದರಿಂದ ನೂರಾರು ಛಿದ್ರಗಳಾದರೂ ಅವುಗಳ ಮೈಗೆ ಆಗುತ್ತಿರಬೇಕು! ಈ ಓಟದಲ್ಲಿ ಚಾಲಕನು 'ಹೆಯ್ ಹೆಯ್' ಎಂದು ಕೂಗುತ್ತ ರಕ್ತ ಚಿಮ್ಮುವ ವರೆಗೆ ಅವನ್ನು ಚುಚ್ಚುವದರಿಂದ ಎತ್ತುಗಳು ನಾಗಾಲೋಟದಿಂದ ಓಡುತ್ತವೆ. ಕುದುರೆಗಳ ಅಂಗರಚನೆ ಓಟಕ್ಕಾಗಿಯೇ ಇರುವದರಿಂದ ಅವು ಓಡಿದಾಗ ಕಣ್ಣಿಗೆ ಹಬ್ಬವಾದರೆ, ಎತ್ತುಗಳು ಓಡಿದಾಗ ಕಟುಕರಿಂದ ತಪ್ಪಿಸಿಕೊಳ್ಳಲು ಓಡಿದ ಆಡಿನ ಚಿತ್ರ ಸ್ಮರಣೆಗೆ ಬರುತ್ತದೆ! ಧೂಳನ್ನು ಹಾರಿಸುತ್ತ ವೇಗವಾಗಿ ಬರುವ ಚಕಡಾಗಳು ಗ್ರೀಕ್, ರೋಮನ್ ರಥ ಸ್ಪರ್ಧೆಗಳನ್ನು ನೆನಪಿಗೆ ತರುತ್ತವೆ. ಕೆಲವು ಎತ್ತುಗಳು ಓಡುವುದನ್ನು ಮರೆತು ನಡೆಯಲಾರಂಭಿಸಿದರೆ ಕೆಲವು ಎಲ್ಲವನ್ನೂ ಅಲಕ್ಷಿಸಿ ಗೃಹಾಭಿಮುಖವಾಗಿ ಬಿಡುತ್ತವೆ. ಹೀಗೆಲ್ಲ ಆಗುವದರಿಂದ ಸ್ಪರ್ಧೆಗೆ, ಓಟಕ್ಕೆ ತಗಲಿದ ವೇಳೆಯನ್ನು ಗುರುತಿಸಲಾಗುತ್ತದೆ.

ನಿಯಮಾವಳಿಯನ್ನು ಪಾಲಿಸಿ ಓಟ ಮುಗಿಸಿದವರ ಹೆಸರು ನಂಬರ, ವೇಳೆಗಳನ್ನು ನಮೂದಿಸಿಕೊಂಡು ಅವರಿಗೊಂದು ತೆಂಗಿನಕಾಯಿಯನ್ನು ಗೌರವಾರ್ಥವಾಗಿ ಕೊಡಲಾಗುತ್ತದೆ. ಅವರು ಅದನ್ನು ಅಲ್ಲಿಯೇ ಒಡೆದು ಸಹಾಯಕರಿಗೆಲ್ಲ 'ಪರಸಾದ್' ಹೆಂಚಿ ಬಿಡುತ್ತಾರೆ. ಓಟ ಮುಗಿಸಿದಾಗ ಎತ್ತುಗಳನ್ನು ನೋಡಿದರೆ ಕನಿಕರ ಹುಟ್ಟದೇ ಇರಲಾರದು. ಚುಚ್ಚಿಸಿಕೊಂಡಲ್ಲಿ ರಕ್ತ ಹೊರ ಹೊಮ್ಮುತ್ತಿರುತ್ತದೆ. ಶ್ವಾಸಕ್ಕಾಗಿ ಕೆಲವು ಏದುತ್ತಿರುತ್ತವೆ. ಕೆಲ ಮೂಗು-ಬಾಯೆಲ್ಲ ರಕ್ತ ಮಾಡಿಕೊಂಡಿರುತ್ತವೆ.

ಸುಮಾರು ಇನ್ನೂರು ಚಕಡಾಗಳು ಗುರಿ ಮುಟ್ಟಲೇ ಇಲ್ಲ. ಉಳಿದ ನೂರರಲ್ಲಿ ಕೊನೆಯ ನಿರ್ಣಾಯಕ ಸ್ಪರ್ಧೆಯಲ್ಲಿ, ಭಾಗವಹಿಸಲು ಆರಿಸುವುದೂ ಸುಲಭದ ಮಾತಾಗಿರಲಿಲ್ಲ. ನೋಂದಾಯಿಸಿಕೊಂಡ ಪ್ರಕಾರ ಓಟಕ್ಕೆ ಇಪ್ಪತ್ತೆರಡರಿಂದ ಮೂವತ್ತು ಸೆಕೆಂಡು ತಗಲಿದರೂ ಇಪ್ಪತ್ತೈದು ಸೆಕೆಂಡು ತೆಗೆದುಕೊಂಡ ಚಕಡಾಗಳು ಬಹು ಸಂಖ್ಯಾತ ಇದ್ದವು. ಭಾಗವಹಿಸಿದವರಲ್ಲಿ ಪ್ರಭಾವ ಶಾಲಿ ರೈತರು ಅನೇಕ ಜನರಿದ್ದರು. ಅವರು ನಿರ್ಣಾಯಕರಿಗೆ ಚಹಾ ಕುಡಿಸಿ 'ಪಾನ್' ತಿನ್ನಿಸುವುದರಲ್ಲಿ ಮಗ್ನರಾಗಿದ್ದರು. ಒಬ್ಬನು ಅಡ್ಡ ಓಡಿದ ತನ್ನ ಚಕಡಾ ಸೇರ್ಪಡೆಯಾಗುವಂತೆ ನೋಡಿ ಕೊಂಡನು. ಇದರಿಂದ ಉಳಿದವರಿಗೆ ಕಸಿವಿಸಿ ಆದರೂ, ತಮ್ಮಲ್ಲೇ ಮಾತನಾಡಿಕೊಂಡರೂ ಅದನ್ನೇ ದೊಡ್ಡದು ಮಾಡಿ ಗದ್ದಲ ಹಾಕುವದು ಅವರ ಸ್ವಭಾವವಲ್ಲವಾದ್ದರಿಂದ ಸುಮ್ಮನಾದರು. ಏಷ್ಟೆಂದರೂ ಪಂದ್ಯಾಟದಲ್ಲಿ ಭಾಗವಹಿಸುವ ಆನಂದಕ್ಕಾಗಿ ಬಂದಿದ್ದರೇ ಹೊರತು ಬಹುಮಾನ ಗಳಿಸಲು ಬಂದಿರಲಿಲ್ಲವಲ್ಲ!

ನಾಲ್ಕು ಗಂಟೆಗೇ ನಿರ್ಣಾಯಕ ಪಂದ್ಯವೆಂದು ಸಾರಿದರೂ ರೈತರಿಗೂ ಎತ್ತುಗಳಿಗೂ ವೇಳೆಯ ಪರಿವೆಯಿಲ್ಲದ್ದರಿಂದ ಆರುವರೆ ಗಂಟೆಗೆ ಸುರುವಾಯಿತು. ಸೂರ್ಯಾಸ್ತವಾಗಿ ತಂಗಾಳಿ ಬೀಸಲಾರಂಭಿಸಿದರೂ ಜನಸ್ತೋಮ ಕಾದು ನಿಂತಿತ್ತು. ಈ ಓಟದಲ್ಲಿ ಮಾತ್ರ ಎತ್ತುಗಳು ಕುದುರೆಯಂತೆ ಓಡಿದವು. ಕೆಲವು ಸಲ ಮೊದಲು ಓಡಿದ ಜೋಡಿ ಯಾವುದು, ಎರಡನೆಯದು ಯಾವುದು? ಎಂದು ನಿರ್ಧರಿಸುವುದೂ ತೊಂದರೆ ಯಾಗುವಷ್ಟು ಸ್ಪರ್ಧೆ ತುರುಸಿನದಾಯಿತು. ಆ ಊರಿನ ನಾಯಕ, ಈ ಊರಿನ ಪಟೇಲರ ಚಕಡಾಗಳು ವಿಜಯಿಗಳಾದವು. ವಾದ್ಯಮೇಳದೊಂದಿಗೆ ವಿಜಯ ಸಾರುತ್ತ ಚಕಡಾಗಳು ಪೇಟೆಗೆ ಬಂದವು. ಅಲ್ಲಿ ಬಹುಮಾನ ವಿತರಣೆ ನಡೆಯಿತು. ಮೊದಲನೇ ಸ್ಥಾನ ಪಡೆದವರಿಗೆ ಸಾಯಕಲ್, ದ್ವಿತೀಯ ಸ್ಥಾನದವರಿಗೆ ಗೋಡೆ ಗಡಿಯಾರಗಳಲ್ಲದೇ ಇನ್ನೂ ಹಲವರಿಗೆ ಅನೇಕ ಬಹುಮಾನಗಳನ್ನು ಕೊಡಲಾಯಿತು.

ಸ್ಪರ್ಧೆಯ ಏರ್ಪಾಟು ಚೆನ್ನಾಗಿಯೇ ಇತ್ತು. ಇಷ್ಟೊಂದು ಚಕಡಾ, ಜನರು ಸೇರುವಲ್ಲಿ ಎಲ್ಲ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿಯೇ ಮಾಡಿದ್ದರೆನ್ನಬೇಕು. ಧ್ವನಿವಾಹಕ ಜೋಡಿಸಿದ್ದರು. ಕುಡಿಯುವ ನೀರನ್ನು ಪೂರೈಸಿದ್ದರು. ಜನರನ್ನು ಚಕಡಾಗಳನ್ನು ನಿಯಂತ್ರಣದಲ್ಲಿಡಲು ಸ್ವಯಂಸೇವಕರಿದ್ದರು. ಇಂಥ ಅಪರೂಪದ ಸ್ಪರ್ಧೆಯನ್ನು ನೋಡಿದ ಆನಂದ ನನ್ನದಾಯಿತು.

ಹಿಮ ವೃಷ್ಟಿ

ಅಮೇರಿಕೆಯೆಂದರೆ ಹೂವಿನ ಹಾಸಿಗೆ ಎಂದು ಅನೇಕರು ತಿಳಿದಿದ್ದಾರೆ. ನಾನಾದರೂ ಇಲ್ಲಿ ಬರುವ ಮೊದಲು ಕೆಲಮಟ್ಟಿಗೆ ಹಾಗೆಯೇ ನಂಬಿದ್ದೆ. ಆದರೆ ಇಲ್ಲಿಗೆ ಬಂದ ಮೇಲೆ ಕ್ರಮೇಣ ನಿಜಸ್ಥಿತಿಯ ಅರಿವಾಯಿತು. ಇಲ್ಲಿಯ ತೀರ ಅಪರಿಚಿತ ವಾತಾವರಣ, ಸ್ಥಿತಿ-ಗತಿಗಳಿಗೆ ಹೊಂದಿಕೊಂಡು ಹೋಗಬೇಕಾದರೆ ಸಾಕುಬೇಕಾಗುತ್ತದೆ. ಇಲ್ಲಿಗೆ ಬಂದ ಮೇಲೆ ಎದುರಿಸಬೇಕಾದ ಅನೇಕ ಸಮಸ್ಯೆಗಳಲ್ಲಿ ಇಲ್ಲಿಯ ಕಡುಚಳಿಗಾಲವೂ ಒಂದು.

ಇಲ್ಲಿ ಚಳಿಗಾಲದ ಪ್ರಾರಂಭೋತ್ಸವ ಸೆಪ್ಟೆಂಬರ್ ತಿಂಗಳಿನಲ್ಲಿಯೇ ಆಗುತ್ತದೆ. ಬೇಸಿಗೆಯಲ್ಲೆಲ್ಲ ಕೇವಲ ಹಸಿರು ಸೀರೆಯನ್ನೇ ಉಟ್ಟು ಉಟ್ಟು ನಿಸರ್ಗಮಾತೆ ಬೇಸತ್ತಿರುತ್ತಾಳೆ. ಅಂತೆಯೇ ಬೇಸಿಗೆಯ ಕೊನೆಗಾಲದಲ್ಲಿ ಬಣ್ಣ ಬಣ್ಣದ ಅನೇಕ ಉಡುಪುಗಳನ್ನು ತೊಡುತ್ತಿದ್ದಂತೆ ಶೋಭಿಸುತ್ತಾಳೆ. ಎಲ್ಲ ಗಿಡಮರಗಳೂ, ಹೂ-ಬಳ್ಳಿಗಳೂ ವಿವಿಧ ಬಣ್ಣಗಳನ್ನು ಧರಿಸುತ್ತವೆ. ಒಂದು ನೆತ್ತರಗೆಂಪು ಬಣ್ಣ ತಾಳಿದರೆ, ಇನ್ನೊಂದು ಹಳದಿ ಕೆಂಪು, ಮತ್ತೊಂದು ಕಾವಿಗೆಂಪು, ಮಗುದೊಂದು ನಸುಗೆಂಪು ಬಣ್ಣ ಪಡೆದಿರುತ್ತವೆ. ಈ ವರ್ಣವೈಭವ ಅತ್ಯಂತ ರಮಣೀಯವಾಗಿರುತ್ತದೆ. ಕಾರಿನಲ್ಲಿ ಜನ ದೂರ ದೂರದವರೆಗೆ ಸಂಚರಿಸಿ, ನನ್ನಂತಹವರು ಕಾಲಿನಿಂದಲೇ ಸಂಚರಿಸಿ ಈ ನೋಟವನ್ನು ಮನದಣಿಯೆ ಸವಿಯುತ್ತಾರೆ. ಅರಣ್ಯಗಳತ್ತ ಹೋದರೆ ಗಿಡಮರಗಳೆಲ್ಲ ಬಣ್ಣ ಬಣ್ಣದ ಎಲೆಗಳನ್ನು ನಮ್ಮ ಮೇಲೆ ಎಸೆಯುತ್ತ ಸ್ವಾಗತಿಸುತ್ತವೆ. ರಸ್ತೆಯೆಲ್ಲ ಬಣ್ಣಬಣ್ಣದ ಎಲೆಗಳಿಂದ ತುಂಬಿ ಅಂದವಾದ ರತ್ನಗಂಬಳಿ ಹಾಸಿದಂತೆ ಶೋಭಿಸುತ್ತದೆ. ನಾನು ಮೊದಲ ಸಲ ಈ ವರ್ಣವೈಭವ ನೋಡಿ ಮರುಳಾಗಿ ಬಿಟ್ಟೆದ್ದೆ. ವರ್ಷದುದ್ದಕ್ಕೂ ಹೀಗೆಯೇ ಇರಬಹುದೆಂದು ನಂಬಿದ್ದೆ. ಆದರೆ ಟ್ರಾನ್ಸ್‌ಫರ್ ಸೀನದಂತೆ ನೋಟ ಬದಲಾಯಿತು.

ನಿಸರ್ಗದಲ್ಲಿ ಬದಲಾವಣೆ

ನೋಡನೋಡುತ್ತಿದ್ದಂತೆ ನಿಸರ್ಗಮಾತೆಯ ಬಣ್ಣ ಬಣ್ಣದ ಉಡುಗೆಗಳು ಮಾಯವಾದವು. ರತ್ನಗಂಬಳಿಗಳು ಕಾಂತಿಹೀನವಾದವು. ಚಿಲಿಪಿಲಿಗುಟ್ಟುವ, ಇಂಪಾಗಿ ಹಾಡುವ ಹಕ್ಕಿಪಕ್ಕಿ ಮೌನ ತಾಳಿದವು. ಹುಳಹುಪ್ಪಡಿಗಳೂ ಹೇಳಹೆಸರಿಲ್ಲದಂತಾದವು. ಎಲ್ಲಿ ನೋಡಿದರೂ ಸ್ಮಶಾನಶಾಂತಿ. ಗಿಡಮರಗಳೆಲ್ಲ ಕೇವಲ ಅಸ್ತಿತ್ವಕ್ಕಾಗಿ ದೇವರಲ್ಲಿ ಮೊರೆಯಿಡುತ್ತಾ ಅಸ್ಥಿಪಂಜರ ಮಾತ್ರವಾಗಿವೆ. ಪ್ರಾಣಿಸಂಚಾರ ಇಲ್ಲವೇ ಇಲ್ಲವೆಂಬಂತಾಯಿತು. ಈ ಸ್ಮಶಾನಶಾಂತಿ ಕೆಲವೇ ದಿನ ಉಳಿಯುವದು. ಅದನ್ನು ಹಿಂಬಾಲಿಸಿ ಬರುವದು ರುದ್ರ ಕೋಲಾಹಲ. ಭೀಕರ ಸುಂಟರಗಾಳಿಗಳು. ಬೆನ್ನಿಗೆ ಬರುವದು ಮೈಕೊರೆಯುವ ಶೀತ. ಎಲ್ಲಿ ನೋಡಿದರೂ ಧೂಳು. ಚಳಿಮಳೆಗಳ ಕಣ್ಣುಮುಚ್ಚಾಲೆಯಾಟ ನಡೆದಿರುತ್ತದೆ. ಸರಿ, ಒಂದು ದಿನ ಬೆಳಿಗ್ಗೆ ಇದ್ದಕ್ಕದ್ದಂತೆ ಹಿಮ ಕಾಣಿಸಿಕೊಳ್ಳುತ್ತದೆ. ಆಹಾ! ಹಿಂಜಿದ ಅರಳೆಯಂತೆ ಬಿಡಿ ಬಿಡಿಯಾಗಿ ಉದುರುತ್ತಿರುವ ಹಿಮ

ಕಣ್ಣಿಗೆ ಹಬ್ಬವನ್ನುಂಟುಮಾಡುತ್ತದೆ. ಗಾಳಿಗೆ ತೂರಿತೂರಿ ಬರುವ ಈ ಶ್ವೇತ ಸ್ವಚ್ಛಂದತೆ, ಬಹಳ ಆಹ್ಲಾದಕರವಾಗಿರುತ್ತದೆ. ಬೆಚ್ಚಗಿನ ಕೋಣೆಯಲ್ಲಿ ಕುಳಿತು ಕಾಜಿನ ಕಿಟಕಿಯೊಳಗಿನಿಂದ ಹಿಮವೈಭವವನ್ನು ನೋಡುತ್ತಿದ್ದ ನಾನು ಈ ಹೊಸ ನೋಟದಿಂದ ಪುಲಕಿತನಾದೆ. ಹೊರಗಿನ ಹಿಂಜಿದರಳೆಯ ಹಿಮಸ್ಪರ್ಶ ಮಾಡಲು ಕಾತರನಾಗಿದ್ದೆ. ಉತ್ಸಾಹಗೊಂಡು ಬೆಚ್ಚಗಿನ ಬಟ್ಟೆಗಳನ್ನು ಧರಿಸಿ ಹೊರಡಲು ಸಿದ್ಧನಾದೆ. ಹೊರಗೆ ಬಂದಾಗ ತಿಳಿಯಿತು. ಅರಳೆ ಹಿಮದ ಮೇಲೆ ನಡೆಯುವುದು ಎಷ್ಟು ದುಸ್ತರವೆಂದು. ಎರಡಡಿ ಹಿಮ ಬಿದ್ದ ನೆಲದ ಮೇಲೆ ಒಂದಡಿಯಿಡುವದೂ ಕಷ್ಟವಾಗಿತ್ತು. ಸಾಲದ್ದಕ್ಕೆ ಕಿವಿ, ಭುಜ, ಕಣ್ಣುತಿಮೂಗುಗಳಲ್ಲೆಲ್ಲ ಹಿಮ ಸ್ವೇಚ್ಛೆಯಿಂದ ಪ್ರವೇಶ ಮಾಡಿತು! ಉಪಾಯಗಾಣದೇ ತಿರುಗಿ ಕೋಣೆಗೆ ಬಂದೆ. ಚಳಿಗಾಲದ ದಪ್ಪ ಬೂಟು, ಓವರ ಕೋಟು, ದಪ್ಪ ಹ್ಯಾಟು, ಮುಖವಾಡ, ಕಿವಿ ಟೊಪ್ಪಿಗೆಗಳ ಆವಶ್ಯಕತೆ ಆಗ ಗೊತ್ತಾಯಿತು.

ಅಕ್ಟೋಬರ್ ಸರಿಯಿತು. ನವೆಂಬರ್‌ದಲ್ಲಿ ಚಳಿಗಾಲ ಇನ್ನೂ ಕಠಿಣರೂಪ ಧರಿಸುತ್ತದೆ. ರುದ್ರಮಾರುತನ ತಾಂಡವ ನಡೆದಿರುತ್ತದೆ. ಎಲ್ಲೆಲ್ಲೂ ಹಿಮ. ನಮ್ಮ ಭಾರದಷ್ಟೇ ಬೆಚ್ಚಗಿನ ಬಟ್ಟೆಗಳನ್ನು ಧರಿಸಿದರೂ ಚಳಿ ತಾಳಲಾಗದು. ರಸ್ತೆಯ ಮೇಲೆ ಕಾಲಿಟ್ಟರೆ ಒಂದಡಿ ಕೆಳಗೆ ಹೋಗುತ್ತದೆ. ಬೂಟಿನಲ್ಲೆಲ್ಲ ಹಿಮ ಕರಗಿದ ನೀರು ತುಂಬಿಕೊಳ್ಳುತ್ತದೆ. ಸಾಲದ್ದಕ್ಕೆ ರಸ್ತೆಯ ಪಕ್ಕದ ಮರಗಳೆಲ್ಲ ಸಮಯ ಸಾಧಿಸಿ ಧಬಲ್! ಎಂದು ಹಿಮದ ರಾಶಿಯನ್ನು ತಲೆಯ ಮೇಲೆ ಎಸೆಯುವವು. ಪ್ರಯಾಸಪಟ್ಟು ಇವನ್ನೆಲ್ಲ ತಪ್ಪಿಸಿಕೊಂಡು ಓಡೋಣವೆಂದರೆ ತಾಸಿಗೆ ಮೈಲು ಓಡುವ ಹಾಗಿಲ್ಲ. ಇಂತಹ ಸಂದರ್ಭಗಳಲ್ಲಿ ಪಾದಚಾರಿಯಾದ ನನಗೆ 'ಕಾರಿದ್ದವರು ಸುಖಿಗಳಪ್ಪ'! ಎನಿಸಿದ್ದರೆ ಆಶ್ಚರ್ಯವಿಲ್ಲ.

ಭ್ರಮ ನಿರಸನ

ಆದರೆ ಇದೂ ಕೇವಲ ಭ್ರಮೆಯೆಂದು ಶೀಘ್ರವೇ ಕಂಡುಕೊಳ್ಳುವಂತಾಯಿತು. ರಾತ್ರಿ ನಿಲ್ಲಿಸಿದ ಕಾರಿನ ಸ್ಥಳದಲ್ಲಿ ಬೆಳಿಗ್ಗೆ ಹಿಮದ ಗುಡ್ಡವೊಂದು ಕಾಣಿಸಿಕೊಳ್ಳುತ್ತದೆ! ಕಷ್ಟಪಟ್ಟು ಎಲ್ಲವನ್ನೂ ಬದಿಗೆ ತಳ್ಳಿ ಬಾಗಿಲು ತೆಗೆದು ಒಳಗೆ ನುಗ್ಗುವಷ್ಟರಲ್ಲಿ ಒಂದು ಗಂಟೆಯೇ ಕಳೆದಿರುತ್ತದೆ. ಕಾರು ಸ್ಟಾರ್ಟ್ ಮಾಡಿದರೆ ಇಂಜಿನ್ 'ಅಯ್ಯಯ್ಯೋ' ಎಂದು ಕೂಗಿ ಸುಮ್ಮನಾಗಿ ಬಿಡುತ್ತದೆ. ಅದರ ಅಯ್ಯಯ್ಯೋಕೆ ಕಿವಿಗೊಡದೇ ಪ್ರಯತ್ನದಿಂದ ಕಾರನ್ನು ಮುಂದುವರಿಸಿದರೆ ಹುಗಿದ ಹಿಮದಿಂದ ಗಾಡಿ ಹೊರಗೆ ಬರುವದೇ ಕಷ್ಟ. ಅಂತೂ ಇಂತೂ ದೂಡಿ ಇನ್ನೊಮ್ಮೆ ಸ್ಟಾರ್ಟ್ ಮಾಡಿದರೆ ಗಾಲಿಗಳು ತಿರುಗುತ್ತವೆ. ಕಾರು ಇದ್ದಲ್ಲಿಯೇ ಇರುತ್ತದೆ! ದೀರ್ಘ ಪ್ರಯತ್ನ ಮಾಡಿ ಅಂತೂ ಗಾಡಿ ಸ್ವಲ್ಪ ದೂರ ನಡೆಸಿದೆವು ಎಂದಿಟ್ಟುಕೊಳ್ಳೋಣ. ರಸ್ತೆಯ ಕೆಂಪು ದೀಪ ಬರುತ್ತದೆ. ಗಾಡಿ ನಿಲ್ಲಿಸಲೇ ಬೇಕಾಗುತ್ತದೆ. ತಿರುಗಿ ಪ್ರಾರಂಭಿಸಲೂ ಅರ್ಧಗಂಟೆ ಬೇಕು! ಗಾಲಿಗಳು ಜಾರುವದರಿಂದ ಅಪಘಾತದ ಭಯ ಹೆಚ್ಚು. ಹಿಮ ಬೀಳುತ್ತಿರುವದರಿಂದ ಮುಂದೆ ಇದ್ದ ಕಾರು ಕಾಣಿಸುವ ಹಾಗಿಲ್ಲ. ಅಂತೂ ಕಾರಿನ ಸುಖ ಅನುಭವಿಸಿದವರೇ ಬಲ್ಲರು!

ಮೂರು - ನಾಲ್ಕು ದಿನ ಹಿಮಪಾತದ ನಂದರ ಏನೋ ನಿಸರ್ಗದೇವಿಗೆ ಕೃಪೆ ಬಂತೆಂದು ಇಟ್ಟುಕೊಳ್ಳೋಣ. ಸೂರ್ಯನಿಗೆ ಪ್ರವೇಶಿಸಲು ಅಪ್ಪಣೆ ಕೊಟ್ಟಾಳು. ಹೊಳೆಯುವ ಬಿಸಿಲಿನಲ್ಲಿ

ಎಲ್ಲರೂ 'ಹಾಯ್ ಹಾಯ್' ಎಂದು ಓಡಾಡುತ್ತಾರೆ. ಬಿಸಿಲಿನ ತಾಪಕ್ಕೆ ಬೆಂದು ಹಿಮ ಕಣ್ಣೀರು ಸುರಿಸಲಾರಂಭಿಸುತ್ತದೆ. ಆಗ ಅದರ ಮೇಲೆ ನಡೆಯುವವರೂ ಕಣ್ಣೀರು ಹಾಕುವ ಸಂದರ್ಭ ಬರುತ್ತದೆ. ಎಲ್ಲಿ ಕಾಲಿಟ್ಟರೂ ಜಾರಲಾರಂಭಿಸುತ್ತದೆ. ಒಂದು ಕಾಲು ಜಾರಿತೆಂದು ಸಾವರಿಸಿಕೊಳ್ಳುವುದರೊಳಗೆ ಇನ್ನೊಂದು ಕಾಲು ಜಾರುತ್ತದೆ! ಈ ಸಲ ಕಡಿಮೆಯೆಂದರೆ ನಾನು ಐದಾರು ಸಲ ಬಿದ್ದಿರಬೇಕು. ಎಲ್ಲಿ ಕೈಕಾಲು ಮುರಿದುಕೊಳ್ಳುತ್ತೇನೋ ಎಂಬ ಭಯದಿಂದಲೇ ನಡೆಯುಬೇಕಾಗುತ್ತದೆ! ಒಮ್ಮೆ ಸಹಪಾಠಿಯೊಬ್ಬನೊಡನೆ ಜಾರದಂತೆ ಎಚ್ಚರಿಕೆಯಿಂದ ನಡೆಯುತ್ತಿದ್ದೆ. ಆತ ಒಮ್ಮೆ ಬಿದ್ದ. ಬೇಗ ಬೇಗ ಏಳುವುದರೊಳಗೆ ಮೊದಲಿಗಿಂತ ಜೋರಾಗಿ ಬಿದ್ದುಬಿಟ್ಟಿದ್ದ! ಇಲ್ಲಿ ಹೀಗೆ ಬಿದ್ದರೆ ನಗುವವರು ಕಡಿಮೆ. ಏಕೆಂದರೆ ಪ್ರತಿಯೊಬ್ಬರೂ ಹಲವಾರು ಬಾರಿ ಬಿದ್ದು ಅದರ ಸುಖವನ್ನು ಪಡೆದೇ ಇರುತ್ತಾರೆ.

ಪಾಠಕ್ಕೆ ತಡೆಯಿಲ್ಲ

ಚಳಿಗಾಲದ ಬಿಸಿಲದಿನದ ಉಷ್ಣತಾಮಾನದ ಅಂತರವಂತೂ ಬಹಳ. ಈಗ ೩೫ ಡಿಗ್ರಿ ಇದ್ದರೆ ಇನ್ನೊಂದು ಘಂಟೆಯಲ್ಲಿ ೧೫ ಡಿಗ್ರಿ ಆಗಿಬಿಡುತ್ತದೆ. ಅರ್ಧಗಂಟೆಯಲ್ಲಿ ೫ ಡಿಗ್ರಿ ಇಳಿಯುತ್ತದೆ. ನೀರು ೩೨ ಡಿಗ್ರಿ ಫಾರನ್ ಹೀಟಿಗೆ ಹೆಪ್ಪುಗಟ್ಟುತ್ತದೆಯಷ್ಟೆ? ಇಲ್ಲಿ ಉಷ್ಣತಾಮಾನ ಚಳಿಗಾಲದಲ್ಲಿ ೫ ರಿಂದ ೧೫ ಡಿಗ್ರಿ ಫಾರನ್‌ಹೀಟಿಗೆ ಇಳಿಯುತ್ತದೆಂದರೆ ಊಹಿಸಿಕೊಳ್ಳಿ. ಬಹಳ ಸಲ - ೫ ಡಿಗ್ರಿ ದಿಂದ ೩೦ ಡಿಗ್ರಿವರೆಗೂ ಇಳಿಯುವದುಂಟು. ಇದು ದಕ್ಷಿಣ ಭಾರತದವರಿಗೆ ಕೇವಲ ಊಹೆಯ ವಿಷಯವಾಗಿದ್ದರೆ ನಮಗೆಲ್ಲ ನಿತ್ಯದ ಅನುಭವವಾಗಿದೆ. ಕೆಲವೊಂದು ಸಲ ಕಿವಿಗಳು ಹೆಪ್ಪುಗಟ್ಟುತ್ತವೆ. ಮೂಗಿನಿಂದ ರಕ್ತ ಬರಲಾಂಭಿಸುತ್ತದೆ. ಇಷ್ಟಾದರೂ ಜನರ ಯಾವ ದಿನಚರಿಗೂ ವ್ಯತ್ಯಯ ಬರುವುದಿಲ್ಲ. ದಿನದ ಶಾಲೆ, ಕಾಲೇಜು, ಪಾಠ, ಪರೀಕ್ಷೆಗಳು ನಡೆದೇ ಇರುತ್ತವೆ. ಹಿಮದ ಸಾಮ್ರಾಜ್ಯ ಅಕ್ಟೋಬರದಿಂದ ಎಪ್ರಿಲ್ ತನಕವೂ ನಡದೇ ಇರುತ್ತದೆ.

ಈ ವರ್ಷ ಹಿಮದ ವೈಭವ ಶಿಖರಕ್ಕೇರಿದೆಯಂತೆ. ಹೊಸ ವರ್ಷ ಪ್ರಾರಂಭವಾಗುವುದಕ್ಕೆ ಎರಡು ಮೂರು ದಿನ ಮೊದಲು ವಿಪರೀತ ಚಳಿ ಪ್ರಾರಂಭವಾಯಿತು. ಅಮೇರಿಕೆಯ ಬಹಳಷ್ಟು ವಾಹನಗಳು ನಿಂತಲಿಯೇ ನಿಂತವು. ಶಾಲೆಕಾಲೇಜುಗಳು ನಡೆಯದಾದವು. ಅಖಂಡ ಹಿಮವೃಷ್ಟಿ ನಡೆದಿತ್ತು. ರಸ್ತೆಗಳ ಮೇಲೆಲ್ಲ ಸೊಂಟದತನಗ ಹಿಮ ಸಂಗ್ರಹವಾಗಿತ್ತು. ತಾಸಿಗೆ ಅರುವತ್ತು ಮೈಲಿಗಿಂತ ಹೆಚ್ಚಿನ ವೇಗದಿಂದ ಬೀಸುವ ಗಾಳಿ ತನ್ನೊಂದಿಗೆ ಹಿಮವನ್ನೂ ಸೇರಿಸಿ ಕೊಂಡು ಎಲ್ಲರನ್ನೂ ಹೆದರಿಸುತ್ತಿತ್ತು. ಮೈಕೊರೆಯುವ ಚಳಿ. ಇಷ್ಟಾದರೂ ಈ ಹವಾಮಾನ, ಪರಿಶ್ರಮಿವಿದ್ಯಾರ್ಥಿಗಳ ಮೇಲೆ ಪರಿಣಾಮ ಮಾಡಿದಂತೆ ತೋರಲಿಲ್ಲ. ಪಾಠ ಓದುಗಳು-ನಡೆದೇ ಇದ್ದುವು.

ಹಿಮದ ಸಹವಾಸ

ಹಿಮದ ಸಹವಾಸ ಭೀಕರವಾಗಿದ್ದಂತೆ ರಂಜಕವೂ ಆಗಿದೆ. ಅಮೇರಿಕನ್ನರಿಗೆ ವರ್ಷದಲ್ಲಿ ಆರು ತಿಂಗಳು ಹಿಮದ ಸಹವಾಸ ಲಭಿಸುವದರಿಂದ ಅದವರ ದೈನಂದಿನ ಜೀವನದ

ಭಾಗವಾಗಿದೆಯೆಂದು ತೋರುತ್ತದೆ. ಮಗುವಾಗಿದ್ದಾಗಿನಿಂದಲೂ ಹಿಮದಲ್ಲಿ ಆಡುತ್ತಾ, ಆಡುತ್ತ ಬೆಳೆಯುತ್ತಾರೆ. ನಮ್ಮಲ್ಲಿ ಮಕ್ಕಳು ಮರಳಿನ ರಾಶಿಯಲ್ಲಿ ಆಡಿ ನಲಿಯವಂತೆ, ಇಲ್ಲಿಯ ಚಿಕ್ಕಮಕ್ಕಳು ಹಿಮದಲ್ಲಿ ಆಡುತ್ತಿರುತ್ತಾರೆ. ತಾಯಂದಿರು ಮಕ್ಕಳಿಗೆ ತಲೆಯಿಂದ ಕಾಲಿನ ವರೆಗೆ ಬೆಚ್ಚಗಿನ ಬಟ್ಟೆಗಳನ್ನು ತೊಡಿಸಿ, ದಪ್ಪ ಬೂಟುಗಳನ್ನು ಹಾಕಿ, ಹಿಮದಲ್ಲಿ ಆಡಲು ಬಿಡುತ್ತಾರೆ. ಹಿಮದ ಚೆಂಡುಗಳನ್ನು ಮಾಡಿ ಒಬ್ಬರೊಬ್ಬರಿಗೆ ಹೊಡೆದು, ಹಿಮದಲ್ಲಿ ಗುಬ್ಬಚ್ಚಿ ಗೂಡುಮಾಡಿ ಮಕ್ಕಳು ಆಡುತ್ತಿರುತ್ತಾರೆ. ಒಮ್ಮೊಮ್ಮೆ ಹೊಡೆದಾಟದಲ್ಲಿ ಆಟ ಕೊನೆಗೊಳ್ಳುವುದುಂಟು! ಕೆಲವು ಮಕ್ಕಳು ಮನೆಯ ಮುಂದಿನ ಹಿಮರಾಶಿ ತೆಗೆಯುವುದರಲ್ಲಿ ತಂದೆತಾಯಿಗಳಿಗೆ ನೆರವಾಗುತ್ತಾರೆ.

ಚಿಕ್ಕಂದಿನಲ್ಲೇ ಲಭಿಸಿದ ಈ ಹಿಮದ ಸಹವಾಸ ಶಾಲೆ ಕಾಲೇಜುಗಳಿಗೆ ಹೋದಾಗ ಇನ್ನೂ ಬೆಳೆಯುತ್ತದೆ. ಇಲ್ಲಿಯ ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಪ್ರತಿವರ್ಷ ಹಿಮಶಿಲ್ಪದ ಸ್ಪರ್ಧೆ ನಡೆದಿರುತ್ತದೆ. ಹಾಸ್ಟೆಲಿನ ವಿದ್ಯಾರ್ಥಿ, ವಿದ್ಯಾರ್ಥಿನಿಯರೆಲ್ಲ ಭಾಗವಹಿಸುತ್ತಾರೆ. ಸ್ಪರ್ಧೆಗೆ ಪ್ರತಿ ಸಲ ಹೊಸ ವಿಷಯವನ್ನು ಕೊಡಲಾಗುತ್ತದೆ. ಈ ವಿಷಯದ ಮೇಲೆ ವಿದ್ಯಾರ್ಥಿಗಳು ತಮ್ಮ ಕಲ್ಪನೆ, ಜಾಣ್ಮೆ ಮತ್ತು ಕೌಶಲ್ಯಗಳನ್ನು ಉಪಯೋಗಿಸಿ ಹಿಮಶಿಲ್ಪ ರಚಿಸುತ್ತಾರೆ. ಈ ಶಿಲ್ಪ ರಚನೆ ಸುಲಭದ ಕೆಲಸವಲ್ಲ. ಹಿಮ ಹೆಚ್ಚಾಗಿ ಬೀಳದ ವರ್ಷವಂತೂ ಎಲ್ಲೆಲ್ಲಿಂದಲೋ ಹಿಮ ತಂದು, ಹಾಸ್ಟೆಲಿನ ಮುಂದೊ, ಕಾಲೇಜಿನ ಮುಂದೊ ರಾಶಿ ಹಾಕಬೇಕು. ಕಟ್ಟಡದಷ್ಟು ಎತ್ತರವಾದ ಹಿಮರಾಶಿಯನ್ನು ಬಡಿಬಡಿದು ಗಟ್ಟಿಯಾಗುವಂತೆ ಮಾಡಬೇಕು. ಇಲ್ಲದಿದ್ದರೆ ಒಮ್ಮೊಮ್ಮೆ ಇಡೀ ತಯಾರಾದ ಶಿಲ್ಪ ಕುಸಿಯವದುಂಟು! ಹಿಮರಾಶಿ ಗಟ್ಟಿಯಾದ ಮೇಲೆ ಅದನ್ನು ಗಟ್ಟಿಯಾದ ಮೊಳೆಗಳಿಂದ ಕೊರೆಯುತ್ತಾರೆ. ತೀರ ಸಾವಧಾನವಾಗಿ. ಇಂತಹ ಸ್ಪರ್ಧೆಗಳಲ್ಲಿ ಇಡೀ ಹಾಸ್ಟೆಲ್ ಅಥವಾ ಸಂಸ್ಥೆ ಇಡೀ ರಾತ್ರಿ ಕೊರೆಯುವ ಚಳಿಯಲ್ಲಿ ಕೆಲಸದಲ್ಲಿ ತೊಡಗಿರುತ್ತದೆ. ವಿಗ್ರಹ ಕಡಿದಾದ ನಂತರ ಅದಕ್ಕೆ ಒಪ್ಪುವ ವಿವಿಧ ಬಣ್ಣಗಳನ್ನು ಕೊಡಬೇಕು. ಇಷ್ಟಾದ ಮೇಲೆ ತಯಾರಾದ ಹಿಮಶಿಲ್ಪಕ್ಕೆ ಆಕರ್ಷಕ ಹೆಸರನ್ನು ಕೊಡಬೇಕು. ತಾವು ಕಷ್ಟಪಟ್ಟು ತಯಾರಿಸಿದ ಕೃತಿ, ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರವಾದಾಗ ಸ್ವರ್ಗ ಒಂದೇ ಅಂಗುಲ ಉಳಿದಿರುತ್ತದೆ, ಈ ವಿದ್ಯಾರ್ಥಿಗಳಿಗೆ. ಒಂದೆರಡು ದಿನಗಳ ಈ ಸ್ಪರ್ಧೆಯಲ್ಲಿ ಸಹಸ್ರಾರು ಜನ, ಹಿಮ-ಶಿಲ್ಪಗಳ ಪ್ರಕಾರಗಳನ್ನು ನೋಡಿರುತ್ತಾರೆ. ನೂರಾರು ಕೆಮರಾಗಳು ಈ ಕೃತಿಗಳ ಪ್ರತಿ ಕೃತಿಗಳನ್ನೂ ಕಾಯ್ದಿರಿಸುತ್ತವೆ. ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ತಾಯ್ತಂದೆಗಳು ನೂರಾರು ಮೈಲು ದೂರದಿಂದ ತಮ್ಮ ಮಕ್ಕಳ ಕಲಾಕೃತಿಗಳನ್ನು ನೋಡಲು ಧಾವಿಸಿ ಬರುತ್ತಾರೆ.

ಈ ಹಿಮಕಲೆಯ ಸ್ಪರ್ಧೆ ಪ್ರತಿವರ್ಷ ಅಷ್ಟೇ ಉತ್ಸಾಹದಿಂದ ನಡೆಯುತ್ತದೆ ಎಂದು ಹೇಳಲಾಗದು. ಹಿಮ ತೀರ ಕಡಿಮೆ ಬಿದ್ದ ವರ್ಷ ಈ ಸ್ಪರ್ಧೆಯನ್ನು ರದ್ದುಗೊಳಿಸಬೇಕಾಗುವದು. ಕೆಲವೊಂದು ಸಲ ಶಿಲ್ಪ ತಯಾರಾದ ನಂತರ ಉಷ್ಣತಾಮಾನವು ೩೨ ಡಿಗ್ರಿ ಫಾರನಹೀಟಗಿಂತ ಮೇಲೆ ಹೋದರೆ ಜಾತ್ರೆಗೆ ಮಾರಲು ಬಂದ ಸಕ್ಕರೆಯ ಗೊಂಬೆಗಳು ಮಕ್ಕಳ ಬಾಯಲ್ಲಿ ಕರಗುವಂತೆ ಕರಗಲಾರಂಭಿಸುವದೂ ಉಂಟು!

ಹಿಮ ಶಿಲ್ಪಕಲೆ

ಹಿಮಶಿಲ್ಪದ ಇಂಥ ಸ್ಪರ್ಧೆಗೆ ಕೊಡಲಾಗುವ ವಿಷಯಗಳೂ ತುಂಬ ಮೋಜಾಗಿಯೂ ವೈವಿಧ್ಯಪೂರ್ಣವೂ ಆಗಿರುತ್ತವೆ. ಒಂದು ವರ್ಷ ರಾಜಕಾರಣದ ವಿಷಯ ಕೊಟ್ಟರೆ, ಇನ್ನೊಂದು ವರ್ಷ ಸ್ವಾಸ್ಥ್ಯದ ವಿಷಯ ಕೊಟ್ಟಿರುತ್ತಾರೆ. ಇಂಥ ವಿಷಯಗಳ ಮೇಲೆ ವಿದ್ಯಾರ್ಥಿಗಳ ಕಲ್ಪನಾಲಹರಿ ವಿಚಿತ್ರವಾಗಿ ಹರಿಯುತ್ತಿರುತ್ತದೆ! ಸ್ವಾಸ್ಥ್ಯಕ್ಕೆ ಸಂಬಂಧಪಟ್ಟ ಒಂದು ಹಿಮಶಿಲ್ಪದಲ್ಲಿ ಕಮೋಡ ಕಕ್ಕಸದ ಮೇಲೆ ಅರೂಢನಾದವನೇ ಪರಮಸುಖಿಯೆಂದು ಚಿತ್ರಿಸಲಾಗಿತ್ತು! ಸಾಮಾಜಿಕ ಘಟನೆಗೆ ಸಂಬಂಧಪಟ್ಟ ಶಿಲ್ಪವೊಂದರಲ್ಲಿ "ಅಂದು ರಾತ್ರಿ ಕುಣಿತದಲ್ಲಿ ಭಾಗವಹಿಸಿದ್ದರೆ...' ಎಂದು ಮಿಡುಕುತ್ತ ಮಗುವಿನ ಗಾಡಿಯನ್ನು ನೂಕಿಕೊಂಡು ಹೋಗುವ ತರುಣಿ ತಾಯಿಯೊಬ್ಬಳನ್ನು ಚಿತ್ರಿಸಲಾಗಿದೆ. ಯುವತಿಯೊಬ್ಬಳು ಶಯ್ಯೆಗೆ ಆಮಂತ್ರಿಸುವ ಶಿಲ್ಪವನ್ನು ಇನ್ನೊಬ್ಬ ಕೊರೆದಿದ್ದಾನೆ. ಇಂತಹ ನೂರಾರು ವಿಗ್ರಹಗಳು ರಸ್ತೆಯ ಇಕ್ಕೆಲಗಳಲ್ಲಿ ನಿಂತು ಜನರನ್ನು ರಂಜಿಸುತ್ತವೆ.

ಕ್ರೀಡಾಪ್ರಿಯ ಅಮೇರಿಕನ್ನರಿಗೆ ಹಿಮದ ಆಟಗಳಲ್ಲೂ ಹೆಚ್ಚಿನ ಆಸಕ್ತಿ. ಹಿಮದ ಮೇಲೆ ಜಾರಿ ಜಾರಿ ಬಿದ್ದರೆ ಅದೇ ಆಟವೆಂದು ಭ್ರಮಿಸುವ ಜನರಿದ್ದಾರೆ. ಹೀಗಾಗಿ ಇಳಿಜಾರಾದ ಹಿಮಗುಡ್ಡದಿಂದ ಇಳಕಲಿನಲ್ಲಿ ಜಾರುತ್ತ ಬರುವದು ಒಂದು ಜನಪ್ರಿಯ ಆಟವಾಗಿದೆ. ಅದಕ್ಕಾಗಿ ದೋಣಿಯ ಆಕಾರದ ಜಾರುಬಂಡಿಗಳನ್ನೂ, ಉಕ್ಕಿನ ಪಟ್ಟಿಗಳನ್ನು ಬಿಗಿದ ಬೂಟುಗಳನ್ನೂ ಧರಿಸುತ್ತಾರೆ. ಬೆಚ್ಚಗಿನ ಬಟ್ಟೆಗಳು ಚಳಿಯಿಂದ ರಕ್ಷಿಸುತ್ತವೆ. ಕೋಲೊಂದು ಆಧಾರಕ್ಕಿರಬಹುದು. ಜಾರುತ್ತ ಕೆಳಗೆ ಬರುವಷ್ಟು ಮೇಲೇರಿ ಹೋಗುವದು ಸುಲಭವಲ್ಲದ್ದರಿಂದ ಅದಕ್ಕೆ ಇನ್ನೊಂದು ಪ್ರಕಾರದ ಆಟವನ್ನು ಹುಡುಕಲಾಗಿದೆ. ಹಿಮದ ಗುಡ್ಡಗಳ ಮೇಲೆ ತಂತಿಯ ಆಧಾರದ ಮೇಲೆ ಜಾರುವ ತೊಟ್ಟಿಲುಗಳನ್ನು ನಿರ್ಮಿಸಿದ್ದಾರೆ. ಜಾರುತ್ತ ಕೆಳಗೆ ಬಂದವರು ಈ ತೊಟ್ಟಿಲುಗಳಲ್ಲಿ ಕುಳಿತು ಮೇಲೆ ಏರಿಹೋಗಬಹುದು. ಈ ಆಟ ಅಷ್ಟು ಆಯಾಸಕರವಲ್ಲದ್ದರಿಂದ ಎಳೆಯರಷ್ಟೇ ಅಲ್ಲದೆ ಮಧ್ಯವಯಸ್ಕರೂ ಭಾಗವಹಿಸುತ್ತಾರೆ. ಇಂತಹ ಹಿಮಗಿರಿಯ ಅಕ್ಕಪಕ್ಕದಲ್ಲಿ ಜನರ ಜಾತ್ರೆಯೇ ನೆರೆದಿರುತ್ತದೆ. ಹೇರಳ ವ್ಯಾಪಾರ ನಡೆದಿರುತ್ತದೆ. ಇಂಥ ಪುಟ್ಟ 'ಹಿಮಗಿರಿ ನಗರ'ಗಳಲ್ಲಿ ಜನಾಕರ್ಷಣೆಯಲ್ಲಿ ರೇಡಿಯೋ, ಟಿ.ವಿಗಳೂ ಹಿಂದೆ ಬಿದ್ದಿಲ್ಲ. ತಮ್ಮ ಪ್ರಸಾರಗಳನ್ನು ಜನಪ್ರಿಯ ಮಾಡಲು ಪ್ರತಿ ತಾಸಿಗೆ ಯಾವ ಹಿಮಗಿರಿಯ ಮೇಲೆ ಎಷ್ಟು ಹಿಮ ಸಂಚಯವಿದೆ? ಹೊಸ ಹಿಮಪಾತವೆಷ್ಟಿದೆ? ಇಂಥ ಹಿಮಸ್ಥಾನಗಳಿಗೆ ಪ್ರವಾಸದ ಯಾವ ರಸ್ತೆ, ಚೆನ್ನಾಗಿದೆ? ಪ್ರವಾಸದ ಅನುಕೂಲತೆಗಳು ಯಾವುವು? ಎಂಬೆಲ್ಲ ಮಾಹಿತಿಯನ್ನು ಆಗಾಗ್ಗೆ ಪ್ರಸಾರ ಮಾಡುತ್ತಿರುತ್ತವೆ. ರಜಾ ದಿನಗಳಲ್ಲಿ ಊರಿನ ರಸ್ತೆ-ಬೀದಿಗಳಲ್ಲಿ ಕಾಣಸಿಗದ ಅಮೇರಿಕನ್ನರು ಇಂಥ ಹಿಮಗಿರಿಗಳಲ್ಲಿ ಭೆಟ್ಟಿಯಾಗುತ್ತಾರೆ.

ಹಿಮಕ್ರೀಡೆಯ ಹುಚ್ಚು

ಅಮೇರಿಕೆಯ ಉತ್ತರರಾಜ್ಯಗಳಲ್ಲಿ ಸಾಮಾನ್ಯವಾದ ಹಿಮ, ದಕ್ಷಿಣ ರಾಜ್ಯಗಳಲ್ಲಿ ಇಲ್ಲ. ಹೀಗಾಗಿ ನೌಕರಿ ನಿಮಿತ್ತವಾಗಿ ದಕ್ಷಿಣಕ್ಕೆ ಹೋದ ಉತ್ತರ ಅಮೇರಿಕನ್ನರು ಹಿಮಕ್ಕಾಗಿ ಹಾತೊರೆಯುತ್ತಾರೆ. ಎಷ್ಟೋ ಕುಟುಂಬಗಳು ಚಳಿಗಾಲದ ಆಟಗಳಿಗಾಗಿ ರಜೆಪಡೆದು ಉತ್ತರಕ್ಕೆ

ಬಂದಿರುತ್ತವೆ. ಇತ್ತೀಚೆಗೆ ಇಂತಹ ಆಟಗಳಿಗಾಗಿ ಉತ್ತರಕ್ಕೆ ಏಕೆ ಹೋಗಬೇಕು? ಅವೇ ಆಟಗಳನ್ನು ದಕ್ಷಿಣದಲ್ಲಿ ಏಕೆ ಏರ್ಪಡಿಸಬಾರದು? ಎಂಬ ಕಲ್ಪನೆ ದಕ್ಷಿಣದವರಿಗೆ ಬಂದಂತಿದೆ. ಹಿಮರಾಶಿಯ ಬದಲಾಗಿ ತೀರ ನಯವಾದ ಕಟ್ಟಿಗೆ ಪುಡಿಯ ದಿನ್ನೆಗಳನ್ನು ನಿರ್ಮಿಸಿ ಹಿಮದ ಆಟಗಳ ಪ್ರತಿಕ್ರೀಡಗಳನ್ನು ರಚಿಸಲು ಯತ್ನಿಸುತ್ತಿದ್ದಾರೆ.

ಮೀನು ಹಿಡಿಯುವದೂ ಅಮೇರಿಕನ್ನರಿಗೆ ಪ್ರಿಯವಾದ ಕ್ರೀಡೆ. ಚಳಿಗಾಲ ಬಂತೆಂದರೆ ಮೀನು ಹಿಡಿಯುವ ಉತ್ಸಾಹಿಗಳಿಗೆ ಎಲ್ಲಿಲ್ಲದ ಹುರುಪು, ಹೆಪ್ಪುಗಟ್ಟಿದ ಸರೋವರಕ್ಕೆ ಹೋಗಿ ಒಂದಿಷ್ಟು ಹಿಮ ಕರಗಿಸಿ ಗಾಳ ಹಾಕಿ ಮೀನು ಹಿಡಿಯುತ್ತಾರೆ. ಹೆಪ್ಪುಗಟ್ಟಿದ ಸರೋವರದಲ್ಲಿ ಅಹಾರಾಭಾವದಿಂದ ನರಳುವ ಮೀನುಗಳು ಗಾಳಕ್ಕೆ ಬಲುಬೇಗ ಅಹುತಿಯಾಗುತ್ತವೆ.

ಕೆಲವೊಮ್ಮೆ ಮೇಲೆ ಮೇಲೆ ಹೆಪ್ಪುಗಟ್ಟಿದಂತೆ ತೋರುವ ಸರೋವರ ಅಷ್ಟೊಂದು ಹೆಪ್ಪುಗಟ್ಟಿರದೇ ಮೀನಿನ ಬದಲಾಗಿ ಮೀನು ಹಿಡಿಯಹೋದವರೆ ಅಹುತಿಯಾಗುವದುಂಟು. ಚೆನ್ನಾಗಿ ಹೆಪ್ಪುಗಟ್ಟಿದ ಸರೋವರದ ಇನ್ನೊಂದು ಕ್ರೀಡಾ ಅನುಕೂಲವೂ ಇದೆ. ಭಾರತದ ಹಾಕಿಪಂದ್ಯ ಅಮೇರಿಕದಲ್ಲಿ ಹಿಮಹಾಕಿಯಲ್ಲಿ ಪರಿವರ್ತನೆ ಹೊಂದಿದೆ. ಈ ಹೆಪ್ಪುಗಟ್ಟಿದ ಸರೋವರಗಳು ಅವರಿಗೆ ಆಟದ ಕ್ಷೇತ್ರಗಳಾಗಿ ಬಿಡುತ್ತವೆ. ಇದಲ್ಲದೆ ಹಿಮಬಾಲೆ (ballet) ಹಿಮ ನೃತ್ಯಗಳೂ ಜನಪ್ರಿಯ ಆಟಗಳಾಗಿವೆ.

ಹಿಮವೃಷ್ಟಿಯ ದಿನಗಳಲ್ಲಿ ಸಾರಿಗೆ ಸರಾಗವಾಗಿ ಸಾಗಲೆಂದು ಲಕ್ಷಗಟ್ಟಲೆ ಡಾಲರು ಖರ್ಚುಮಾಡಿ ರಸ್ತೆಗಳನ್ನು ಹಿಮರಹಿತವಾಗಿ ಇಡಬೇಕಾಗುತ್ತದೆ. ಹಿಮದಿಂದ ಎಷ್ಟೇ ತೊಂದರೆಯಾದರೂ ಅಮೇರಿಕನ್ನರಿಗೆ ಹಿಮದ ಮೋಹ ಬಿಡುವುದಿಲ್ಲ. ಕ್ರಿಸ್‌ಮಸ್ ಹಬ್ಬಕ್ಕೆ ಹಿಮ ಇಲ್ಲದಿದ್ದರಂತೂ ಅವರಿಗಾಗುವ ದುಃಖ ಅಷ್ಟಿಷ್ಟಲ್ಲ. ಹೀಗಾಗಿ ಹಿಮ ಕಡಿಮೆ ಬಿದ್ದ ವರ್ಷ ಹಿಮವನ್ನು ಹೋಲುವ ಬಿಳಿಪುಡಿಯನ್ನು ಹಾಕಿಯಾದರೂ ಅವರು ಕ್ರಿಸ್‌ಮಸ್ ಹಬ್ಬವನ್ನು ಆಚರಿಸುತ್ತಾರೆ.

ಕ್ರಾಂತಿಕಾರ

ಪದವೀಧರನಾಗಿ ಒಂದು ವರ್ಷವಾದರೂ ನೌಕರಿ ದೊರೆಯದ್ದರಿಂದ ಓನಿಲ ಬೋಶು (ಅನಿಲ ಬಸು) ತನ್ನ ಭವಿಷ್ಯವನ್ನರಸವುದಕ್ಕಾಗಿ ಕಲಕತ್ತೆಗೆ ಹೊರಟಿದ್ದ. ಹೊರಟದ್ದು ಪೆಸೆಂಜರ್ ಗಾಡಿ. ಅದು ಚಿಕ್ಕ ಸ್ಟೇಷನ್ನುಗಳಲ್ಲೆಲ್ಲ ನಿಲ್ಲುತ್ತ ನಡೆದಿತ್ತು. 'ಪಗಲಾ ಚಂಡಿ' ಬಂದ ಕೂಡಲೇ ಚಂಡಿಯ ಪ್ರತಿರೂಪದಂತಿದ್ದ ನಾಲ್ಕಾರು ಹೆಂಗಳೆಯರು ಅವಸರವಸರವಾಗಿ ಅವನ ಕಂಪಾರ್ಟ್‌ಮೆಂಟಿನೊಳಗೇ ನುಗ್ಗಿದರು. ಭಾರವಾದ ಬುಟ್ಟಿಗಳನ್ನು ಇಳಿಸಿ, ಗೋಣೀ ಚೀಲಗಳನ್ನು ಹಾಸಿಕೊಂಡು ಪಟ್ಟಾಗಿ ಕುಳಿತು ಹುರಿಗಡಲೆ ತಿಂದರು. ಸ್ಟೇಶನ್ನು ಬಂದಾಗ ಮಣ್ಣಿನ ಕುಪ್ಪಿಯಲ್ಲಿ ಚಹಕೊಂಡು ಕುಡಿದರು. ಪಾನ್ (ಎಲೆ-ಅಡಿಕೆ) ಸೇವಿಸಿದರು. ಬೀಡಿ ಸೇದಿದರು. ಹೊತ್ತು ಹೋಗದ್ದಕ್ಕೆ ಅವರೊಡನೆ ಮಾತಿನಲ್ಲಿ ತೊಡಗಿದ ಓನಿಲ. ಅವರೆಲ್ಲ ಹತ್ತು ಹನ್ನೆರಡು ವರ್ಷಗಳಿಂದ ಇಂಥ ಟ್ರೇನಿನಲ್ಲೇ ದಿನ-ರಾತ್ರಿ ಪ್ರವಾಸ ಮಾಡಿ ಅಕ್ಕಿ, ತರಕಾರಿಗಳನ್ನು ಕಲಕತ್ತೆಗೆ ಒಯ್ದು ಮಾರಿ, ಅಲ್ಲಿಂದ ಬಟ್ಟೆ ಬರೆ ಮತ್ತು ಇತರ ವಸ್ತು-ಒಡವೆಗಳನ್ನು ತಿರುಗಿ ತಂದು ತಮ್ಮ ತಮ್ಮ ಹಳ್ಳಿಗಳಲ್ಲಿ ಮಾರುವವರು ಎಂದು ತಿಳಿದಾಗ ಓನಿಲನಿಗೆ ಆಶ್ಚರ್ಯ.

ಒಬ್ಬಳು ಮಧ್ಯೆವಯಸ್ಕಳೆಂದಳು "ಬಾಬು, ಪೂರ್ವ ಬಂಗಾಲದ ರಾಜಶಾಹಿ ಜಿಲ್ಲೆಯ ಹಳ್ಳಿ ನನ್ನ ಊರು. ಶ್ರೀಮಂತರಲ್ಲದಿದ್ದರೂ ತಿಂದುಂಡು ಸುಖವಾಗಿದ್ದೆವು. ಆದರೆ ವಿಭಜನೆಯ ನಂತರ ಓಡಿಬರಲೇಬೇಕಾಯಿತು. ಇದ್ದ ಐವರು ಮಕ್ಕಳಲ್ಲಿ ಮೂವರು ರೋಗಪೀಡಿತರಾಗಿ, ಹೊಟ್ಟೆಗಿಲ್ಲದೇ ಸತ್ತರು. ಗಂಡ ಇದ್ದೆಕ್ಕಿದ್ದಂತೆ ಕಾಣೆಯಾದ. ಒಬ್ಬ ಮಗಳ ಮದುವೆ ಮಾಡಿಕೊಟ್ಟಿದ್ದೇನೆ. ಉಳಿದ ಒಬ್ಬನೇ ಮಗ ನಿರುದ್ಯೋಗಿಯಾದ್ದರಿಂದ ನಾನೇ ದುಡಿಯಬೇಕಾಗಿದೆ." ಇನ್ನೊಬ್ಬಳೆಂದಳು "ಬಾಬು, ಗಂಡಸರಿಗೆಲ್ಲ ದುಡಿಯಲು ಅವಕಾಶವಿದ್ದರೆ ನಾವೇಕೆ ಈ ರೀತಿ ಕಷ್ಟಪಡಬೇಕಾಗಿತ್ತು!"

"ಯಾಕೆ ಇದೇ ಕೆಲಸವನ್ನು ಅವರೂ ಮಾಡಬಹುದಿತ್ತಲ್ಲ?

"ಅವರಿಗೆಲ್ಲ ತಿಕೀಟು ಇಲ್ಲದೇ ಪ್ರವಾಸ ಮಾಡಲು ಬಿಡುವರೇ?" ಮಧ್ಯವಯಸ್ಕಳೆಂದಳು. ಅದೇಕೋ ಓನಿಲನಲ್ಲಿ ಅವಳಿಗೆ ಹೆಚ್ಚಿನ ವಿಶ್ವಾಸ ಉಂಟಾಗಿತ್ತು.

ಓನಿಲನಿಗೆ ಮಾತು ಸ್ಪಷ್ಟವಾಯಿತು. ಪ್ರತಿ ಚಿಕ್ಕ ಸ್ಟೇಶನ್ನಿನಲ್ಲಿಯೂ ಇಂಥ ಹೆಂಗಳೆಯರು ಭಾರವಾದ ಮೂಟೆಗಳೊಡನೆ ಟ್ರೇನು ಹತ್ತುವುದನ್ನು ಆತ ನೋಡಿದ್ದ. ಆತ ಆಶ್ಚರ್ಯದಿಂದ ಇದನ್ನು ನೋಡುತ್ತಿರುವಂತೆಯೇ ರೇಲ್ವೆ ಪೋಲೀಸನೊಬ್ಬ ಡಬ್ಬಿಯೊಳಗೆ ಬಂದ. ತಿಕೀಟು ಕೇಳುವ ಗೋಜಿಗೆ ಹೋಗದೇ ತಿಕೀಟಿಲ್ಲದವರೆಲ್ಲ ಬಂದು ಬಾಗಿಲ ಹತ್ತಿರ ನಿಲ್ಲಲು ಆಜ್ಞೆಯಿತ್ತ. ತಿಕೀಟು ಇದ್ದವರು ಎದ್ದು ನಿಂತರೂ ತಿಕೀಟ-ರಹಿತರು ನಿಲ್ಲುವ ಗೋಜಿಗೆ ಹೋಗಲಿಲ್ಲ. ಆದರೆ ಅಧಿಕಾರಿ ಗದರಿಸಿದ ನಂತರ ಎದ್ದು ಇಳಿದಂತೆ ಮಾಡಿದರು. ಆತ ಇಳಿದುಹೋದದ್ದೇ ತಡ, ಅವರೆಲ್ಲ ತಂಡ ತಂಡವಾಗಿ ಮತ್ತೆ ಡಬ್ಬಿಗೆ ಧಾವಿಸಿ ತಮ್ಮ ತಮ್ಮ ಸ್ಥಳಕ್ಕೆ ಬಂದರು. "ನಿಮ್ಮನ್ನೆಲ್ಲ ಇಳಿಸಿಬಿಟ್ಟನೆಂದು ತಿಳಿದಿದ್ದೆ!" ಎಂದ ಓನಿಲ.

"ಅವನೇನು ಇಳಿಸುತ್ತಾನೆ ತಲೆ! ತನ್ನ ಮಾಮೂಲ್ ಒಂದು ರೂಪಾಯಿ ಪಡೆದು ಹೋದ," ಎಂದಳು ಮಹಿಳೆಯಬ್ಬಳು.

ಓನಿಲನ ವಿಚಾರಲಹರಿ ಎಡೆಬಿಡದೇ ಓಡತೊಡಗಿತು. ನವೀನ ಕ್ರಾಂತಿಕಾರಿ ಶಿಕ್ಷಣ ಪಡೆದ ಅವನ ಮನಸ್ಸು, ಸಮಾಜ ಈ ಬಡ ಮಹಿಳೆಯರ ಮೇಲೆ ನಡೆಸಿದ್ದ ಅನ್ಯಾಯ ಕಂಡು ಹೇಸಿ ಹೋಯಿತು. ಇವರನ್ನೆಲ್ಲ ಸರಿಯಾಗಿ ಸಂಘಟಿಸಿದರೆ ಈ ಅನ್ಯಾಯ ಕಡಿಮೆಯಾಗುವುದಲ್ಲದೇ ನಿಜವಾದ ದೇಶಸೇವೆ ಮಾಡಿದಂತಾಗುವದೆಂದುಕೊಂಡ. ಅಲ್ಲಲ್ಲಿ ಚಹವನ್ನು ಮಣ್ಣಿನ ಕಪ್ಪಿನಲ್ಲಿ ಕೊಂಡು ಸೇವಿಸುತ್ತ, ಚಾರ್‌ಮಿನಾರ್ ಸೇದುತ್ತ ಇಂಥವರನ್ನು ಹೇಗೆ ಸಂಘಟಿಸುವುದೆಂದು ಯೋಚಿಸಲಾರಂಭಿಸಿದ.

ಗಾಡಿ ಇರುವೆ ವೇಗದಿಂದ ಕಲಕತ್ತೆಯತ್ತ ಹೊರಟಿತ್ತು. ತನ್ನ ವಿಚಾರಗಳು ಸ್ಪಷ್ಟರೂಪ ತಳೆದಕೂಡಲೇ ಓನಿಲ ಕಾರ್ಯೋನ್ಮುಖಿಯಾದ. ಎದುರು ಕುಳಿತ ಮಹಿಳೆಯರಿಗೆ ಅವರಿಗಾದ ಸಾರ್ವಜನಿಕ ಅಪಮಾನದ ಕಲ್ಪನೆ ಮಾಡಿಕೊಟ್ಟ. ಆದರೆ ಅವರ ಮೇಲೆ ಯಾವ ಪರಿಣಾಮವೂ ಆದಂತೆ ತೋರಲಿಲ್ಲ. ಓನಿಲ ಬಾಬು ಕುಪಿತನಾದ. ಅವೇಶದಿಂದ ಅವನ ಭಾಷಣ ಮುಂದುವರಿಯಿತು.

"ತಿಕೀಟು ಇಲ್ಲದಿದ್ದರೇನಾಯಿತು? ರೇಲ್ವೆ ಸಾರ್ವಜನಿಕರ ಸಂಪತ್ತು, ಸರಕಾರಿ ಅಧಿಕಾರಿಗಳು ಸ್ವತಃ ತಿಕೀಟು ಕೊಂಡು ಪ್ರವಾಸ ಮಾಡುವರೇ? ಆ ರೇಲ್ವೆ ಪೋಲೀಸ್ ತಿಕೀಟು ಕೊಂಡಿದ್ದನೇ? ಸಾಲದ್ದಕ್ಕೆ ಲಂಚದ ಒಂದು ರೂಪಾಯಿಗಿಟ್ಟಿಸಿ ಹೆಂಗಸರಿಗೆ ಅವಮಾನ ಮಾಡುವದು ಇದಾವ ದೇಶದ ನ್ಯಾಯ? ಸ್ತ್ರೀಯನ್ನು ತಾಯಿ ತಂಗಿಯಂತೆ ಕಾಣಲಾಗುವ ವಂಗದೇಶದಲ್ಲಿ ಈ ಅನ್ಯಾಯ ನೋಡಲಾರೆ. ಈ ಅನ್ಯಾಯದ ವಿರುದ್ಧ ಹೋರಾಡುವೆ. ಮೈಯಲ್ಲಿ ರಕ್ತವಿರುವ ತನಕ ಹೋರಾಡುವೆ.... ಅಂತೆಯೇ, ನಾವೆಲ್ಲ ಸಂಘಟಿತರಾಗಬೇಕು. ನಾನೂ, ಪಾಸ್ ಇದೆ ಎಂದು ಹೇಳಿದರೂ, ತಿಕೀಟು ಇಲ್ಲದೇ ಪ್ರವಾಸ ಮಾಡಿದೆ. (ತಿಕೀಟು ಕೊಳ್ಳುವ ಹಣದ ಯೋಗ್ಯತೆ ಅವನಿಗಿರಲಿಲ್ಲ?!) ತಿಕೀಟ-ರಹಿತರೆಲ್ಲ ಸಂಘಟಿತರಾಗಲೇಬೇಕು."

ನೆರೆದ ಹೆಂಗಳೆಯರು ಮುಖ ಮುಖ ನೋಡಿ ಕೊಂಡರು, ಗುಜು ಗುಜು ನಡೆಸಿದರು. ಆ ಮೇಲೆ ದಿಟ್ಟೆಯೊಬ್ಬಳು, "ನೀವು ನಮ್ಮ ಸಂಘದ ನಾಯಕತ್ವ ಒಪ್ಪಿಕೊಂಡರೆ ನಾವೆಲ್ಲ ಸಿದ್ಧ, ಆದರೆ ಉಳಿದ ಹೆಂಗಸರನ್ನೂ ಒಂದು ಮಾತು ಕೇಳುವದು ನ್ಯಾಯ" ಎಂದಳು. ಇದರಿಂದ ಉತ್ತೇಜಿತನಾದ ಓನಿಲ ಕೈಚೀಲವನ್ನು ಅವಳಿಗೆ ಒಪ್ಪಿಸಿ ಬೇರೊಂದು ಡಬ್ಬಿಗೆ ಹೋಗಿ, ಇದೇ ಭಾಷಣ ಪುನರುಚ್ಚರಿಸಿದ. ಸಿಯಾಲ್ದಾ ರೇಲ್ವೆ ಸ್ಟೇಶನ್ನಿನ ಪಕ್ಕದಲ್ಲಿ ಸಭೆಯೊಂದನ್ನು ಕರೆಯಲಾಗಿದೆಯೆಂದು ಹೇಳಿದ. ಆತನ ವಾಗ್ವೈಖರಿಯಿಂದ ಪ್ರಭಾವಿತರಾಗಿ ಅವರೆಲ್ಲ ತಾವು ತಂದ ಸಾಮಾನುಗಳನ್ನು ಒಳ್ಳೆಯ ದರಕ್ಕೆ ಮಾರಲು ಉತ್ಸುಕರಿದ್ದರೂ ಬಾಬು ತಮ್ಮ ಅಭ್ಯುದಯಕ್ಕಾಗಿ ಇಷ್ಟೆಲ್ಲ ಪರಿಶ್ರಮಿಸುತ್ತಿದ್ದರೆ ತಾವು ಸ್ವಾರ್ಥಿಗಳಾಗುವುದು ಯೋಗ್ಯವಲ್ಲವೆಂದು ಸಭೆ ಸೇರಲು ನಿರ್ಧರಿಸಿದರು. ತನ್ನ ಹೊಸ ಅನುಯಾಯಿಗಳ ಮೇಲೆ 'ಇಂಪ್ರೆಶನ್' ಹಾಕಲು ಕಲ್ಲಿದ್ದಲಿಯ ಚೀಲವೊಂದರ ಮೇಲೆ ಏರಿ ಓನಿಲ ಕುಳಿತ. ಉಳಿದವರು ನೆಲದ ಮೇಲೆಯೇ ಕುಳಿತರು. ಎಲ್ಲರೂ ಬೇಗ ಹೊರಡಲು ಉತ್ಸುಕರಿದ್ದುದರಿಂದ ರಚಿಸಬೇಕಾದ ಸಂಘದ ರೂಪರೇಷಗಳನ್ನು

ಹೇಳಿ ಮರುದಿನ ಇದೇ ಸಮಯಕ್ಕೆ ಇಲ್ಲೇ ಸಭೆ ನೇರುವುದೆಂದು ನಿರ್ಧರಿಸಿ ಸಭೆಯನ್ನು ವಿಸರ್ಜಿಸಿದ. ಕಳ್ಳ ಅಕ್ಕಿ ಮಾರಾಟಗಾರರೆಲ್ಲ ಈ ಹೊಸ ಕ್ರಾಂತಿಯ ಬಗ್ಗೆ ಮಾತನಾಡಿಕೊಳ್ಳುತ್ತ ಹೊರಟರು. ಮಿನಿ ಪತ್ರಿಕೆಯ ಬಾತಮಿದಾರನೊಬ್ಬ ಓನಿಲನನ್ನು ಮಾತನಾಡಿಸಿ ಸಂಘದ ಬಗ್ಗೆ ಕೇಳಿ ತಿಳಿದುಕೊಂಡ. ಮರುದಿನ 'ಅಣಿಮಾ' ಮಿನಿ ಪತ್ರಿಕೆಯಲ್ಲಿ ಅದರ ವಿವರಗಳು ಪ್ರಕಟವಾದಾಗ ಓನಿಲನಿಗೆ ಹೊಸ ರೆಕ್ಕೆಗಳು ಮೂಡಿದಂತಾಗಿತ್ತು.

ಮರುದಿನ ನಿರ್ದಿಷ್ಟ ವೇಳೆಗೆ ಓನಿಲನು ಸಭಾಸ್ಥಳಕ್ಕೆ ಬಂದಾಗ ಅದಾಗಲೇ ಪತ್ರಿಕಾಕಾರರೂ ಛಾಯಾಚಿತ್ರಕಾರರೂ ಬಂದಿದ್ದರೂ. ಮೀನುಗಾರ್ತಿ ಮಾಲೆ ಹಾಕಿದಳು. ಬದನೇಕಾಯಿ ಮಾರುವವಳು ಓನಿಲ ಬೋಶು ಇಂದಿನ ಸಭಾಧ್ಯಕ್ಷರಾಗಿ ಕಾರ್ಯಕ್ರಮುವನ್ನು ಸಾಂಗಗೊಳಿಸಬೇಕೆಂದು ಕೇಳಿಕೊಂಡಳು. ಮೂಲಂಗಿಯವಳು ಅದನ್ನು ಸಮರ್ಥಿಸಿದಳು. ಅಂದಿನ ಸಭೆಯಲ್ಲಿಮಹತ್ವದ ಗೊತ್ತುವಳಿಗಳನ್ನು ಮಂಡಿಸಿ ಸರ್ವಾನುಮತದಿಂದ ಸ್ವೀಕರಿಸಲಾಯಿತು.

೧) ತಿಕೀಟ್-ರಹಿತ ಪ್ರವಾಸಿಗಳು ರೇಲ್ವೆಯುವರು ಮಾಡುತ್ತಿರುವ ಅನ್ಯಾಯ ಸಹಿಸಲಾರದೇ ಸಂಘಟನೆ ಮಾಡಿಕೊಂಡಿದ್ದಾರೆ.

೨) ಇದಕ್ಕೆ ರೇಲ್ವೆ ತಿಕೀಟರಹಿತ ಸಂಘ ಅಥವಾ 'ರೇತಿಸ' ಎಂದು ನಾಮಕರಣವಾಗಬೇಕು.

೩) ತಿಕೀಟು ಇಲ್ಲದೇ ಪ್ರಯಾಣ ಮಾಡುವವರೆಲ್ಲ ಈ ಸಂಘದ ಸದಸ್ಯರಾಗಬಹುದು. ಇವರೆಲ್ಲ ರೇಲ್ವೆಯ ಸವಲತ್ತು ಇರುವಲ್ಲಿ ತಿಕೀಟು ಕೊಂಡು ಮೋಟಾರಿನಲ್ಲಿ ಹೋಗಬಾರದು.

೪) ಸದಸ್ಯರು ಪ್ರತಿ ತಿಂಗಳು ಐದು ಪೈಸಾ ಸದಸ್ಯತ್ವದ ಫೀ ಕೊಡಬೇಕು. ಇದನ್ನು ಕೊಡಲು ಅಸಮರ್ಥರಿದ್ದವರು ತಮ್ಮೂರ ಸರಪಂಚರಿಂದ ಸರ್ಟಿಫಿಕೇಟು ತರಬೇಕು.

೫) ರಾಜಕಾರಣಿಗಳು, ಉದ್ದಿಮೆದಾರರು, ಮುಂತಾದವರು ಇದರ ಸದಸ್ಯರಾಗಲು ಬಯಸಿದರೆ ೫೦೦ ರೂಪಾಯಿ ದೇಣಗಿ ಕೊಡಬೇಕು.

೬) ಸಂಘಕ್ಕೆ ಒಬ್ಬ ಕಾರ್ಯದರ್ಶಿ, ಒಬ್ಬ ಅಧ್ಯಕ್ಷ, ಹಣಕಾಸಿನ ವ್ಯವಸ್ಥೆ ನೋಡಿಕೊಳ್ಳಲು ಒಬ್ಬ ಕೋಶಾಧಿಕಾರಿ ಇರಬೇಕು. ಒಂದು ವರ್ಷದ ತನಕ ಇವರು ಕಾರ್ಯನಿರ್ವಹಣೆ ಮಾಡಬೇಕು.

೭) ಯಾರಿಗೂ ಓದಲು ಬಿಡುವು ಇಲ್ಲದ ಈ ದಿನಗಳಲ್ಲಿ ಸಂಘ ಒಂದು ಪತ್ರಿಕೆಯನ್ನು ನಡೆಸುವ ಬದಲಾಗಿ ಟೇಪ್‌ರಿಕಾರ್ಡರ್ ಒಂದನ್ನು ಖರೀದಿಸಿದರೆ ಎಲ್ಲ ಸದಸ್ಯರೂ ಟ್ರೇನ್ ಪ್ರಯಾಣ ಮಾಡವಾಗಲೇ ಸಂಘದ ಕಾರ್ಯಕಲಾಪಗಳನ್ನು ತಿಳಿದುಕೊಳ್ಳಲು ಅನುಕೂಲವಾಗುವದು.

೮) ಕಿಕ್ಕಿರಿದ ಟ್ರೇನುಗಳಲ್ಲಿ ನಿಂತು ಪ್ರಯಾಣ ಮಾಡಬೇಕಾದ ಪ್ರಮೇಯವನ್ನು

ತಪ್ಪಿಸಲು ಸಂಘದ ಸದಸ್ಯರಿಗಾಗಿ ರೇಲ್ವೆಯವರು ಮೂರು ನಾಲ್ಕು ಡಬ್ಬಿಗಳನ್ನು ಕಾಯ್ದಿರಿಸಬೇಕು.

೯) ಕೆಲವು ಸ್ಟೇಶನ್ನುಗಳಲ್ಲಿ ಟ್ರೇನು ಒಂದೇ ನಿಮಿಷ ನಿಲ್ಲುವದರಿಂದ ಸಂಘದ ಕೆಲ ಸದಸ್ಯ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಡಬ್ಬಿಯ ಮೇಲೆ ಹಸಿರು ಬಣ್ಣದ ಮೇಲೆ ಮೀನಿನ ಚಿತ್ರ ಬರೆಯಿಸಬೇಕು. ಇದೇ ಸಂಘದ ನಿಶಾನೆಯಾಗಬೇಕು.

೧೦) ಬಹಳಷ್ಟು ಮೂಟೆಗಳನ್ನು ತರುತ್ತಿರುವ ಅಬಲೆಯರಿಗೆ ಟ್ರೇನು ಹತ್ತಲು ಕಷ್ಟವಾದಾಗ, ಸರಪಳಿ ಎಳೆದು ಟ್ರೇನನ್ನು ನಿಲ್ಲಿಸುವ ಕಾಯ್ದೆಬದ್ಧ ಹಕ್ಕು ಸದಸ್ಯರಿಗೆ ಬೇಕು.

೧೧) ರೇಲ್ವೆ ಅಧಿಕಾರಿಗಳು ಪ್ರತಿದಿನ ಪ್ರತಿಯೊಬ್ಬರಿಂದ ಮಾಮೂಲು ವಸೂಲು ಮಾಡದೇ ವರ್ಷದಲ್ಲಿ ನಿರ್ದಿಷ್ಟ ಮೊತ್ತವನ್ನು ಸಂಘದ ಅಧ್ಯಕ್ಷರು ರೇಲ್ವೆ ಮಂತ್ರಿಗಳಿಗೇ ಕೊಡುವ ಏರ್ಪಾಡು ಆಗಬೇಕು.

೧೨) ದಣಿದು ಮನೆಗೆ ಮರಳುತ್ತಿರುವ ಸದಸ್ಯರಿಗಾಗಿ ರಾತ್ರಿ ಟ್ರೇನಿನಲ್ಲಿ ಮಲಗುವ ವ್ಯವಸ್ಥೆ ಆಗಬೇಕು.

ಸದ್ಯಕ್ಕೆ ಓನಿಲನೇ ಅಧ್ಯಕ್ಷ, ಕಾರ್ಯದರ್ಶಿ ಮತ್ತು ಕೋಶಾಧಿಕಾರಿಯ ಕೆಲಸ ನೋಡಬೇಕೆಂಬ ನಿರ್ಣಯಕ್ಕೆ ಬಂದು ಸಭೆ ಚದುರಿತು.

ಸಿಯಾಲ್ದಾ ರೇಲ್ವೆ ಸ್ಟೇಶನ್ನಿನ ಹೊರಗೆ 'ಪಕೋಡ' ಮಾರುವ ಅಂಗಡಿಗಳ ಮಧ್ಯೆ ಗೋಣಿ ತಟ್ಟಿನ ಡೇರೆಯ ಆಶ್ರಯದಲ್ಲಿ ತಾತ್ಕಾಲಿಕವಾಗಿ 'ರೇತಿಸ'ದ ಆಫೀಸು ಪ್ರಾರಂಬವಾಯಿತು. ವರ್ತಮಾನಪತ್ರಿಕೆಗಳಲ್ಲೆಲ್ಲ ಅದರ ಚಟುವಟಿಕೆಗಳ ವಿವರ ಬರಲಾರಂಭಿಸಿತು.

ಒಂದು ರವಿವಾರ ಪ್ರತ್ಯಕ್ಷರೂಪದಿಂದ ಹೋರಾಡಲು ಸಂಘದ ಸದಸ್ಯರು ನಿರ್ಧರಿಸಿದರು. ಹಲವು ಅಂಗಡಿಗಳು ಮುಚ್ಚಿದವು. ತಮ್ಮ ಸಂಘದ ಬೋರ್ಡು ಹೊತ್ತು, ಹಸಿರು ಮೀನಿನ ಧ್ವಜವನ್ನು ಹಾರಿಸುತ್ತ ಅವರೆಲ್ಲ ಸಿಯಾಲ್ದಾ ರೇಲ್ವೆ ಸ್ಟೇಶನ್ನಿನಲ್ಲಿ ನೆರೆದರು. "ಜೊಲ್ ಬೆಯನಾ ನಡೆಯಲಿಕ್ಕಿಲ್ಲ", "ನಮ್ಮ ಬೇಡಿಕೆ ಮನ್ನಿಸಲೇ ಬೇಕು" ಎಂದೆಲ್ಲ ಘೋಷಣೆ ಮಾಡುತ್ತ ರೇಲ್ವೆ ಅಧಿಕಾರಿಗಳನ್ನು ಘೆರಾವ್ ಮಾಡಿದರು. ಕಂಗೆಟ್ಟ ಅಧಿಕಾರಿಗಳು ತಾವು ಆ ಬಗ್ಗೆ ವಿಚಾರವಿನಿಮಯ ಮಾಡುವುದಾಗಿ ಹೇಳಿದರೂ ಜನ ಸರಿಯಲಿಲ್ಲ. ಕೆಲವು ಮಹಿಳೆಯರು ಹಳಿಗಳ ಮೇಲೆ ಕುಳಿತು ಚುರಮರಿ ತಿನ್ನಲಾರಂಭಿಸಿದ್ದರಿಂದ ಈ ಟ್ರೇನುಗಳ ಓಡಾಟ ನಿಲ್ಲಿಸಬೇಕಾಯಿತು. ಪೋಲೀಸರು ಬಂದು ರೇಲ್ವೆ ಅಧಿಕಾರಿಗಳನ್ನು ಬಿಡಿಸಿಕೊಂಡು ಹೋಗಬೇಕಾದರೆ ಸಾಕುಬೇಕಾಯಿತು.

ಸಿಯಾಲ್ದಾ 'ರೇತಿಸ'ಕ್ಕೆ ಸಿಗತೊಡಗಿದ ಮನ್ನಣೆ, ಜಾಹೀರಾತು, ಸವಲತ್ತುಗಳನ್ನು ನೋಡಿ ಹೌರಾದವರ ಬಾಯಲ್ಲಿ ನೀರೂರಿತು. ಅಂತೆಯೇ ಅವರೂ ಸಂಘದಲ್ಲಿ ನೇರ್ಪಡೆ ಹೊಂದಲು ನಿರ್ಧರಿಸಿದರು. ಮಹಾಸಭೆಯೊಂದರಲ್ಲಿ ಅವರಿಗೂ ಸಮಾನ ಹಕ್ಕುಗಳನ್ನು ಕೊಡಲಾಯಿತಲ್ಲದೇ ಉಪಾಧ್ಯಕ್ಷರನ್ನು ಹೌರದಿಂದ ಆರಿಸಿದರು. ಕಾಲಕ್ರಮೇಣ ಬಂಗಾಲದ ಎಲ್ಲ ತಿಕೀಟ-ರಹಿತ

ಪ್ರವಾಸಿಗಳು ಸಂಘಕ್ಕೆ ಸೇರಿದ್ದರಿಂದ ಅವರ ಸಂಖ್ಯೆ ಲಕ್ಷಕ್ಕೂ ಮೀರಿತು. 'ರೇತಿಸ'ದ ಸದಸ್ಯರು ಹೆಚ್ಚಾದಂತೆ ರೇಲ್ವೆ ಆದಾಯದಲ್ಲಿ ಭಾರೀ ಕಡಿತವುಂಟಾಯಿತು. ಈ ಕೊರತೆಯನ್ನು ತುಂಬಿಕೊಳ್ಳ ಲೋಸುಗ ರೇಲ್ವೆ ದರದಲ್ಲಿ ಹೆಚ್ಚಳ ಮಾಡಬೇಕೆಂದು ಸರಕಾರ ನಿರ್ಧರಿಸಿತು.

ಇದರಿಂದ ಅನ್ಯಾಯವಾಗಬಹುದಾಗಿದ್ದ ತಿಕೀಟುಕೊಳ್ಳುವ ವರ್ಗ ಕೂಡ 'ರೇತಿಸ'ದ ಮೊರೆಹೊಕ್ಕಿತು. 'ರೇತಿಸ'ದ ಕಾರ್ಯದರ್ಶಿ ಕೂಡಲೇ ದಿಲ್ಲಿಗೆ ತಂತಿಯನ್ನು ಕಳಿಸಿ ದರ ಹೆಚ್ಚಳದ ಈ ನಿರ್ಧಾರವನ್ನು ಜಾರಿಗೆ ತಂದರೆ ಎಲ್ಲ ರೇಲ್ವೆ ಓಡಾಟ ನಿಲ್ಲಿಸುವದಾಗಿ ಬೆದರಿಕೆ ಹಾಕಿದ. ರೇಲ್ವೆ ಮಂತ್ರಿಗಳು ಮಾತುಕತೆಗಾಗಿ 'ರೇತಿಸ'ದ ಅಧ್ಯಕ್ಷ ನನ್ನು ದಿಲ್ಲಿಗೆ ಕರೆಸಿಕೊಂಡರು. ಬಹಳಷ್ಟು ವಾದ-ವಿವಾದದ ನಂತರ ಆದ ಕೊರತೆಯನ್ನು ತಿಕೀಟಿನ ದರದಲ್ಲಿ ಹೆಚ್ಚಳ ಮಾಡದೇ ಇತರ ಸಾಮಗ್ರಿಗಳ ಮೇಲೆ ಕರ ಏರಿಸಿ ತುಂಬಿಕೊಳ್ಳಬೇಕೆಂದು ಎರಡೂ ಪಂಗಡವರು ಒಮ್ಮತದಿಂದ ನಿರ್ಧರಿಸಿದರು. ಈ ಯಶಸ್ಸಿನಿಂದ 'ರೇತಿಸ'ಕ್ಕೆ ರಾಜಕೀಯ ರಂಗದಲ್ಲೂ ಗೌರವದ ಸ್ಥಾನ ದೊರೆಯಿತು.

ಮುಂದೆ ಆರೇ ತಿಂಗಳಲ್ಲಿ ಪಶ್ಚಿಮ ಬಂಗಾಲದಲ್ಲಿ ಮಧ್ಯಕಾಲೀನ ಚುನಾವಣೆ ನಡೆಯಲಿತ್ತು. ಚುನಾವಣೆಯಲ್ಲಿ ಸ್ಪರ್ಧಿಸುವದೆಂದು 'ರೇತಿಸ' ನಿರ್ಧರಿಸಿತು. ಅರವತ್ತು ಉಮೇದುವಾರರನ್ನು ಅದು ನಿಲ್ಲಿಸಿತು. ಅದರಲ್ಲಿ ನಾಲವತ್ತೆರಡು ಜನ ಆರಿಸಿ ಬಂದದ್ದರಿಂದ ಸಂಯುಕ್ತ ಸರಕಾರದಲ್ಲಿ ಅದಕ್ಕೆ ಮಹತ್ವದ ಸ್ಥಾನ ಪ್ರಾಪ್ತವಾಯಿತು. ರೇಲ್ವೆ ಪ್ರವಾಸದ ಸುಖದುಃಖ ಅರಿತಿದ್ದರಿಂದ ಆರಿಸಲ್ಪಟ್ಟ ಓನಿಲ ಬೋಶುವಿಗೆ ಸಾರಿಗೆ ಮಂತ್ರಿ ಪದವನ್ನು ಒಪ್ಪಿಸಲಾಯಿತು. "ಪ. ಬಂಗಾಲದ ರೇಲ್ವೆ ಮಾರ್ಗಗಳಿಂದ ನಮಗೆ ಕೋಟ್ಯವಧಿ ರೂಪಾಯಿಗಳ ಹಾನಿಯಾದ್ದರಿಂದ ಮಹತ್ವದ ಹಲವಾರು ರೇಲ್ವೆ ರಹದಾರಿಗಳನ್ನು ರದ್ದುಪಡಿಸಬೇಕೆಂದು ಸರಕಾರ ತೀರ್ಮಾನಕ್ಕೆ ಬಂದಿದೆ. ಈ ವಿಷಯವಾಗಿ ಸಾರಿಗೆ ಮಂತ್ರಿಗಳು ತಮ್ಮ ಅಭಿಪ್ರಾಯ ತಿಳಿಸಬೇಕು." ಎಂದು ಬಂದ ಗುಪ್ತ ಪತ್ರಕ್ಕೆ ಮಂತ್ರಿಗಳು ಗುಪ್ತವಾಗಿಯೇ ಉತ್ತರಕೊಟ್ಟರು "ಜನತೆಯ ಈಗಿನ ಧೋರಣೆಯಿಂದ ರೇಲ್ವೆಗಳನ್ನು ಲಾಭದಾಯಕವಾಗಿ ನಡೆಸಲು ಅಸಾಧ್ಯ. ಆದ್ದರಿಂದ ರೇಲ್ವೆಯ ಮಹತ್ವ ತಿಳಿಸಿಕೊಡಲು ಮೂರು ತಿಂಗಳು ಎಲ್ಲ ಟ್ರೇನುಗಳನ್ನು ಬಂದ್ ಇಡಬೇಕು. ನಂತರ ಪ್ಲ್ಯಾಟ್‌ಫಾರ್ಮಿನ ಮೇಲೆ ರೈಲು ಬಂದಾಗ ಅದರಲ್ಲಿ ಪ್ರಯಾಣ ಮಾಡದವರಿಗಷ್ಟೇ ಬಿಟ್ಟು ಉಳಿದವರಿಗೆ ವಿಶ್ರಾಂತಿ ಮಂದಿರದಲ್ಲಿ ಇರುವ ಏರ್ಪಾಟು ಮಾಡಬೇಕು."

ರೇಲ್ವೆ ಓಡಾಟದಿಂದ ಎರಡು ಮೂರು ದಿನಗಳಲ್ಲಿ ಹಾಕಾರವೆ ರಾಜ್ಯದ ಸಾರಿಗೆ ಮಂತ್ರಿಗಳು ಹಸ್ತಕ್ಷೇಪ ಮಾಡಬೇಕೆಂದು ಜನ ಒತ್ತಾಯ ಮಾಡಲಾರಂಭಿಸಿತು, 'ಹಣವಿಲ್ಲದೇ ಸೌಕರ್ಯಗಳಿಲ್ಲ' ಎಂಬ ಸಿದ್ಧಾಂತ ಒಪ್ಪುವರಾದರೆ ತಾವು ದಿಲ್ಲಿಗೆ ಮಾತುಕತೆಗಾಗಿ ಹೋಗುವದಾಗಿ ಮಂತ್ರಿಗಳು ಹೇಳಿಕೆ ಹೊರಡಿಸಿದರು. ಪ್ರಯಾಣಿಕರಲ್ಲ ಈ ಮಾತು ಒಪ್ಪಿಕೊಂಡರೂ, 'ರೇತಿಸ'ದ ಸದಸ್ಯರೆಲ್ಲ ಮಂತ್ರಿಗಳನ್ನು ಹೀನಮಾನವಾಗಿ ಬಯ್ದರು. ಸೈನಿಕರ ಸಹಾಯದಿಂದ ತಿಕೀಟುಗಳನ್ನು ಪರೀಕ್ಷಿಸತೊಡಗಿದ್ದರಿಂದ ತಿಕೀಟ-ರಹಿತರ ಆಟ ನಡೆಯದಾಯಿತು. ಹತ್ತು ಹನ್ನೆರಡು ವರ್ಷಗಳಿಂದ ನಡೆಸಿಕೊಂಡು ಬಂದ ವ್ಯಾಪಾರವನ್ನು ಮರೆತು ಹೊಟ್ಟೆ ಹೊರೆದುಕೊಳ್ಳಲು ಅವರೆಲ್ಲ ಬೇರೆ ಉಪಾಯ ಹೂಡಬೇಕಾಯಿತು. ರೇಲ್ವೆಯ ಆದಾಯ ಹೆಚ್ಚಿಸಲು ಹೊಸ ಉಪಾಯಗಳನ್ನು ಹುಡುಕುವುದರಲ್ಲಿ ಮಂತ್ರಿ ಶ್ರೀ ಓನಿಲ ಬೋಶು ತೊಡಗಿದರು.

ಕರಾವಳಿಯ ಮಳೆಗಾಲ

ಪ್ರತಿವರ್ಷ ಬರಲಿರುವ ಮಳೆಗಾಲ, ಉತ್ತರಕನ್ನಡದಲ್ಲಿ ಕಳೆದ ಬಾಲ್ಯದ ನೆನಪುಗಳನ್ನು ಹೊತ್ತು ತರುತ್ತದೆ. ಬೇಸಿಗೆಯ ಉರಿಬಿಸಿಲು ಹೆಚ್ಚುತ್ತಿದ್ದಂತೆ, ಮಳೆರಾಯನ ಸ್ವಾಗತಕ್ಕೆ ಸಕಲ ಸಿದ್ಧತೆಗಳು ಪ್ರಾರಂಭವಾಗಿ ಬಿಡುವವು. ಮನೆ, ಮನೆಯಲ್ಲಿ ಹೆಣೆದ ತೆಂಗಿನಗರಿ ಹಾಗೂ ಹುಲ್ಲುಗಳ ಹೊದಿಕೆಗಳು ಕಟ್ಟಡಗಳನ್ನು ಹೇರಲು ಸಿದ್ಧವಾಗುತ್ತಿದ್ದವು. ಕೋತಿಗಳ ಜಿಗಿದಾಟದಿಂದ ಮತ್ತು ತೆಂಗಿನ ಕಾಯಿ, ಮಡಲು ಬಿದ್ದು ಜಾರಿದ ಒಡೆದ ಹಂಚುಗಳನ್ನು ಸರಿಪಡಿಸುವದು; ಹಿತ್ತಲಲ್ಲಿ ನೀರು ನಿಲ್ಲದಂತೆ ತಗ್ಗುಗಳನ್ನು ತುಂಬಿ ಕಾಲುವೆಗಳನ್ನು ಬಿಡಿಸಿಕೊಡುವದ್ದು; ಮಳೆಗಾಲಕ್ಕಿಡೀ ಸಾಲುವಂತೆ ದನಕರುಗಳ ಸೆಗಣಿರಾಶಿಯಿಂದ ಕುಳ್ಳು (ಬೆರಣಿ)ಗಳನ್ನು ತಟ್ಟುವದು; ಅಡಿಗೆ ಒಲೆ, ಬಚ್ಚಲೊಲೆಗೆ ಬೇಕಾದ ಉರವಲು, ಮುಖ್ಯವಾಗಿ ಕಲ್ಪವೃಕ್ಷ ತೆಂಗಿನ ಗಿಡದ ಸಕಲ ಅವಯವಗಳನ್ನೆಲ್ಲ ಬೇರ್ಪಡಿಸಿ ಶೇಖರಿಸುವದು; ಬಿದ್ದ ಒಣಗಿದ ಮರದ ಟೊಂಗೆಗಳನ್ನು ಭಾಗಗಳನ್ನು 'ಜಲಾವ್' (ಇಂಧನ) ಸೌದೆಯನ್ನಾಗಿಸುವದು ಮುಖ್ಯ ಚಟುವಟಿಕೆಯಾದರೆ, ಇವನ್ನೆಲ್ಲ ಮಳೆರಾಯನ ಪ್ರಕೋಪಕ್ಕೆ ತುತ್ತಾಗದಂತೆ ಸಂರಕ್ಷಿಸುವದೇ ಮಹಾಸಮಸ್ಯೆ!

ಜಡಿಮಳೆ ಪ್ರಾರಂಭವಾದಾಗ ಸಾರಿಗೆ ಸಂಪರ್ಕ ನಿಂತೇ ಹೋಗುತ್ತಿತ್ತು. ಹೀಗಾಗಿ ತರಕಾರಿ, ಮೀನು ದುರ್ಲಭವಾಗುತ್ತಿದ್ದವು. ಇಂಥ ದುರ್ಭರ ದಿನಗಳಿಗಾಗಿ ವಿಶೇಷ ಏರ್ಪಾಡು ಮಾಡಿಕೊಳ್ಳಲೇ ಬೇಕಿತ್ತು. ಬಲಿತ ಮೊಗ್ಗೆಕಾಯಿ, (ಬಣ್ಣದ ಸೌತೆಕಾಯಿ)ಗಳ ಸೊಂಟಕ್ಕೆ ಬಾಳೇ ಪಟ್ಟಿಗಳನ್ನು ಬಿಗಿದು, ಬಿದಿರಿಗೆ ನೇತುಹಾಕಿದಾಗ, ಯಾರೋ ಮಹನುಭಾವರ ಸ್ವಾಗತಕ್ಕಾಗಿ ಮನೆಯನ್ನು ಸಜ್ಜುಗೊಳಿಸಿದ ಭಾವನೆ ಬರುತ್ತಿತ್ತು. ಹಿತ್ತಿಲಲ್ಲಿ ಬೆಳೆದ ಸುವರ್ಣಗಡ್ಡೆ, ಕೆಸುವಿನ ಗಡ್ಡೆಗಳನ್ನು ಕಿತ್ತು, ತೊಳೆದು ದಾಸ್ತಾನು ಕೋಣೆಗೆ ಸೇರಿಸಬೇಕು. ಈರುಳ್ಳಿ ಗೊಂಚಲುಗಳನ್ನು ತೋರಣಾಕಾರದಲ್ಲಿ ತೂಗಹಾಕಬೇಕು. ಹುಣಸೆಹಣ್ಣು ಕೊಂಡು ತಂದು ಹೊರಕವಚ, ಬೀಜಗಳನ್ನು ಬಡಿದು ತೆಗೆದು, ನಾರನ್ನು ಬೇರ್ಪಡಿಸಿ, ಉಪ್ಪಿನೊಂದಿಗೆ ದೊಡ್ಡ ಮುದ್ದೆಗಳನ್ನು ಕಟ್ಟಿ, ಮಡಕೆಗೆ ಸೇರಿಸಬೇಕು. ಉದ್ದು, ಹೆಸರು ಕಡಲೆ ಇತ್ಯಾದಿ ಧಾನ್ಯಗಳನ್ನು ಸ್ವಚ್ಛಗೊಳಿಸಿ, ಒಣಗಿಸಿ, ಕೀಟಬಾಧೆ ತಗಲದಂತೆ ಎಣ್ಣೆ ಸವರಿ ಇಡಬೇಕು. ಗದ್ದೆಯಿಂದ ಬಂದ ಅಥವಾ ಖರೀದಿಸಿದ ಅಕ್ಕಿಯನ್ನು ಹುಲ್ಲಿನ ಮೂಟೆಗಳಲ್ಲಿ ರಕ್ಷಿಸಿಡಬೇಕು.

ಹಪ್ಪಳ-ಸಂಡಿಗೆಗಳ ಸಂಭ್ರಮ ಮನೆಮನೆಯಲ್ಲಿ ಕಂಡು ಬರುತ್ತಿತ್ತು. ಆದಿನಗಳಲ್ಲಿ ದಿನದ ಊಟ-ತಿಂಡಿಗಳನ್ನು ಮೊಟಕುಗೊಳಿಸಿಯೊ ಸಾದಾ ರೀತಿಯಲ್ಲೋ ಬಗೆಹರಿಸಲಾಗುತ್ತಿತ್ತು. ನೆರವಿಗಾಗಿ ಕೇರಿಯ ಹೆಂಗಳೆಯರು, ಹುಡುಗಿಯರು ಲಟ್ಟಣಿಗೆಯನ್ನು ಹಿಡಿದು ಬಂದೇ ಬಿಡುವರು. ಅವರ ಮನೆಯಲ್ಲಿ ಹಪ್ಪಳ ಹಿಟ್ಟು ಕಲಸಿದಾಗ ಈ ಮನೆಯವರು ಹೊರಡುವರು. ಉದ್ದಿನ ಬೇಳೆಯ ಕೆಂಪು ಹಪ್ಪಳ, ಹಲಸಿನ ಕಾಯಿ, ಬಾಳೇ ಕಾಯಿ, ಗೆಣಸಿನ, ಗೋದಿ ಹಪ್ಪಳ,ಗಳ ಉತ್ಪಾದನೆಯ ಸಡಗರ. ಲಟಾಯಿಸುವಿಕೆಯ ಹಪ್ಪಳದೊಂದಿಗೆ ಮಾತು-ಕತೆ. ಹರಟೆ, ಕಥೆ, ಪ್ರಶ್ನೋತ್ತರ. ಸಿನಿಮಾ ಸುದ್ದಿ, ಹಾಡು, ಒಗಟ, ಸ್ವಾರಸ್ಯ ಸಂಗತಿಗಳ ವಿತರಣೆ ನಡೆದೇ ಇರುತ್ತದೆ.

ಮಕ್ಕಳು ಕಿರಿ ಹಪ್ಪಳ ಮಾಡಿಕೊಟ್ಟವನ್ನು ದೊಡ್ಡವರು ಹಿರಿದಾಗಿಸುತ್ತಾರೆ. ಕೊಂಚ ದೊಡ್ಡಮಕ್ಕಳು ಲಟ್ಟಿಸಿ ತಯಾರಾದವನ್ನು ಬಿಸಿಲಲ್ಲಿ ಹರವಿ ಒಣಹಾಕುತ್ತಾರೆ. ಆಗೊಮ್ಮೆ ಈಗೊಮ್ಮೆ ಹಪ್ಪಳದ ಉಂಡೆಗೆ ತಗುತ್ತೆಗೆದು ಕೊಂಚ ಎಣ್ಣೆ ಹಾಕಿ ಬಾಯಲ್ಲಿಟ್ಟರೆ ಸ್ವಾದ ಅವರ್ಣನೀಯ! ಜಾಸ್ತಿ ಹಿಟ್ಟುಕೇಳಿ ಬೈಸಿಕೊಳ್ಳುವದು ಸಾಮಾನ್ಯ. ಹಪ್ಪಳಗಳ ಕಟ್ಟು ಕಟ್ಟಿ ಡಬ್ಬಾಗಳಿಗೆ ಸೇರಿಸಿದ ಬಳಿಕ ಸಂಡಿಗೆಯ ಸಂಭ್ರಮ. ಚಿಕ್ಕ ಮಗುವನ್ನು ಮಲಗಿಸಬಹುದಾದ ದೊಡ್ಡ ಕೆಸುವಿನ ಎಲೆಯ ಮೇಲೆ ಬೂದುಗುಂಬಳ ಸಂಡಿಗೆ. ಉದ್ದಿನ ಸಂಡಿಗೆ, ಜೋಳ, ಸಾಬುದಾಣೆ, ಬಟಾಟೆ ಇನ್ನೂ ನಾನಾತರದವು ಚಿಕ್ಕದೊಡ್ಡ ಆಕಾರಗಳನ್ನು ತಾಳುತ್ತವೆ. ಮಳೆಗಾಲದಲ್ಲಿ ಹಪ್ಪಳ, ಸಂಡಿಗೆ, ಬಾಳಕಗಳೇ ಗೃಹಿಣಿಯರಿಗೆ ಸಕಾಲಕ್ಕೆ ಒದಗದ ತರಕಾರಿಗೆ ಪರ್ಯಾಯಗಳು. ಜನಬಲವಿದ್ದಲ್ಲಿ ಗೋಧಿಯನ್ನು ನಯವಾಗಿ ರುಬ್ಬಿ ಸೇವಿಗೆ ಮಾಡಿಡುತ್ತಿದ್ದರು. ಸೊಕ್ಕಿದ್ದವರು ಕೂವೆಹಿಟ್ಟನ್ನು ಪಡೆಯಲು ಆದರ ಗಡ್ಡೆಗಳನ್ನು ಕೊಚ್ಚಿ, ಅರೆದು, ಸೋಸಿ, ಬಿಸಿಲಿಗೆ ಒಣಗಿಸಿ ಹಿಟ್ಟು ಪಡೆಯುತ್ತಿದ್ದರು. ಘಟ್ಟದ ಮೇಲಿನ ಕಾಡುಗಳಲ್ಲಿ ದೊರೆಯುವ ಆಪ್ಪೆಮಿಡಿ, ಜೀರಿಗೆ ಪರಿಮಳದ ಮಾವಿನಕಾಯಿಗಳನ್ನು ಕಷ್ಟಪಟ್ಟು ದೊರಕಿಸಿ, ತೊಳೆದು ಚೆನ್ನಾಗಿ ಒರೆಸಿ, ಅವುಗಳ ಮೇಲೆ ಭಾರ ಹೊರಿಸಿ, ಬಾಯಿ ನೀರೂರುವ ಮತ್ತು ವರ್ಷಗಟ್ಲೆ ತಾಳಿಕೆ ಬರುವ ಉಪ್ಪಿನಕಾಯಿ ತಯಾರಿಸುತ್ತಿದ್ದರು. ಈ ಉಪ್ಪಿನಕಾಯಿ, ತಯಾರಿಕೆ ಕೆಲವರಿಗಷ್ಟೇ ಹಸ್ತಗತವಾಗಿ ಸೀಝುನ್ನಿನಲ್ಲಿ ಅವರ ಕೈಗುಣಕ್ಕೆ ವಿಪರೀತ ಬೇಡಿಕೆ! ಗಂಜಿಯೂಟಕ್ಕೆ 'ಗೊರಸು'ಗಾಯಿ ಗೊಜ್ಜು ಬೇಕಲ್ಲ? ಗೊರಟೆ ಮಾವಿನಕಾಯಿಗಳನ್ನು ಉಪ್ಪಿನಲ್ಲಿ ಕಾಯ್ದಿರಿಸಲಾಗುತ್ತಿತ್ತು. ಕೋತಿ ಬೀಳಿಸಿದ, ಬಿರುಗಾಳಿಗೆ ನೆಲಕ್ಕುರುಳಿದ, ಬಳಸಿ ಉಳಿದ ಮಾವಿನಕಾಯಿಗಳನ್ನು ಸಿಪ್ಪೆತೆಗೆದು ಕೊಯ್ದು 'ಆಮಚೂರ್' ಮಾಡುವದೂ ಇತ್ತು. ಹುಣಿಸೆ ಹಣ್ಣಿಗೆ ಬದಲಾಗಿ ಇವು ಒದಗುತ್ತಿದ್ದವು. ಮಾವಿನ ಹಣ್ಣು ಹೇರಳವಾಗಿ ಪಡೆಯುವ ಅದೃಷ್ಟವಂತರ ಮನೆಯಲ್ಲಿ ಮಾವಿನರಸ ಒಣಗಿಸಿದ 'ಸಾಠ್' ಮಳೆಗಾಲದಲ್ಲಿ 'ಟೊಫಿ'ಯಾಗಿ ಮಕ್ಕಳಬಾಯಿ 'ತೋಡು' ತೀರಿಸುತ್ತಿತ್ತು.

ಮಳೆರಾಯನ ಆಗಮನ, ಯಕ್ಷಗಾನದ ಕಟ್ಟು ವೇಷ, ರಂಗಪ್ರವೇಶವನ್ನು ಮಾಡುವ ಆರ್ಭಟದಂತೆ, ಕಣ್ಣಿಗೆ ಕಟ್ಟುತ್ತಿತ್ತು. ಧೂಳಿಬೀಸುತ್ತ, ಮರಗಳನ್ನು ನೆಲಕ್ಕುರುಳಿಸುತ್ತ, ಅಬ್ಬರದ ಗಾಳಿ ಬೀಸುತ್ತಿತ್ತು. ಕಿವಿ, ಕಣ್ಣು, ಕಿವುಡು, ಕುರುಡಾಗಿಸುವ ಗುಡುಗು-ಮಿಂಚುಗಳು, ಇವುಗಳೆಲ್ಲ ಜನಮನದಲ್ಲಿ ಹುಟ್ಟಿಸುವ ಕಾತರ ಪ್ರತೀಕ್ಷೆಗಳು, ಬೇಸಿಗೆಯ ಭಯಂಕರ ಸೆಕೆಯನ್ನು ಇಲ್ಲವಾಗಿಸಿದ ನೆಮ್ಮದಿಯನ್ನುಂಟು ಮಾಡುತ್ತಿದ್ದವು. ಇಷ್ಟೆಲ್ಲ ಆರ್ಭಟ ನಡೆದರೂ ಮಳೆರಾಯ, ಕೂಡಲೇ ಪ್ರತ್ಯಕ್ಷ ಆಗಲೊಲ್ಲ! ಬರಿ ವಾಕರಿಕೆ ತೆಗೆಯುವ ನವಗರ್ಭಿಣಿಯಂತೆ! ನಂತರ ಕಾಣಿಸಿಕೊಳ್ಳುವ ಬಾಣಂತನದ ಸಂಭ್ರಮ ಮಾತ್ರ ಯಾರಿಂದಲೂ ಊಹಿಸಲಾಗದ ತೀವ್ರತೆಯಿಂದ ಕೂಡಿರುತ್ತದೆ. ಗಗನ ಮಂಡಲಕ್ಕೆ ಬಿರುಕು ಬಿದ್ದಂತೆ ಧಾರಾಕಾರ ಮಳೆ ಒಮ್ಮೆ ಪ್ರಾರಂಭವಾಯಿತೆಂದರೆ, ವಾರವಿಡೀ ನಿಲ್ಲದೇ ಹೋದೀತು! ಬಾವಿಗಳಲ್ಲಿ ನೀರೇರಿಸುವ ಮಳೆ ಬಂದಿದೆ. ಸೌತೆ ಕಾಯಿ, ಮೊಗ್ಗೆಕಾಯಿ ಕುಂಬಳ ಬಳ್ಳಿಗಳಿಗೆ ಹೂಬಿಟ್ಟು, ಮಿಡಿ ಹಿಡುಯುವ ಕಾಲದಲ್ಲಿ ಬಿಟ್ಟು ಬಿಟ್ಟು ಬರುವ ಮಳೆ 'ಮೊಗ್ಗೆಕಾಯಿ ಮಳೆ' ಅನಿಸಿಕೊಳ್ಳುತ್ತದೆ. ಕೆಲವೊಮ್ಮೆ ಕರಿಮೋಡಗಳು ಹಾರುತ್ತ ಹೋದಲ್ಲೆಲ್ಲ ನೀರು ಹನಿಸುತ್ತ ಹೋದಾಗ ಅಲ್ಲಲ್ಲಿ ನಾಯಿಕೊಡೆ (ಅಣಬೆ) ಗಳು ತಲೆಯೆತ್ತಲಾರಂಭಿಸುತ್ತವೆ. ಇದಕ್ಕೆ 'ಅಣಬೆ ಮಳೆ' ಎನ್ನುವದುಂಟು. ಒಮ್ಮಿಂದೊಮ್ಮೆ ಹವಾಮಾನ

ಬದಲಾಗಿ, ಕೆಟ್ಟಗಾಳಿ ಬೀಸಿ, ನೆಗಡಿ-ಕೆಮ್ಮುಗಳು ಕಾಣಿಸಿಕೊಂಡು ಹಲವರು ಅನಾರೋಗ್ಯದಿಂದ ಬಳಲುವಂತೆ ಆಗುತ್ತದೆ. ರೋಗಿಗಳು, ಹಣ್ಣುಹಣ್ಣು ಮುದಕರು, ದಣಿದ ಹಿರಿಯರು, ಜೀವನ ಕಂಡಿದ್ದು ಸಾಕಿನ್ನು! ಎಂದು ಈವಾಗಲೇ ಕೊನೆಯುಸುರು ಎಳೆಯುವದರಿಂದ, 'ಕಾಲರಾಯನ ಮಳೆ!' ಎಂಬ ಅನ್ವರ್ಥಕ ಹೆಸರು ಪಡೆದದ್ದೂ ಇದೆ. ವರ್ಷ ಆಗೊಮ್ಮೆ ಈಗೊಮ್ಮೆ ಮಳೆಬಿದ್ದು ಗಗನ ಮಂಡಲದಲ್ಲಿ ಕಾಮನ ಬಿಲ್ಲು ಮೂಡುವದಿದೆ. ಇದಕ್ಕೆ 'ಇಂದ್ರಧನುಷ್ ಮಳೆ' ಎಂದು ಕರೆಯುವದುಂಟು.

ಬೇಸಿಗೆ ರಜೆ ಕಳೆದು ಧೋ! ಧೋ! ಮಳೆ ಪ್ರಾರಂಭವಾದಾಗಲೇ ಮಕ್ಕಳಿಗೆ ಶಾಲೆಯ ಪುನರಾರಂಭವಾಗುತ್ತಿತ್ತು. ಅಂತೆಯೇ ಮಕ್ಕಳಿಗೆಲ್ಲ ತಾಳೆಯ ಹೊಸಕೊಡೆಗಳು ಕೈಗೆ ಬರುತ್ತಿದ್ದವು. ಕಳೆದು, ಕದ್ದು ಹೋಗದಂತೆ ಅದರ ಮೇಲೆ ಮಾಲಕನ ಹೆಸರನ್ನು ಕರೇ ಡಾಂಬರದಿಂದ ಬರೆದದ್ದು ಎಂಥ ದೃಷ್ಟಿಮಾಂದ್ಯದವರಿಗೂ ಗೋಚರಿಸುತ್ತಿತ್ತು. ಇಷ್ಟಾದರೂ ಢಾಲುಗಳಂತೆ ಅವನ್ನು ಬಳಸದೇ ಗದೆಯಂತೆ, ಪ್ರಯೋಗಿಸಿ ಛತ್ರಿಕಾಳಗದಲ್ಲಿ ಅವನ್ನು ಹರಿದೋ ಮುರಿದೋ ಹಿರಿಯರಿಂದ ಮಂಗಳಾರತಿ ತಪ್ಪಿದ್ದಲ್ಲ. ಹಿರಿಯರು ದೊಡ್ಡದಾದ ಛತ್ರಿ (ಸಾತ್ರೆ) ಉಪಯೋಗಿಸಿದರೆ ಹಳ್ಳಿಗರು ತಾಳೆಯ ಗರಿಗಳಿಂದಲೇ ಹೆಣೆದ 'ಗೊರಬು' ಬಳಸುತ್ತಿದ್ದರು. ಕೃಷಿಕರಿಗೆ, ಶ್ರಮಿಕರಿಗೆ ಅಡೆತಡೆಯಿಲ್ಲದೇ ಕೆಲಸ ಮುಂದರಿಸಲು ಅದು ಸಾಧ್ಯವಾಗಿಸುತ್ತಿತ್ತು. ಮಳೆಗಾಲದಲ್ಲಿ ಕಂಬಳಿಗಳಿಗೆ ವಿಶೇಷ ಬೇಡಿಕೆ. ಕಂಬಳಿ ಕೊಪ್ಪೆಯಿಂದ ಮಳೆಯ ಶೀತಬಾಧೆಯಿಂದ ರಕ್ಷಣೆ ಪಡೆಯಬಹುದು. ಶರೀರವನ್ನು ಬೆಚ್ಚಗಿಡುವಂತೆ ಸುಖನಿದ್ರೆಗೂ ಸಹಾಯ ಮಾಡುತ್ತದೆ, ಕಂಬಳಿ.

ಎಲ್ಲ ವಿದ್ಯಾರ್ಥಿಗಳದ್ದೂ ಒಂದೇ ಮೊರೆ. ಶಾಲೆ ಪ್ರಾರಂಭವಾಗುತ್ತಿದ್ದಂತೆ ವಿಪರೀತ ಜಡಿಮಳೆ ಪ್ರಾರಂಭವಾಗಿ ರಜೆಯನ್ನು ಘೋಷಿಸಬೇಕು. ನಂತರ ಸೂರ್ಯದೇವನು ಪ್ರತ್ಯಕ್ಷನಾಗಿ ಕಣ್ಣು-ಮುಚ್ಚಾಲೆ, ಚಂಡು, ಚಿಣಿಫಣಿ, ಗೋಲಿಗಳಾಟ ಆಡುವಂತಾಗಬೇಕು. ಇವೂ ಈಡೇರಿದಿದ್ದರೆ ಮನೆಯಲ್ಲಿ ಬೆಚ್ಚಗೆ ಕುಳಿತು ಬಕಾಸುರನ ಭಕ್ತರಾಗಬೇಕು. ಹಲಸಿನ ಹಪ್ಪಳ, ಅವಲಕ್ಕಿಗಳಿಂದ ಹಸಿವೆ ತಗ್ಗದು! ಹಲಸಿನ ಬೀಜ, ಗೆಣಸು, ಕೋನದ ಮೂಡ್ಲಗಳನ್ನು ಬಚ್ಚಲೊಲೆಯ ಬಿಸಿ ಬೂದಿಯಲ್ಲಿ ಸೇರಿಸಿಟ್ಟು ಸ್ಫೋಟಗೊಂಡಾಗ, ಅವನ್ನು ಸುಲಿದು ತಿಂದರೇ ತೃಪ್ತಿ! ಆಮೇಲೆ ಚೌಕಾಬಾರ ಚೆನ್ನಂಗಿ ಮಣೆಯಾಟ, ಸುತ್ತ ಗೋಲಾಕಾರದಲ್ಲಿ ಕುಳಿತು ಅಟ್ಟು ಮುಟ್ಟು ಅದಲು-ಬದಲು ಕಂಚೀ ಬದಲು ಆಡುವದು.

ಕಣ್ಣೋಡಿಸಿದಲ್ಲೆಲ್ಲ ನಿಸರ್ಗಮಾತೆ, ಹಚ್ಚ ಹಸುರಾಗಿ ಕಂಗೊಳಿಸುತ್ತಿರುತ್ತಾಳೆ. ನೆಲಕ್ಕೆ ಹಾಸಿದ ಪಾಚಿ ರತ್ನಗಂಬಳಿಯಾದರೆ, ಪಾಗಾರ-ಬಾವಿ ಕಟ್ಟೆಗಳಲ್ಲೆಲ್ಲ ಗಿಣಿಯ ಹಸಿರು ಪುಕ್ಕಗಳಂತಿರುವ ಫರ್ನಗಳು ತಲೆಯಾಡಿಸುತ್ತ ಕಂಗೊಳಿಸುತ್ತವೆ. ಅಲ್ಲಲ್ಲಿ ಮಡುಗಟ್ಟಿ ನಿಂತ ನೀರಿನಲ್ಲಿ ಸಂಸಾರ ಹೂಡಿ, ಸುಖ-ಶಾಂತಿ ಪಡೆಯುತ್ತಿರುವ ಕಪ್ಪೆಗಳ ಸಂತತಿ-ಭಕ್ಷಣೆಗೆ ಕೇರೆ ಹಾವುಗಳು ಹವಣಿಸುತ್ತಿರುತ್ತವೆ. ಬಂಡೆಗಳನ್ನು ಆವರಿಸಿದ ಮುಳ್ಳು ಪೊದೆಗಳೂ ಕೆಂಪು, ನೀಲಿ, ಜಾಂಬಳಿ ಹೂಗಳನ್ನು ಹೊತ್ತು ನಿಂತಿರುತ್ತವೆ. ವೃಕ್ಷಗಳ ಆಶ್ರಯ ಪಡೆದ ಪರಪುಷ್ಪ ಸೀತಾದಂಡೆಯೂ ಹೂವಿನ ಮಂಟಪ ಪಡೆದು ನಾಚುತ್ತ ನಿಂತಿರುತ್ತದೆ. ಅಲ್ಲಲ್ಲಿ ಬೆಟ್ಟದ ಕಲ್ಲುಗಳಿಂದ ಧುಮುಕುವ ಝರಿಗಳಿಂದ ನೂರಾರು ತಡಸಲುಗಳು ಕಾಣಿಸಿಕೊಳ್ಳುತ್ತವೆ. ತಪ್ಪಲಲ್ಲಿ ಬತ್ತದ ಸಸಿಗಳ 'ನಾಟಿ'ಯಲ್ಲಿ

ಮೈಮರೆತ ಗ್ರಾಮೀಣ ಹೆಂಗಳೆಯರ ವರ್ಣಮಯ ಸೀರೆಗಳ ಆಕೃತಿಗಳು ಛಾಯಾಚಿತ್ರಕಾರನಿಗೆ ದೊಡ್ಡ ಆಕರ್ಷಣೆಯಾಗಿ ಕಂಡರೆ ಆಶ್ಚರ್ಯವಿಲ್ಲ. ಸಹ್ಯಾದ್ರಿ ಪರ್ವತ-ಶಿಖರಗಳು, ತೇಲುವ ಕರಿಮೋಡಗಳನ್ನು ಬಿಗಿದಪ್ಪಿ, ಚುಂಬಿಸಿ, ಆನಂದ ಬಾಷ್ಪ ಹರಿಸಿಯೇ ಮುಂದೆ ಹೋಗಗೊಡುವವು. ಎಲ್ಲೆಡೆ ಬಿದ್ದ ಧಾರಾಕಾರ ಮಳೆಯಿಂದಾಗಿ ಹೊಳೆ ಹಳ್ಳ-ನದಿಗಳೆಲ್ಲ ತುಂಬಿ ಉಕ್ಕಿ ಹರಿಯದೇ ಉಳಿದಾವೇ? ಅಂತೆಯೇ ದಾರಿಯಲ್ಲಿ ಸಿಕ್ಕ ಗಿಡ-ಮರ, ಜಾನುವಾರ ತೆಂಗಿನ ಕಾಯಿಗಳನ್ನೆಲ್ಲ ಜೊತೆಗೊಯ್ದು ಕೊಚ್ಚಿಕೊಂಡು ಹರಿಯುತ್ತವೆ. ಅವನ್ನು ತಮ್ಮವನ್ನಾಗಿಸುವ ಹವಣಿಕೆಯಲ್ಲಿ ಕೆಲವರಾದರೂ ಜೀವ ಕಳೆದುಕೊಳ್ಳದೇ ಇರುವುದಿಲ್ಲ. ಅಬ್ಬರದ ಗಾಳಿಯಿಂದ ನದಿ-ಸಮುದ್ರಗಳಿಗೆ ತುಫಾನು ಬಂದಾಗ ನಾವೆಗಳು ಮುಳುಗಿ ಮಾಲುಗಳ ಹಾನಿ ಪ್ರಾಣಹಾನಿಗಳು ಸಾಮಾನ್ಯ.

ಹೊರಾಂಗಣದ ಚಟುವಟಿಕೆಗಳೆಲ್ಲ ಕಷ್ಟಮಯವಾದ್ದರಿಂದ ಹೆಚ್ಚಿನ ಹಬ್ಬ-ಹುಣ್ಣಿಮೆಗಳನ್ನು ಮಳೆಗಾಲದಲ್ಲಿ ಊರುಮಠಗಳಲ್ಲಿಯೇ ಆಚರಿಸುವರು. ತೇರು, ಜಾತ್ರೆ, ಬಂಡಿ ಹಬ್ಬ, ಹಗರಣಗಳೆಲ್ಲ ಬೇಸಿಗೆಯಲ್ಲಿ ಮುಗಿದಿರುತ್ತವೆ. ನೂಲು ಹುಣ್ಣಿವೆ, ಕೃಷ್ಣಾಷ್ಟಮಿ, ಗಣೇಶ ಚತುರ್ಥಿಗಳೆಲ್ಲ ಒಂದರ ಮೇಲೆ ಇನ್ನೊಂದು ಬರುತ್ತಲೇ ಇರುತ್ತವೆ. ಈ ದಿನಗಳಲ್ಲಿ ಸಿಹಿಭಕ್ಷ್ಯಗಳ ಊಟಮಾಡಿ, ಹೊಟ್ಟೆ ಭಾರವಾದ ಬಳಿಕ ಬೆಚ್ಚಗೆ ಕಂಬಳಿ ಹೊದ್ದು ಮಲಗಿಯೋ, ಒರಗಿಯೋ ಸಿಗುವ ಸುಖ ಸ್ವರ್ಗ ಲೋಕದಲ್ಲಿಯೂ ದುರ್ಲಭವೇ!

ಇಷ್ಟಾದರೂ, ಭವಿಷ್ಯಕ್ಕಾಗಿ ಹುಟ್ಟುನೆಲಕ್ಕೆ ಕಚ್ಚಿಕೊಳ್ಳದೇ ದೂರದೂರದ ಊರುಗಳಿಗೆ ಪಯಣ ಬೆಳೆಸದೇ ನಿರ್ವಾಹವೇ ಇರಲಿಲ್ಲ. ಉಚ್ಚ ಶಿಕ್ಷಣಕ್ಕಾಗಿ ಧಾರವಾಡಕ್ಕೆ ತೆರಳಿದಾಗ ಅಲ್ಲಿ ಕೊಡೆ ಬೇಕಿರಲಿಲ್ಲ. ಮಾರ್ಗದಂಚಿನ ಹುಲುಸಾಗಿ ಬೆಳೆದುನಿಂತ ಹುಣಿಸೇ ಮರದ ಆಶ್ರಯ ಪಡೆದೇ ಮಳೆಯನ್ನು ಕಳೆದು ಹೋಗಬಹುದು. ಎಂದು ಅರಿತಾಗ ಮೋಜೆನಿಸಿತ್ತು. ಅಮೇರಿಕೆಯ ನ್ಯೂಯಾರ್ಕ್ ರಾಜ್ಯದ ಸ್ಯಾರೆಕ್ಯೂಸ್‌ದಲ್ಲಿ ಒಂದೇ ದಿನದಲ್ಲಿ ಎಲ್ಲ ಋತುಗಳ ದರ್ಶನದಿಂದ ದಂಗಾಗಿ ಹೋಗಿದ್ದೆ. ಮುಂಜಾನೆ ಪುಲಕಿತಗೊಳಿಸುವ ಸೂರ್ಯಕಿರಣಗಳು ಬೇಸಿಗೆಯನ್ನು ಪ್ರತಿನಿಧಿಸಿದರೆ, ಆ ನಂತರ ಗಗನ ಮಂಡಲವನ್ನು ಮುಸುಕಿಡುವ, ನೀರು ಹೊತ್ತ ಕರಿಮೋಡಗಳು ಮಳೆರಾಯನ ಆಗಮನ ಸೂಚಿಸುತ್ತವೆ. ಸಂಜೆಯಾಗುತ್ತಿದ್ದಂತೆ ತಾಪಮಾನದಲ್ಲಿ ವಿಪರೀತ ಇಳಿಮುಖವಾಗಿ ರಾತ್ರಿಯಿಡೀ ಹಿಮವೃಷ್ಟಿಯಾಗಿ ಚಳಿಗಾಲದ ನಿಜದರ್ಶನವಾಗುತ್ತಿತ್ತು. ಉಪಜೀವನಕ್ಕೆಂದು ರಾಜಸ್ಥಾನದ ಜೊಬನೇರಕ್ಕೆ ಹೋದಾಗ ಮರುಭೂಮಿಯ ಮಹಾನ್ ವೃಕ್ಷವೆನಿಸಿದ ಔಡಲ ಮರದ ನೆರವು ಕೂಡ ಮಳೆಗಾಲದಲ್ಲಿ ಬೇಕಾಗುವುದಿಲ್ಲವೆಂದು ಪ್ರಥಮ ಬಾರಿಗೆ ಅರಿತೆ. ಈಗ ಬಹುಕಾಲ ಬೆಂಗಳೂರಿನಲ್ಲಿ ನೆಲೆಸಿ ಇಲ್ಲಿ ಅನಾವೃಷ್ಟಿ, ಅತಿವೃಷ್ಟಿಗಳನ್ನು ವರ್ಷವರ್ಷವೂ ಓದುತ್ತಲೇ ಎದುರಿಸುತ್ತ, ಬಾಲ್ಯದ ಮಳೆಗಾಲದ ದಿನಗಳನ್ನು ನೆನಸಿಕೊಳ್ಳುವದರಿಂದಲೇ ಅದೆಷ್ಟೋ ನೆಮ್ಮದಿ ಎನಿಸುತ್ತದೆ.

ಬೆಂಗಳೂರಿನ ಅನುಭವಗಳು

ಹನ್ನೆರಡು ತಾಸುಗಳ ಸತತ ಪ್ರಯಾಣದಲ್ಲಿ ರಸ್ತೆಸಾರಿಗೆ ಬಸ್ಸು, ಮೈಕೈಗಳನ್ನು ಚೆನ್ನಾಗಿ ಮರ್ದಿಸಿದ್ದರಿಂದ ದಣಿದ ಶರೀರ, ವಿಶ್ರಾಂತಿ ಮತ್ತು ಸುಖನಿದ್ರೆಗಾಗಿ ಹಾತೊರೆಯುತ್ತಿತ್ತು. ಬಸ್‌ನಿಲ್ದಾಣದಲ್ಲಿ ಇಳಿದು. "ಕಡಿಮೆ ಬಾಡಿಗೆಯ ಸ್ವಚ್ಛವಾದ ಹಾಟೇಲಿಗೆ ಕರೆದೊಯ್ಯಪ್ಪಾ" ಎಂದು ಒಟೋರಿಕ್ಷಾ (ಬೆಂಗಳೂರು ಭಾಷೆಯಲ್ಲಿ ಆಟೋ ಎನ್ನಬೇಕು.) ದವನಿಗೆ ಹೇಳಿದಾಗ, ಆತ ಹೆಚ್ಚಿನ ನಮ್ರತೆಯಿಂದ "ಆಯ್ತು ಸಾರ್" ಎಂದು ಸಾಮಾನು ಜೋಡಿಸಿ "ಕೂತುಕೊಳ್ಳಿ ಸಾರ್" ಎಂದು ವಿನಂತಿಸಿಕೊಂಡು, ಮೀಟರನ್ನು ಶೂನ್ಯಕ್ಕೆ ನಿಲ್ಲಿಸಿ ರಿಕ್ಷಾ ಓಡಿಸಿದ. ನನ್ನ ವಿಚಾರಲಹರಿಯೂ ಓಡಲಾರಂಭಿಸಿತು. 'ಧಾರವಾಡದಲ್ಲಿಯಾಗಿದ್ದರೆ, ಮೀಟರ ಇಲ್ಲವೇ ಇಲ್ಲ. ಅವನು ಸಾಮಾನು ಒಯ್ದು ಇಡುತ್ತಿರಲಿಲ್ಲ. ಸೌಜನ್ಯವಂತೂ ಕಂಡೇ ಇಲ್ಲ. ಎಷ್ಟೆಂದರೂ ಬೆಂಗಳೂರಿನವನು, ಮೈಸೂರ ಮಹಾರಾಜರ ಕಾಲದಿಂದ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದವರು....' ಎಂದುಕೊಳ್ಳುತ್ತಿದ್ದಂತೆ, ರಿಕ್ಷಾದವನು 'ಅಮರ್ ಹೋಟೇಲಿ'ನ ಮುಂದೆ ನಿಲ್ಲಿಸಿ, ಸಾಮಾನು ಇಳಿಸಿ, "ಎಲ್ಲಾ ಸರಿಯಾಗಿ ಇದೆಯೇ? ನೋಡಿಕೊಳ್ಳಿ" ಎಂದು ಸೂಚಿಸಿದ. ಮೀಟರು ರೂಪಾಯಿ ಎಂಟು ಪೈಸೆ ಐವತ್ತು ಎಂದು ಸೂಚಿಸಿದರೂ ಹತ್ತು ರೂಪಾಯಿ ಕೊಡುವ ಹೃದಯವಂತಿಕೆ ತೋರಿಸಿದ್ದರಿಂದ ಒಂದು ಸಲಾಮು ಬೇರೆ ಹಾಕಿ ಹೊರಟುಹೋದ. ಮಹಾರಾಜರು ಈಗಿಲ್ಲವಾದರೇನಂತೆ. ಆ ವೈಭವವನ್ನು ಉಳಿಸಿಕೊಂಡಿದ್ದಾರೆ! ಎಂದು ಸಂತೋಷವಾಯಿತು.

ಲಾಜಿಗೇ ದಿನಕ್ಕೆ ಇಪ್ಪತ್ತೈದು ರೂಪಾಯಿ ಬಾಡಿಗೆ ಎಂದು ಹೇಳಿದಾಗ ಎದೆ ಝಲ್! ಎಂದಿತು. ಆದಷ್ಟು ಬೇಗ ಬಿಡಾರ ಹೊಡಿದರೆ ಮಾತ್ರ ಉತ್ಪನ್ನದಲ್ಲಿ ಸಂಸಾರ ತೂಗಿಸಿಕೊಂಡು ಹೋಗಬಹುದು ಎನಿಸಿತು. ಸ್ನಾನ-ಊಟ ಮುಗಿಸಿ, ಸ್ವಲ್ಪ ಹಣ್ಣು ಕೊಂಡು ತಿನ್ನೋಣ ಎಂದು, ರಸ್ತೆ ದಾಟಿ ಕಣ್ಣೆತ್ತಿ ನೋಡಿದರೆ, ಎದುರಿಗೆ ನಾನು ಬೆಂಗಳೂರಿಗೆ ಬಂದು ಇಳಿದ ಬಸ್‌ಸ್ಟ್ಯಾಂಡು ಗೋಚರಿಸಿತು! ಎರಡು ನಿಮಿಷಗಳ ಕಾಲುನಡುಗೆಯ ದಾರಿಗೆ ಹತ್ತು ರೂಪಾಯಿ ಬೋಳಿಸಿಕೊಂಡೆನಲ್ಲ! ಎಂದು ಬೇಸರವಾಯಿತು. ಮುಂದೆಯಾದರೂ ಎಚ್ಚರಿಕೆಯಿಂದಿರಬೇಕೆಂದು ಹೋಟೇಲು ಸೇರುತ್ತಿದ್ದಂತೆ, ಅದೇ ರಿಕ್ಷಾವಾಲಾ ಹೊರಗೆ ಹೋಗುತ್ತಿದ್ದ. ಅವನಂತೆ ಇನ್ನಿತರ ರಿಕ್ಷಾವಾಲಾ ಮತ್ತು ಟ್ಯಾಕ್ಸಿ ಡ್ರಾಯವರರು ಬಂದು ಹೋಗುತ್ತಿದ್ದರು. 'ಹೀಗೇಕೆ'? ಎಂದು ಮಾಣೆಯನ್ನು ವಿಚಾರಿಸಿದಾಗ, "ಈ ರಿಕ್ಷಾವಾಲಾ ತಂದ ಪ್ರತಿಯೊಬ್ಬ ಗಿರಾಕಿಗೆ ಕಮೀಶನ್ ಸಿಗುತ್ತದೆ." ಎಂದು ಚುಟುಕಿನಲ್ಲಿ ವಿವರಿಸಿದ. ಹೋಟೇಲಿಗೆ ಕೊಟ್ಟ ಇಪ್ಪತ್ತೈದು ರೂಪಾಯಿಯಲ್ಲಿ ಎರಡು ರೂಪಾಯಿ ರಿಕ್ಷಾವಾಲಾನಿಗೆ ಹೋಗುತ್ತದೆ ಎಂದು ಲೆಕ್ಕಾಚಾರ ಹಾಕಿ ನಿದ್ರಾವಶನಾದೆ.

ಮಲ್ಲೇಶ್ವರಂ, ಮಹಾನಗರದ ಸ್ವಚ್ಛವಾದ ಜಾಗದಲ್ಲಿದೆ ಯಲ್ಲದೇ, ಎಲ್ಲ ಸೌಲಭ್ಯಗಳೂ ಹತ್ತಿರದಲ್ಲಿವೆ ಎಂದು ಅರಿತುಕೊಂಡದ್ದರಿಂದ ಅಲ್ಲಿ ನೆಲೆಸುವದೆಂದು ಗೃಹಶೋಧಕ್ಕೆ ಹೊರಡಲು ನಿರ್ಧರಿಸಿದೆ. ರಿಕ್ಷಾದವರ ಮೇಲೆ ನಂಬಿಗೆ ಹಾರಿದ್ದರಿಂದ, ಬಸ್‌ಗಳ ಮಾರ್ಗ ಸರಿಯಾಗಿ

ಗೊತ್ತಿಲ್ಲದ್ದರಿಂದ ನಡೆದುಕೊಂಡೇ ಹೊರಟೆ. ಮಹಾಂತೇಶ ಟಿಫಿನ್ ರೂಮ್ಸ್ ಎಂಬ ಬೋರ್ಡೊಂದು ಕಣ್ಣಿಗೆ ಬಿತ್ತು. ಹಿತಚಿಂತಕನೋರ್ವನು ರಾಜಧಾನಿಗೆ ಹೋದವನು "ಎಮ್.ಟಿ.ಆರ್.ದ ತಿಂಡಿಯ ರುಚಿ ನೋಡಲೇಬೇಕು" ಎಂದಿದ್ದ. ಬೆಳಿಗ್ಗಿನ ನಾಸ್ತಾ ಆಗಿರದ್ದರಿಂದ, ಈ ಹೊಟಲ್ಲಿನ ಮೊಟಕುನಾಮ ಎಮ್.ಟಿ.ಆರ್. ಇರಬೇಕೆಂದು ಒಳಹೊಕ್ಕೆ. ಆದರೆ ನನ್ನ ಹಿತಚಿಂತಕ, ರಸವತ್ತಾಗಿ ವರ್ಣಿಸಿದ ಜನಸಂದಣಿಯಾಗಲಿ, ಪ್ರವೇಶಕ್ಕಾಗಿ ನಿಂತ ಸಾಲಾಗಲಿ, ಶುದ್ಧ ಸಾಮಗ್ರಿ, ಗಮಗಮ ತುಪ್ಪದ ವಾಸನೆಯ ತಿಂಡಿಯಾಗಲಿ ಕಾಣಿಸಲಿಲ್ಲ! ಹೆಚ್ಚಿನ ಆಸನಗಳು ಖಾಲಿಯಾಗೇ ಇದ್ದವು. ತಿಂಡಿ-ತೀರ್ಥಗಳ ಜೊತೆಗೆ ವಿರಾಮಕ್ಕಾಗಿ ಬಂದವರಿಗೆ ಸಮಯದ ಅಭಾವ ಇದ್ದಂತಿರಲಿಲ್ಲ.

ಅಂಚೆಖಾತೆಯ ಸಮವಸ್ತ್ರಧಾರಿಯೊಬ್ಬನು ಸಂಗಡಿಗನೊಂದಿಗೆ ಗುಟ್ಟಾಗಿ ಮೆಲುದನಿಯಲ್ಲಿ ವಿಚಾರವಿಮರ್ಶೆ ನಡೆಸಿದ್ದ. ಅಂಚೆಯವ ಆಚೆ ಈಚೆ ಕಳ್ಳದೃಷ್ಟಿ ಬೀರಿ ಖಾಕೀ ಕೈಚೀಲದಿಂದ ಪತ್ರಿಕೆ-ಪುಸ್ತಕಗಳನ್ನೆತ್ತಿ ಇನ್ನೊಬ್ಬನಿಗಿತ್ತ. ಅವನು ಅವುಗಳನ್ನು ಚಲ್ಲಣ ಮತ್ತು ಕಿಬ್ಬೊಟ್ಟೆಗಳ ನಡುವೆ ಸೇರಿಸಿ ಒಪ್ಪಿಕೊಂಡಷ್ಟು ಹಣ ಕೊಟ್ಟ. ಅಂಚೆಯವನು ತನ್ನ ವ್ಯಾಪಾರಿ ಬುದ್ಧಿಯನ್ನೆಲ್ಲ ಬಳಸಿ ಹೊಟೇಲಿನ ಬಿಲ್ಲನ್ನು ಅವನಿಂದಲೇ ಕೊಡಿಸಿದ. ಇನ್ನೊಂದು ಟೇಬಲನ್ನು ಬಳಸಿ ಕುಳಿತ ಮೂವರು ಒಂದು ಕಪ್ ಕಾಫಿ ತರಿಸಿ, ಮೂರು ಕಪ್‌ಗಳಲ್ಲಿ ಹಂಚಿಕೊಂಡು ಕುಡಿಯುತ್ತಿದ್ದರು. ಲಕ್ಷಗಟ್ಟಲೇ ರೂಪಾಯಿಗಳ ವ್ಯವಹಾರದ ಮಾತುಕತೆ ನಡೆಸಿದ್ದರು. ಅವರು ಮೇಲಿಂದ ಮೇಲೆ ಬಳಸುವ ಸೈಟು, ಪ್ಲಾಟು, ಹೌಸ್-ರೆಂಟ್, ಓನರ್, ಕಮೀಷನ್ ಇತ್ಯಾದಿ ಶಬ್ದಗಳಿಂದ ಆಸ್ತಿ-ಪಾಸ್ತಿ, ಖರೀದಿಸಿ ಮಾರಾಟ ಮಾಡಿಕೊಡುವ ದಲ್ಲಾಳಿಗಳೆಂದು ಸುಲಭವಾಗಿ ಅರಿಯುವಂತಿತ್ತು. ಅಲ್ಲೊಬ್ಬ ಇಲ್ಲೊಬ್ಬ ಹಣ್ಣು-ಹಂಪಲು, ಕಾಯಿಪಲ್ಲೆಯವರು ಅಂದಿನ ವ್ಯಾಪಾರದ ವೈಶಿಷ್ಟ್ಯ ಕುರಿತು ಚರ್ಚೆ ನಡೆಸಿದ್ದರು.

ಬೆಣ್ಣೆ-ತುಪ್ಪಗಳ ಪರಿಮಳ ನಿರೀಕ್ಷಿಸಿ ಒಳಹೊಕ್ಕವನಿಗೆ ಬೆವರಿನ ವಾಸನೆಯೊಂದನ್ನೇ ಮೂಗು ಗುರುತಿಸುವಂತೆ ಆಯಿತು. ತಿನ್ನುವ ಶಾಸ್ತ್ರ ಮುಗಿಸೋಣವೆಂದು, ತಿಂಡಿ-ಸೂಚಕ ಬೋರ್ಡು ನೋಡಿದೆ. ಅದರಲ್ಲಿ ಕೇಸರಿಬಾತು, ಪೊಂಗಲ್, ಪಕೋಡ, ವಾಂಗಿಬಾತು, ಚೌಚೌಬಾತು ಎಂದು ಹಲವಾರು ತಿಂದರಿಯದ ತಿಂಡಿಗಳನ್ನು ಹೆಸರಿಸಿದ್ದರು. ಏನು ತಿನ್ನಬೇಕೆಂದು ಗೊತ್ತಾಗದೇ ಸಹ ಗಿರಾಕಿಗಳನ್ನು ಅನುಕರಿಸಿದರಾಯಿತೆಂದು, ಅವರತ್ತ ಲಕ್ಷ್ಯಹಾಕಿದಾಗ, ಕೇಸರಿಬಾತು ಕೇಳಿದವನಿಗೆ ಶಿರಾ, ಖಾರಾಬಾತ್ ಬೇಕಾದವನಿಗೆ ಉಪ್ಪಿಟ್ಟು, ಮಾಣಿ ತಂದಿಟ್ಟ. "ಚೌಚೌಬಾತ್" ಏನಾದರೂ ಹಿಂದೆ ಚೀನಿ-ಭಾರತೀಯರ ಮಧುರ ಸಂಪರ್ಕದಿಂದ ಹುಟ್ಟಿಕೊಂಡಿರುವ ಅಥವಾ ಚೌ-ಎನ್-ಲಾಯ್‌ರ ಭಾರತಭೇಟಿಯ ಸಂದರ್ಭದಲ್ಲಿ ಕಲ್ಪನೆಯುಳ್ಳ ನಳರಾಯ ಸೃಷ್ಟಿಸಿದ ಭಾವೈಕ್ಯತೆಯ ತಿಂಡಿಯಿರಬಹುದೇ! ಎಂದು ಯೋಚಿಸುತ್ತಿದ್ದಂತೆ ಒಂದೊಂದು ತುತ್ತು ಶಿರಾ ಮತ್ತು ಉಪ್ಪಿಟ್ಟು ಇದ್ದ ಕಿರಿಪ್ಲೇಟು ಬಂದಿತು! ರಾಯಿಸ್‌ಬಾತ್ (ಮಿಲ್ಕ ಡೈರಿಯಂತೆ ಇದೂ ಆಕಳ ಗೋಮೂತ್ರ) ಎಂದಂತೆ ತರಕಾರಿ ಹಾಕಿದ ಅನ್ನ. ಪಕೋಡ್ ಎಂದರೆ ಭಜಿ ಎಂದು ಅರಿತುಕೊಂಡೆ. ಇದೆಲ್ಲ ಬಗೆಹರಿಯುವದಿಲ್ಲವೆಂದು ಎದುರಿಗೆ ಕುಳಿತವನು ಆರ್ಡರ್ ಮಾಡಿದ್ದನ್ನೇ ನಾನು ಕೇಳುವದೆಂದು ನಿರ್ಧರಿಸಿದಾಗ ಆ ಪುಣ್ಯಾತ್ಮ "ಖಾಲಿ ಸಾಂಬಾರ್" ಎನ್ನಬೇಕೇ? ಬರೆ ಸಾಂಬಾರ್ ತಿನ್ನಲು ಮನಸ್ಸಾಗದೇ ನಿಂತ ಮಾಣಿಗೆ "ಒಂದು ಕಪ್ಪು ಚಹಾ

ಕೊಡಪ್ಪಾ" ಎಂದೆ. ಮಾಣಿ ಕಕ್ಕಾವಿಕ್ಕಿಯಾಗಿ, "ಏನು ಸಾರ್" ಎಂದು ಇನ್ನೊಮ್ಮೆ ಕೇಳಿದಾಗ 'ಚಹಾ' ಎಂದು ಬಿಡಿಸಿ ಎರಡು ಬಾರಿಹೇಳಿದೆ.

ಎದುರಿಗಿದ್ದವನ "ಖಾಲಿ" ಆರ್ಡರು ರೂಪ ತಾಳಿ ಬಂದಿತು. ಎರಡು ಚಟ್ನಿವಿರಹಿತ ಬರೆ (ಖಾಲಿ!) ದೋಸೆಗಳ ಜೊತೆಗೆ ಹೊಗೆಯಾಡುವ ಸಾಂಬಾರು ಇತ್ತು. ಅರ್ಥಾತ್ ಖಾಲಿ ಆರ್ಡರ್ ಹಿಗ್ಗಿಸಿದಾಗ, "ಎರಡು ಖಾಲಿ ದೋಸೆ, ಜೊತೆಗೆ ಚಟ್ನಿಯ ಬದಲಾಗಿ ಸಾಂಬಾರ್" ಎಂದು ಅರ್ಥೈಸಿಕೊಂಡೆ. ಒಂದು ತೊಟ್ಟು ಎಣ್ಣೆ ಹಾಕದೇ ಬೆರಣಿಯಷ್ಟು ದಪ್ಪ, ಒಂದೇ ಮಗ್ಗುಲಿಗೆ ಹುರಿದ, ತೀರ ಮೆತ್ತಗಿನ ದೋಸೆಗಳನ್ನು ಇನ್ನಷ್ಟು ಹಿಚುಕಿ ಮುದ್ದೆಮಾಡಿ, ಸಾಂಬಾರದಲ್ಲಿ ತೇಲಿಬಿಟ್ಟು ಗಬಕ್ ಎಂದು ಗಂಟಲಲ್ಲಿ ಇಳಿಬಿಡುವ ಪದ್ಧತಿ ವಿಚಿತ್ರವಾಗಿತ್ತು. ಕುಡಿಯಲು ಕೊಟ್ಟ ನೀರಿನಿಂದ, ದೋಸೆ ಹಾಕಿ ಕೊಟ್ಟ ಪ್ಲೇಟಿನಲ್ಲಿ ಕೈತೊಳೆದು ತನ್ನ ಸ್ವಚ್ಛತೆಯನ್ನು ಮಹಾರಾಯ ಕಾದುಕೊಂಡರೂ ಎದುರು ಕುಳಿತವನ ಮೇಲೆ ಆ ನೀರು ಸಿಡಿಯಬಹುದೆಂಬ ಕಾಳಜಿ ಇದ್ದಂತಿರಲಿಲ್ಲ. ಒಂದು ಗುಟುಕು ನೀರು ಬೇರೆ ಬಾಯಲ್ಲಿ ಹಾಕಿಕೊಂಡು ಮುಕ್ಕಳಿಸಿದಾಗ, ಅದನ್ನೆಲ್ಲಿ ಉಗುಳುತ್ತಾನೋ ಎಂದು ಗಾಬರಿಯದಾಗ, ಉದರಕ್ಕೆ ಸೇರಿಸಿಬಿಟ್ಟ!

ಚಹಾ ಇಲ್ಲದೇ ಬರಿಗೈಯಲ್ಲಿ ಬಂದ ಮಾಣಿಯನ್ನು ಪ್ರಶ್ನಾರ್ಥಕವಾಗಿ ನೋಡಿದಾಗ, ತಾಳ್ಮೆಯಿಂದ 'ಇರಿ' ಎಂದು ಮುಖಭಾವದಿಂದಲೇ ಸೂಚಿಸಿ ಎದುರಿಗೆ ಕುಳಿತವನಿಗೆ ಇಡ್ಲಿ-ವಡೆ ಪೂರೈಸಿದ. ಅವನೂ ತಾಳ್ಮೆಯಿಂದ ಅವನ್ನು ಹಿಟ್ಟಿನ ಮುದ್ದೆಗೆ ಪರಿವರ್ತಿಸಿ, ಚಟ್ನಿ ಸಾಂಬಾರ್ ಸೇರಿಸಿ ಇಡಿಯದನ್ನು ಪ್ರವಾಹಿಪದಾರ್ಥವನ್ನಾಗಿಸಿ ಸುರಿಯಲಾರಂಭಿಸಿದ. ಬೆಳಗಿನಿಂದ ದುಡಿದ, ಮೊದಲಿನ ಮಾಣಿಯನ್ನು ನಾಶ್ತಾಕ್ಕೆ ಕಳಿಸಿ ಎರಡನೆಯವನು ಹಾಜರಾದ. ಇನ್ನೊಮ್ಮೆ ಚಹಾಕ್ಕೆ ಆರ್ಡರ್ ಕೊಟ್ಟೆ. ಎದುರಿನವನ ಕಾಫಿ ಬಂದರೂ ನನ್ನ ಸ್ಪೆಶಲ್ ಚಹಾಕ್ಕೆ ಎಸರಿಟ್ಟಿರಬೇಕು, ಈಗ ತಂದಾನು! ಎಂದು ತಾಜಾಪಾನೀಯಕ್ಕೆ ಕಾದು ಕುಳಿತೆ. ಎದುರಿನವನು ಕಪ್ ತುಂಬಲು ಹಾಕಿದ ನೊರೆಯನ್ನು ಟೇಬಲ್ ಮೇಲೆ ಸುರಿದು, ಕಪ್ಪಿನ ಬುಡವನ್ನು ಸವರಿ, ಒಂದೇ ಬಾರಿ ಕಾಫಿ ಗುಟುಕರಿಸಿ ಎದ್ದ. ಹೊಟೇಲ್ ಮಾಲಿಕನೇ ಖುದ್ದಾಗಿ ಪ್ರತ್ಯಕ್ಷನಾದಾಗ ಗಾಬರಿಯಾಯಿತು! "ಸಾರ್, ನಮ್ಮಲ್ಲಿ ಅಪ್ಪಟ ಹಾಲು, ಚಹಾಗಳ ಪೂರೈಕೆಯಿಲ್ಲ" ಎಂದು ನಮ್ರತೆಯಿಂದ ಆತ ನಿವೇದಿಸಿಕೊಂಡ. ಕಾಫಿ ಚಹಾ ಪೂರೈಸದ ಇದೆಂತಹ ಚಹಾದಂಗಡಿ ಎಂದು ಹೇಳಿ ಏಳುವದರಲ್ಲಿ ಇದ್ದೆ. ಅಷ್ಟರಲ್ಲಿ ಏನೋ ಪ್ರಕಾಶ ಬಿದ್ದಂತಾಗಿ, ಮಾಲೀಕನು, "ಕ್ವಾಪಾ ಮಾಡ್ಕೋಬೇಡಿ, ಚಹಾ ಬರುತ್ತೆ" ಎಂದು "ಏಯ್ ಚಂದ್ರು, ಜಲ್ದಿ ಇವರಿಗೆ ಒಂದು ಟೀ ತಂದ್ಕೊಡು" ಎಂದು ಸ್ವಸ್ಥಾನಕ್ಕೆ ಮರಳಿದನು. ಟೀ ಕಪ್ ತಂದ ಮಾಣಿಯ ಮುಖದಲ್ಲಿ "ಈ ವಿಚಿತ್ರ ಪ್ರಾಣಿಗೆ ಟೀ ಹೇಳಲು ಬಾರದೇ?" ಎಂಬ ಭಾವ ಮೂಡಿತ್ತು. ಆತ ತಂದಿಟ್ಟ ಪಾನೀಯ, ಚಹಾ-ಕಾಫಿ ನೀರುಗಳ ಕಾಕ್‌ಟೇಲ್ ಆಗಿತ್ತು. ಅನಂತರ ಎಂದೂ ಬೆಂಗಳೂರಿನಲ್ಲಿ ಚಹಾ ಅಥವಾ ಟೀ ಕುಡಿಯುವ ಸಾಹಸಮಾಡಲಿಲ್ಲ.

ಹಣ ಕೊಡುತ್ತ ಮಾಲಕನಿಗೆ, "ಮೇಲ್ಲೇಶ್ವರದಲ್ಲಿ ಯಾವುದಾದರೂ ಚಿಕ್ಕ ಮನೆ ಬಾಡಿಗೆಗೆ ಸಿಗಬಹುದೇ?" ಎಂದು ವಿಚಾರಿಸಿದಾಗ, "ಒನ್ ಮಂತ್ಸ್ ರೆಂಟ್ ಕಮಿಷನ್ ಅಂತಾ ಕೊಟ್ರೆ ಹೌಸ್ ನೋಡಬಹುದು ಸಾರ್" ಎಂದು ಬಂದ ಉತ್ತರದಿಂದ ಸಮಸ್ಯೆ ಅರ್ಧ ಬಗೆಹರಿದ ನೆಮ್ಮದಿ ಆಯಿತು. ಪರಿಸರ ಹೇಗಿರಬೇಕು, ಮನೆ ಎಷ್ಟು ದೊಡ್ಡದು ಬೇಕು, ಕೋಣೆ ಇತ್ಯಾದಿ,

ಬಾಡಿಗೆ ಎಷ್ಟು ಕೊಡಲಿದ್ದೀರಿ? ಠೇವಣಿ ಹಣ ಎಷ್ಟು ಇಡಲು ತಯಾರಿದ್ದೀರಿ? ಎಂದು ವಿಚಾರಿಸಿ ಒಬ್ಬ ಸಹಾಯಕನನ್ನು ಕರೆದು ಆಟೋ ಹತ್ತಿಸಿಯೇಬಿಟ್ಟರು. ಹೀಗೆ ಮಾಡಿದ್ದು ಸರಿಯಾಯಿತೇ ಎಂದು ತೂಗಿ ನೋಡುತ್ತಿದಾದಾಗ ಜೊತೆಗೆ ಬಂದ ಸುಬ್ರಮಣಿ, ಗಿರಾಕಿಯ ಆರ್ಥಿಕ ಆಳವನ್ನು ಪತ್ತೆಹಚ್ಚುವ ಯತ್ನದಲ್ಲಿದ್ದ. ಕೋದಂಡರಾಮಪುರದ ಅತಿ ಎತ್ತರ ಕಟ್ಟಡದ ಮುಂದೆ ರಿಕ್ಷಾ ನಿಲ್ಲಿಸಿದ. ಅವನು ತಪ್ಪು ಸ್ಥಳಕ್ಕೆ ತಂದಿರಬಹುದೇ ಎಂಬ ಅನುಮಾನ ಬಂದಿತು. ಮಹಡಿಯ ಪಾವಟಣಿಗೆಗಳನ್ನು ಹತ್ತುತ್ತಿದ್ದಂತೆ ಭಯವಾಯಿತು. ತೀರ ಇಕ್ಕಟ್ಟಾದ ಪಾವಟಣಿಗೆಯ ಮೇಲೆ ಲೆಕ್ಕಮಾಡಿ ಹೆಜ್ಜೆ ಇಡಬೇಕು. ತೂಕ ತಪ್ಪಿದರೆ ತಿರುಗಿ ನೇರ ರಸ್ತೆ ಸೇರುವಂತಿತ್ತು. ಯಾರೋ ಆಡನ್ನು ಬೇರೆ ಮಾರ್ಗದಲ್ಲಿ ಕಟ್ಟಿದ್ದರು. ಅದು 'ಬ್ಯಾ'! ಎಂದು ಸ್ವಾಗತಿಸಿತು. ಮೇಲ್ಮಹಡಿಯ ಬಾಡಿಗೆದಾರರು ಒಣಹಾಕಿದ ಸೀರೆಯ ನೀರ ಹನಿಯ ತೀರ್ಥಪ್ರಕ್ಷಾಳನೆಯಾಯಿತು. ಈ ಭಾರಿ ದೇಹ ಇಷ್ಟು ಮೆಟ್ಟಿಲು ಏರಿ ಇಳಿಯುವದು ಅಸಾಧ್ಯವಾದ್ದರಿಂದ ಈ ಮನೆ ಬೇಡವೆಂದು ಹೇಳುವದರಲ್ಲಿದ್ದೆ. ಆದರೆ ಸಾಕ್ಷಾತ್ ಮನೆ ಮಾಲಕ ಮುಗುಳುನಗೆಯ ವಿನಯದಿಂದ ಸ್ವಾಗತಿಸಿ ನಮಸ್ಕರಿಸಿ ಮನೆಯೊಳಗೆ ಕರೆದೊಯ್ದು.

"ಬಾಡಿಗೆದಾರರನ್ನು ಸುಲಿಯುವ ಇಷ್ಟ ನಮಗಿಲ್ಲ. ದೇವರು ಯಾವುದಕ್ಕೂ ಕೊರತೆ ಮಾಡಿಲ್ಲ. ಇಂಥ ಇನ್ನೆರಡು ಕಟ್ಟಡಗಳಿವೆ. ಹೋಲ್‌ಸೇಲ್, ರಿಟೇಲ್, ಗ್ರೋಸರಿ ಅಂಗಡಿಗಳಿವೆ. ಮನೆಗಳನ್ನು ಖಾಲಿ ಇಡಬಾರದು. ಪರವೂರಿನಿಂದ ಬಂದವರಿಗೆ ಅನಾನುಕೂಲವಾಗಬಾರದು ಎಂದು ಕೊಡ್ತಾ ಇದ್ದೇವೆ" ಎಂದು ಮುಖ್ಯಬಾಗಿಲ ಮೆಟ್ಟಲಿಗೆ ಅಡ್ಡವಾಗಿದ್ದ ಬಾಗಿಲೊಂದನ್ನು ತೆರೆದು 'ಇದು ಕಕ್ಕಸು' ಎಂದು ತೋರಿಸಿದ. ಅಲ್ಲಿ ಕೂಡ್ರಲು ಸ್ಥಳಾಭಾವ ಇದ್ದುದರಿಂದ, "ಇದು ನಿಂತೇ ಬಳಸುವ ಹೊಸ ಮಾದರಿಯೇ?" ಎಂದ ನಾಲಿಗೆಗೆ ಬಂದ ಪ್ರಶ್ನೆಯನ್ನು ತಡಹಿಡಿದೆ. "ಡ್ರಾಯಿಂಗ್ ರೂಮಿ"ನಲ್ಲಿ ಚಿಕ್ಕ ಟೇಬಲ್ ಹಿಡಿಸುವಷ್ಟು ಜಾಗ, ಒಳಹೊಕ್ಕರೆ, ತಿರುಗಾಡಲೂ ಸಾಧ್ಯವಾಗದೆ, ಹಿಂಗಾಲಿನಿಂದ ಹೊರಟಲ್ಲಿಗೆ ಬರಬೇಕಾಗಿದ್ದ ಗೂಡು ಅಡಿಗೆಮನೆ, ಅಷ್ಟೇ ವಿಶಾಲವಾಗಿದ್ದ ಬಚ್ಚಲುಮನೆ, ತಲೆ ಕಾಲು ಗೋಡೆಗೆ ಬಡಿಸಿಕೊಳ್ಳುತ್ತ ವಿರಮಿಸಬೇಕಾಗಿದ್ದ ಬೆಡ್‌ರೂಂ, ಗಾಳಿ ಬೆಳಕುಗಳಿಂದ ಒಳ್ಳೆಯ ರಕ್ಷಣೆ ಒದಗಿಸಿದ್ದ, ಪುಣ್ಯಾತ್ಮ ತಿಂಗಳಿಗೆ ಐದು ನೂರು ಬಾಡಿಗೆ, ಹತ್ತು ಸಾವಿರ ಮುಂಗಡ ಹಣ ಎಂದಾಗ ತಲೆ ಸುತ್ತಿಬರುವಂತೆ ಆಯಿತು. "ಕ್ವಿಕ್ ಆಗಿ ಡಿಸೈಡು ಮಾಡಿಬಿಡಿ, ಡಿಮ್ಯಾಂಡ್ ತುಂಬಾ ಇದೆ ಸರ್, ಡೀಸೆಂಟ್ ಮನೆಗಳಿಗೆ" ಎಂದು ಎಚ್ಚರಿಸಿದ. "ನಮ್ಮದು ತೀರ ಚಿಕ್ಕಸಂಸಾರ, ಈ ಮನೆ ಸ್ವಲ್ಪ ದೊಡ್ಡದೇ!" ಎಂದು ಹಾರಿಕೆ ಉತ್ತರ ಕೊಟ್ಟು ಮೆಟ್ಟಲುಗಳನ್ನು ಅತ್ಯಂತ ಎಚ್ಚರದಿಂದ ಇಳಿಯಲಾರಂಭಿಸಿದೆ.

ಮಾರ್ಗದರ್ಶಿಗೆ ಹಸಿವೆಯಾಯಿತು. ಕಾಫಿ-ತಿಂಡಿ ಎಂದು ಮೂರು ರೂಪಾಯಿ ಬೋಳಿಸಿದ. ಜೊತೆಗೆ ಬೀಡಾ-ಸಿಗರೇಟು ಬೇಕೆಂದ. ರಿಕ್ಷಾದವನಿಗೆ ಬೇರೊಂದು ಮನೆಯತ್ತ ಕರೆದೊಯ್ಯಲು ಹೇಳಿದ. ಹತ್ತು ಮಾರು ದೂರದಲ್ಲಿತ್ತು ಈ ಮನೆ. ಇದಕ್ಕೇಕೆ ರಿಕ್ಷಾ ಎಂದಾಗ, "ನಿಮಗೆ ಬೆಂಗಳೂರು ತಿಳಿಯದು ಸಾರ್, ಒಮ್ಮೆ ಆಟೋ ಬಿಟ್ಟರೆ ತಿರುಗಿ ಸಿಗಕ್ಕಿಲ್ಲ" ಎಂದು ತಿಳುವಳಿಕೆ ನೀಡಿದ. ಈ ಕಟ್ಟಡದ ಪರಿಸರದಲ್ಲಿ ಜರ್ಸಿ ಗೋವುಗಳನ್ನು ಸಾಲಾಗಿ ಕಟ್ಟಿದ್ದರು. ಸುತ್ತಲೆಲ್ಲ ಮಲ-ಮೂತ್ರಗಳ ವಾಸನೆ, ಕುಕ್ಕುಟ-ಸಂಸಾರ ಅಲ್ಲಿಯೇ ಹುಳ ಹುಪ್ಪಡಿಗಳನ್ನು ಕೆದರಿ ಭಕ್ಷಿಸುವದರಲ್ಲಿ ಮೈಮರೆತಿತ್ತು. ಹಳೆಯ ಮನೆಗೆ ಹೊಸ ಖೋಲಿಯೊಂದನ್ನು ಜೋಡಿಸುವ

ಕೆಲಸ ಜಾರಿಯಲ್ಲಿತ್ತು. ನಗರಸಭೆಯವರು ಫುಟ್‌ಪಾತಿಗೆ ಹಾಸಿದ ಕಲ್ಲುಗಳು, ಯಾರದೋ ಕಂಪೌಂಡ್ ಗೋಡೆಯಿಂದ ಹಾರಿಸಿ ತಂದ ದೊಡ್ಡ ಕಲ್ಲು, ರಸ್ತೆಗೆ ಹಾಕಲು ತಂದ ಖಡಿ (ಇದಕ್ಕೆ ಬೆಂಗಳೂರಿನಲ್ಲಿ 'ಜೆಲ್ಲಿ' ಎನ್ನುತ್ತಾರೆ!) ಎಲ್ಲವನ್ನು ಧಾರಾಳವಾಗಿ ಬಳಸಲಾಗಿತ್ತು. ಕಂಬ, ಗೋಡೆಗಳು ಸಮಾನಂತರದಲ್ಲಿರದ್ದರಿಂದ ಬಿರುಕು ಬಿಡುವದರಲ್ಲಿತ್ತು. "ಹೀಗೆ ಕಟ್ಟುವದು ಗಂಡಾಂತರಕಾರಿಯಲ್ಲವೇ" ಎಂದಾಗ, "ಪ್ಲಾಸ್ಟರ್ ಮಾಡಿದ ಮೇಲೆ ಅದೆಲ್ಲ ಸರಿಹೋಗುತ್ತೆ ಸಾರ್" ಎಂದು ಸಮಾಧಾನ ಹೇಳಿದ, ತನಗಿದು ಸಂಬಂಧಪಟ್ಟದ್ದಲ್ಲ ಅನ್ನುವ ಭಾವದಿಂದ.

'ಮನೆಯ ಮಾಲಕನಿಗೆ ಕುಡಿತದ ಚಟ ಜಾಸ್ತಿ ಇದ್ದದ್ದರಿಂದ ಗೃಹಿಣಿಯೇ ಎಲ್ಲ ವಹಿವಾಟು ನೋಡಿಕೊಳ್ಳುತ್ತಾಳೆ' ಎಂದು ಸುಬ್ರಮಣಿ ಮೊದಲೇ ಸೂಚನೆ ಕೊಟ್ಟಿದ್ದ. ಬೆರಣಿ ತಟ್ಟುತ್ತ ಮೂಲೆಯಲ್ಲಿ ಕುಳಿತಿದ್ದ ಯಜಮಾನಿ, ಕೈತೊಳೆದುಕೊಂಡು ಬಂದು, ಸೀರೆ ಸೆರಗಿಗೆ ಕೈ ಒರೆಸುತ್ತ, ಬನ್ನಿ ಎಂದು ಸ್ವಾಗತ ಹಾಡಿದಳು. ಇಟ್ಟಂಗಿಗಳನ್ನು ಮಣ್ಣಿನಿಂದ ಜೋಡಿಸಿ ನಿರ್ಮಿಸಿದ ಮನೆಗೆ ಡಿಸ್ಟೆಂಪರ್ ಬಳಿದು ಆಕರ್ಷಕ ಮಾಡಲು ಯತ್ನಿಸಲಾಗಿತ್ತು. ಇಲಿಗಳು ಸಂಸಾರ ಹೂಡಿದ ಕುರುಹುಗಳು ಅಲ್ಲಲ್ಲಿ ಕಾಣಿಸುತ್ತಿದ್ದವು. ಇದ್ದ ಒಂದೇ ಕೋಣೆಯನ್ನು ಕಲಾತ್ಮಕವಾಗಿ ಹೇಗೆ ಮನೆಯಂತೆ ಬಳಸಬಹುದು ಎಂದು ಪ್ರಾತ್ಯಕ್ಷಿಕೆಯನ್ನೇ ಅಭಿನಯಿಸಿದಳು. "ಇಲ್ಲಿ ಚೇರ್ಸ್ ಇಟ್ಟರೆ ಅಲ್ಲಿ ಬೆಡ್ ಹಾಸಬಹುದು. ಒಂದು ಕರ್ಟನ್ ಕಟ್ಟಿಬಿಟ್ಟರೆ, ಕಿಚನ್ ಸೆಪರೇಟಾಗಿ ಅನುಕೂಲವಾಗಿರುತ್ತೆ. ನಲ್ಲಿ ಇರುವಲ್ಲೇ ಬಾತ್‌ರೂಂ ಅಂತ ಬಳಸಬಹುದು. ಮನೆಯ ಹೊರಗೇ (ಸಾರ್ವಜನಿಕ) ನಲ್ಲಿಯಿದೆ. ವಾಟರ್ ಪ್ರಾಬ್ಲೆಮ್ ಇಲ್ಲ. ನಮ್ಮ ಕಕ್ಕಸ (ನಾಲ್ಕು ಚಪ್ಪಡಿ ಕಲ್ಲು ನಿಲ್ಲಿಸಿದ ಸಾರ್ವಜನಿಕರು ಪ್ರವೇಶಿಸದಂತೆ ಸರ್ಪಕಾವಲಿಡಬೇಕಾದ ಚಪ್ಪರವಿಲ್ಲದ ಸಂಡಾಸ) ನೀವೂ ಬಳಸಬಹುದು. ರೆಂಟು ಥ್ರಿ ಹಂಡ್ರಡ್ ರೂಪೀಸ್, ಅಡ್ವಾನ್ಸು ಫಾಯಥೌಸಂಡ್" ಎಂದು ಮಾತುಮುಗಿಸಿದಳು. "ಮನೆ ಸೊಗಸಾಗಿದೆಯಮ್ಮ ಬೇಕಾದರೆ ಸಾಯಂಕಾಲದೊಳಗೆ ತಿಳಿಸುತ್ತೇನೆ" ಎಂದು ಬೇಡವೆಂಬ ಅರ್ಥ ಬರುವಂತೆ ಹೇಳಿಹೊರಟರೂ, "ಒಂದಿಷ್ಟು ಅಡ್ವಾನ್ಸ್ ಕೊಟ್ಟುಬಿಡ್ತೀರಾ ಸಾರ್" ಎಂದು ಕೇಳುವ ಸಾಹಸ ತೋರಿಸಿದಳು, ಮನೆಯ ಒಡತಿ. ಬಾಡಿಗೆಗಾಗಿ ಬಾರದಿದ್ದರೆ ತತ್‌ಕ್ಷಣ ಹಣ ಹಿಂದಿರುಗಿಸುವ ಆಶ್ವಾಸನೆ ಕೊಡಲು ಹಿಂಜರಿಯಲಿಲ್ಲ. "ಎಲ್ಲವನ್ನೂ ಮನೆಯಾಕೆಯನ್ನು ಕರೆತಂದು ಸಂಜೆಗೇ ನಿರ್ಧರಿಸುತ್ತೇನೆ" ಎಂದು ಜಾರಿಕೊಳ್ಳಬೇಕಾದರೆ ವಿಶೇಷ ಧೈರ್ಯ ತಂದುಕೊಳ್ಳಬೇಕಾಯಿತು.

ಮಾರ್ಗದರ್ಶಿಗೆ ತಿರುಗಿ ಹಸಿವೆಯಾದ್ದರಿಂದ, ಊಟ-ಸ್ವೀಟ್ ಎಂದು ಹತ್ತು ರೂಪಾಯಿ ಬೋಳಿಸಿದ. ಪುಣ್ಯಕ್ಕೆ ಅವನು ಬಿರಿಯಾನಿ ಮುಟ್ಟುವದಿಲ್ಲವಂತೆ, ಬ್ರಾಂಡಿ ಕುಡಿಯುವದಿಲ್ಲವಂತೆ, ಇಲ್ಲದಿದ್ದರೆ ಬಿಲ್ ಐವತ್ತಕ್ಕೆ ಏರುತ್ತಿತ್ತು. "ಹದಿಮೂರನೆಯ ಕ್ರಾಸಿನಲ್ಲಿ ನಿಮಗಾಗಿ ಹೇಳಿಮಾಡಿಸಿದಂತಹ ಮನೆಯಿದೆ" ಎಂದು ರಿಕ್ಷಾದವನಿಗೆ ಪಶ್ಚಿಮ ಮಲ್ಲೇಶ್ವರಕ್ಕೆ ಬಿಡಲು ಹೇಳಿದ. ಎರಡನೆಯ ಮಹಡಿಯ ಮೇಲಿನ ಮನೆ ಚಿಕ್ಕದಾಗಿದ್ದರೂ ಚೊಕ್ಕಟವಾಗಿತ್ತು. ಆದರೆ ಎಂಟುನೂರು ಬಾಡಿಗೆ, ಇಪ್ಪತ್ತು ಸಾವಿರ ಮುಂಗಡ ಹಣ ಎಲ್ಲಿಂದ ತರುವದೆಂದು ಅರಿಯದೇ, ಬೇಕಾದರೆ ಸಂಜೆಯೊಳಗೆ ತಿಳಿಸುತ್ತೇವೆ, ಎಂದು ಅಲ್ಲಿಂದ ಜಾರಿಕೊಂಡು ಎಮ್.ಟಿ.ಆರ್. ಗೆ ಹಿಂದಿರುಗಿದೆವು. "ವಾಸದ ಮನೆ ಗೊತ್ತುಮಾಡುವದು ಜಟಿಲವಾದ ಪ್ರಶ್ನೆ, ಅರ್ಧಾಂಗಿನಿಯೊಂದಿಗೆ ಬಂದು ಕೊನೆಯ ನಿರ್ಧಾರ ಹೇಳುತ್ತೇನೆ" ಎಂದಾಗ ಹೋಟೆಲ ಮಾಲಕ ಜಾರಿಕೊಳ್ಳುವ ಈ ಕಲೆ

ತನಗೇನೂ ಹೊಸದಲ್ಲ ಎಂಬಂತೆ "ಹಾಗೇ ಮಾಡಿ ಸಾರ್" ಎಂದು ರಿಕ್ಷಾ ಬಾಡಿಗೆ ಮೂವತ್ತು ರೂಪಾಯಿ, ಮಾರ್ಗದರ್ಶಕನ ಸಂಬಳ ಇಪ್ಪತ್ತು ರೂಪಾಯಿ, ಕಮಿಶನ್ ಹಣದ ಮುಂಗಡವೆಂದು ಐವತ್ತು ರೂಪಾಯಿ ಒಟ್ಟು ನೂರು ರೂಪಾಯಿ ಬೋಳಿಸಿಯೇಬಿಟ್ಟ! ರಿಕ್ಷಾ ಕೂಡ ಈ ಕದೀಮನದೇ ಎಂದು ಮೊದಲ ಬಾರಿ ಜ್ಞಾನೋದಯವಾಯಿತು. ರಿಕ್ಷಾಕ್ಕೆ ಬಳಸಿದ ಒಂದು ಲಿಟರ್ ಪೆಟ್ರೋಲ್ ವೆಚ್ಚ ಬಿಟ್ಟರೆ, ಉಳಿದ ಹಣವೆಲ್ಲ ಮಾಲಕನ ಬೊಕ್ಕಸವನ್ನು ಸೇರಿತ್ತು. ಯಾವ ಬಂಡವಲೂ ಬೇಕಾಗಿರದ ಯಾವ ಕರವನ್ನೂ ಕೊಡಬೇಕಾಗದ ಒಳ್ಳೆಯ ಧಂಧೆ ಆತ ಮೈಗೂಡಿಸಿಕೊಂಡಿದ್ದ. "ಬೆಂಗಳೂರಿನಲ್ಲಿ ಧನಿಕನಾಗಬೇಕಾದರೆ, ರಸ್ತೆಯ ಮಧ್ಯೆ ಮಾರುತಿ ಇಲ್ಲವೇ ಗಣೇಶನ ದೇವಸ್ಥಾನ ಸ್ಥಾಪಿಸು, ಇಂಗ್ಲೀಷ್ ಮಾಧ್ಯಮ ಸ್ಕೂಲು ಪ್ರಾರಂಭಿಸು, ಇಲ್ಲವೇ ಎಸ್ಟೇಟ ಏಜನ್ಸಿ ಮಾಡು" ಎಂದು ಪರಿಚಯದವರು ಪರೋಕ್ಷವಾಗಿ ಹೇಳಿದ ಮಾತಿನ ಸತ್ಯಾಂಶ ಈಗ ಅರಿವಾಯಿತು.

ಇಂದು ಯಾರ ಮುಖ ನೋಡಿ ಎದ್ದಿದ್ದೇನೋ ಏನೋ ಎಂದು ಮರುಗುತ್ತ ಹೋಟೇಲಿಗೆ ಹೇಗೆ ಹಿಂದಿರುಗುವದು ಎಂದು ಯೋಚಿಸುತ್ತ ನಿಧಾನವಾಗಿ ನಡೆದುಬರುತ್ತಿದ್ದಾಗ, ಯಾರೋ ಹಿಂದಿನಿಂದ ಆತ್ಮೀಯವಾಗಿ ಭುಜ ತಟ್ಟಿದರು. ಹಿಂದಿರುಗಿ ನೋಡಿದರೆ ಕರ್ನಾಟಕ ಕಾಲೇಜಿನ ಸಹಪಾಠಿ! ಬಹಳ ವರ್ಷಗಳ ನಂತರ ಭೇಟಿಯಾಗಿದ್ದರಿಂದ ಇಬ್ಬರಿಗೂ ಅತೀವ ಆನಂದವಾಯಿತು. ಅಗ್ರಹದಿಂದ ಮನೆಗೆ ಕರೆದೊಯ್ದ. ಅಪರೂಪದ ಸಜ್ಜೆರೊಟ್ಟಿ, ಬೆಣ್ಣೆ, ಎಣ್ಣೆ ಗಾಯಿಯ ಸುಗ್ರಾಸಭೋಜನವಾಯಿತು. ಮುದಿ ತಂದೆ-ತಾಯಿಗಳಿಗೆ ಕಾಶೀಯಾತ್ರೆ ಮಾಡಿಸಿಕೊಂಡು ಬರಲು ಸಂಸಾರಸಮೇತ ಹೊರಟಿದ್ದ. ಆದ್ದರಿಂದ ತಿಂಗಳೆರಡು ತಿಂಗಳಕಾಲ ತನ್ನ ಮನೆಯಲ್ಲೇ ಬಂದು ಉಳಿಯಲು ಕೇಳಿಕೊಂಡ. ಇದರಿಂದ ನನ್ನನ್ನು ಒಂದೇ ಸವನೆ ಬಾಧಿಸುತ್ತಿದ್ದ ಕಳವಿನ ಭಯ ದೂರವಾಯಿತೆಂದ. ನಿಶ್ಚಿಂತೆಯಿಂದ ಕಾಶೀಯಾತ್ರೆಗೆ ಹೊರಡಬಹುದೆಂದು ಹೇಳಿದ. ಆತನನ್ನು ಬೀಳ್ಕೊಂಡು ಲಾಜ್‌ಗೆ ಮರಳಲು, ಮಲ್ಲೇಶ್ವರದ ಬಸ್‌ನಿಲ್ದಾಣಕ್ಕೆ ಬಂದಾಗ, ಮುಂಜಾವಿನ ಕಟು ಅನುಭವ, ಮಧ್ಯಾಹ್ನದ ಆತ್ಮೀಯತೆಗಳು ಜೀವನವೆಂಬುದು ಸುಖ-ದುಃಖಗಳ ಸಮ್ಮಿಶ್ರಣವೆಂಬುದನ್ನು ನೆನಪಿಸಿಕೊಟ್ಟವು.

ತೊಂಭತ್ತೆಂಟನೇ ನಂಬರಿನ ಬಸ್ ಕೆಂಪೇಗೌಡ ವೃತ್ತಕ್ಕೆ ಹೋಗುತ್ತದೆಂದು ನಾಮಫಲಕ ಸೂಚಿಸಿದ್ದರಿಂದ ಕಂಡಕ್ಟರನಿಗೆ ಅಲ್ಲಿಗೆ ಟಿಕೇಟು (ಬೆಂಗಳೂರಿನವರಿಗೆ ಚೀಟಿ!) ಕೊಡಲು ಕೇಳಿದಾಗ, "ಅಲ್ಲಿಗೆ ಹೋಗಲ್ಲಾ, ಇಳಿದುಬಿಡಿ ಸಾರ್" ಎಂದು ಯಾಂತ್ರಿಕವಾಗಿ ಉತ್ತರಿಸುತ್ತಿದ್ದಂತೆ ಸಹಪ್ರಯಾಣಿಕನೋರ್ವನು "ಅವರಿಗೆ ಮೆಜೆಸ್ಟಿಕ್‌ಗೆ ಕೊಡಿ" ಎಂದು ಸೂಚಿಸಿದ. "ಮೆಜೆಸ್ಟಿಕಾ?" ಎಂದು ಹೊಸಬನ ಭಾಷೆ ಅರ್ಥವಾದವನಂತೆ ನಕ್ಕು ಕಂಡಕ್ಟರನು ಬೇಕಾದ ಟಿಕೀಟು ಕೊಟ್ಟ. ಧಾರವಾಡದಲ್ಲಿ ಸಾಧನಕೇರಿ, ಕೆಲಗೇರಿ, ಸಪ್ತಾಪೂರ, ಮದಿಹಾಳ, ಕಲ್ಯಾಣನಗರಗಳೆಂದು ನಗರಸಾರಿಗೆಯ ನಿಲ್ದಾಣಗಳನ್ನು ಕರೆದರೆ, ಬೆಂಗಳೂರಿನಲ್ಲಿ, ಸೆಂಟ್ರಲ್, ಸ್ವಾಸ್ತಿಕ್ (ಸ್ವಸ್ತಿಕ್) ಗೀತಾಂಜಲಿ, ನವರಂಗ ಮುಂತಾದ ಚಲಚ್ಚಿತ್ರಮಂದಿರಗಳಿಂದಲೇ ಅವನ್ನು ಗುರುತಿಸಬೇಕು. ಎಷ್ಟೇ ಆದರೂ ದೇಶದಲ್ಲಿಯೇ ಅತಿ ಹೆಚ್ಚು ಚಿತ್ರಮಂದಿರಗಳಿರುವ ನಗರ ನೋಡಿ! ಯಾವಳೋ ಹಳ್ಳಿ ಅಜ್ಜಿ, "ಬಸ್ಸು ಕುರುಬರ ಪಾಳ್ಯಕ್ಕೆ ಹೋಗುತ್ತದಾ?" ಎಂದು ಕೇಳಿದಾಗ ಅದೆಲ್ಲಿದೆಯೆಂದು ಕಂಡಕ್ಟರ ಕೇಳಿದ. "ತುರುಕರ ಪಾಳ್ಯ ದಾಟಿದನಂತರ ಬರೋದೇ ಕುರುಬರ ಪಾಳ್ಯವಲ್ಲಪ್ಪ?" ಎಂದು ಹೇಳಿದಳು. ಇಷ್ಟಾದರೂ ಕಂಡಕ್ಟರನ ತಲೆಯಲ್ಲಿ ಪ್ರಕಾಶ ಬೀಳಲಿಲ್ಲ. ಹಳಬನೋರ್ವ

ಇಂದಿನ ಮೊಹಮ್ಮಡನ್ ಬ್ಲಾಕಿಗೆ ತುರುಕರ ಪಾಳ್ಯ, ಶ್ರೀರಾಮಪುರಕ್ಕೆ ಕುರುಬರ ಪಾಳ್ಯವೆಂದು ಹಿಂದಿದ್ದ ಹೆಸರುಗಳನ್ನು ನೆನಪಿಸಿದ. ಬಸ್ಸು ಆ ದಿಕ್ಕಿನಲ್ಲಿ ಹೋಗುತ್ತಿರಲಿಲ್ಲವಾದ್ದರಿಂದ ಅಜ್ಜಿಗೇನೂ ಲಾಭವಾಗಲಿಲ್ಲ.

ಸಂಸಾರವನ್ನು ಕರೆತಂದು ಗೆಳೆಯನ ಮನೆಯಲ್ಲಿ ಸ್ಥಾಪಿಸಿದಾಗ ನೆಮ್ಮದಿಯ ಉಸಿರನ್ನು ಬಿಡುವಂತಾಯಿತು. ಹಾಲಿನವನು ಬಂದು ತನ್ನ ಕೆಲಸದ ಮುನ್ನುಡಿಯನ್ನು ಒಪ್ಪಿಸಿದ. "ಫಾಯ್ವ ಕ್ಲಾಕಿಗೆ ಮಿಲ್ಕ್ ಟ್ರಕ್ ಬಂದ್ಬಿಡತ್ತೆ. ಕ್ಯಾಶ್‌ಮನಿ ಕೊಡಬೇಕಾಗುತ್ತೆ. ಎಮ್ಟಿ ಬಾಟಲ್ ರೆಡಿಯಾಗಿಟ್ಟಿರಿ. ಎಕ್ಸಟ್ರಾ ಮಿಲ್ಕ್ ಸಪ್ಲಾಯ್ ಮಾಡಲ್ಲ. ಮಂತ್ಲಿ ಡೆಲಿವರಿ ಛಾರ್ಜಸ್ ಫಸ್ಟಿಗೇ ಪೇ ಮಾಡಬೇಕು! "ಕನ್ನಡದಲ್ಲಿ ಹೇಳಯ್ಯಾ" ತಡೆಯಲಾರದೇ ನುಡಿದೆ. "ನಂಗೆ ಕನ್ನಡ ಬಿಟ್ಟು ಬೇರೆ ಭಾಷೆ ಬರಾಕಿಲ್ಲ. ನಿಮಗೇ ಈ ಭಾಷೆ ತಿಳಿಯದಿದ್ರೆ ನಾನೇನು ಮಾಡ್ಲಿ?" ಎಂದು ಹೊರಟೇಬಿಟ್ಟ. ನಂತರ ಹೊರಗಿನ ಕೆಲಸಕ್ಕೆ ನೇಮಿಸಿಕೊಂಡ ಯುವತಿ, "ಮೊರ್ನಿಂಗೇ ಒಸಿ ಜಾಗ್ರತೆ ಬಂದ್ಬಿಟ್ಟು ರೂಮ್ಸು ಕ್ಲೀನ್ ಮಾಡಿಕೊಡ್ತೀನಿ. ಬಟ್ಟೆಯಲ್ಲಾ ಸೋಪು ಹಾಕಿ ಇಟ್ಟಿಡಿ. ಸಂಜೆಗೆ ಬಂದು ವಾಶ್ ಮಾಡ್ತೀನಿ. ಎರಡೂ ಹೊತ್ತು ಟಿಫಿನ್ನು ಕಾಫಿ ಕೊಡ್ಬೇಕು. ಒಂದಿನಾನೂ ಮಿಸ್ ಮಾಡಲ್ಲಾ. ವರಿ ಮಾಡ್ಕಬೇಡಿ" ಎಂದು ಮುಂಗಡವಾಗಿಯೇ ಸಮಾಧಾನ ಹೇಳಿದಳು. ಅಂದು ಮಿಲ್ಕಡೈರಿ ಹುಡುಗನು ಬರಲೇ ಇಲ್ಲ. (ಮಿಲ್ಕ ಡೇರಿ ಅಲ್ಲದೇ ನೀರಿನ ಡೈರಿಯೂ ಈ ಊರಿನಲ್ಲಿ ಪ್ರತ್ಯೇಕವಾಗಿ ಇರಬಹುದೇ?) ಹಾಲು ಸಿಗದ್ದರಿಂದ ಕೋದಂಡರಾಮಪುರದ ಬಾಡಿಗೆ-ಮನೆ ಯಜಮಾನಿ ದನ ಕಟ್ಟಿದ್ದು ನೆನಪಾಗಿ ಅಲ್ಲಿ ಹೋದೆ. ಅವಳೋ ಅಮೃತವನ್ನು ಮಾರುವವಳಂತೆ "ಹಾಫ್ ಲಿಟರ್ ಆದರೆ ಸಪ್ಲ್ಯಾ ಮಾಡಬಹುದು" ಅಂದಳು. ಆಧುನಿಕ ಗವಳಗಿತ್ತಿ ಒಳಗಿನಿಂದ ತಂದ ಕೊಟ್ಟ ಹಾಲಿನ ದರ್ಶನವಾದಾಗ ಒಂದು ದಿನ ಬರೇ ನೀರು ಸೇವಿಸಿದರೇ ಚೆನ್ನಾಗಿರುತ್ತಿತ್ತು ಅನಿಸಿತು. "ಈ ಅಸುವಿನ ಆಲು, ಎಮ್ಮೆ ಹಾಲಿಗಿಂತ ತಿಕ್ಕಾಗಿದೆಯಲ್ಲಮ್ಮ" ಎಂದು ಧಾರವಾಡಿ ಗಂಡುಕನ್ನಡ ಬಿಟ್ಟು ಬೆಂಗಳೂರಿನ ಹೆಣ್ಣುಕನ್ನಡತನ ಅನುಕರಿಸಲು ಯತ್ನಿಸಿದೆ. ಮಾತಿನ ವ್ಯಂಗ್ಯ ಅರ್ಥವಾಗಲಿಲ್ಲವೆಂದು ತೋರುತ್ತದೆ. "ಅಸು ಯಾಕೋ ತುಂಬಾ ಡಲ್ ಆಗಿದೆ" ಎಂದು ಕಳಕಳಿಯಿಂದ ಹೇಳಿ ಕಾಸು ಪಡೆದು ಒಳಗೆ ಹೊರಟೇಬಿಟ್ಟಳು. ಬೆಂಗಳೂರಿನ ಹಸುಗಳು ಮೂಡ್ ಕಳೆದುಕೊಂಡು ಮಂಕಾದಾಗ ನೀರನ್ನೇ ಹಿಂಡುತ್ತವೆ ಎಂಬ ಮಾತಿನ ಅರಿವಾಯಿತು!

ಮನೆಯೆದುರು ಗಾಡಿ ತಳ್ಳಿಕೊಂಡು ಹೊರಟ ಹುಡಗನೊಬ್ಬ 'ಜಾಮುನ ಅಲ್ಹಾಬಾದ' ಎಂದು ಕೂಗುತ್ತ ಹೊರಟಿದ್ದ. ಗುಲಾಬ ಜಾಮುನ ತಿಂದು ಗೊತ್ತು. ಈ ಅಲ್ಹಾಬಾದ ಜಾಮುನು ಹೇಗಿರುತ್ತದೆ ಎಂದು ಹೊರಗೆ ಬಂದು ನೋಡಿದರೆ ಪೇರಲಹಣ್ಣುಗಳಿದ್ದವು. ಅಲಹಾಬಾದದ ಪೇರಲಹಣ್ಣುಗಳು ಶ್ರೇಷ್ಠ. ಬೆಂಗಳೂರಿನ ಎಲ್ಲ ಪೇರಲಹಣ್ಣುಗಳೂ ಅಲಹಾಬಾದ್ ಅಭಿಧಾನ ಪಡೆದವು. ಸ್ವಲ್ಪ ಹೊತ್ತಿಗೆ ಇನ್ನೊಬ್ಬಾತ, "ಗೋವಾಲಾಡು, ಗೋವಾಲಾಡು" ಎಂದು ಕೂಗಿದಾಗ ಪೋರ್ಚುಗೀಸರ ಇದಾವ ಕೊಡುಗೆ? ಎಂದು ಹಣಿಕೆ ಹಾಕಿದರೆ, ಹೊಟ್ಟೇ ಭಾಗ ಕೆಂಪಿರುವ ಪೇರಲಹಣ್ಣುಗಳನ್ನು ಆತ ಮಾರುತ್ತಿದ್ದ. ಧಾರವಾಡದಲ್ಲಿ "ಪ್ಯಾರಲ ಹಣ್ರೀ" ಅಂದರೆ ನವಲೂರಿನ ದೊಡ್ಡ ರಸಭರಿತ ಹಣ್ಣುಗಳು ಕಣ್ಣೆದುರು ಕುಣಿಯುತ್ತವೆ. ಆ ರುಚಿಯೆದುರು ಈ ಲಾಡು-ಸ್ವಾದದ ಗೊಡವೆಗೆ ಹೋಗಲಿಲ್ಲ.

ನಂತರ ಬಂದಿತು ಬಳ್ಳಾರಿ ಸೇಬು. "ಒಂದೇ ರೂಪಾಯಿ ಕೇಜಿ ಬಳ್ಳಾರಿ ಸೇಬು"! ಹಸಿರು ಕ್ರಾಂತಿಯನ್ನು ಭರದಿಂದ ಕೈಗೊಂಡು ಬಳ್ಳಾರಿ, ಸೇಬುಗಳನ್ನು ಇಷ್ಟು ಅಗ್ಗವಾಗಿ ಪೂರೈಸುತ್ತಿದ್ದೆಯೇ? ಎಂದು ಅಚ್ಚರಿಯಿಂದ ಹೊರಗೆ ಬಂದು ನೋಡಿದರೆ, ದೊಡ್ಡ ಉಳ್ಳಾಗಡ್ಡೆ (ಬೆಂಗಳೂರಿನ ಈರುಳ್ಳಿ) ಗಳನ್ನು ಮಾರುತ್ತಿದ್ದ. ಕಡಪಾ ಜಾಮೂನು ಎಂದು ಖರಬೂಜ್ ಮಾರಿದರೆ 'ಕರಿಲಾಡು' ಎಂದು ನೇರಲಹಣ್ಣನ್ನು ಹುಡುಗರು ಮಾರುತ್ತಾರೆ. ಕ್ರಮೇಣ ಕಾಬೂಲಿ ಎಂದರೆ ದ್ರಾಕ್ಷಿ ಹಣ್ಣು, ಸಿಮ್ಲಾ ಎಂದರೆ ಎಪ್ಪಲ್ (ಸೇಬು) ಹಣ್ಣು ಎಂದು ಅರಿಯುವಂತಾಯಿತು. ಒಂದು ದೃಷ್ಟಿಯಲ್ಲಿ ಬೆಂಗಳೂರಿಗರು ರಸಿಕರು! ಕಾಣದ ವಸ್ತುವಿನಲ್ಲಿ ಇಲ್ಲದ ರುಚಿಯನ್ನು ಕಲ್ಪಿಸಿಕೊಡುವದರ ಜೊತೆಗೆ ರಸಸೃಷ್ಟಿ ನಿರ್ಮಿಸುತ್ತಾರೆ.

ಸರಿ ವಾರದ ಕಾಳು-ಕಡಿ, ಕಿರಾಣಿ ಸಾಮಾನು ತರಲು ಚೀಲಗಳನ್ನು ಹೊತ್ತು ಪೇಟೆಗೆ ಹೊರಟಿದ್ದಾಯಿತು. ಒಂದು ಕಿಲೋ 'ಬೊಂಬೈರವಾ' ಕೊಡಲು ಕೇಳಿದೆ. ಆಳು ಇಡ್ಲಿರವಾ ತಂದು ಕೊಟ್ಟ. "ಉಪ್ಪಿಟ್ಟು ಶಿರಾ ಮಾಡುವ ರವಾ" ಎಂದು ಎಚ್ಚರದಪ್ಪಿ ಹೇಳಿದೆ. ಅದು ಹೇಗೆ ಅರ್ಥವಾಗಬೇಕು? ಹೊಸದಾಗಿ ಕಲಿತ "ಖಾರಬಾತ್, ಕೇಸರಿಬಾತ್‌ಗಳ ರವೆ ಕೊಡಯ್ಯ" ಎಂದಾಗ "ಓ ಬನ್ಸಿ ಮೀಡಿಯಮ್ಮಾ?" ಎಂದು ಜ್ಞಾನೋದಯವಾಗಿ ಬೇಕಾದ ರವಾ ಕೊಟ್ಟ. ಒಂದು ಕಿಲೋ ಬೆಲ್ಲ ಎಂದಾಗ 'ಯಾವ ತರದ ಬೆಲ್ಲ?' ಪ್ರಶ್ನೆ ಬಂದಿತು. ಕಕ್ಕಾವಿಕ್ಕಿಯಾಗಿ, "ಸಿಹಿ-ಸ್ವಚ್ಛ ಬೆಲ್ಲ" ಎಂದೆ. ಹುಡುಗನೂ ಕಿಲಾಡಿಯೇ! "ಬೆಲ್ಲ ಸಿಹಿಯಲ್ಲದೇ ಎಂದಾದರೂ ಕಹಿ ಇರತ್ತಾ? ನಮ್ಮ ಅಂಗಡಿಯಲ್ಲಿ ಎಲ್ಲಾ ಸಾಮಾನೂ 'ಕ್ಲೀನ್' ಆಗಿರುತ್ತೆ ಅಚ್ಚು, ಮುದ್ದೆ, ಕಾಫಿ ಬೆಲ್ಲಗಳಲ್ಲಿ ಯಾವುದು ಬೇಕು?" ಧಾರವಾಡದ ಪೆಂಟೆಬೆಲ್ಲ ಒಂದೇ ರೂಢಿಯಿದ್ದವನಿಗೆ ಇಲ್ಲಿ ಅರಿಸುವದು ಸಮಸ್ಯೆಯಾಯಿತು. ಅಜ್ಞಾನ ತೋರಗೊಡಬಾರದೆಂದು, 'ಒಂದು ಕೆ.ಜಿ. ಶುಗರ್ ಕೊಟ್ಟು ಬಿಡಿ' ಎಂದು ಉಳಿದ ಸಾಮಾನಗಳ ಬೆಂಗಳೂರಿನ ಪ್ಯೂರ್ ಕನ್ನಡ ಹೆಸರುಗಳನ್ನೇ ಹೇಳಿ ಪಡೆದೆ. ಹಣ ಪಡೆಯುತ್ತಿದ್ದಂತೆ ಮಾಲಕ, ಶೆಟ್ರು, ಕುಲಗೋತ್ರಗಳನ್ನು ವಿಚಾರಿಸಿ, 'ಫೋನ್ ಮಾಡಿ ಆರ್ಡರ್ ಕೊಟ್ರೆ, ಹೋಂ-ಡೆಲಿವರಿ ಮಾಡುತ್ತೇವೆ ಸಾರ್" ಎಂದ. ಸ್ವತಃ ಬಂದಾಗಲೇ ಇಷ್ಟೊಂದು ಗೊಂದಲ, ಫೋನ ಮಾಡಿ ಸಾಮಾನು ತರಿಸಿಕೊಂಡರೆ ದೇವರೇ ಗತಿ' ಎಂದು ಮನಸ್ಸಿನಲ್ಲೇ ಅಂದುಕೊಂಡೆ.

ಪುಸ್ತಕ-ಕಾಗದ ಮಾರುತ್ತಿದ್ದ ಅಂಗಡಿಗೆ ಹೋಗಿ 'ಟೈಪ್ ಮಾಡುವದಕ್ಕಾಗಿ ಒಂದು ದಸ್ತು ತೆಳು ಹಾಳಿ ಕೊಡಿ' ಎಂದಾಗ ಹುಡುಗ ಮಿಕಿಮಿಕಿ ನನ್ನನ್ನು ನೋಡಿ, ಒಂದೆರಡು ಬಾರಿ ಒಳಹೊರಗೆ ಓಡಾಡಿ ಕೊನೆಗೆ ಅಸಹಾಯಕನಾಗಿ "ಪೇಪರು ತಿಕ್ಕೊ? ತಿನ್ನೋ?" (ಥಿಕ್, ಥಿನ್) ಎಂದು ಕೇಳಿದಾಗ ತಾಳ್ಮೆ ಮೀರಿತು, 'ನನ್ನ ಅಪ್ಪಾ, ! ನೀನೆಂಥಾ ಕನ್ನಡಿಗನೋ' ಎಂದು ಕೇಳಬೇಕೆಂದಿದ್ದೆ ಆದರೆ ಗರುಡನಗರಿಯಲ್ಲಿ ನಾಗಪಂಚಮಿ ಹಮ್ಮಿಕೊಂಡು ಗಂಡಾಂತರ ಆಹ್ವಾನಿಸಲು ಇಷ್ಟ ಪಡದೇ "ತಿನ್ನೆ" ಕೊಡಲು ಹೇಳಿದೆ. ಇಷ್ಟಾದರೂ ಅವನ ಸಮಸ್ಯೆ ಬಗೆಹರಿಯಲಿಲ್ಲ. 'ಎಷ್ಟು ಕೊಡಲಿ?' ಎಂದಾಗ 'ದಸ್ತಿನಲ್ಲಿ ಇಪ್ಪತ್ನಾಲ್ಕು ಹಾಳೆಗಳು ಇರುತ್ತವೆ, ಅವನ್ನು ಕೊಡು' ಎಂದಾಗ ಅರ್ಥವಾದವನಂತೆ, 'ಆಯ್ತು ಸಾರ್, ನೀವು ಒಂದು ಕಾಯರ್ ಕೇಳುತ್ತಾ ಇದ್ದೀರಾ?' ಎಂದು ನಕ್ಕು ತಂದು ಕೊಟ್ಟ. ಇವರಿಗೆ ಅರ್ಥವಾಗುವ ಕನ್ನಡ ಮಾತನಾಡುತ್ತಾ ಹೋದರೆ ನಿಜವಾದ ಕನ್ನಡವೇ ಮರೆತುಹೋದೀತು! ಎಂದು ಮುಜಗರಪಡುತ್ತ ಮನೆ ಸೇರಿದೆ.

ಅಂದು ಸಂಜೆ ವಾಯುವಿಹಾರ ಮುಗಿಸಿ ಹಿಂದಿರುಗುತ್ತಿದ್ದಾಗ, ದಾರಿಯಲ್ಲಿ ತೂಗುಹಾಕಿದ "ಪ್ರೆಷ್ ಫ್ರುಟ್, ಜೂಸ್" ಎಂದು ಕನ್ನಡದಲ್ಲಿ ಬರೆದಿದ್ದ ಫಲಕವನ್ನು ಪತ್ನಿಗೆ ತೋರಿಸಿ, 'ಇದಾವ ಭಾಷೆ ಹೇಳು ನೋಡೋಣ?' ಎಂದಾಗ 'ಏನು? ಆಂಗ್ಲಭಾಷೆಯೆಂದು ತಿಳಿಯದಷ್ಟು ಮಂಕೇ?' ಎಂದು ರೇಗಿದಳು. ಅಲ್ಲಿ ಸಿಗುವ ಪಾನೀಯಗಳ ಪಟ್ಟಿಯೂ 'ಕಿಂಗ್ಲಿಷ್' (ಕನ್ನಡ ಇಂಗ್ಲಿಷ್) ಭಾಷೆಯಲ್ಲಿತ್ತು. ಗ್ರೇಪ್‌ಜ್ಯೂಸ್, ಆರೆಂಜ್‌ಜ್ಯೂಸ್, ಮ್ಯಾಂಗೊಜ್ಯೂಸ್, ಪಾಯಿನ್‌ಎಪಲ್‌ಜ್ಯೂಸ್ ಎಂದು ಕನ್ನಡಭಾಷೆಯಲ್ಲಿ ಇಂಗ್ಲಿಷ್ ಪದಗಳನ್ನು ಬಳಸಿದ್ದರು. ಅಂಗಡಿಕಾರನ ಕನ್ನಡಭಾಷೆ ಪರೀಕ್ಷಿಸಲೇಂದೇ ಎರಡು ಕಬ್ಬಿನ ಹಾಲುಕೊಡಿ ಎಂದಾಗ,' ಬಾದಾಮಿ ಹಾಲು, ಅಪ್ಪಟ ಹಾಲು, ಕಬ್ಬಿನ ಹಾಲು ನಾವು ಮಾರಾಟ ಮಾಡೋದಿಲ್ಲ.' ಎಂಬ ಉತ್ತರ ಬಂದಿತು. ಇನ್ನಿತರ ಗಿರಾಕಿಗಳಿಗೆ ಪೂರೈಸುತ್ತಿದ್ದ ಆ ಪಾನೀಯ ಯಾವುದು? ಎಂದಾಗ 'ಪ್ರೆಶ್ ಶುಗರ್‌ಕೇನ್‌ಜ್ಯೂಸ್' ಎಂದ. 'ಅದನ್ನೇ ಕೊಡಿ' ಎಂದಾಗ 'ಬಾಯ್‌ಟೂನಾ?' ಎಂದಾಗ ಇದಾವ ಹೊಸಮಾದರಿಯ ರಸವೆಂದು ತಿಳಿಯಲಿಲ್ಲ. ಅಂಗಡಿಯವನೇ ಒಂದು ತುಂಬಿದ ಗ್ಲಾಸು, ಇನ್ನೊಂದು ಖಾಲಿಗ್ಲಾಸು ತಂದಿಟ್ಟಾಗ ಹೊಟೇಲಿನಲ್ಲಿ ಎಸ್ಪೇಟ ದಲ್ಲಾಳಿಗಳು ಬೈಟೂ ಕಾಫಿ ಕುಡಿದದ್ದು ನೆನಪಾಯಿತು. ಬಿಲ್ಲು "ಒನ್ ರೂಪೀ ಕೊಡಿ" ಎಂದು ಅಂಗಡಿಯವ ಕೇಳಿದ.

ಮರುದಿನ ಬೆಳಿಗ್ಗೆ "ಅಡಿಗೆಗೆ ಏನೂ ಕಾಯಿಪಲ್ಯವಿಲ್ಲಾ" ಎಂದು ಗೃಹಿಣಿ ರಾಗ ಎಳೆದಾಗ, ನಿನ್ನೆ ಸಂಜೆ ಏಕೆ ನೆನಪು ಮಾಡಲಿಲ್ಲ? ಎಂದು ರೇಗುವ ತಯಾರಿಯಲ್ಲಿದ್ದಾಗ, ಬೀದಿಯಲ್ಲಿ 'ಅಮ್ಮಾ ಕವಳಾ'! ಎಂಬ ಅರ್ತಧ್ವನಿ ಕೇಳಿಸಿತು. ಇದಾವದೊ ಬೆಂಗಳೂರು ತರಕಾರಿ ಇರಬಹುದೆಂಬ ವಿಚಾರ ಮಿಂಚಿದರೂ, ಇಷ್ಟೊಂದು ದೈನ್ಯದಿಂದ ಯಾಕೆ ಕೂಗಬೇಕು? ಎಂದು ಹೊರಗೆ ಹೋಗಿ ನೋಡಿದಾಗ, ಚಿಂದಿಬಟ್ಟೆಯ ಚಿಕ್ಕಹುಡುಗ, ಎಲುಮಿನಿಯಂ ಪಾತ್ರೆಯೊಂದರಲ್ಲಿ ತಂಗಳು ಶೇಖರಿಸುತ್ತಿದ್ದ. ಎದುರಿನ ಮನೆಯವಳು ನೀಡಿದ ಅನ್ನ ಸಾರುಗಳ ತುತ್ತೊಂದನ್ನು ಬಾಯಲ್ಲಿ ಇಟ್ಟುಕೊಂಡು ಕಹಿಮುಖಮಾಡಿ, ದೀಪದ ಕಂಬದಡಿಯಲ್ಲಿ ಚೆಲ್ಲಿದ. ಪ್ರೇಮಿಯನ್ನು ಹಿಂಬಾಲಿಸುತ್ತಿದ್ದ ಬೀದಿಯ ನಾಯಿಯೊಂದು ಓಡಿಬಂದು ಮೂಸಿ ನೋಡಿ ಚೆನ್ನಾಗಿಲ್ಲವೆಂದು ತೀರ್ಮಾನಿಸಿ, ಮತ್ತೆ ಮೊದಲಿನ ಕಾಯಕಕ್ಕೆ ಹಿಂದಿರುಗಿತು. ಆ ನಂತರ ಬಂದ ಕತ್ತೆ, ಕಾಗೆಗಳಿಗೂ ಅದು ರುಚಿಸಲಿಲ್ಲ. ನೊಣಗಳು ಮಾತ್ರ ತಮ್ಮ ಸಂತಾನ ಪ್ರಸರಣಕ್ಕೆ ಒಳ್ಳೇ ಅವಕಾಶವಿದೆಂದು ಪ್ರೇಮಗೀತೆ ಹಾಡುತ್ತ ಸಂತಾನೋತ್ಪತ್ತಿಗೆ ತೊಡಗಿದವು.

ಐದು ನಿಮಿಷಗಳಲ್ಲಿ ಯಾರೋ ಡಬ್ಬಿ ಬಾರಿಸುತ್ತ 'ಶಿಮೇಣ್ಣೆ' ಎಂದು ಕಿರುಚಿಕೊಳ್ಳುತ್ತಿದ್ದ. ಧಾರವಾಡದ ಚಿಮಣೆಯೆಣ್ಣೆಯನ್ನು ಬೆಂಗಳೂರಿನವರು ಸೀಮೆಯೆಣ್ಣೆ ಎಂದು ಕರೆದರು. ಈತ ಶಿಮೇಣೆಗೆ ಪರಿವರ್ತಿಸಿದ್ದ. ತರಕಾರಿಯವನ ಹಾದಿನೋಡುತ್ತಿದ್ದಾಗ ರಸ್ತೆ ಯಂಚಿಯ ತಿಪ್ಪೆಗುಂಡಿ ಲಕ್ಷ್ಯಸೆಳೆಯಿತು. ಸುತ್ತಮುತ್ತಲಿನವರೆಲ್ಲ ತಮ್ಮ ಕಸ-ಕಡ್ಡಿಗಳನ್ನು ಅದರಲ್ಲಿ ತುರುಕುತ್ತಲೇ ಇದ್ದರು. ಪೌರಪ್ರಜ್ಞೆ ಇರುವವರೆಲ್ಲ ತೊಟ್ಟಿಗೇ ಸೇರಿಸಿದರೆ, ಕೆಲಸದಾಳುಗಳು ಮಾತ್ರ ಒಂದೆರಡು ಹೆಜ್ಜೆ ಮುಂದೆ ಹೋಗುವದನ್ನು ತಪ್ಪಿಸಲು, ಎಲ್ಲ ಕಡೆಯಲ್ಲೂ ಕಸ ಹರವಿದ್ದರು. ಒಂದು ಬಿಡಾಡಿನಾಯಿಗೆ ಹೊಟ್ಟೆ ಹಸಿವು ಜೋರಾಗಿರಬೇಕು. ಅಂತೆಯೇ ರಕ್ತದ ವಾಸನೆಯಿರುವ ಪೊಟ್ಟಣವೊಂದನ್ನು ಕಚ್ಚಿ ಪ್ರತಿಸ್ಪರ್ಧಿಯ ಕಣ್ಣಿಗೆ ಮಣ್ಣೆರಚಿ ದೂರ ಧಾವಿಸಿತು. ರಸ್ತೆಯಂಚಿನಲ್ಲಿ ವಿರಾಮವಾಗಿ ಕುಳಿತು, ಜೊಲ್ಲು ಸುರಿಸುತ್ತ ತೆಳುಬಟ್ಟೆಯಿಂದ ಸುತ್ತಿಕೊಂಡಿದ್ದ ಹತ್ತಿಯ ಪ್ಯಾಡನ್ನು ಕಚ್ಚಿ ಕಚ್ಚಿ ಬೇರ್ಪಡಿಸಿ

ಇದನ್ನು ಹೇಗೆ ತಿನ್ನುವದೆಂದು ಬಿಸಾಕಿ ಓಡಿತು. ನಾಯಿಗೆ ಹೆದರಿ ಮರದ ಮೇಲೆ ಕಾದು ಕುಳಿತಿದ್ದ ಕಾಕರಾಜ. ರಕ್ತ, ಹತ್ತಿದ ಹತ್ತಿಯ ಬಣ್ಣದಿಂದ ಆಕರ್ಷಿತನಾಗಿ ಅದರ ಅಡಿಯಲ್ಲಿ ಆಹಾರ ಇದ್ದಿರಬಹುದೆಂದು ಹತ್ತಿಯನ್ನೆಲ್ಲ ಛಿದ್ರಛಿದ್ರ ಮಾಡಿ ರಸ್ತೆಯ ಮೇಲೆಲ್ಲಾ ಹರಡಿ ಹಾರಿಹೋಯಿತು. ಸುಂದರಿಯರ ಶುಚಿತ್ವ ಕಾಪಾಡುತ್ತೇವೆಂದು ಗ್ಯಾರಂಟೀ ಕೊಡುವ 'ನ್ಯಾಪಕಿನ್ಸ್' ಅವಶೇಷಗಳು ನೋಡುವವರಿಗೆಲ್ಲ ಅಸಹ್ಯ ತರಿಸುವ ರೀತಿಯಲ್ಲಿ ಬಿದ್ದುಕೊಂಡಿದ್ದವು.

"ಸೊಪ್ಪು ಚಕ್ಕೋತ, ಹರಿವೆ, ಮೆಂತೆ, ಕೋತಂಬ್ರಿ ದಂಟಿನ ಸೊಪ್ಪು" ಎಂದು ಓಣಿಓಣಿಗಳಲ್ಲಿ ಕೇಳಿಸುವಂತೆ ಕೂಗುತ್ತ ಬಂದ ತರಕಾರಿಯವನು ಗಾಡಿತುಂಬ ಕಾಯಿಪಲ್ಲೆ ತಂದಿರಬೇಕೆಂದು ಹೊರಗೆ ಬಂದು ನೋಡಿದರೆ, ಆತನ ಹತ್ತಿರ ಇದ್ದ ಚಿಕ್ಕ ಬುಟ್ಟಿಯಲ್ಲಿ ಅರ್ಧಕೂಡ ತುಂಬಿರಲಿಲ್ಲ. ದಂಟಿನ ಸೊಪ್ಪನ್ನು ಕೋತಂಬರಿಸೊಪ್ಪಿನಷ್ಟೇ ತೆಳುವಾಗಿ ಕಟ್ಟು ಕಟ್ಟಿದ್ದರು. ರೂಪಾಯಿಗೆ ನಾಲ್ಕರ ಬದಲು ಐದು ಕೊಡುವೆನೆಂದ. ಆ ಬೆಲೆಯಲ್ಲಿ ಕೊಂಡರೆ ಐದು ರೂಪಾಯಿ ಸೊಪ್ಪು ಕೊಂಡರೂ ಒಂದು ಊಟಕ್ಕೆ ಸಾಲಲಿಕ್ಕಿಲ್ಲವೆಂದೆ. ಹತ್ತು ಕೂಡ ಬೇಡವೆಂದಾಗ ಈ ಹೊಸಬನಿಗೆ ಸೊಪ್ಪ ತಿನ್ನುವದು ತಿಳಿಯದೆಂದು ತೀರ್ಮಾನಿಸಿಕೊಂಡು ಸುಮ್ಮನಾದ. ಒಳ್ಳೆ ತರಕಾರಿ, ತುಂಬ ಬೇಕಿದ್ದರೆ, ಶೋಕ ಮಾರ್ಕೆಟ್ಟಿಗೆ ಹೋಗುವದೇ ಒಳ್ಳೆಯದೆಂದು ಚೀಲ ಹಿಡಿದು ಹೊರಬಿದ್ದೆ. ಅಲ್ಲಿ ಗುಡ್ಡೆ ಹಾಕಿದ ವಿವಿಧ ತರಕಾರಿಗಳನ್ನು ನೋಡಿ ಖುಷಿಯಾಯಿತು. ಹೂಕೋಸು, (ಕಾಲಿಫ್ಲಾವರ್) ಎಲೆಕೋಸು(ಕ್ಯಾಬೇಜ) ನವಲಕೋಸು(ನವಲಕೋಲ) ಮೈಸೂರ ಬದನೆ (ಬಿಳೇ ಬದನೆಕಾಯಿ) ಬೆಂಗಳೂರುವಾಂಗಿ(ದುಂಡಗಿನ ಬದನೇಕಾಯಿ) ಸೀಮೆ ಬದನೆಕಾಯಿ ಆಲೂಗಡ್ಡೆ(ಬಟಾಟೆ) ಬೀನ್ಸ್(ಹುರಳಿಕಾಯಿ, ತಿಂಗಳವರೆಕಾಯಿ) ಡಬಲ್ ಬೀನ್ಸ್ ಬೀಟರೂಟ್ ಕ್ಯಾರೆಟ್ಟು (ಗಜ್ಜರಿಕಾಯಿ) ಮೂಲಂಗಿಗಳೆಲ್ಲ ಅಲ್ಲಿದ್ದವು. ಬೂದುಗುಂಬಳಕಾಯಿಗಳ ಬೆಟ್ಟವೇ ಇತ್ತು. ಧಾರವಾಡದ ಇನ್ನೂರು ಗ್ರಾಮಿನ "ಸೇರಿ" ನ ಬೆಲೆಯಲ್ಲಿಯೇ ಇಲ್ಲಿ ಒಂದು ಕಿಲೋ ದೊರೆಯುತ್ತದೆಂದು ಖುಷಿಯೋ ಖುಷಿ. ಐದು ರೂಪಾಯಿಗೆ ಹೊರಲಾರದಷ್ಟು ಕಾಯಿಪಲ್ಯ ಹೊತ್ತು ತಂದೆ.

ಏದುತ್ತ ಹೊತ್ತುತಂದ ತಾಜಾತರಕಾರಿಯ ರಾಶಿಯನ್ನು ನೋಡಿ ಸಂತೋಷಪಡುವ ಬದಲಾಗಿ, ಸಿಡುಕಿನ ಧ್ವನಿಯಲ್ಲಿ ಯಜಮಾನಿ, "ನಿನ್ನೆಯೇ ಕೆಲಸಕ್ಕೆ ನೇಮಿಸಿಕೊಂಡ ಹೊರಗಿನ ಕೆಲಸದವಳು, ಒಂದೇ ದಿನದಲ್ಲಿ ತನ್ನ ನಿಜಸ್ವರೂಪ ತೋರಿಸಿಕೊಡುಬಿಟ್ಟಳು. ಬಂದವಳೇ ನಯವಿನಯಗಳಿಂದ ಮಾತನಾಡಿಸಿ ತನ್ನ ಅಮ್ಮ ಶಾಲೆ (ಸೀರೆ)ಯೊಂದನ್ನು ಕೊಡಲು ಹೇಳಿದ್ದಾಳೆ ಎಂದಳು, ಮುಂದೆ ನೋಡೋಣವೆಂದು ಚಹಾ ತಿಂಡಿ ಕೊಟ್ಟಾಗ 'ಟೀ ಅಭ್ಯಾಸವಿಲ್ಲ, ನಂಗೆ ಬ್ರೆಡ್ ಕಂಡ್ರಾಗಲ್ಲ' ಎಂದು ಕಸದ ತೊಟ್ಟಿಗೇ ಸುರುವಿದಳು. ಮನೆಯಲ್ಲಿ ಕಾಫಿ ಬಿಸಿ ಇಡ್ಲಿ ತಿಂದೇ ರೂಢಿಯೆಂದಳು. ಅವಳಿಗಿಂತ ನಿರ್ಗತಿಕರು ನಾವೆಂಬ ಭಾವ ಅವಳ ಧ್ವನಿಯಲ್ಲಿತ್ತು. ಬಟ್ಟೆಗಳನ್ನು ಬಿಸಿನೀರಿನಲ್ಲಿ ಸೋಪುಪುಡಿ ಹಾಕಿ ಕುಕ್ಕಿ ಇಟ್ಟರೇ ಅವಳು ಒಗೆಯುವಲ್ಲಿದಂತೆ! ಸೀರೆ, ಛಾದರ, ಬೆಡ್‌ಶೀಟ್, ಟಾವೆಲ್‌ಗಳನ್ನು ವಾಶಿಂಗ್ ಲಾಂಡ್ರಿ(ಧೋಬಿ)ಗೆ ಕೊಡಬೇಕಂತೆ! ಸೀರೆಯನ್ನು ಉಡುವ ಬದಲು ನೈಟಿ ಹಾಕಿ; ನಿಮ್ಗೂ ಅನುಕೂಲ, ತಾನು ಕೆಲಸ ಮಾಡವಲ್ಲೆಲ್ಲಾ ಜನ ನೈಟಿ ಮನೇಲಿ ಹಾಕ್ಕೊಳೋದು ಎಂದು ಅಮೋಘ ಸಲಹೆಯಿತ್ತಳು. ತನ್ನ ಭಾಷೆ(ತಮಿಳು)ಯಲ್ಲಿ ಒಟಗುಡುತ್ತಲೇ ಹತ್ತು ವರ್ಷ ತಾಳಿಕೆ ಬಂದ ಒಂದು ಜೋಡಿ ಕಪ್

ಒಡೆದುಹಾಕಿದಳು. ಅದಕ್ಕಾಗಿ ವಿಷಾದಸೂಚಿಸುವ ಬದಲಾಗಿ, ಹಣ್ಣು ಕೊಳೆಯುವಂತೆ, ಸೀರೆ ಹರಿಯುವಂತೆ, ಕಪ್ ಒಡೆಯುವದು ಸಹಜವೆಂದು ಸಮಾಧಾನ ಹೇಳಿದಳು. ನಾಳೆಯಿಂದ ಕೆಲಸಕ್ಕೆ ಬರಬೇಕಾಗಿಲ್ಲವೆಂದು, ಒಂದು ದಿನದ ಸಂಬಳ ಕೊಡಹೊದಾಗ ರೇಗಾಡಿ, ಕೂಗಾಡಿ, ನಮ್ಮ ಮನೆ ಹಿಡಿದು, ಉತ್ತಮವಾದ ಬೇರೆ ಮನೆ ಬಿಟ್ಟು ಹಾನಿಮಾಡಿಕೊಂಡದ್ದಕ್ಕಾಗಿ, ತಿಂಗಳ ವೇತನ ವಸೂಲಮಾಡಿಯೇ ಹೋದಳು ಹಾಳಾದವಳು!" ಎಂದು ವರದಿ ಒಪ್ಪಿಸುವಾಗ ಅವಳಿಗಾದ ಅವಮಾನದ ಛಾಯೆ ಎದ್ದು ಕಾಣುತ್ತಿತ್ತು.

ಧಾರವಾಡದಲ್ಲಿ ಎರಡು ದಶಕಗಳಿಂದ ಬುಬ್ಬುವನ್ನು ಕೆಲಸಕ್ಕೆ ಇಟ್ಟುಕೊಂಡು, ಈಕೆ ಕೊಟ್ಟಿದ್ದನ್ನು ಸಂತೋಷದಿಂದ ತಿಂದು, ಹೇಳಿದ ಕೆಲಸ ಮಾಡಿಕೊಟ್ಟು, ಎಲ್ಲರ ಸ್ನಾನ ಮುಗಿದ ನಂತರ, ಬಟ್ಟೆ ಒಗೆದು ಊಟ ಆದನಂತರ ಭಾಂಡಿ ತಿಕ್ಕಿಕೊಂಡು, ಅವಳ ಸುಖ-ದುಃಖ ತನಗೂ ಸೇರಿದ್ದು ಎಂದು ಭಾವಿಸಿದವಳಿಗೆ ಈ ನಗರದ ಕೆಲಸದಾಕೆಯ ವರ್ತನೆ ನುಂಗಲಾರದ ತುತ್ತಾಯಿತು. ಇಂದಿನಿಂದ ಮನೆಗೆಲಸಗಳನ್ನೆಲ್ಲ ತಾನೊಬ್ಬಳೇ ನಿಭಾಯಿಸಿಕೊಳ್ಳುತ್ತೇನೆಂದಾಗ, ಅದಷ್ಟು ಸಹಕಾರ-ಸಹಾಯ ಮಾಡುತ್ತೇನೆಂದು ಆಶ್ವಾಸನೆ ಇತ್ತೆ. ಅಂತೇಯೆ ಸಿದ್ಧ ತಿಂಡಿ, ಆಹಾರ ಯಾವವು ಸಿಗುತ್ತವೆಂದು ಪತ್ತೆ ಹಚ್ಚಲು ಹೊರಟೆ. ದೊಡ್ಡ ಆವಾರದ ಮನೆಯ ಗೇಟಿಗೆ ಜೋಡಿಸಿದ "ಕಿ. ವಿ. ನಾಗೆಗೌಡ" ಫಲಕ ಲಕ್ಷ್ಯ ಸೆಳೆಯಿತು. ಈ "ಕಿಂಗ್ಲಿಷ್" ಸಮ್ಮಿಶ್ರಣಕ್ಕಿಂತ ಒಂದೇ ಭಾಷೆಯಲ್ಲಿ ಬರೆಯುವದು ಚೆನ್ನಾಗಿರುತ್ತಿರಲಿಲ್ಲವೇ? ಎಂದು ಯೋಚಿಸುತ್ತಿದ್ದಂತೆ ಅದರ ಅಡಿಯಲ್ಲಿ ಇರುವ ಎಚ್ಚರಿಕೆಯ ಮಾತು ಇನ್ನೂ ತಮಾಷೆಯಾಗಿ ಕಂಡಿತು. "ನಾಯಿ ಇದೆ ಉಸಾರ್" ಇಂತಹ ಕುಲಗೇಡಿ ಕನ್ನಡಕ್ಕಿಂತ ಅರೆಗನ್ನಡವೇ ಮೇಲೆನಿಸಿತು. "ಎಚ್ಚರಿಕೆ, ನಾಯಿ ಇದೆ" ಎಂದು ಬೋರ್ಡು ಹಾಕಿಸಿದ್ದರೆ, ಆಗುತ್ತಿರಲಿಲ್ಲವೇ? ಹೊಚ್ಚಹೊಸಮನೆಗೆ 'ಅಸೋಕನಿಳಯ' ಎಂದು ಕರೇ ಶಿಲೆಯ ಫಲಕ ಹಾಕಿಸಿದ್ದರು. ಕರ್ನಾಟಕದಲ್ಲಿದ್ದವರಿಗೆ ಸ್ವಚ್ಛ ಕನ್ನಡ ಬರೆಯುವಷ್ಟು ಅಭಿಮಾನ ತೋರಬೇಡವೇ? ಪ್ರತಿ ದಿನವೂ ರೇಲ್ವೆ ಗಾಡಿಗಳು ಮಲಯಾಳಿ, ತಮಿಳು, ಆಂಧ್ರದವರನ್ನು ತುಂಬಿತುಂಬಿ ಗುಳೇಬರುವವರನ್ನು ಹೊತ್ತು ತಂದು ಬೆಂಗಳೂರಿನಲ್ಲಿ ಇಳಿಸುತ್ತಿರುವದರಿಂದ ಈ ಭಾಷೆಯ ಅಪಭ್ರಂಶವಾಗಿರಬಹುದು ಎಂದುಕೊಂಡೆ. 'ಹ' ಬದಲಾಗಿ ಅಕಾರ ತೀರ ಸಾಮಾನ್ಯ. ಅಸು, ಆಲು ಇತ್ಯಾದಿ. ಅಲ್ಪಪ್ರಾಣ-ಮಹಾಪ್ರಾಣಗಳ ದೋಷ ಹೇರಳ. ಅಂತರ್‌ರಾಷ್ಟ್ರೀಯ ಖ್ಯಾತಿಯ ಬಾಟಾ ಚಪ್ಪಲಿಗಳ ಅಂಗಡಿಗಳು "ಬಾಟ" ಆಗುತ್ತವೆ. ಹೀಗೇಕೆ? ಎಂದು ಅಂಗಡಿಯವರನ್ನು ಕೇಳಿದರೆ ಇಲ್ಲಿಯವರು ಓದುವಾಗ ಬಾಟಾ ಎಂದೇ ಓದುತ್ತಾರೆ. ಪ್ರಭ, ಮಂಜುಳ, ಸುಧ, ಉಷ ಹುಡುಗಿಯರು ಹೆಸರು ಬರೆಯುವ ವಿಧಾನ. ನಿಮ್ಮ ಹೆಸರನ್ನು 'ಕಾಮತ' ಎಂದು ಬರೆದರೆ, 'ಕಾಮತಾ' ಎಂದು ಓದಬಹುದು. ಆದ್ದರಿಂದ ಹೆಸರು ಅಪಭ್ರಂಶವಾಗಬಾರದೆಂದಿದ್ದರೆ, 'ಕಾಮತ್' ಎಂದೇ ಬರೆಯಿರಿ ಎಂದು ಸೂಚಿಸಿದ.

'ಬ್ರಾಹ್ಮಣರ ರೊಟ್ಟಿಯಂಗಡಿ'ಯ ಹೆಸರನ್ನು ನೋಡಿ ಖುಷಿಯಾಯಿತು. ಸದ್ಯ ನನ್ನವಳಿಗೆ (ರೊಟ್ಟಿ ಭಕ್ರಿ) ಬಡಿಯುವದು ತಪ್ಪಿತು; ಕೆಲವನ್ನು ಕಟ್ಟಿಸಿಕೊಂಡು ಹೊದರೆ ಮನೆಯವಳ ಕೆಲಸವಾದರೂ ಕಡಿಮೆಯಾದೀತು ಅಂದುಕೊಂಡೆ. "ಹತ್ತು ರೊಟ್ಟಿ ಕಟ್ಟಿಕೊಡಿ" ಎಂದರೆ ಆತನಿಗೆ ಅರ್ಥವಾಗದೇ "ನಾವು ಕನ್‌ಫಕ್ಷನರಿ ಮಾತ್ರ ಮಾರೋದು" ಎಂದು ಬೇರೆ ಗಿರಾಕಿಗಳತ್ತ ಲಕ್ಷ ಹಾಕಿದ. ಮುಂಬಯಿ ಇರಾಣಿ ಅಂಗಡಿಗಳಲ್ಲಿ ಕಾಣುವ ವಿವಿಧ ಕೇಕುಗಳು, ಮೊಟ್ಟೆಗಳನ್ನು

ನೋಡಿ, ಇವನೊಬ್ಬ ಆಧುನಿಕ ಬ್ರಾಹ್ಮಣ ಅಂದುಕೊಂಡೆ. ಅವನ ಬಿಸಿ ಬದಾಮಿಹಾಲು ಹೇಗಿರುತ್ತದೆಂದು ಕೊಂಡು ಕುಡಿದಾಗ, ಅದರಲ್ಲಿ ಹಾಲು-ಬಾದಾಮಿಹಾಲು ಬದಲಾಗಿ, ಬಣ್ಣ ಮತ್ತು ಎಸೆನ್ಸ ಹಾಕಿದ ಬಿಸಿನೀರಿನಂತೆ ಇತ್ತು! ತೀರ ಇಕ್ಕಟ್ಟಾದ ಅಂಗಡಿಯೊಂದರಲ್ಲಿ ಜನ ಕಿಕ್ಕಿರಿದು ತುಂಬಿದ್ದರು. ಚಿಕ್ಕವರು, ದೊಡ್ಡವರು ಎಂಬ ಭೇದ ಭಾವವಿಲ್ಲದೇ ಸ್ಪರ್ಧೆಯಿಂದ, "ಕೃಷ್ಣಪ್ಪನವರೇ ಒಂದು ಚಕ್ಕಲಿ, ಮೂರು ನಿಪ್ಪಟ್ಟು, ಎರಡೂ ಆಲೂ ಬೊಂಡಾ..." ಎಂದುಕೊಳ್ಳುತ್ತ ಅಲ್ಲಿಯೇ ತಿಂದು ಕಾಗದಗಳನ್ನೆಲ್ಲಾ ಚೆಲ್ಲಾಪಿಲ್ಲಿಯಾಗಿ ಗಾಳಿಯಲ್ಲಿ ತೂರಿದ್ದರು. ಹೊಗೆಯಿಂದ ತುಂಬಿದ ಅಂಗಡಿಯಲ್ಲಿ ಹಿರಿವಯಸ್ಸಿನ ಕೃಷ್ಣಪ್ಪನವರು ನುರಿತ ಗೃಹಿಣಿಯಂತೆ ಕೋಡಬಳೆ, ಚಕ್ಕಲಿ, ತೆಂಗೊಳಲು, ಬೋಂಡಾ, ವಡೆ, ಪಕೋಡ ಮೊದಲಾದವುಗಳ ರಾಶಿ ಹಾಕಿದ್ದರು. ಜನ ತಿನ್ನುತ್ತಲೇ ಇದ್ದರು. ದೊಡ್ಡ ಕಾವಲಿ ತುಂಬ ಎಣ್ಣೆಯಲ್ಲಿ ಉದ್ದಿನ ವಡೆಗಳನ್ನು ಕರಿಯಲು ಹಾಕಿ "ನಿಮಗೇನು ಕೊಡ್ಲಿ?" ಎಂದರು. ಹೊಗೆಯಾಡುತ್ತಿದ್ದ ಇಡ್ಲಿ ನೋಡಿ ಅವನ್ನು ಕೊಡಲು ಹೇಳಿದೆ. ಹತ್ತು ಇಡ್ಲಿ ಎಂದಾಗ "ಪಾರ್ಸಲ್ಲಾ?" ಎಂದು ಕೇಳಿದರು. ರೇಲ್ವೆ, ಅಂಚೆಯ ಪಾರ್ಸಲ್‌ಗಳಂತೆ ಇಲ್ಲಿ ತಿಂಡಿಯ ಪಾರ್ಸಲ್‌ಗಳು ಎಂದು ಅರಿವಾಯಿತು. ಹತ್ತು ಇಡ್ಲಿ ಸಾಕಷ್ಟು ಚಟ್ನಿಗೆ ಎರಡೇ ರೂಪಾಯಿಗಳೆಂದು ತಿಳಿದಾಗ ಆಶ್ಚರ್ಯವಾಯಿತು.

ಬರುಬರುತ್ತ ಮನೆಯಲ್ಲಿ ಕೃಷ್ಣಪ್ಪನವರ ತಿಂಡಿಯ ಪ್ರಾಬಲ್ಯವೇ ಹೆಚ್ಚಾಗತೊಡಗಿತ್ತು. ಮನೆಗೆ ಬಂದ ಅತಿಥಿಗಳೆಲ್ಲ ಈ ತಿಂಡಿ, ಗೃಹಿಣಿ ಮಾಡಿದ್ದು ಎಂದು ಬೆನ್ನು ಚಪ್ಪರಿಸಿ ಹೋಗುತ್ತಿದ್ದರೂ ನಾವು ಗುಟ್ಟು ರಟ್ಟುಮಾಡುವ ಗೋಜಿಗೆ ಹೋಗಿರಲಿಲ್ಲ. ಇಷ್ಟೆಲ್ಲ ತಿಂಡಿ, ತಿಂದರೂ ಪ್ರಸಿದ್ಧ ಎಮ್.ಟಿ.ಆರ್‌ಗೆ ಕರೆದೊಯ್ಯಲಿಲ್ಲವೆಂದು ನನ್ನವಳ ದೂರು ಇದ್ದೇ ಇತ್ತು. ಆದ್ದರಿಂದ ಕೊನೆಗೊಮ್ಮೆ ಅದರ ಪತ್ತೆಹಚ್ಚಿ, ರಿಕ್ಷಾ ಬಾಡಿಗೆ ತೆತ್ತು, ಸಾಲಿನಲ್ಲಿ ಕಾದುನಿಂತು ನಮ್ಮ ಪಾಳಿ ಬಂದಾಗ, ಬಯಸಿ ಹೋದ ತಿಂಡಿ ಮುಗಿದು ಉಳಿದಿದ್ದನ್ನೇ ಪಡೆದು ತಿಂದು ಮರಳಿದಾಗ ಕಲ್ಪನೆಯ ರುಚಿ, ಆ ತಿಂಡಿಗಿರದೇ ನಮ್ಮ ಮಲ್ಲೇಶ್ವರ ಹೊಟೇಲುಗಳೂ ತಿಂಡಿ ರುಚಿಯಲ್ಲಿ ಕಡಿಮೆಯಿಲ್ಲವೆಂದು ಸಮಾಧನ ತಾಳುವಂತೆ ಆಯಿತು.

ಚಾಚೂ ತಪ್ಪದೇ ಸೇವಿಸುವ ಚಹಾ

ಚಿಕ್ಕಂದಿನಲ್ಲಿ, ಶರೀರ ತಂಪಾಗಿರಬೇಕು, ಬುದ್ಧಿ ಚುರುಕಾಗಿರಬೇಕು, ಎಂದು ಹಿರಿಯರು ಮಕ್ಕಳಿಗೆಲ್ಲ ಪೂರೈಸುತ್ತಿದ್ದ ಜೀರಿಗೆ, ಕೋತಂಬರಿ, ಬೆಲ್ಲ, ಹಾಲು ಹಾಕಿದ ಕಷಾಯವನ್ನೇ ಸೇವಿಸುವುದು ನಮಗೆಲ್ಲ ರೂಢಿಯಾಗಿತ್ತು. ತಲೆ ನೋವು ಬಂದಾಗ ಹಿರಿಯರು ಸೇವಿಸುತ್ತಿದ್ದ "ಚಹಾ" ಎಂದರೆ ಅದೇನೋ ದೂರ ಇಡುವ ಔಷಧಿ ಪೇಯವೆಂಬ ಕಲ್ಪನೆಯಿತ್ತು. ಮುಂದೆ ಕಷಾಯ ಸಿಗದ ಊರುಗಳಲ್ಲಿ ಅಪ್ಪಟ ಹಾಲು-ನೀರು ಹಾಲುಗಳನ್ನೇ ರೂಢಿಸಿಕೊಳ್ಳ ಬೇಕಾಯಿತು. ಕಾಲೇಜು ಹಾಸ್ಟೆಲಿನ ಸಹಪಾಠಿಗಳು ಪರೀಕ್ಷೆಯ ತಯಾರಿಯ ದಿನಗಳಲ್ಲಿ ರಾತ್ರಿಯಿಡೀ ಓದಬೇಕೆಂದು 'ಚಹಾ' ಎಂಬ ತೀರ್ಥ ಸಿಗದೇ ಹಲುಬಿ, ದೂರದೂರ ನಡೆದುಹೋಗಿ, ಚಲನಚಿತ್ರ ಮಂದಿರದ ಬಳಿ ತೆರೆದಿರುವ ಹೋಟೇಲಿಗೆ ಹೋಗಿ ಬರುವಾಗ, ಚಹದ ದರ್ಶನವನ್ನೇ ಮಾಡಿಸದ ಪಾಲಕರ ದೂರದೃಷ್ಟಿಗೆ ತಲೆ ತೂಗುವಂತೆ ಆಗಿತ್ತು. ಸಹಪಾಠಿ ಗಣಪತಿ, ಚಹಾದ ಪರಮಭಕ್ತನಿದ್ದ. ಗೆಳೆಯರಿಗಿಂತ ಮುಂದಾಗಿ ಹೋಟೇಲ್ ಹೊಕ್ಕು ಚಹಾ ಮುಗಿಸುತ್ತಿದ್ದಂತೆ, ತ್ವರಿತವಾಗಿ ಹೊರ ಬಂದು ಇನ್ನಿತರರು ಕಾಸು ಕಕ್ಕುವಂತೆ ನೋಡಿಕೊಳ್ಳುತ್ತಿದ್ದ. ಹಾಸ್ಟೇಲಿನ ರೂಮಿನಲ್ಲಿ ಚಹ ತಯಾರಿಸುವ ಯಾವದೇ ಸಾಮಗ್ರಿ ಇಲ್ಲದಿದ್ದರೂ ಒಬ್ಬನಿಂದ ಸ್ಟೋವ್, ಇನ್ನೊಬ್ಬನಿಂದ ಸೀಮೆ ಎಣ್ಣೆ, ಇನ್ನಾರಿಂದಲೋ ಹಾಲು, ಚಾ ಪುಡಿ, ಸಕ್ಕರೆ ತಂದು, ಚಹದ ಚಟ ತೀರಿಸಿಕೊಳ್ಳುವದರಲ್ಲಿ ಆತ ಹೆಸರು ವಾಸಿಯಾಗಿದ್ದ.

ವೃತ್ತಿಗಾಗಿ, ಪ್ರವಾಸಿಯಾಗಿ ಊರೂರು ಅಲೆಯುವದು ಅನಿವಾರ್ಯವಾದಾಗ ಆತಿಥ್ಯ ನೀಡಲು ಬಯಸಿದವರಿಗೆ, 'ಚಹಾ ನಡೆದೀತು!' ಎಂದು ಒಪ್ಪಿಗೆ ಸೂಚಿಸದೇ ಬೇರೆ ಮಾರ್ಗವಿರಲಿಲ್ಲ. ಅರ್ಧ ತಾಸು ಒದ್ದಾಡಿ ಅಡಿಗೆಮನೆಯಲ್ಲಿ ತಯಾರಾದ ಪಾನೀಯವನ್ನು ಉದರಕ್ಕೆ ಇಳಿಸುವದು ಮೊದಮೊದಲು ಕಷ್ಟಕ್ಕಿಟ್ಟುಕೊಳ್ಳುತ್ತಿತ್ತು. ತೀರ ತಿಳಿಯಾದದ್ದನ್ನು ಸೇವಿಸಿದರೆ ಜಲಬಾಧೆಯ ತಾಪತ್ರಯ, ದಪ್ಪವಾದದ್ದನ್ನು ಕುಡಿದರೆ ಹಸಿವಾಗುತ್ತಿರಲಿಲ್ಲ. ತುಂಬ ಕುದಿಸಿ ಕಹಿಯಾದುದನ್ನು ಕುಡಿದರೆ ನಿದ್ರಾ ದೇವಿ ಹತ್ತಿರ ಸುಳಿಯುತ್ತಲೇ ಇರಲಿಲ್ಲ. ಆದರೆ ಪೈ ಮಾಮಾ ಅವರು, 'ಚಾ' ಸಂಸ್ಕಾರವನ್ನು ಮೈಗೂಡಿಸಿಕೊಂಡ ಬಗೆಯನ್ನು ಹತ್ತಿರದಿಂದ ಕಂಡಾಗ ಈ ಅಮೋಘ ಪೇಯದ ಸರ್ವವ್ಯಾಪಕತೆಯ ಅರಿವಾಯ್ತು!

ಬೆಳಿಗ್ಗೆ ಎದ್ದೇಳಲು, ಪೈ ಅವರ ಪತ್ನಿ ಹಾಸಿಗೆಯಲ್ಲೇ ಹೊಗೆಯಾಡುವ ಚಹ ಪೂರೈಸಬೇಕಾಗಿತ್ತು. ನಾಶ್ತಾಕ್ಕೆ ದೋಸೆ, ಇಡ್ಲಿ, ಉಪ್ಪಿಟ್ಟುಗಳನ್ನು ಇಳಿಸಲು ಚಹದ ಧಾರೆ ನಡನಡುವೆ ಬೇಕೇ ಬೇಕು. ಬರಿದಾಗುತ್ತಿದ್ದ ಕಪ್ಪಿಗೆ ಚಹ ತುಂಬುತ್ತಲೇ ಇರಬೇಕು. ಕಕ್ಕಸು ಸರಿಯಾಗದಿದ್ದರೆ ಇನ್ನೊಮ್ಮೆ ಚಾ ಸೇವನೆ. ಆಫೀಸಿಗೆ ಹೋದೊಡನೆ ಕ್ಯಾಂಟೀನಿಗೆ ಹೋಗುವ ಸರಕಾರಿ ಅವಕಾಶ, ಸಾಹುಕಾರಿಕೆ ಕೈಕೊಂಡ ಪೈಗಳಿಗೆ ಇಲ್ಲದಿದ್ದರಿಂದ ಮನೆಯಿಂದ ಅಂಗಡಿಗೆ ಹೊರಡುವಾಗ ಹೂಜೆಯಂಥ ಫ್ಲಾಸ್ಕಿನಲ್ಲಿ ಚಹಾವನ್ನು ತುಂಬಿಸಿಕೊಂಡು ಬರುತ್ತಾರೆ. ನಡುನಡುವೆ ಗುಟುಕರಿಸುತ್ತಲೇ ವ್ಯಾಪಾರದ ಮೇಲ್ವಿಚಾರಣೆ ಮಾಡುತ್ತಾರೆ. ಬಾಯಿಗೆ ರುಚಿಯಿಲ್ಲವೆಂದು ಏನಾದರೂ

ಮೆಲುಕಾಡಿಸುತ್ತ ಇರುವ ಚಟವೂ ಇದೆಯಾದ್ದರಿಂದ ಹಸಿವು ಕುಂಠಿತವಾಗಿ, ಊಟಕ್ಕೆ ಕುಳಿತಾಗ ಅಡಿಗೆಗೆ ರುಚಿಯೇ ಇಲ್ಲವೆಂದು ಕೂಗಾಡುವದು ಸಾಮಾನ್ಯವಾಗಿತ್ತು. ಪತಿ ಕೇಳಿದಾಗೊಮ್ಮೆ ಚಹ ಮಾಡಿ ಕೊಡುತ್ತ, ಅದರರ್ಧ ಸೇಸುವುದೂ ಅವರ ಅರ್ಧಾಂಗಿನಿಗೆ ರೂಢಿಯಾಗಿತ್ತು. ಇಷ್ಟಾದರೂ ಅವರು ಪ್ರತಿದಿನಕ್ಕೆ ಬೇಕಾಗುವಷ್ಟೇ ಚಾ ಪುಡಿಯನ್ನು ತರಿಸುತ್ತಿದ್ದರು. ಬೀಡಿ-ಸಿಗರೇಟು ಸೇದುವವರು ಠೋಕ್ ಅವನ್ನು ಖರೀದಿಸಿದರೆ ಎಲ್ಲವನ್ನೂ ಬೇಗ ಬೇಗ ಸೇದಿ ಸುಟ್ಟು ಬೂದಿ ಮಾಡುತ್ತಾರಂತೆ! ಇದು ಚಹಕ್ಕೆ ಸಹ ಅನ್ವಯಿಸುತ್ತದೆಂಬುದು ಅವರ ಸ್ವಾನುಭವವಂತೆ. ಜೊತೆಗೆ ಪೇಟೆಗೆ ಕಳಿಸುವ ಪೋರನಿಂದ ನೂರು ಗ್ರಾಂ ಹುಡಿ ತರಿಸುವದು, ತಂದದ್ದು ಏನೂ ಚೆನ್ನಾಗಿಲ್ಲವೆಂದು ಹೇಳಿ ಬದಲಿಸಿ ತರುವಂತೆ ಮಾಡುವದು, ಅವರ ಹವ್ಯಾಸ. ಇದನ್ನರಿತ ಹುಡುಗ ಒಂದು ಸುತ್ತು ತಿರುಗಾಡಿ ಬಂದು ಅದೇ ಪೊಟ್ಟಣ ಕೈಗೆ ಕೊಟ್ಟಾಗ 'ಇದಾದರೆ 'ಗಂ' ಅನ್ನುತ್ತದೆ!' ಎಂಬ ಅವರ ಉದ್ಗಾರ ಅದನ್ನು ತಂದವನಿಗೆ ವಿಸ್ಮಯವುಂಟುಮಾಡುತ್ತಿತ್ತು.

ಪ್ರಾಥಮಿಕ ಶಾಲೆಗೆ ಹೋಗುವಾಗ, ಶೇಟ್, ಪುತ್ತು ಸೇಟ್, ಬಾಬಶೇಟ್, ವಿಟುಶೇಟ್ ಅವರ ಚಾದಂಗಡಿಗಳನ್ನು ದಾಟಿಯೇ ಮುಂದುವರಿಯಬೇಕಾಗುತ್ತಿತ್ತು. ಹೊರಚಾವಡಿಯಲ್ಲಿ ಮೂರು ಗುಂಡುಕಲ್ಲಿನ ಒಲೆಯ ಮೇಲೆ ಸದಾ ತಪೇಲಿಯಲ್ಲಿ ನೀರು ಕುದಿಯುತ್ತಲೇ ಇರಬೇಕು. ಗಿರಾಕಿಗಳನ್ನು ಆಕರ್ಷಿಸಲು ಅದಕ್ಕೊಂದು ತಾಮ್ರದ ನಾಣ್ಯ ಸೇರಿಸುತ್ತಿದ್ದು 'ಕಿಟ್‌ಕಿಟ್‌ಕಿಟ್' ಎಂದು ಅದು ನಾದ ಹೊರಡಿಸುತ್ತಿತ್ತು. ಅದರ ಮೇಲೆ ಬೆಚ್ಚನೆ ಸುಖನಿದ್ರೆಯಲ್ಲಿರುವ ಕಿಟ್ಲಿ (ಕೆಟಲ್) ಗಿರಾಕಿ ಬಂದಾಗೊಮ್ಮೆ ಕಾರ್ಯಗತವಾಗಿ ಹೊಗೆಕಾರುವ ಚಹಾ ಸಿದ್ಧವಾಗುತ್ತಿತ್ತು. ಹಾಲು, ಸಕ್ಕರೆ, ಡಿಕಾಕ್ಷನ್ ಮಿಶ್ರಣಕ್ಕೆ ನೊರೆ ಬರಿಸಲಿಕ್ಕೆಂದೇ ಒಂದು ಹನಿಯೂ ಸಿಡಿಯದಂತೆ ಒಂದು ಪಾತ್ರೆಯನ್ನು ಗಗನಕ್ಕೆ ತಗಲಿಸುವಂತೆ ಹಿಡಿದು ಪಾತಾಳಕ್ಕಿಳಿಯುವಂತಿದ್ದ ಇನ್ನೊಂದಕ್ಕೆ ಚಹವನ್ನು ವರ್ಗಾಯಿಸುವ ಚಮತ್ಕಾರ, ನೋಡಿಯೇ ಆನಂದಿಸುವಂತಿರುತ್ತಿತ್ತು. ಅರ್ಧ ಕಪ್ಪಿನಷ್ಟು ನೊರೆ ಉತ್ಪಾದನೆಯಾದರೆ, ಹೆಚ್ಚಿನ ಆದಾಯವಾಗುವದೆಂಬುದನ್ನು ಅಂಗಡಿಕಾರರು ಅನುಭವದಿಂದ ಬಲ್ಲರು! ಉತ್ತರ ಕರ್ನಾಟಕದ ಅಂದಿನ ಹೋಟೇಲಿನವರು ಚಿಕಣಿ ಕಪ್ಪು, ಗ್ಲಾಸುಗಳನ್ನು ಎಲ್ಲಿಂದ ಖರೀದಿಸುತ್ತಿದ್ದರೋ ಏನೋ! ಅವುಗಳಲ್ಲಿ ಸರಿಯಾಗಿ ಎರಡು ಗುಟುಕು ದ್ರವವೂ ಇರುತ್ತಿರಲಿಲ್ಲ! ಇಷ್ಟಾದರೂ 'ಸಿಂಗಲ್ ಚಾ' ಸೇವಿಸುವವರೂ ಇದ್ದರು. ಆಗ ಬೆಂಗಳೂರಿನ 'ಬೈಟು' ಪದ್ಧತಿ ಅಲ್ಲಿ ಪ್ರವೇಶಿದ್ದರೆ 'ಅರ್ಧಾ ಸಿಂಗಲ್' ಬಂದು ಹಳೇ ಮಾತಾಗಿರುತ್ತಿತ್ತು. ನಗರದ ಕೆಲವು ದೊಡ್ಡ ಹೊಟೇಲುಗಳಲ್ಲಿ ತೋರಿಕೆಯ ಬೃಹದ್ ಕಪ್ಪುಗಳ ಒಳಗೆ ಪುಟ್ಟವನ್ನು ಜೋಡಿಸಿದ್ದವೂ ಇರುತ್ತಿದ್ದವು. 'ಬೇಗ ಆರುವುದಿಲ್ಲ' ಎಂದು ತೋರ್ಪಡಿಸುವ ಸಾಂತ್ವನ ಬೇರೆ!

ಚಹಾಪಾನ, ರಾಷ್ಟ್ರೀಯ ಚಟವಾಗಿ ಬೆಳೆದಿದೆ. ಅದರ ಉಗಮ, ಬೆಳವಣಿಗೆ, ನಾಮಕರಣಗಳ ಬಗ್ಗೆ ಅಧ್ಯಯನ ಕೈಕೊಂಡು ಮಹಾಪ್ರಬಂಧ ಬರೆದು ಡಾಕ್ಟರೇಟ್ ಪದವಿ ಗಿಟ್ಟಿಸಬಹುದು. ಕಾಡಿನಲ್ಲಿ ದನ ಕರುಗಳು ಬೇರೆ ಬೇರೆ ಸೊಪ್ಪುಗಳನ್ನು ಮೇಯುತ್ತಿದ್ದಾಗ ಚಹದ ಸೊಪ್ಪನ್ನು ಅಗಿದು ಉತ್ತೇಜನಗೊಂಡದ್ದನ್ನು ದನಗಾಹಿಗಳು ಗಮನಿಸಿ ತಾವೂ ಅದನ್ನು ಶೋಧಿಸಿ, ಪರೀಕ್ಷಿಸಿ, ಅಗಿದು, ಉಲ್ಲಸಿತರಾದಂದಿನಿಂದ ಚಹಾದ ಶೋಧವಾಯಿತೆಂದು ತಿಳಿಯಲಾಗುತ್ತಿದೆ. ಅದರ ಜನ್ಮಭೂಮಿ ಚೀನದಲ್ಲಿ. ಎರಡು ಮೂರು ಸಾವಿರ ವರ್ಷಗಳ ಮೊದಲಿನಿಂದಲೂ ಚಹದ ಸೇವನೆ ಬಳಕೆಯಲ್ಲಿದೆ. ಅಲ್ಲಿಂದಲೇ ಭಾರತಕ್ಕೆ ಆಗಮಿಸಿ ಈಗ ಕೇರಳ, ನೀಲಗಿರಿ

ಬೆಟ್ಟಗಳು, ದಾರ್ಜಿಲಿಂಗ್ ಮತ್ತು ಅಸ್ಸಾಂದ ತೋಟಗಳಲ್ಲಿ ಅಧಿಕ ಪ್ರಮಾಣದಲ್ಲಿ ಬೆಳೆಸಲಾಗುತ್ತಿದೆ. ಚಹದ ಉತ್ಕೃಷ್ಟತೆಯನ್ನು ಅದರ ಶಕ್ತಿ ಸಾಮಾರ್ಥ್ಯಗಳ ತಳಹದಿಯ ಮೇಲೆ ವಿಂಗಡಿಸಲಾಗುತ್ತದೆ. ಪ್ರತಿಷ್ಠಿತರು 'ಸ್ಪೆಶಲ್ ಚಹಾ'ಕ್ಕೆ ಮಾರು ಹೋಗಿದ್ದಾರೆ. ಅದನ್ನು 'ಕೆ.ಟಿ.' ಎಂದು ಗುರುತಿಸಲಾಗುತ್ತದೆ. ಆದರೆ ಇವೆರಡು ಅಕ್ಷರಗಳು ಏನನ್ನು ಪ್ರತಿನಿಧಿಸುತ್ತವೆ ಎಂಬುದರ ಬಗ್ಗೆ ಭಾಷಾತಜ್ಞರಲ್ಲಿಯೂ ಒಮ್ಮತವಿಲ್ಲ! 'ಕಾಂಗೋ ಟೀ', 'ಕೇರಳ ಟೀ', 'ಕಾನನ್ ದೇವನ್ ಟೀ' ಎಂದು ಎಲ್ಲವೂ ಪ್ರಸಿದ್ಧಿಗೆ ಪಾತ್ರವಾಗಲು ಹವಣಿಸುತ್ತವೆ. ಇತ್ತೀಚೆಗೆ 'ಕರೆಂಟ್' ಎಂಬ ಹೊಸ ರೂಪ ಜನ್ಮ ತಾಳಿದೆ. ಕುಡಿದೊಡನೆ ಶರೀರದಲ್ಲಿ ವಿದ್ಯುತ್ ಸಂಚಾರದ ಅನುಭವದೊಂದಿಗೆ ಹೊಸ ಚೈತನ್ಯ ನೀಡುವದರಿಂದ ಈ ಅನ್ವರ್ಥಕ ನಾಮ ಪಡೆದಿದೆ, ಎಂದು ಚಹಜ್ಞನೊಬ್ಬ ವಿವರಣೆ ನೀಡಿದ. ಉತ್ಪಾದಕರೋ! ನಾನಾ ಸೊಪ್ಪು-ಪುಡಿಗಳ ಮಿಶ್ರಣಕ್ಕೆ ತಮ್ಮವೇ ವಿಶಿಷ್ಟ ಹೆಸರುಗಳನ್ನು ಕೊಟ್ಟು ಜಾಹೀರಾತು ಮಾಡುತ್ತಾರೆ. ಲಿಪ್ಟನ್ ಕಂಪನಿಯವರು ಹಸಿರು (ತಿಳಿ), ಹಳದಿ(ಮಧ್ಯಮ), ಕೆಂಪು(ಶಕ್ತಮಾನ್) ಲೇಬಲ್ ಎಂದು ಹೆಸರಿಸಿದ್ದಾರೆ. ತೇಜ್, ತಾಜಾ, ತಾಜಮಹಲ್ ಚಹದೆಲೆಗಳೂ ಇವೆ. ಫಿನ್ಲೆ, ಟಾಟಾ, ಬ್ರೂಕ್ ಬಾಂಡ್‌ಗಳಂತಹ ಖ್ಯಾತ ಕಂಪನಿಗಳೂ ಈ ಉದ್ದಿಮೆಯಲ್ಲಿ ಹಣ ತೊಡಗಿಸಿವೆ. ಅದನ್ನು ಸೊಪ್ಪು-ಪುಡಿ, ಹರಳುಗಳ ರೂಪದಲ್ಲಿ ತಯಾರಿಸುತ್ತವೆ. ಒಂದೇ ಒಂದು ಕಪ್ಪಿಗಾಗುವಷ್ಟು ಪೊಟ್ಟಣದಿಂದ ಹಿಡಿದು ಒಂದು ವಿವಾಹ ಸಮಾರಂಭಕ್ಕೂ ಆಗುವಷ್ಟು ಡಬ್ಬಿಗಳಲ್ಲಿ ಮಾರಾಟ ಮಾಡುತ್ತಾರೆ.

ಬಳಸಿದ ಸೊಪ್ಪನ್ನು ಕಲೆ ಹಾಕಿ ಅದನ್ನು ಅನೇಕ ರೀತಿಯಲ್ಲಿ ಲಾಭದಾಯಕವಾಗಿ ಬಳಸುವವರಿದ್ದಾರೆ. ಪುಷ್ಪ ಪ್ರಿಯರು ಗುಲಾಬಿ ಅದಿಕಂಟಿಗಳಿಗೆ ನೈಸರ್ಗಿಕ ಗೊಬ್ಬರದಂತೆ ಬಳಸಿದರೆ, ಹೇರಳವಾಗಿ ಅದು ಸಿಗುವಲ್ಲಿ ಬೆರಣಿ ಮಾಡುವವರು ಕಟ್ಟಿಗೆ ಪುಡಿಯಂತೆ ಬಳುಸುತ್ತಾರೆ. ಬೇಸಿಗೆಯಲ್ಲಿ ಬರ್ಫವು ಕರಗಿ ಹೋಗದಂತೆ ಅದನ್ನು ಮುಚ್ಚಲು ಪಾನೀಯದಂಗಡಿಯವರು, ಕಲಬೆರಕೆಗಾಗಿ ಕಿರಾಣಿ ಅಂಗಡಿಯವರು ಉಪಯೋಗಿಸುವದುಂಟು. ಹಿಂದೊಮ್ಮೆ ಭಾರತವು ರಶಿಯಕ್ಕೆ ದೊಡ್ಡ ಪ್ರಮಾಣದಲ್ಲಿ ಚಹ ರಫ್ತು ಮಾಡುವ ಒಪ್ಪಂದವನ್ನು ಮಾಡಿಕೊಂಡಿತ್ತು. ಆಗ ಶೀಘ್ರವೇ ಆಗರ್ಭ ಶ್ರೀಮಂತರಾಗುವ ಕನಸನ್ನು ಕಂಡ ವ್ಯಾಪಾರಿಗಳು ಕಲಬೆರಕೆಯ ಪುಡಿಯನ್ನು ರವಾನಿಸಲಾರಂಭಿಸಿದರು. ಇದನ್ನು ಕಂಡು ಹಿಡಿದ ರಶಿಯನ್ನರು ನಮ್ಮ ಖರ್ಚಿನಿಂದಲೇ ಅದನ್ನು ವಾಪಸು ಮಾಡಿದರಲ್ಲದೇ ಚಹದ ಆಯಾತವನ್ನೇ ನಿಲ್ಲಿಸಿಬಿಟ್ಟರು! ಆ ನಂತರ ಅವರು ಎಂತಹ ಚಹ ಕುಡಿಯುತ್ತಿದ್ದರೆಂಬುದಕ್ಕೆ ಊಹಾಪೋಹಗಳಿವೆ. ಮೊದಲು ತೀರ ತಿಳಿಯದಾದುದನ್ನು ಸೇವಿಸಲಾರಂಭಿಸಿದರಂತೆ. ನಂತರ ಒಂದೇ ಕಪ್ಪಿನಿಂದ ಇಬ್ಬರು, ಮೂವರು ಕುಡಿಯಲಾರಂಭಿಸಿದರು. ಕೇವಲ ಚಹದ ಸುವಾಸನೆ ಪಡೆದೇ ಬಾಯಿ ಚಪ್ಪರಿಸಿದರೆ, ಕೊನೆಗೆ ಬಿಸಿ ನೀರು ಹೀರುತ್ತ ಚಹಾದ ಕಲ್ಪನೆ ಮಾಡಿಕೊಳ್ಳಲಾರಂಭಿಸಿದರಂತೆ!

ವಧು ಪರೀಕ್ಷೆಯಲ್ಲಿ ಪಾಲುಗೊಂಡ ಅತಿಥಿಗಳಿಗೆ ಪರೀಕ್ಷೆಗೊಳಗಾಗುವ ಕನ್ಯೆಯು ಸ್ವಹಸ್ತದಿಂದ ತಯಾರಿಸಿದ ಚಹದಿಂದ ಸತ್ಕರಿಸುವ ಕಾಲವೊಂದಿತ್ತು. ಭಾವೀ ಅತ್ತೆಯು ಎದುರಿಗೇ ಆಸೀನಳಾದಾಗ ಹುಲ್ಲೆಯಂತೆ ಬೆಚ್ಚಿದ ಹುಡುಗಿಯು ಒಲೆಯ ಮೇಲಿನ ಕುದಿಯುವ ಎಸರು ನೀರನ್ನು ಕೈಮೇಲೆ ಕೆಡವಿಕೊಂಡು 'ನಪಾಸಾ'ದ ಉದಾಹರಣೆಗಳೆಷ್ಟೋ! ಬಿಳಿ ಉಪ್ಪನ್ನು ಸಕ್ಕರೆಯೆಂದು ಭ್ರಮಿಸಿದವರು, 'ಖಾರ್‌ಪುಡಿ' ಎಂದು ಬರೆದದ್ದನ್ನು 'ಛಾಪುಡಿ' ಎಂದು

ಗಡಿಬಿಡಿಯಿಂದ ಓದಿ 'ಚಹಾ!' ತಯಾರಿಸಿ ಮೂದಲಿಸಿಕೊಂಡವರಿದ್ದಾರೆ. ವಿವಾಹಿತ ಗೃಹಿಣಿಯರೆಲ್ಲರೂ ಚಹಾ ಪರೀಕ್ಷೆಯಲ್ಲಿ ಪಾಸಾಗಿದ್ದಾರೆ ಎಂದು ತಿಳಿಯುವಂತಿಲ್ಲ. ಆತ್ಮೀಯರ, ಪರಿಚಿತರ ಮನೆಗೆ ಹೋದಾಗಲೆಲ್ಲ 'ಕೂಡ್ರಿ, ಚಹಾ ಮಾಡಸ್ತೀನಿ!' ಎಂದಾಗೊಮ್ಮೆ ಇದೆಲ್ಲಿಯ ಗ್ರಹಚಾರ! ಅನಿಸದೇ ಇರುವುದಿಲ್ಲ. ಎಮ್ಮೆ ಹಾಲು ಹಿಂಡಿ, ಒಲೆ ಹಚ್ಚಿ ಕಾಯಿಸಿ ನೀರಿಟ್ಟು ಚಹಾ ಮಾಡುವಷ್ಟು ಸಮಯ ತೆಗೆದುಕೊಂಡು, ನಂತರ ಹೊಗೆಯಾಡದ ಚಹದ ಕಪ್ಪು ಕೈಗೆ ಬಂದಾಗ ಆ ಆಧುನಿಕರ ರೀತಿಗೆ ಬೆರಗಾಗುವಂತಾಗುತ್ತದೆ. ಗ್ಯಾಸ್ ಒಲೆ, ರೆಫ್ರಿಜೆರೇಟರ್‌ಗಳು ಇದ್ದೇನು ಪ್ರಯೋಜನ? ಎಂದು ವಿಸ್ಮಯ ಪಡುವಂತಾಗುತ್ತದೆ. ಇಷ್ಟು ಅನುಕೂಲಗಳಿದ್ದೂ ಚಹ ಮಾಡಲಾಗದವರು, ಮನೆಕೆಲಸದಾಳನ್ನು ಹಿತ್ತಲ ಬಾಗಿಲಿನಿಂದ ಹತ್ತಿರದ ಹೊಟೇಲಿಗೆ ಕಳಸಿ ಫ್ಲಾಸ್ಕಿನಲ್ಲಿ ಅತಿಥಿಗೂ ಮನೆಯವರಿಗೂ ತರಿಸುವವರಿದ್ದಾರೆ. ಒಮ್ಮೆ ಅಪರಿಚಿತರಲ್ಲಿ ಹೋದಾಗ ಚಹ ಬಂದಿತು. ಮನೆಯಾಕೆಯು ಎರಡು ಕಪ್ಪು ತಂದು ಯಜಮಾನರ ಕೈಯಲ್ಲಿಟ್ಟು 'ಹೊಸ ಕಪ್ಪು ಅವರಿಗೆ ಕೊಡ್ರಿ. ಹಳೆಯದು ನಿಮಗೆ' ಎಂದಾಗ ಗೊಂದಲವಾಗಿತ್ತು. 'ನನಗೆ ಮಧು ಮೇಹದ ತೊಂದರೆ, ಆದ್ದರಿಂದ ಈ ತಾರತಮ್ಯ!' ಎಂದು ಯಜಮಾನರು ಸ್ಪಷ್ಟೀಕರಣ ನೀಡಿದರು. ತೋಟದ ಮನೆಯ ಸಹಪಾಠಿಯ ಮನೆಗೆ ಹೋದಾಗ ಮೊದಲು, ದಣಿವಿನ ಪರಿಹಾರಕ್ಕೆ ಎಳೆನೀರು ಬಂದಿತ್ತು. ನಂತರ ಖಾರಾ ಮತ್ತು ಲಿಂಬೆ ಹಣ್ಣಿನ ಪಾನಕ ರಂಗಸ್ಥಳಕ್ಕೆ ಬಂದವು. ಕೊನೆಯಲ್ಲಿ ಪಾನೀಯಗಳ ರಾಜ ಚಹ, ಬಗೆ ಬಗೆಯ ತಿನಿಸುಗಳ ಸಭಾಸದರೊಂದಿಗೆ ಓಲಗಕ್ಕೆ ಆಗಮಿಸಿದ! ಆಗ ಮಾತ್ರ 'ಮಲೆನಾಡಿನ ಮಾವನನ್ನೆ ಮಾಡಿಕೊಂಡಿದ್ದರೆ!...' ಎಂದು ಪರಿತಪಿಸುವಂತೆ ಆಗಿತ್ತು.

ಚಹವೆಂಬ ಸಹಸ್ರಾರ್ಜುನನ ಸಾಕ್ಷಾತ್ಕಾರವಾಗಬೇಕಿದ್ದರೆ, ಯಾತ್ರಿಕನಾಗಿ ದೇಶ ವಿದೇಶದಲ್ಲಿ ಪ್ರಯಾಣ ಮಾಡಬೇಕು. ಸ್ವದೇಶದಲ್ಲೇ ಹತ್ತಾರು ರೂಪಗಳು. ಎದ್ದರೆ ಕುಳಿತರೆ ಕಾಫಿ ಹೀರುವ ಬೆಂಗಳೂರಿನಲ್ಲಿ ಉತ್ತಮ ಚಹ ಪಡೆಯಲು ಪುಣ್ಯ ಮಾಡಿ ಬರಬೇಕು. ದಣಿದ ದೇಹಕ್ಕೆ ಕೊಂಚ ಚೇತರಿಕೆ ಬರಲೆಂದು ಒಳ್ಳೆಯ ಹೊಟೇಲಿನ ಮಾಣಿಗೆ 'ಒಂದು ಖಡಕ್ ಚಾ ತಗೊಂಡು ಬಾರಪ್ಪಾ!' ಎಂದು ಬಿನ್ನವಿಸಿಕೊಂಡರೆ ಆತ ಕಕ್ಕಾವಿಕ್ಕಿಯಾಗಿ, 'ಏನು ಸಾರ್!' ಅನ್ನುತ್ತಾನೆ. ಕರ್ನಾಟಕದ ರಾಜಧಾನಿಯಲ್ಲಿ ಚಹಾ ಎಂದರೆ ಅರ್ಥವಾಗುವುದಿಲ್ಲ. ಮಾಣಿ ಇಂಗ್ಲೀಷ್ ಮೀಡಿಯಂ ಓದಿರಬೇಕು ಎಂಬುದು ಗಮನಕ್ಕೆ ಬಂದು ಒಂದು ಕಪ್ ಸ್ಟ್ರಾಂಗ್ ಟೀ ಎನ್ನಬೇಕಾಯಿತು. ಎದುರಿಗೆ ಬಂದ ದ್ರವ ಕಾಫಿಯನ್ನು ಹೋಲುತ್ತಿದ್ದಾಗ ಇದು 'ಟೀ ನಾ?' ಎಂದರೆ ಮಾಣಿ ಕೊಟ್ಟ ಉತ್ತರ ಮೂಕನನ್ನಾಗಿಸಿತು, 'ನೋಡಿ ಸಾರ್'! ಕಾಣಲು ವಾಸನೆಯಲ್ಲಿ ಕಾಫಿಯಂತೆ ಇದ್ರೂನೂವೆ ಟೀ ಪೌಡರ್ ಹಾಕಿಯೇ ಮಾಡಿದ್ದು. ಎಂದು ಸಂತೈಸಿದ. ಮದ್ರಾಸಿನಲ್ಲಿ ಕೊಟ್ಟ ಚಹವನ್ನು ಲೋಟಾ ವಾಟಿಗಳ ಬಿಗಿಯಪ್ಪುಗೆಯಿಂದ ಬೇರ್ಪಡಿಸಲು ಪ್ರಯಾಸವಾಗಿ ಬಟ್ಟೆಯ ಮೇಲೆಲ್ಲ ಚಿಮ್ಮಿತ್ತು. ಇನ್ನೊಮ್ಮೆ ಮಾಣೀಯೇ ವಿಚ್ಛೇದನಾ ವಿಧಾನವನ್ನು ತೋರಿಸಿಕೊಟ್ಟ.

ಧಾರವಾಡದವರು ಚಹವನ್ನು ಸೋಸಿದರೆ ಬಿಜಾಪುರದವರು ಕಾಸುತ್ತಾರೆ. ಕಾಸಿ ಕಾಸಿ ಅದು ಕಾಢಾ ಆಗಿರುತ್ತದೆ. ಪುಣೆಯ ಯಾಲಕ್ಕಿ ಪುಡಿ ಸೇರಿಸಿದ ಚಹ ತಿಳಿ ಪಾಯಸದಂತಿರುತ್ತದೆ. ಮುಂಬೈಯಲ್ಲಿ ಒಳ್ಳೆಯ ಚಾ ಬೇಕೆಂದಾಗ ಮಾಣಿ, 'ಒಂದು ಗುಲಾಬಿ ಅಲ್ಲವೇ?' ಎಂದು ಕೇಳಿದ 'ನನಗೆ ಮಲ್ಲಿಗೆ ಗುಲಾಬಿ', ಬೇಕಿಲ್ಲ 'ಎಂದಾಗ ಇಲ್ಲಿ ಅಪ್ಪಟ ಹಾಲು ಮುದಿಯರಿಗೆ,

ಮಕ್ಕಳಿಗೆ ರೋಗಿಗಳಿಗೆ ಮೀಸಲು, ಎಂದು ಕಟ್ಟಪ್ಪಣೆ ಇದೆ. ಹೆಚ್ಚು ಹಾಲು ಹಾಕಿದ ಚಹ, ಅಧಿಕಾರಿಗಳಿಗೆ ತಿಳಿಯದಿರಲೆಂದು, ಗುಲಾಬಿ ಎಂದು ಚಂದದ ಹೆಸರಿನಿಂದ ಕರೆಯುತ್ತೇವೆ!' ಎಂದು ವಿವರಿಸಿದಾಗ ಅಲ್ಲಿಯವರ ರಸಿಕತೆ ಮೆಚ್ಚಿಕೊಳ್ಳುವಂತೆ ಆಯಿತು. ನಾಸಿಕದಲ್ಲಿ 'ಗೋಲ್ಡನ್' ಎಂದರೆ ಉತ್ತಮ ಚಹ. ಎಲ್ಲೋರಾ ಗುಹಾಲಯದ ಪರಿಸರದಲ್ಲಿ ವಿನಂತಿಸಿಕೊಂಡಾಗ ಮಾರ್ಗದರ್ಶಿಯೇ ಸ್ಟೋವ್ ಹೊತ್ತಿಸಿ ಒಂದು ಕಪ್ ಉತ್ತಮ ಚಹ ತಯಾರಿಸಿ ನೀಡಿದ್ದ. ಮರಳುಗಾಡಿನ ರಾಜಸ್ಥಾನದಲ್ಲಿ ಚಹದಂಗಡಿಯವರು ಎಂದೂ ಬೆಳಗದ ಎಲ್ಯುಮಿನಿಯಂ ಕೈ ಪಾತ್ರೆಯಲ್ಲಿ ಅರೆಕಪ್ಪು ಮಡಕೆ ನೀರು, ಎರಡು ದೊಡ್ಡ ಚಮಚ ಖಂಡೇಸರಿ ಸಕ್ಕರೆ, ಒಂದು ಚಮಚ ಚಹಾ ಪುಡಿ, ಹಾಲು, ಹಸಿ ಶುಂಠಿಗಳನ್ನು ಒಟ್ಟಿಗೆ ಸೇರಿಸಿ ಚೆನ್ನಾಗಿ ಕುದಿಸಿ ಗ್ಲಾಸಿನಲ್ಲಿಯೇ ಸೋಸಿ ಕೈಗೆ ಕೊಟ್ಟಾಗ ನೆಗಡಿ, ಕೆಮ್ಮುದಮ್ಮುಗಳೆಲ್ಲ ಒಟ್ಟಿಗೇ ಮಾಯವಾದ ಭ್ರಮೆಯುಂಟಾಗುತ್ತದೆ. ಪಂಜಾಬಿ ಢಾಬಾಗಳಲ್ಲೂ ಬೃಹತ್ ಲೋಟಾ ತುಂಬ ಅಪ್ಪಟ ಎಮ್ಮೆಯ ಹಾಲಿನಲ್ಲಿ ಚಹ ತಯಾರಿಸಿ ಕೊಡುತ್ತಾರೆ. ಅದನ್ನು ಸೇವಿಸಿದ ನಂತರ ಊಟ-ತಿಂಡಿ ಏನೂ ಬೇಡವಾಗುತ್ತದೆ.

ರೈಲು ಪ್ರಯಾಣದಲ್ಲಿ ಸಿಗುವ ಚಹದ ದಶಾವತಾರಗಳು ಇನ್ನೆಲ್ಲೂ ಲಭ್ಯವಾಗಲಾರವು! ಅಳ್ನಾವರದ ಚಹಾ ಅಲ್ಲಿಯ ಮಳೆಗಾಲದ ಹೊಂಡದ ನೀರಿನ ಬಣ್ಣ ರುಚಿಗಳನ್ನು ಹೊಂದಿದ್ದರೆ, ಕರ್ಜತ್‌ನ ಚಹ ಅದಕ್ಕಿಂತ ದಪ್ಪರೂಪ, ಸೂರತ್ ಜಂಕ್ಶನ್‌ದಲ್ಲಿ ಚಹ ಕೊಟ್ಟ ಮಣ್ಣಿನ ಕುಲ್ದಿ ಬಟ್ಟಲು ಆಕರ್ಷಕವಾಗಿ ಕಂಡಿತು. ಅದನ್ನು ಹಿಂದಿರುಗಿಸದೇ ಕೊಂಡು ಕೊಳ್ಳುತೇನೆಂದಾಗ ಸಹ ಪ್ರಯಾಣಿಕರು ನಕ್ಕರು. ಚಹ ಕುಡಿದಾದೊಡನೆ ಅದನ್ನು ಒಡೆದು ನಾಶ ಪಡಿಸಬೇಕೆಂದಾಗ ನಂಬುವದೇ ಕಷ್ಟವಾಯಿತು. ಒಂದೇ ಪ್ರಯಾಣದಲ್ಲಿ ಹತ್ತು ಬಗೆಯ ಮಣ್ಣು ಕುಡಿಕೆಗಳನ್ನು ಸಂಗ್ರಹಿಸಿದ್ದೆ. ಫ್ರಾಂಟಿಯರ್ ಮೇಲ್ ಎಂಬ ಖ್ಯಾತ ಟ್ರೇನಿನಲ್ಲಿ ಸಾಹೇಬನಾಗಿ ಪ್ರವಾಸ ಮಾಡುವ ಸಂದರ್ಭ ಬಂದಿತ್ತು. ಟೋಸ್ಟ್-ಪೊಟ್ ಟೀ ಗೆ ಆರ್ಡರ್ ಕೊಟ್ಟಿದ್ದೆ. ಮುಕ್ತಹಸ್ತದಿಂದ ಕೊಡ ಮಾಡಿದ ಬ್ರೆಡ್ ಟೋಸ್ಟ್‌ಗಳಿಗೆ ಬೆಣ್ಣೆ, ಜಾಮ್ ಸಾಲಲಿಲ್ಲ. ದೊಡ್ಡ ಕಿಟ್ಲಿಯ ತುಂಬ ಬಂದ ಚಹದ ಡಿಕಾಕ್ಷನ್‌ಗೆ ಹಾಲು ಸಕ್ಕರೆ ಸಾಲಲಿಲ್ಲ. ಸಾಹೇಬರುಗಳಿಗೆ ಮೋಸ ಮಾಡುವ ಈ ಪದ್ಧತಿಗೆ ತಲೆದೂಗುವಂತೆ ಆಯಿತು.

ಕಾಶ್ಮೀರದಲ್ಲಿ ವರ್ಷವಿಡೀ ಮೈಕೊರೆಯುವ ಚಳಿಯಿರುವದರಿಂದ ಕಾಲಡಿಯಲ್ಲಿ ಮಂದವಾಗಿ ಉರಿಯುವ 'ಕಾಂಗ್ಡಿ' ಒಲೆಯನ್ನು ಇಟ್ಟುಕೊಂಡು ಸಾಮೋವರದಿಂದ ಚಹ ಸೇವಿಸುತ್ತ ಬೆಚ್ಚಗೆ ಇರಲು ಯತ್ನಿಸುತ್ತಾರೆ. ಇದಕ್ಕಾಗಿ ಅವರು ಕಪ್, ಗ್ಲಾಸ್ ಬಳಸದೇ ಚೀನಾ ಗಾಜಿನ ಚಿಕ್ಕ ಬೋಗುಣಿಯಂತಹ ಬಟ್ಟಲು ಬಳಸುತ್ತಾರೆ. ಅವರು ಚಹ ಮಾಡುವ ಕ್ರಮಗಳೂ ಭಿನ್ನವಾಗಿವೆ. ಜಪಾನೀಯರಂತೆ ಮಲ್ಲಿಗೆ, ಜಾಜೀ ಸುವಾಸನೆಯ ಡಿಕಾಕ್ಷನ್ ಚಹಾ ಕುಡಿಯುತ್ತಾರೆ. ಟಿಬೇಟನ್ನರಂತೆ ಬೆಣ್ಣೆ ಹಾಕಿ, ಜೊತೆಗೆ ಉಪ್ಪು ಕರಿದ ಸೇವಿಗೆ ಸೇರಿಸಿದ 'ಕಾಹವಾ' ಇದೆ. ಇತರ ರಾಜ್ಯಗಳ ಹಾಲು ಸಕ್ಕರೆಯ ಚಹವೂ ಇದೆ. ಇದೊಂದನ್ನು ಬಿಟ್ಟರೆ ಉಳಿದ ಚಹಾ ಪ್ರಕಾರಗಳು ಪ್ರವಾಸಿಗಳಿಗೆ ಸುಲಭವಾಗಿ ಸಿಗುವಂತಹವಲ್ಲ. ಕಾಶ್ಮೀರಿ ಕುಟುಂಬಗಳೊಂದಿಗೆ ಪರಿಚಯ, ಆತ್ಮೀಯತೆಗಳನ್ನು ಬೆಳೆಸಿಕೊಂಡು, ಅವರನ್ನೂ ಝೇಲಂ ನದಿ, ದಲ್ ಸರೋವರಗಳಿಗೆ ನೌಕಾ ವಿಹಾರಕ್ಕೆ ಕರೆದೊಯ್ದರೆ, ಕಾಶ್ಮೀರಿ ಹೆಂಗಳೆಯರು ಪುರುಷರನ್ನು ಸಂತೋಷ ಪಡಿಸಲು ಬಗೆಬಗೆಯ ಚಹ ಪ್ರಕಾರಗಳನ್ನು ನಾವೆಯಲ್ಲಿಯೇ ಸಿದ್ಧಗೊಳಿಸಿ ಆಗೀಗ ಪೂರೈಸುತ್ತಲೇ ಇರುತ್ತಾರೆ.

ಮಧ್ಯಪ್ರದೇಶದ ಬಸ್ತರ ಜಿಲ್ಲೆಯ ಅತಿ ಹಿಂದುಳಿದ ಪ್ರದೇಶವಾದ ಅಬುಜಮಾಡದ ಅದಿವಾಸಿಗಳು ಅತಿಥಿಗಳಿಗೆ ತಾವೇ ಇಳಿಸಿದ ಮಹುವಾ ಸೆರೆ, ಬೆಳೆಸಿದ ಗಾಂಜಾಗಳಿಂದ ಸತ್ಕಾರ ಮಾಡುತ್ತಾರೆ. ಇವೆರಡೂ ತ್ಯಾಜ್ಯವೆಂದು ತಿಳಿದಾಗ ಯಜಮಾನ ಪಟೇಲನು ದೂತನನ್ನು ನೆರೆ ಮನೆಗೆ ಓಡಿಸಿದನು. ಆ ತನಕ ಆದಿವಾಸಿ ಗೃಹಿಣಿ ಶುಭ್ರವಾಗಿ ಸಾರಿಸಿದ ಹೊರಾಂಗಣವನ್ನು ಇನ್ನೊಮ್ಮೆ ಗುಡಿಸಿ ಕಂಬಳಿ ಹಾಸಿ ವಿರಮಿಸಲು ಅವಕಾಶ ಕಲ್ಪಿಸಿದಳು. ದಿನವೆಲ್ಲ ಮಂದವಾಗಿ ಉರಿಯುತ್ತಲೇ ಇರುವ ಒಲೆಯನ್ನು ಪ್ರಜ್ವಲಿಸುವಂತೆ ಮಾಡಿ ಪಾತ್ರೆಗೆ ಒಂದಿಷ್ಟು ನೀರು ಸೇರಿಸಿ ಅದರ ಮೇಲಿಟ್ಟಳು. ಕೈಗಡವಾಗಿ ತಂದ ಬೆಲ್ಲವನ್ನು ಅದಕ್ಕೆ ಸೇರಿಸಿ ಎಲ್ಲಿಂದಲೋ ಸಂಪಾದಿಸಿದ ಚಹದ ಪುಡಿ ಅದಕ್ಕೆ ಹಾಕಿದಳು. ಒಂದು ಬೆತ್ತದ ಬುಟ್ಟಿ ಎಳೆದು ಅದರಲ್ಲಿದ್ದ ಸಾಲ ಮರದ ಹಸಿ ಪರ್ಣಗಳನ್ನು ಎತ್ತಿ ಕ್ಷಣದಲ್ಲಿ ದೊನ್ನೆಯಾಗಿ ಪರಿವರ್ತಿಸಿದಳು. ಅದಕ್ಕೆ ಸುರುವಿದ, ಹಾಲು ಇಲ್ಲದ ಚಹ ಅದೆಷ್ಟು ರುಚಿಕರವಾಗಿತ್ತೆಂದು ವರ್ಣಿಸಲು ಅಸಾಧ್ಯ! ನಿಸರ್ಗಕ್ಕೆ ತೀರ ಸನಿಹದ ಸಾಮಾನು, ವ್ಯಕ್ತಿಗಳಿಂದ ಸಿದ್ಧವಾದದ್ದಕ್ಕೆ ಇರಬೇಕು. ಇಪ್ಪತ್ತು ಕಿಲೋಮೀಟರ ಮುಳ್ಳು ಕಂಟೆಗಳ ಕಾಲು ದಾರಿ ತುಳಿಯುತ್ತ ಆದಿವಾಸಿ ಗ್ರಾಮ ತಲುಪಿದಾತನಿಗೆ ದಣಿವು, ಬಾಯಾರಿಕೆಗಳನ್ನು ನೀಗಿಸಿಕೊಳ್ಳುಲು ಇನ್ನೊಂದು ಪಾನೀಯವಿರಲಿಕ್ಕಿಲ್ಲ! ಎನಿಸಿತು.

ಅಂತರಾಷ್ಟ್ರೀಯ ಪ್ರವಾಸಿಗರಿಗೆ ಬರುವ ಅನುಭವಗಳು ಬೇರೆಯೇ! ರೋಮ್ ನಗರದಲ್ಲಿ ಸ್ವಸಹಾಯ ಪದ್ಧತಿಯ ಹೊಟೇಲ್ ಒಂದರಲ್ಲಿ ಪ್ರದರ್ಶಿಸಿದ ವಿವಿಧ ತಿಂಡಿ-ತೀರ್ಥಗಳ ಜೊತೆಯಲ್ಲಿ ಪುಡಿ ಮಾಡಿದ ಬರ್ಫದಲ್ಲಿ ಜೋಡಿಸಿಟ್ಟ ಅಂದದ ಗಾಜಿನ ಪಾತ್ರೆಗಳಲ್ಲಿದ್ದ ವರ್ಣಮಯ ಪಾನಕದಂಥ ದ್ರವ ಆಕರ್ಷಿಸಿತ್ತು. ಕೇಸರಿಯ ದಳಗಳಂತೆ ತೇಲುತ್ತಿರುವ ಸುಂದರ ಬಣ್ಣ ಗ್ಲಾಸುಗಳ ಮೇಲೆ ಓರಣವಾಗಿ ಜೋಡಿಸಿದ ಲಿಂಬೆ ಹಣ್ಣಿನ ಚೂರು, ಹೀರಿ ಕುಡಿಯಲು ಹುಲ್ಲು ಕಡ್ಡಿ (ಸ್ಟ್ರಾ) ಇದ್ದವು. ಬಾಯಿ ನೀರೂರಿ ಒಂದು ಗ್ಲಾಸು ಪಾನಕ ಪಡೆದು, ಗುಟುಕಿನಷ್ಟು ಹೀರಿದಾಗ ಬಾಯೆಲ್ಲ ಕಹಿಯಾಗಿತ್ತು! ಹಾಲು ಸಕ್ಕರೆಯಿಲ್ಲದೆ ಕಡಕ್ ಚಹದ ಡಿಕಾಕ್ಷನ್ ರುಚಿ ಹೇಳಬೇಕೆ? ಅರ್ಧ ಗ್ಲಾಸು ಕುಡಿಯುವದೂ ಕಠಿಣವಾಗಿತ್ತು. ಲಂಡನ್ನಿನಲ್ಲಿ ಓರ್ವ ಬ್ರಿಟಿಷ್ ಮಹಿಳೆ, ತಾನು ಭಾರತದಲ್ಲಿ ಕಳೆದ ದಿನಗಳ ಸವಿ ನೆನಪಿಗೆ ಹಾಸ್ಟೇಲಿನ ತನ್ನ ರೂಮಿನಲ್ಲಿ ಕೈಯಾರೆ ತಯಾರಿಸಿದ ಚಹಾಪಾನಕ್ಕೆ ಸ್ನೇಹಿತನೊಂದಿಗೆ ನನ್ನನ್ನು ಆಹ್ವಾನಿಸಿದ್ದಳು. ಅವಳ ಬಾಯಿ ತಾನು ನೋಡಿದ ಆಗ್ರಾ, ದಿಲ್ಲಿ, ಜೈಪುರ, ಗ್ವಾಲ್ಹೇರಗಳನ್ನು ಬಣ್ಣಿಸುತ್ತಿದ್ದಾಗ, ಕೈಗಳು ಚಹದ ತಯಾರಿಯಲ್ಲಿ ತೊಡಗಿದ್ದವು. ಕೈಪಾತ್ರೆಯ ತುಂಬ ನೀರು ಕುದಿಸಿ, ಅದರಲ್ಲಿ ಕಪ್, ಸಾಸರ್, ಕಿಟ್ಲಿ, ಹಾಲಿನ ಪಾತ್ರೆ ಸೋಸುವ ಸಾಧನವನ್ನೆಲ್ಲ ತೊಳೆದಿಟ್ಟಳು. ಇನ್ನೊಮ್ಮೆ ನೀರನ್ನು ಕುದಿಸಿ, ಚಾ ಸೊಪ್ಪು ಕಿಟ್ಲಿಗೆ ಸೇರಿಸಿದಳು. ಮುಚ್ಚಳ ಹಾಕಿ, ಆರದಂತೆ ಉಣ್ಣೆಯ ಟೀಕೋಝಿಯನ್ನು ಕಿಟ್ಲಿಗೆ ಹೊದಿಸಿದಳು. ಅದನ್ನು ಕಾಶ್ಮೀರದಲ್ಲಿ ಕೊಂಡು ತಂದಿದ್ದೇನೆಂದು ಹೆಮ್ಮೆಯಿಂದ ಸಾರಿದಳು. ಹಾಲನ್ನು ಪ್ರತ್ಯೇಕವಾಗಿ ಕುದಿಸಿ ಕಪ್ಪಿಗೆ ಸುರಿದಳು. ಚೆನ್ನಾಗಿ ಬಿಸಿಯಾದ ಚಹ ಸಿಗಬೇಕೆಂದು ಆಕೆ ಇಷ್ಟೆಲ್ಲ ಶ್ರಮ ವಹಿಸಿದರೂ ಸಕ್ಕರೆ ಸೇರಿಸಿ ಸವಿಯುವ ಹೊತ್ತಿಗೆ ಅದು ಅರಿ ಹೋಗಿತ್ತು. ಕೊನೆಗೆ ರಾಜಸ್ಥಾನಿ ಪದ್ಧತಿಯಂತೆ ಸುಡು ಚಹ ತಯಾರಿಸುವ ವಿಧಾನವನ್ನು ಹೇಳಿಕೊಟ್ಟಾಗ, ಇಷ್ಟೆಲ್ಲ ವರ್ಷ ತನಗೆ ಈ ವಿಧಾನವೇಕೆ ಹೊಳೆಯಲಿಲ್ಲವೆಂದು ಮರುಗಿದಳು.

ಜರ್ಮನ್ನರಿಗೆ ಚಹವೆಂದರೆ ಅಚ್ಚುಮೆಚ್ಚು. ಅತ್ಯಂತ ದುಬಾರಿಯಾಗಿದ್ದ ಈ ವಸ್ತುವನ್ನು ಆ ದೇಶದಲ್ಲಿ ಕೊಳ್ಳುವದು ಸಕಲರಿಗೂ ಸಾಧ್ಯವಿರಲಿಲ್ಲ. ಚಹ ಉತ್ಪಾದಿಸುವ ಯಾವದೇ ದೇಶದ ಪ್ರಯಾಣಿಕ ಬಂದು ಅವರಲ್ಲಿ ಇಳಿದಾಗ ಕೇಳುವ ಪ್ರಶ್ನೆ ಒಂದೇ! "ನಿಮ್ಮ ಸಾಮಾನು ಸರಂಜಾಮುಗಳಲ್ಲಿ ಯಾವುದೇ ಪ್ರಕಾರದ ಚಹ ತಂದಿರುವಿರಾ?" ಅದಿಲ್ಲವಾದರೆ ಕ್ಷಣಾರ್ಧದಲ್ಲಿ ದೇಶದ ಯಾವ ಮೂಲೆಗೆ ಹೋಗಲು ಯಾವುದೇ ಅಡ್ಡಿ ಆತಂಕಗಳು ಬಾರವು! ಅಲ್ಲಿಯೇ ಬೇರು ಬಿಟ್ಟ ಭಾರತೀಯರು ತಮಗೆ ಆಗಾಗ ಅಲ್ಲಿ ಬರುವವರ ಜೊತೆ ಟೀ ಪೌಡರ್ ಕಳಸಿಕೊಟ್ಟರೆ, ಜರ್ಮನಿಯಿಂದ ಬೇಕಾದ ಸಾಮಗ್ರಿಯನ್ನು ಕಳಸಿಕೊಡುವದಾಗಿ ತಿಳಿಸಿದ್ದರು. ಈ ಗುಪಿತ ವ್ಯವಹಾರ ಒಪ್ಪಿಗೆಯಾಗಲೇ ಇಲ್ಲ. ದಕ್ಷಿಣ ಅಮೇರಿಕೆಯಿಂದ ವಿಪುಲವಾಗಿ ಕಾಫಿ ಆಮದು ಮಾಡಿಕೊಳ್ಳುವ ಅಮೇರಿಕನ್ನರು ಅದನ್ನೇ ತಮ್ಮ ಪ್ರಮುಖ ಪೇಯವಾಗಿಸಿಕೊಂಡಿದ್ದಾರೆ. ಕ್ವಚಿತ್ತಾಗಿ ಮಾರಲ್ಪಡುವ ಚಹಾ ಪುಡಿ. ಛಿದ್ರಗಳನ್ನು ಹೊಂದಿದ ಚಿಕ್ಕ ಚಿಕ್ಕ ಪ್ಯಾಕೇಟ್‌ಗಳಲ್ಲಿ ದೊರೆಯುತ್ತದೆ. ಕುದಿಯುವ ನೀರನ್ನು ಹಾಕಿದ ಪಾತ್ರೆಗೆ ಆ ಪ್ಯಾಕೆಟ್‌ನಲ್ಲಿ ಅದ್ದಿ ಅಪೇಕ್ಷಿತ ಡಿಕಾಕ್ಷನ್ ಪಡೆದು, ಪ್ಯಾಕೆಟ್ ಎತ್ತಿ ಕಸದ ಬುಟ್ಟಿಗೆ ಎಸೆಯಬಹುದು. ಅಭಿರುಚಿಗೆ ತಕ್ಕಂತೆ ಹಾಲು, ಸಕ್ಕರೆ ಸೇರಿಸಿ ಚಹ ಸೇವಿಸಬಹುದು. ಅಥವಾ ಬರ್ಫದ ತುಂಡು, ಲಿಂಬೇರಸ ಸೇರಿಸಿ ಕುಡಿಯಬಹುದು. ವ್ಯಕ್ತಿಸ್ವಾತಂತ್ರ್ಯಕ್ಕೆ ಅತಿ ಮಹತ್ವ ಕೊಡುವ ದೇಶ ಅದಾದ್ದರಿಂದ, ಒಬ್ಬೊಬ್ಬರು ಒಂದೊಂದು ರೀತಿಯ ಚಹ ಕುಡಿಯುವ ಹವ್ಯಾಸವನ್ನು ಬೆಳೆಸಿಕೊಂಡಿರುತ್ತಾರೆ. ನಮ್ಮ ಬಸ್ ನಿಲ್ದಾಣಗಳಲ್ಲಿ ಸಕಲರಿಗೂ ಕೊಡ ಮಾಡುವ ಏಕ ಪ್ರಕಾರ ಚಹ ಕುಡಿಯುವ ಪ್ರಸಂಗ ಬಂದರೆ ಅಮೇರಿಕನ್ನರು ಹೇಗೆ ಪ್ರತಿಕ್ರಿಯಿಸುತ್ತಾರೆಂಬುದು ಊಹೆಗೂ ನಿಲುಕದ ಮಾತು!

ಭಿಲ್ಲರ ಹೋಳಿ

ಮೈ ಮುರಿ ದುಡಿದರೂ, ಸಾಲಸೋಲ, ಶೋಷಣೆಗಳಿಂದ ಮುಕ್ತರಾಗದ ಭಿಲ್ಲರಿಗೆ ಹೋಳಿಹಬ್ಬ ಹೊಸ ಚೇತನ ನೀಡುತ್ತದೆ. ಯುವಕ-ಯುವತಿಯರು ಈ ಹಬ್ಬಕ್ಕಾಗಿ ವರ್ಷವಿಡೀ ಚಾತಕಪಕ್ಷಿಯಂತೆ ಎದುರುನೋಡುತ್ತಿರುತ್ತಾರೆ. ಹಳೆಯದೆಲ್ಲ ಹೋಳಿಯಾಡಿ, ಹೊಸ ಜೀವನಕ್ಕೆ ನಾಂದಿ ಹಾಡಲು ಅವರಿಗೆ ಅಪೂರ್ವ ಅವಕಾಶ ಸಿಗುತ್ತದೆ. ಇದ್ದ ಒದ್ದ ಪುಡಿಗಾಸು ಸೇರಿಸಿ ಹಬ್ಬಕ್ಕೆ ಹೊಸ ಬಟ್ಟೆ ಹೊಲಿಸುತ್ತಾರೆ. ಅದು ಸಾಧ್ಯವಾಗದವರು ಇದ್ದವನ್ನೇ ಚೆನ್ನಾಗಿ ಒಗೆದು ಹೊಸದಾಗಿಸುತ್ತಾರೆ. ಹಳೆಯ ಹಾಡುಗಳನ್ನು ಪಠಿಸುವದರ ಜೊತೆಗೆ, ಗೆಳೆಯ-ಗೆಳತಿಯರಿಂದ ಹೊಸ ಹಾಡು ಕಲಿಯುತ್ತಾರೆ, ಕಟ್ಟುತ್ತಾರೆ. ಹುರಿ ಮೀಸೆ ಹೇಗೆ ಕಾಣುತ್ತದೆಂದು ಮಸುಕಾದ ಕನ್ನಡಿಯಲ್ಲಿ ಯುವಕನು ನೋಡಿಕೊಂಡು ಹೆಮ್ಮೆಪಟ್ಟರೆ, ಕಣ್ಣಿಗೆ ಕಾಡಿಗೆ ಲೇಪಿಸಿ ರಂಭೆಯಾಗಲು ಭಿಲ್ಲಯುವತಿ ಯತ್ನಿಸುತ್ತಾಳೆ. ವಯಸ್ಸಿನಿಂದ ಹಿರಿಯರಾದರೂ ರಸಿಕತೆಯಲ್ಲಿ ಯುವಕರಾದವರು, ಈ ಅವಕಾಶವನ್ನೇ ಎದುರು ನೋಡುತ್ತಿರುತ್ತಾರೆ.

ಭಾರತದ ಆದಿವಾಸಿಗಳ ಜನವಸತಿಯಲ್ಲಿ ತೃತೀಯ ಸ್ಥಾನ ಆಕ್ರಮಿಸಿದ ಭಿಲ್ಲರು, ಮಹಾರಾಷ್ಟ್ರ, ಗುಜರಾಥ, ರಾಜಸ್ಥಾನ ಮತ್ತು ಮಧ್ಯಪ್ರದೇಶಗಳಲ್ಲಿ ಹರಡಿಕೊಂಡಿದ್ದಾರೆ. ಸುಮಾರು ಹದಿನೈದು ಲಕ್ಷ ಭಿಲ್ಲರು ಮಧ್ಯಪ್ರದೇಶದ ಧಾರ, ಝಾಬುವಾ ಮತ್ತು ಪಶ್ಚಿಮ ನಿಮಾರ ಜಿಲ್ಲೆಗೆ ಸೀಮಿತವಾಗಿದ್ದಾರೆ. ಹಿಂದಿನ ಕಾಲದಲ್ಲಿ ಅವರು ಸದಾಕಾಲ ಬಿಲ್ಲು-ಬಾಣಗಳೊಂದಿಗೆ ಅಲೆಯುತ್ತಿದ್ದರು. ಅದರಿಂದಾಗಿ ದ್ರಾವಿಡ್ ಬಿಲ್ ಅಥವಾ ವಿಲ್ ಶಬ್ದದಿಂದ ಭಿಲ್ಲರೆಂದು, ಅನಿಸಿಕೊಂಡರು. ಅವರಾಡುವ ಭಾಷೆಗೆ 'ಭಿಲ್ಲಿ' ಎನ್ನುತ್ತಾರೆ. ಇದರಲ್ಲಿ ಗುಜರಾಥಿ, ರಾಜಸ್ಥಾನಿ, ಮರಾಠಿ ಶಬ್ದಗಳಲ್ಲದೇ ಕೆಲ ದ್ರಾವಿಡ ಶಬ್ದಗಳೂ ಸೇರಿಕೊಂಡಿವೆ. ಉದರ ನಿರ್ವಹಣೆಗೆ ಮುಖ್ಯವಾಗಿ ಕೃಷಿಯನ್ನೇ ಅವಲಂಬಿಸಿ ನಗರದಿಂದ ದೂರದ ಹತ್ತಿಪ್ಪತ್ತು ಮನೆಗಳುಳ್ಳ ಹಳ್ಳಿಗಳಲ್ಲಿ ಬೀಡು ಬಿಡುತ್ತಾರೆ. ಪಟಲಿಯಾ ಬಣದವರು, ತಾವು ಇನ್ನಿತರ ಭಿಲ್ಲರಿಗಿಂತ ಶ್ರೇಷ್ಠ ಎನಿಸಿಕೊಳ್ಳುತ್ತಾರೆ. ರಾಜಸ್ಥಾನದಿಂದ ವಲಸೆ ಬಂದ ರಜಪೂತರು ಮಧ್ಯಪ್ರದೇಶದ ಭಿಲ್ಲ ನಾರಿಯರನ್ನು ವರಿಸಿ ಉಂಟಾದ ಹೊಸ ಪೀಳಿಗೆಗೆ 'ಭೀಲಾಲಾ' ಎಂದು ಕರೆಯುವರು. ನಾಡಿನ ರಾವತ್ ಎಂಬ ಕೌಟುಂಬಿಕ ಹೆಸರು ಧರಿಸುವ ಇವರು, ಭಿಲ್ಲರಂತೆ ಸರಳರೂ ವಿನೋದ ಪ್ರಿಯರೂ ಆಗಿರದೇ ಸಂಶಯಗ್ರಸ್ತರೂ, ಮುಂಗೋಪಿಗಳೂ ಆಗಿದ್ದಾರೆ. ಉಳಿದೆಲ್ಲ ಆಚಾರ ವಿಚಾರಗಳು ಇಬ್ಬರಲ್ಲಿಯೂ ಏಕ ಪ್ರಕಾರವಾಗಿವೆ.

ಸಂತೆ ನಡೆಯುವಲ್ಲಿ

ಹೋಳಿ ಹಬ್ಬಕ್ಕೆ ಒಂದು ವಾರ ಇರುವಾಗಲೇ "ಬಾಗೋರಿಹಾ" ಆಚರಣೆ ಪ್ರಾರಂಭಿಸಿ ಸಂತೆ ನಡೆಯುವಲ್ಲೆಲ್ಲ ರಸಿಕರು ಸೇರುತ್ತಾರೆ. ಅಂದರೆ ಈ ಸಮೂಹದ ಆಚರಣೆ ಒಂದೇ ಸ್ಥಳಕ್ಕೆ

ಸೀಮಿತವಾಗಿರದೇ ಸಂತೆ ಇರುವ ಹಳ್ಳಿಗೆ ಸ್ಥಳಾಂತರ ಹೊಂದುತ್ತದೆ. ತೇರು-ಜಾತ್ರೆಗಳಂತೆ ಈ ದೊಡ್ಡ ಮಹತ್ವದ ಸಂತೆಗೆ ಹೋಗುವದಕ್ಕಾಗಿ ಭಿಲ್ಲರ ಸಡಗರ. ಸಂಭ್ರಮ ಹೇಳತೀರದು. ಸದಕಾಲ ಕಿರುಬಟ್ಟೆಯಲ್ಲಿರುವ ಯುವಕರು ಅಂದು ತಲೆಗೆ ಭಾರೀ ರುಮಾಲು ಸುತ್ತಿಕೊಂಡು ಕಿವಿ-ಕೊರಳುಗಳಿಗೆ ಬೆಳ್ಳಿಯ ಆಭರಣಗಳನ್ನು ಧರಿಸಿ ಮೈಗೆ ಅಂಟಿಕೊಳ್ಳುವ ಅಂಗಿಗೆ ಸರಪಳಿ ಇರುವ ಗುಂಡಿಗಳನ್ನು ಹಾಕಿಕೊಳ್ಳುವರು. ಕಿರುಪಂಚೆಯನ್ನು ಮೊಣಕಾಲ ಮೇಲೆ ಬರುವಂತೆ ಉಟ್ಟು ನೃತ್ಯ ಸಾಮಗ್ರಿಗಳನ್ನು ಕೈಚೀಲದಲ್ಲಿ ತುರುಕಿಕೊಂಡು ಹೊರಟೇ ಬಿಡುವರು, ಯುವಕಿ ಯುವಕಿನಲ್ಲಿ ಪ್ರೀತಿ ವ್ಯಕ್ತಪಡಿಸುತ್ತಾಳೆ. ಇದನ್ನು ಖಚಿತಪಡಿಸಲು, ಬೆಲ್ಲ-ಭಂಗಿ (ಭಾಂಗ್) ಸೇರಿಸಿ ತಯಾರಿಸಿದ ಹಸಿರು ಮಿಠಾಯಿ (ಮಾಜೂಮ್)ಯನ್ನು ತರುಣನು ತರುಣಿಗೆ ಕೊಡುತ್ತಾನೆ. ಅವನ್ನು ಅವಳು ಸ್ವೀಕರಿಸಿ, ಗೆಳತಿಯರೊಂದಿಗೆ ಸೇವಿಸಿದರೆ, ನಿಶ್ಚಯ-ತಾಂಬೂಲ (ಲಗ್ನಪತ್ರಿಕೆ) ಆದಂತೆಯೇ. ಭಿಲ್ಲರಲ್ಲಿ ಗಂಡು-ಹೆಣ್ಣುಗಳ ನಡುವೆ ಇಲ್ಲಸಲ್ಲದ ಮಡಿವಂತಿಕೆ ಇರದ್ದರಿಂದ ಹೋಳಿ ಹಬ್ಬದ ಸಂದರ್ಭದಲ್ಲಿ ಹೊಸಜೋಡಿ ನಕ್ಕು-ನಲಿದು ಓಡಾಡಿಕೊಂಡು ಇರಲಾರಂಭಿಸುತ್ತಾರೆ. ಕೊರಡಿನ ಕುದುರೆಯನ್ನು ಹತ್ತಿ ಇಳಿದು ಆನಂದಿಸುತ್ತಾರೆ. ತೊಟ್ಟಿಲುಗಳಲ್ಲಿ ಕುಳಿತು ತೂಗಿಸಿಕೊಳ್ಳುತ್ತಾರೆ. ಫುಗಾ (ಬಲೂನ್) ರಿಬ್ಬನ್, ಬತ್ತಾಸು, ಪೀಪಿ, ಅಗ್ಗದ ಪೌಡರ್ ಕೊಂಡು ಸಂತೋಷಿಸುತ್ತಾರೆ. ಭಾವೀ ಪತಿಯೊಡನೆ ಕಾಮಕೇಳಿಯೂ ತ್ಯಾಜ್ಯವಿಲ್ಲ.

ವಧು ದಕ್ಷಿಣೆ

ಗಂಡಿನ ಧೈರ್ಯದಿಂದ ತರುಣನು ಇನಿಯಳನ್ನು ಮನೆಗೆ ಕರೆತಂದು ಅವಳಲ್ಲಿ ತನಗೆ ಆಸಕ್ತಿ ಉಂಟಾಗಿದೆ ಎಂದು ತಂದೆ-ತಾಯಿಗಳಿಗೆ ತಿಳಿಸುತ್ತಾನೆ. ಕನ್ಯಾಪಿತೃಗಳಿಗೂ ಈ ವಿಚಾರ ತಿಳಿಸಿದಾಗ, ಅವರು ಒಪ್ಪಿಕೊಂಡರೆ, ತೆಂಗಿನ ಕಾಯಿಗಳನ್ನು ಅದಲು-ಬದಲು ಮಾಡಿಕೊಳ್ಳುವದರಿಂದ ಮದುವೆ ಅಧಿಕೃತವಾಗಿ ನಿಶ್ಚಯವಾಗುತ್ತದೆ. ವಧುದಕ್ಷಿಣೆಯನ್ನು ಅಕ್ಕಿ-ಬೆಲ್ಲ, ಎಣ್ಣೆಗಳ ರೂಪದಲ್ಲಿ ಕೊಡಬೇಕಾಗುತ್ತದೆ. ಇವನ್ನೂ ಕೊಡಲಾಗದಷ್ಟು ಬಡವನಾದರೆ ಈ ಋಣ ತೀರಿಸಲು ಮಾವನ ಮನೆಯಲ್ಲಿ ಜೀತದಾಳಾಗಿ ದುಡಿಯಬೇಕು. ಸಗೋತ್ರದಲ್ಲಿ ವಿವಾಹ ತ್ಯಜ್ಯ. ವೈವಾಹಿಕ ಜೀವನದಲ್ಲಿಯೂ ಬೇರೊಬ್ಬನಲ್ಲಿ ಅನುರಾಗ ಉಂಟಾದರೆ, ನವಪ್ರೇಮಿ, ಮಾಜೀ ಪತಿ ಕೊಟ್ಟಷ್ಟು ವಧು ದಕ್ಷಿಣೆ ಹಿಂತಿರುಗಿಸಿ ಅವಳನ್ನು ತನ್ನವಳನ್ನಾಗಿ ಮಾಡಿಕೊಳ್ಳಬಹುದು. ವಿವಾಹಿತ ಸ್ತ್ರೀ ಗಲ್ಲ. ಕಪೋಲಗಳ ಮೇಲೆಲ್ಲ ಹಚ್ಚ ಹಾಕಿಸಿಕೊಳ್ಳುವಳು. ಸಂತೆಯಲ್ಲಿ ಕೊಂಡ ಬಿಳಿ, ಕೆಂಪು, ನೀಲಿ ಮಣಿಗಳನ್ನು ಪೋಣಿಸಿ ಕಂಠಾಭರಣ ಮಾಡಿಕೊಳ್ಳುವಳು. ಭಾರವಾದ ಸೊಂಟಪಟ್ಟಿ, ಮುಂಗಾಲು ಸರಪಣಿ, ಕಾಲು, ಬೆರಳುಗಳಿಗೆ ಬಗೆಬಗೆಯ ಸುತ್ತುಂಗುರಗಳನ್ನು ಧರಿಸುವದು ವಾಡಿಕೆ. ವಿವಾಹಿತರು ಹಿರಿಯರೊಂದಿಗೆ ವಾಸಿಸುವದು ಪ್ರಚಲಿತವಿದ್ದರೂ, ಕಿರಿಯರು, ಮಡದಿಯೊಂದಿಗೆ, ಹೆಚ್ಚು ಏಕಾಂತ ಬಯಸಿ ಬೆಂಗಡದ ಗುಡಿಯನ್ನು ಕಟ್ಟಿಕೊಳ್ಳುವರು.

ಹೋಳಿಯ ದಿನ ಸಂತೆ ನಡೆಯುವಲ್ಲಿ ದೊಡ್ಡ ಜಾತ್ರೆಯೇ ಸೇರುವದು. ಅಸಾಮಾನ್ಯವಾದ ದೈಹಿಕ ಮಂತ್ರ-ತಂತ್ರಗಳ ಸಾಮರ್ಥ್ಯ ಇದೆ ಎಂದ ಪರಿಗಣಿಸಲಾದ, "ರಾಜಾಪಂತ"ನನ್ನು ಪೂಜಿಸಿ ಹೋಳಿ ಆಚರಣೆ ಪ್ರಾರಂಭಿಸುವರು. ಮದ್ಯಪ್ರಿಯ ಭಿಲ್ಲರು ಅಂದು ಮನಸ್ವೀ ಕುಡಿಯುವರು.

ಬಣ್ಣದ ನೀರನ್ನು ಒಬ್ಬರ ಮೇಲೆ ಇನ್ನೊಬ್ಬರು ಸಿಂಪಡಿಸುತ್ತ ಬಣ್ಣ ಸವರುತ್ತ ಕ್ರಮೇಣ ಹಾಡುಗಾರಿಕೆ, ವಾದ್ಯ-ನುಡಿಸುವಿಕೆ ನೃತ್ಯಗಳು ಪ್ರಾರಂಭವಾಗುತ್ತವೆ. ಅಮಲು, ಅಶ್ಲೀಲ ಹಾಡು, ಕಾಮುಕ ಅಭಿದಾನಗಳಿಗೆ ಅವಕಾಶ ಕಲ್ಪಿಸಿಕೊಡುವದು. ನಶೆ ತಲೆಗೇರಿದಾಗ ದ್ವೇಷ, ತಿರಸ್ಕಾರ, ಅಸೂಯ, ಪ್ರತೀಕಾರಗಳಿಗೆ ಯತ್ನಿಸುವದೂ ಉಂಟು, ಅಂತೆಯೇ ಹೋಳಿಹಬ್ಬಕ್ಕೆ, ಸೇರಿದವರಿಂದ, ಮುಂಜಾಗ್ರತೆಯ ಹಿರಿಯರು ಎಲ್ಲ ಬಗೆಯ ಆಯುಧಗಳನ್ನು ತೆಗದಿಟ್ಟುಕೊಳ್ಳುವದು ರೂಢಿ. ಹೋಳಿ ಹಬ್ಬಕ್ಕಾಗಿ ಎಷ್ಟೇ ಖರ್ಚಾಗಲಿ, ಎಷ್ಟೇ ದಣಿಯಲಿ, ಎಷ್ಟೇ ಜಗಳ - ಕಾದಾಟವಾಗಲಿ, ಮುಂದಿನ ಹೋಳಿ ಹಬ್ಬಕ್ಕಾಗಿ ವರ್ಷವಿಡೀ ಭಿಲ್ಲರು ಎದುರು ನೋಡುತ್ತಲೇ ಕಾಲಕಳೆಯುತ್ತಾರೆ.

ಹುಡುಗಿಯರ ಸಿದ್ಧತೆ ಇನ್ನೂ ಜೋರಾಗಿಯೇ ಇರುತ್ತದೆ. ಅವರು ತೊಡುವ ಆಭರಣಗಳ ಲೆಕ್ಕಾಚಾರ ಇಡುವದೇ ಭಾರೀ ಕೆಲಸ! ಬೈತಲೆ, ಕಪೋಲ, ಕಿವಿ, ಕಂಠ, ಕೈಕಾಲುಗಳೆಲ್ಲ ಆಭರಣಗಳನ್ನು ಹೊತ್ತು ಭಾರವಾಗಿರುತ್ತವೆ. ಉದ್ದ ತೋಳಿನ, ಉದ್ದ ಪೋಲಕ ಧರಿಸಿ, ಅಪಾರ ನಿರಿಗೆಗಳುಳ್ಳ ಲಂಗವನ್ನು ತೊಡುತ್ತಾರೆ. ಜರಿ ಕೆಲಸ ಮಾಡಿದ ದಾವಣಿಯನ್ನು ತಲೆಯ ಮೇಲಿಂದ ಇಳಿಬಿಡುತ್ತಾರೆ. ಹಳದಿ, ಕೆಂಪು, ನೀಲಿ ಬಣ್ಣಗಳು ಅವರಿಗೆ ಅತೀವ ಮೆಚ್ಚಿಗೆಯಾಗಿವೆ. ಆದ್ದರಿಂದ ಅವರೆಲ್ಲ ತಂಡಕಟ್ಟಿಕೊಂಡು ಹೊರಟರೆಂದರೆ ರಸ್ತೆಗಳೆಲ್ಲ ಬಣ್ಣಬಣ್ಣದ ಚಿಟ್ಟೆಗಳಿಂದ ತುಂಬಿದಂತೆ ಅನಿಸುವದು. ಸೊಂಟದ ಪಟ್ಟಿಯ ಸದ್ದು, ಕಾಲಿನ ಗೆಜ್ಜೆ, ಕುಲು ಕುಲು ನಗು ಅವರ ತಂಡಗಳಿಗೆ ಮೆರಗು ನೀಡುವವು.

ಜೋಡಿ ಜೋಡಿಯಾಗಿ

ಸಂತೆಗಾಗಿ ಬಂದಿಳಿದ ಆಪ್ತ ಬಂಧು, ಬಳಗದವರನ್ನು ಸುತ್ತುವರಿದು ಹೆಂಗಳೆಯರು, ಚುಚ್ಚು ಮಾತಿನ ರಂಗುರಂಗಾದ ಹಾಡುಗಳನ್ನು ಹಾಡುತ್ತ ಒಂದೆರಡು ರೂಪಾಯಿಗಳನ್ನು ಕಾಣಿಕೆ ಎಂದು ಕಿತ್ತುಕ್ಕೊಳ್ಳದೇ ಬಿಡುವದಿಲ್ಲ. ಹಣವನ್ನೆಲ್ಲ ಸೇರಿಸಿ, ಬೆಲ್ಲ, ಬೆಂಡು, ಬತ್ತಾಸ ಕೊಂಡು, ಹರಟೆ ಹೊಡೆಯುತ್ತ ತಿನ್ನುತ, ಕುಲು ಕುಲು ನಗುತ್ತ ಖುಷಿ ಪಡುವರು. ಈ ಅವಕಾಶಕ್ಕಾಗಿ ಕಾದಿದ್ದ ಯುವಕರು ದೊಡ್ಡ ದೊಡ್ಡ ಡೋಲು ಬಾರಿಸುತ್ತ, ತಾಳ ನುಡಿಸುತ್ತ ವರ್ತುಲಾಕಾರದಲ್ಲಿ ನರ್ತಿಸಲಾರಂಭಿಸುವರು. ಒಮ್ಮೆ ನಡುವೆ ನಿಂತ ವಾದ್ಯಗಾರರತ್ತ ಸರಿಯುತ್ತ, ಇನ್ನೊಮ್ಮೆ ಅವರಿಂದ ದೂರ ಹೋಗುತ್ತ ಕುಣಿಯುತ್ತ ಮುಂದುವರಿಯುವರು. ತಾವು ಗಂಡು ನವಿಲುಗಳೆಂದು ಭ್ರಮಿಸಿ ಕೇಕ ಹಾಕಿ, ತಾಳಕ್ಕೆ ಸರಿಯಾಗಿ ನರ್ತಿಸಿದರೂ ಹೆಣ್ಣು ನವಿಲು ಹತ್ತಿರ ಸುಳಿಯದಿದ್ದಾಗ, ಅವರಿಗೆ ಅವಮಾನವಾಗದೇ ಇದ್ದೀತೇ? ದೂರದ ಮರದ ನೆರಳಿನಲ್ಲಿ ಕುಳಿತು ಕಳ್ಳ ನೋಟದಿಂದ ಕದ್ದು ನೋಡುವ ಯುವತಿಯರನ್ನು ಭುಜತಟ್ಟಿ, ಕೈ ಹಿಡಿದೆಳೆದು ತಂದು ನೃತ್ಯದಲ್ಲಿ ಸೇರ್ಪಡೆ ಮಾಡುವರು. ಇದರಿಂದ ವಾದ್ಯಗಳೂ ಜೋರಾಗಿ ಮೊಳಗುವವು. ನೃತ್ಯಗಾರರೂ ವಿದ್ಯುತ್ ಸಂಚಾರವಾದಂತೆ ಹೇ! ಹೇ! ಹೇ! ಎಂದು ಕೇಕೇ ಹಾಕುತ್ತ ಅವಿಶ್ರಾಂತವಾಗಿ ಕುಣಿಯುವಾಗ, ಒಂಟಿ ನೃತ್ಯ, ಸಮೂಹ ನೃತ್ಯಕ್ಕೆ ಆಹ್ವಾನಿಸುವರು. ವಾದ್ಯಗಳು ಹೆಚ್ಚಾಗಿದ್ದರೆ "ಗುತಾಯಿ" ನೃತ್ಯ ಪ್ರಾರಂಭಿಸುವರು. ಹೆಣ್ಣು-ಗಂಡು ಜೋಡಿ ಜೋಡಿಗಳಾಗಿ ಪ್ರಾರಂಭಿಸಿದಾಗಂತೂ ಆವೇಶ ಬಂದಂತೆ ಎಡೆಬಿಡದೇ ಕುಣಿಯುತ್ತಾರೆ.

ಗಂಡು-ಹೆಣ್ಣುಗಳ ಸಾನ್ನಿಧ್ಯ ಅವರ ಬರಡು ಜೀವನದಲ್ಲಿ ಹೊಸಚೈತನ್ಯವನ್ನು ಚಿಗುರಿಸುತ್ತದೆ. ಏನೇನೋ ಕನಸು ಕಾಣುತ್ತ, ಕನವರಿಸುತ್ತ, ರಾತ್ರಿ ಕಳೆದು ಮರುದಿನ ಸಂತೆಯಲ್ಲಿ ತಿರುಗಿ ಹಾಜರ. ದಿನ ಹೋದಂತೆ ಗಂಡು ಹೆಣ್ಣಿನ ಪರಿಚಯ ಆತ್ಮೀಯತೆಯಲ್ಲಿ, ಸಲಿಗೆಯಲ್ಲಿ, ನಂತರ ಪ್ರಣಯ ಚೇಷ್ಟೆಯಲ್ಲಿ ಪರಿವರ್ತನೆಯಾಗಹತ್ತುತ್ತದೆ. ಹೋಳಿ ಹಬ್ಬಕ್ಕೆ ಒಂದೆರಡು ದಿನಗಳಿರುವಾಗ, ಗುಲಾಲು ಸವರಲು ಪ್ರಾರಂಭಿಸುತ್ತಾರೆ. ಯುವಕನು ತನ್ನವಳ ಹಣೆಗೆ ಬಣ್ಣ ಸವರಿದಾಗ ಅವಳೂ ಹಿಂದೆ ಮುಂದೆ ನೋಡದೇ ಅವನ ಮೇಲೆ ಬಣ್ಣ ಸುರಿದೇ ಬಿಡುತ್ತಾಳೆ. ಈ ಬಹಿರಂಗ ಬಣ್ಣದ, ಸುರತದಿಂದ ಇಬ್ಬರ ಸ್ನೇಹ ದೃಢವಾಗಿದೆ ಎಂದು ಪರಿಗಣಿಸಲಾಗುತ್ತದೆ.

ಕ್ಯಾಮೆರಾ ಕಂಡ ಕನ್ಯೆಯರು

ಆತ್ಮ ವಿಶ್ವಾಸದಿಂದ ಹೂ, ಹಣ್ಣು-ಹಂಪಲುಗಳ ಛಾಯಾಗ್ರಹಣ ಮಾಡುವ ಕಲೆ, ಕರಗತ ಮಾಡಿಕೊಂಡ ನಂತರ ಹೆಂಗಳೆಯರ ಹಾವ ಭಾವ, ಅಂದ-ಚೆಂದ ಸೆರೆ ಹಿಡಿಯುವಂತಾದರೆ! - ಎಂಬ ಕಲ್ಪನೆಯಿಂದಲೇ ರೋಮಾಂಚನವಾಗಿತ್ತು. ಆದರೆ ನಮ್ಮ ಸೋದರಿಯರ ಚಿತ್ರೀಕರಣ ಹುಲಿ, ಹುಲ್ಲೆ. ಹಕ್ಕಿಗಳಿಗಿಂತಲೂ ಬಿಕ್ಕಟ್ಟಿನದು, ಎಂದು ಬಲುಬೇಗ ಅರಿಯುವಂತಾಯಿತು. ಇನ್ನಿತರ ಜೀವಿಗಳು, ತಾನು ಮಂತ್ರಿಯ ಮಗಳು, ಅಧಿಕಾರಿಯ ಹೆಂಡತಿ, ಚಲನಚಿತ್ರ ತಾರೆ, ಜಾಹೀರಾತಿನ ರೂಪದರ್ಶಿ ಎಂಬ ಸ್ಥಾನಮಾನಕ್ಕಾಗಿ ಪರದಾಡುವದಿಲ್ಲ. ಅಂತೆಯೇ ಅವು ಕ್ಯಾಮರಾಧಾರಿಯನ್ನು ಕಾಮುಕನೆಂದು ಪರಿಗಣಿಸುವದಿಲ್ಲ. ಛಾಯಾಗ್ರಹಣಕ್ಕೆ ವಿರೋಧಿಸುವದಿಲ್ಲ, ಗೌರವ ಧನಕ್ಕೆ ಕೈಯೊಡ್ಡುವದಿಲ್ಲ, ಮಾನಹಾನಿ ಮೊಕದ್ದಮೆ ಹೂಡುತ್ತೇವೆಂದು ಬೆದರಿಸುವದಿಲ್ಲ. ಎಂದಾದರೊಮ್ಮೆ ಕಾಡಾನೆ, ಕ್ಯಾಮರಾಧಾರಿಯನ್ನು ತುಳಿದು ನುಜ್ಜು ಗೊಜ್ಜಾಗಿಸಿ ಆನಂದಿಸಬಹುದು. ಇಲ್ಲವೇ ಹುಲಿರಾಯನೇ ತಿಂದು ತೇಗಬಹುದು. ಆ ಮಾತು ಬೇರೆ! ಆದರೆ ನಮ್ಮ ಭಗಿನಿಯರ ನಡಾವಳಿಕೆಯನ್ನೇ ಅರ್ಥ ಮಾಡಿಕೊಳ್ಳುವದು ಕಷ್ಟಕ್ಕಿಟ್ಟುಕೊಳ್ಳುತ್ತದೆ. ಕ್ಯಾಮರಾಕಣ್ಣು ತಮ್ಮನ್ನೆ ನೋಡುತ್ತವೆ ಎಂದು ಅರಿವಾದರೆ ಸಾಕು, ಶೀಲವನ್ನೆ ಭಂಗ ಮಾಡಿದಂತೆ ಆಕ್ಷೇಪಿಸುತ್ತಾರೆ, ಆಕ್ರೋಶ ಮಾಡುತ್ತಾರೆ. ಈ ಎಲ್ಲ ಜಂಜಾಟಗಳಿಂದ ದೂರವಿರಲು ಕಣ್ಣಿಗೆ ಸುಲಭವಾಗಿ ಕಾಣದಷ್ಟು ದೂರ ಕ್ಯಾಮರಾ ಇಟ್ಟು, ಕ್ಲಿಕ್ಕಿಸುವದನ್ನು ರೂಢಿ ಮಾಡಿಕೊಳ್ಳಬೇಕಾಯಿತು. ಇದರಿಂದ ನಿಸರ್ಗದತ್ತವಾದ ಹೆಣ್ಣಿನ ಬಿಂಕ. ವೈಯ್ಯಾರ, ಸೌಂದರ್ಯಗಳಿಗೆ ಯಾವ ಕೃತ್ರಿಮತೆಯೂ ಬಾರದಂತಾಯಿತು.

ಮಾನವ ಸಮಾಜ, ಮುಖ್ಯತ ಭಾರತೀಯ ಸಮಾಜ, ಪರಸ್ತ್ರೀಯ ಛಾಯಾಗ್ರಹಣ, ಪಾಪವೆಂದು ಪರಿಗಣಿಸುವದರಿಂದ ಪತ್ನಿಯನ್ನೇ ಮೊದಲ ಮಾಡೆಲ್ ಎಂದು ಬಳಸಬೇಕಾಯಿತು. ಈ ಮೊದಲು ಎಂದೂ ಅವಳು ಆಫೀಸಿಗೆ ಹೋಗುವದನ್ನು, ಹಿಂತಿರುಗುವದನ್ನು ಏಕಚಿತ್ರದಿಂದ ಪರೀಕ್ಷಿಸಿರಲಿಲ್ಲ. ಪ್ರಾಣಸಖಿ, ಆಫೀಸಿನ ಕೆಲಸದಿಂದ ಬಾಡಿ, ಬೆಂಡಾಗಿ ಹಿಂತಿರುಗುತ್ತಿದ್ದುದನ್ನೇ ಕ್ಲಿಕ್ಕಿಸಿದಾಗ, ನೆಮ್ಮದಿಯಾದರೂ ಆ ಛಾಯಚಿತ್ರವನ್ನು ಅವಳಿಗೆ ತೋರಿಸಿದಾಗ ನೊಂದುಕೊಂಡಳು. ರೇಶ್ಮೆ ಸೀರೆಯುಟ್ಟು ಹೂ ಮುಡಿದು ಚೆನ್ನಾಗಿ ಒಡವೆತೊಟ್ಟಾಗ ಭಾವಚಿತ್ರ ತೆಗೆಯದಿದ್ದರೆ ಅಷ್ಟೆ ಹೋಯಿತು. ಎತ್ತಲೋ ನೋಡುತ್ತ ತತ್ತರವೆತ್ತರ ಕಾಲು ಹಾಕುವದನ್ನು ಸೆರೆಹಿಡಿದಿದ್ದಾರೆ! ಎಂದು ಮೂದಲಿಸಿದಳು. ಇಂಥ ನಡಾವಳಿಯನ್ನು ಅಭ್ಯಸಿಸುವದೇ ಕಾಣದ ಕ್ಯಾಮರಾದ ಉದ್ದೇಶವೆಂದು ವಿವರಿಸಲು ಯತ್ನಿಸಿದರೂ ಆದರಿಂದ ಅವಳಿಗೆ ಸಮಾಧಾನವಾದಂತೆ ಅನಿಸಲಿಲ್ಲ. ಆದರೆ ಮರು ದಿನಬಂದ ಮನೆ ಸಮೀಪಿಸುತ್ತಿದ್ದಂತೆ ಎಚ್ಚರಿಕೆಯಿಂದ ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು ಮಜ್ಜಿಗೆಯೊಳಗಿನ ಬೆಣ್ಣೆಯಂತೆ ನಡೆಯಲಾರಂಭಿಸಿದಳು. ಇಷ್ಟಾದರೂ ಬಿಡದೇ ಅವಳನ್ನೆ ಕ್ಲಿಕ್ಕಿಕರಿಸುವದನ್ನು ಮುಂದರಿಸಿದಾಗ. ಮುನಿಸು ನಟಿಸುತ್ತ ಯಾವಳಾದರೂ ಸುಂದರ ಯುವತಿಯನ್ನು ರೂಪದರ್ಶಿಯಾಗಿ ಪಡೆಯುವ ಬದಲಾಗಿ ಈ ಬಡಪಾಯಿಯನ್ನು ಹೀಗೆ ಪೀಡಿಸುವದು ಸರಿಯೇ?

ಎಂದು ಮೂದಲಿಸಿದಳು. ಮರುಮಾತನಾಡದೇ ಹಿಂದಿನ ದಿನದ ಅವಳ ಅವತಾರವನ್ನು ಛಾಯಾಚಿತ್ರ ರೂಪದಲ್ಲಿ ಹಿಡಿದದ್ದನ್ನು ಕೈಗಿತ್ತಾಗ ಹೌಹಾರಿದಳು. ಎಡಕಾಲಿಗೆ ಹವಾಯಿ ಸ್ಲಿಪ್ಪರ್, ಬಲಕಾಲಿಗೆ ಚರ್ಮದ ಚಪ್ಪಲಿ ಧರಿಸಿ ಇಡೀ ದಿನ ಕಳೆದಿದ್ದಳು! ಇಂದು ಅದೆಷ್ಟು ಜನ ನನ್ನನ್ನು ನೋಡಿದ್ದಾರೋ ಏನೋ! ಆದರೆ ಯಾರೊಬ್ಬರ ಕಣ್ಣಿಗೆ ಬೀಳದೇ ಇದ್ದ ಈ ಚಪ್ಪಲಿಯ ಅವಾಂತರವನ್ನು ಈ ನಿಮ್ಮ ಕಾಣದ ಕ್ಯಾಮರಾ ಕಂಡುಹಿಡಿದುಬಿಟ್ಟಿದೆ. ಅಭಿನಂದನೆಗಳು! ಎಂದು ಪ್ರೋತ್ಸಾಹಿಸಿದ್ದರಿಂದ ಇನ್ನಿತರ ಹೆಣ್ಣುಗಳನ್ನು ಕಣ್ಣೆತ್ತಿ ನೋಡಲು ಕ್ಯಾಮರಾಕ್ಕೆ ಅನುಮತಿ ಸಿಕ್ಕಂತಾಯಿತು.

ಕಣ್ಣಿಗೆ ಕಂಡ ಕನ್ಯೆಯರನ್ನೆಲ್ಲ ಕ್ಯಾಮರಾದಲ್ಲಿ ಬಂಧಿಸುವದು ಎಷ್ಟು ಕಷ್ಟಕರ! ಎಂದು ಪ್ರಾರಂಭದಲ್ಲಿಯೇ ಅರಿಯುವಂತಾಯಿತು. ರಸಿಕತೆಯಿಂದ ಅಲಂಕರಿಸಿಕೊಂಡು ಬಿರುಗಾಳಿಯಂತೆ ಹೊರಟ ಕಾಲೇಜ ಕಿಶೋರಿಯನ್ನು ಸೆರೆಹಿಡಿಯಲು ಮಿಂಚಿನ ವೇಗದಿಂದ ಕ್ಲಿಕ್ಕಿಸದೇ ಬೇರೆ ಮಾರ್ಗವಿಲ್ಲ. ಆದರೆ ಸಿದ್ಧವಾದ ಚಿತ್ರದಲ್ಲಿ ಕುಮಾರಿಯ ಬದಲಾಗಿ ಎಲ್ಲಿಯೋ ಮೇಯುತ್ತಿದ್ದ ಕತ್ತೆ ಧುತ್ತೆಂದು ಎದುರು ನಿಂತಾಗ ಛಾಯಾಚಿತ್ರಕಾರನಿಗೆ ಆಗುವ ಆಘಾತ ವರ್ಣಿಸಲು ಅಸಾಧ್ಯ! ಆ ನಂತರದ, ಚಿತ್ರಗಳಲ್ಲಿ ಕೈಯಿದ್ದರೆ ಕಾಲುಗಳಿಲ್ಲ, ಕಾಲುಧಡಗಳು ಸುಂದರವಾಗಿ ಮೂಡಿದರೂ. ಮುಖವೇ ಇರುತ್ತಿರಲಿಲ್ಲ! ಅರ್ಧನಾರಿಯರು ಕಾಣಿಸಿಕೊಳ್ಳುವದು ತೀರ ಸಾಮಾನ್ಯವಾಯಿತು. ಸಾಲದ್ದಕ್ಕೆ ಜೋಡಿಯಲ್ಲಿ ಹೊರಟ ಮೀನಾಕ್ಷಿಯನ್ನು ಕ್ಲಿಕ್ಕಿಸಿದಾಗ ಕಾಣಿಸಿಕೊಂಡವಳು ಎಮ್ಮೆ ಕಣ್ಣಿನವಳು! ವೇಗದಿಂದ ಸಾಗಿದವರು ಅಸ್ಪುಟವಾಗಿ ಮೂಡಲಾರಂಭಿಸಿದರು. ಸಾಲಾಗಿ ಹೊರಟ ಬಸ್, ಲಾರಿ, ಕಾರು, ಆಟೋ, ಸ್ಕೂಟರ್, ಸಾಯಕಲ್, ದಾರಿಹೋಕರು, ರೂಪಸಿಯರ ದರ್ಶನಲಾಭ ಪಡೆಯಲು ಆತಂಕ ಮಾಡುವಾಗ ಅವರ ಛಾಯಾಗ್ರಹಣದ ಮಾತು ದೂರವೇ ಉಳಿಯಿತು. ಆದರೆ ಎದುರಿಸಬೇಕಾದ ಅಸಂಖ್ಯ ಸಮಸ್ಯೆಗಳಿಂದ ಧೃತಿಗೆಡದೇ, ಈ ಕಲೆ ಕರಗತ ಮಾಡಿಕೊಳ್ಳಲೇಬೇಕೆಂಬ ಛಲ ಮೂಡಿತು. ಇದಕ್ಕಾಗಿ ಬಳಸಿದ ಫಿಲ್ಮ ಖರ್ಚುಮಾಡಿದ ಹಣ, ತೊಡಗಿಸಿದ ಸಮಯಗಳ ಲೆಕ್ಕಾಚಾರ ಇಡುವದು ಸಾಧ್ಯವಾಗಲೇ ಇಲ್ಲ. ಕುಬೇರನಿಗೂ ಇಂಥ ಸಾಹಸ ಕೈಕೊಳ್ಳುವ ಎದೆಗಾರಿಕೆ ಬರುತ್ತಿತ್ತೊ ಇಲ್ಲವೊ! ಅರಿಯದ ಹೆಣ್ಣುಗಳ ತೀರಸಹಜವಾದ ನಡಾವಳಿಕೆಗಳ ಛಾಯಾಚಿತ್ರಗಳನ್ನು ಸದಾಕಾಲ ಇಟ್ಟುಕೊಳ್ಳುವ 'ಜಾಣ'ಕಲೆ ಕಲಿತಾಗ ಏನೋ ಮಹಾ ಸಾಧನೆ! ಸಾಧಿಸಿದ ಆನಂದವಾಯಿತು.

ಆದರ್ಶವಸ್ತು

ಪ್ರಾರಂಭದಲ್ಲಿ ವೇಗದಿಂದ ಹೊರಟ ಹದಿವಯಸ್ಸಿನವರಿಗಿಂತ, ಬೆಳೆಯುತ್ತಿರುವ ಭ್ರೂಣದ ಭಾರವನ್ನು ಹೊತ್ತು ಮಂದಗಮನೆಯರಾಗಿ ಹೊರಟ ಗರ್ಭಿಣಿಯರೇ ಆದರ್ಶ 'ವಸ್ತು'ವಾದರು! ನವಮಾಸಗಳು ತುಂಬುತ್ತಿದ್ದಂತೆ ಏದಾಸಿರು ಬಿಡುತ್ತ ಆಗೊಮ್ಮೆ ಈಗೊಮ್ಮೆ ವಿರಮಿಸುವದರಿಂದ ಕ್ಯಾಮರಾ ಹೊಂದಿಸಿಕೊಂಡು ಕ್ಲಿಕ್ಕಿಸಲು ಅನುಕೂಲವಾಗುತ್ತದೆ. ನಾಲ್ಕೈದು ತಿಂಗಳ ಗರ್ಭಿಣಿಯನ್ನು ದೂರದಿಂದ ಗುರುತಿಸುವದು ಅತೀವ ಕಷ್ಟ. ಅವರಿಗೂ ಅದೇನೋ ಮುಜುಗರವಿರಬೇಕು. ತಮ್ಮ ಸಹಜ ನಡಿಗೆ ಕೈಬಿಟ್ಟು ಬೇರೆಯೇ ರೀತಿಯಲ್ಲಿ ನಡೆಯಲಾರಂಭಿಸುತ್ತಾರೆ. ಸದಾಕಾಲ ಸೀರೆಯ ಸೆರಗನ್ನು ಗಾಳಿಗೆ ತೂರಬಿಡುವವರು. ತಮ್ಮ ಬೆಳೆಯುತ್ತಿರುವ ಮಗುವಿಗೆ ದಾರಿಹೋಕರ

ದೃಷ್ಟಿ ತಗಲದಂತೆ ಹೊಟ್ಟೆಯ ಭಾಗವನ್ನು ಪೂರ್ತಿಯಾಗಿ ಸೆರಗಿನಿಂದ ಮರೆಮಾಚುತ್ತಾರೆ. ಅನೇಕರು ತಮ್ಮ ಪರ್ಸ್, ವ್ಯಾನಿಟಿಬ್ಯಾಗ್, ಕೈಚೀಲಗಳನ್ನು ಇದಕ್ಕಾಗಿಯೇ ಬಳಸುತ್ತಾರೆ. ಕೆಲವರು ನಡಿಗೆಯ ಠೀವಿಯನ್ನೇ ಬದಲಿಸಿಬಿಡುತ್ತಾರೆ. ಎಲ್ಲ ಋತುಗಳಲ್ಲಿಯೂ ಗರ್ಭವತಿಯರ ಛಾಯಾಗ್ರಹಣ ಮಾಡಬಹುದಾದರೂ, ವಸಂತ ಋತುವಿನ ನಂತರ ಅವರು ಹೇರಳವಾಗಿ ಕಾಣಸಿಗುತ್ತಾರೆ! ಶಾರೀರಿಕ ಬದಲಾವಣೆಯ ಈ ದಿನಗಳಲ್ಲಿ ಇಂಥ ಬಟ್ಟೆ ಧರಿಸಬೇಕೆಂದು ಹೆಂಗಳೆಯರಲ್ಲಿ ಒಮ್ಮತವಿದ್ದಂತಿಲ್ಲ. ನವವಿವಾಹಿತೆ ತನ್ನ, ತಮ್ಮ ಕರಾಮತು, ಇನ್ನಿತರರಿಗೆ ಅರಿವಾಗಬಾರದೆಂದು ಅಧಿಕ ಪ್ರಮಾಣದಲ್ಲಿ ಬಟ್ಟೆ ಧರಿಸಿದರೆ, ಸ್ತ್ರೀ ಪುರುಷ ಸಮಾನತೆಯಲ್ಲಿ ವಿಶ್ವಾಸವಿಟ್ಟವರು ಅತ್ಯಲ್ಪ ಪೋಷಾಕಿನಲ್ಲಿ ಅಲೆಯುತ್ತಾರೆ. ಅಂಥವರ ಉಬ್ಬಿದ ಗಣಪನ ಹೊಟ್ಟೆ ನೋಡಿದಾಗ ಜಿಗುಪ್ಸೆಯಾಗುವದು ಸಹಜ. ಕಡುಬಡವರು ಕಂಕುಳಲ್ಲಿ ಒಂದು, ಉದರದಲ್ಲಿ ಇನ್ನೊಂದರೊಂದಿಗೆ ಹೊರಟಾಗ, ನಮ್ಮ ಜನಸಂಖ್ಯೆ ನಿಯಂತ್ರಿಸುವದು ಸಾಧ್ಯವೇ ಎಂದೆನಿಸದಿರದು. ಸರಕಾರಿ ನೌಕರಿಯಲ್ಲಿರುವವಳಿಗೆ ಆಫೀಸಿಗೆ ಹೋಗಿ ಹಾಜರಿಹಾಕಿ ಹಿಂದಿರುಗುವದೇ ಒಂದು ಮಹಾಸಾಧನೆ ಎಂದು ಅನಿಸಿದರೆ, ಈ ದುಡಿಮೆಗಾತಿಯರು ತನ್ನ ಮತ್ತು ಮಗುವಿನ ಜೀವವನ್ನು ಪಣಕ್ಕಿಟ್ಟು ಶ್ರಮಿಸದೇ ಬೇರೆ ಮಾರ್ಗವೇ ಇರುವದಿಲ್ಲ. ಸತತ ಛಾಯಾಗ್ರಹಣ ಮಾಡುತ್ತಲೇ ಇದ್ದರೆ ಮಗುವನ್ನು ಹೊತ್ತ ತಾಯಿಯನ್ನೂ ಕ್ಲಿಕ್ಕಿಸಬಹುದಾಗಿದೆ. ಜೋಡಿ ಮಕ್ಕಳನ್ನು ಹೆತ್ತವಳನ್ನು ಆಗೊಮ್ಮೆ ಈಗೊಮ್ಮೆ ಕಾಣಬಹುದು. ತುಂಬು ಬಸುರಿ, ಎಂದು ಫೋಟೊ ಹಿಡಿದು ಆ ನಂತರ ಅವಳು ಶಾಶ್ವತ ಗರ್ಭಿಣಿ ಎಂದರಿತು ಮರುಗಿದ್ದೂ ಇದೆ!

ಬದಲಾಗುತ್ತಿರುವ ಇಂದಿನ ಸಮಾಜದಲ್ಲಿ ಮಗುವಿನ ಭವಿಷ್ಯದ ದೃಷ್ಟಿಯಿಂದ ಅದರ ಶಿಕ್ಷಣದತ್ತ ಲಕ್ಷ್ಯಪೂರೈಸುವದಕ್ಕೆ ಆದ್ಯತೆ ಕೊಡಲೇಬೇಕಾಗುತ್ತದೆ. ಅಂತೆಯೇ ಧರೆಗೆ ಇಳಿದು ಬಂದ ಶಿಶುವಿಗೆ ಆಡಲೂ ಅವಕಾಶ ಕೊಡದೇ ಅರೆ ನಿದ್ರೆಯಲ್ಲಿಯೇ ಅದನ್ನು ಎತ್ತಿಕೊಂಡು ಶಿಶುವಿಹಾರಕ್ಕೆ ಮುಟ್ಟಿಸಿಬರುವ ತಾಯಂದಿರನ್ನು ಕಂಡಾಗ ಎಂತಹ ಕಲಿಕಾಲ ಬಂದಿದೆ, ಎಂದು ಮರುಕ ಹುಟ್ಟುತ್ತದೆ. ಮಕ್ಕಳು ಸ್ವಲ್ಪ ಬಲಿತಾಗ ಅವುಗಳ ಶಾಲಾ-ಚೀಲ, ನೀರಬಾಟ್ಲಿ, ಬುತ್ತಿಡಬ್ಬಿ ಹೊತ್ತು ಶಾಲೆಗೆ ಮುಟ್ಟಿಸುವವಳು ತಾಯಿಯೇ ಇಲ್ಲವೇ ಕೆಲಸದವಳೇ? ಎಂದು ಕ್ಷಣ ಕಾಲ ಯೋಚಿಸುಬೇಕಾಗುತ್ತದೆ. ಸುರಕ್ಷತೆಗಾಗಿ ತಮ್ಮ ಮಗುವನ್ನು ಕರೆ ತರಲು ಶಾಲೆಗೆ ಧಾವಿಸುವ ತಾಯಂದಿರೂ ಇದ್ದಾರೆ. ಪ್ರಾಥಮಿಕ ಶಾಲೆಗೆ ಪುಸ್ತಕ ರಾಶಿಯೊಂದಿಗೆ ಸಮವಸ್ತ್ರದಲ್ಲಿ ಹೊರಟವರನ್ನು ಕಂಡಾಗ ಇವರೆಲ್ಲ ಪರ್ವತಾರೋಹಿಗಳಾಗಲು ತರಬೇತಿ ಪಡೆಯುತ್ತಿರಬಹುದೇ? ಎಂಬ ಸಂಶಯ ಬಾರದಿರದು. ಜೊತೆಗೆ ಇವರ ಶಿಕ್ಷಕಿಯರಾದರೂ ಈ ಎಲ್ಲಾ ಪುಸ್ತಕಗಳನ್ನು ಅರ್ಥ ಮಾಡಿಕೊಂಡಿದ್ದಾರೆಯೇ ಎಂಬ ಅನುಮಾನ ಬಂದೇ ಬರುತ್ತದೆ! ಒಮ್ಮೆ ಕಾಲೇಜಿನ ಮೆಟ್ಟಿಲು ಹತ್ತಿದರೆಂದರೆ ಹುಡುಗಿಯರು ವಿಚಿತ್ರ ರೀತಿಯಲ್ಲಿ ವರ್ತಿಸಲಾರಂಭಿಸುತ್ತಾರೆ. ಅಂದಚೆಂದದ ಅತ್ಯಂತ ಬೆಲೆಬಾಳುವ ಬಟ್ಟೆ ಬರೆಗಳನ್ನು ಧರಿಸಿ ಪುಸ್ತಕಗಳ ಬದಲಾಗಿ ಅಲಂಕಾರ ಸಾಧನಗಳನ್ನು ಹೊತ್ತು, ವ್ಯಾನಿಟಿಬ್ಯಾಗಿನೊಂದಿಗೆ ಹೊರಟ ಹುಡುಗಿಯರು, ವಿದ್ಯಾರ್ಥಿನಿಯರೇ ಇಲ್ಲವೇ ಜಾಹೀರಾತಿನ ರೂಪಿಣಿಯರೇ? ಎಂದು ನಿರ್ಧರಿಸುವದು ಕಷ್ಟಕ್ಕಿಟ್ಟುಕೊಳ್ಳುತ್ತದೆ. ಅವರು ವಿದ್ಯಾಭಾಸಕ್ಕಾಗಿ ತೊಡಗಿಸಿದ ಸಮಯಕ್ಕಿಂತ ಬಟ್ಟೆಯಂಗಡಿ. ಬ್ಯೂಟಿ ಪಾರ್ಲರ್ ಹಾಗೂ ಕನ್ನಡಿಯ ಮುಂದೆ ಕಳೆದ ವೇಳೆ ಹೆಚ್ಚೆಂದು ಗಣಕಯಂತ್ರವಿಲ್ಲದೇ ಹೇಳಬಹುದು.

ಪಾಲಕರನ್ನು ಆರ್ಥಿಕವಾಗಿ ಏದುಸುರಿಗೆ ಗುರಿಪಡಿಸಿ ವಿದ್ಯಾರ್ಜನೆ ಮುಗಿಸಿ ಹಣದ ಗಳಿಕೆಯೇ ಜೀವನದ ಏಕಮಾತ್ರ ಧ್ಯೇಯ ಮಾಡಿಕೊಂಡಾಗ, ಈ ಕುಮಾರಿಯರಿಗೆ ಜೀವನದ ಇನ್ನೊಂದು ಮುಖದ ಪರಿಚಯವಾಗಲಾರಂಭಿಸುತ್ತದೆ. ಅಷ್ಟರಲ್ಲಿ ವಿವಾಹಿತಳಾದರೆ ಅದಕ್ಕೂ ಹೆಚ್ಚು ತಾಯಿಯಾಗಿ ಬಿಟ್ಟರಂತೂ, ಅವಳ ಬವಣೆಗಳನ್ನು ವಿವರಿಸಿದಷ್ಟೂ ಕಡಿಮೆ. ಮಗು, ಪತಿ, ಮನೆಗಳನ್ನು ಸಂಭಾಳಿಸಿಕೊಂಡು, ಆಫೀಸಿನ ಮೇಲಧಿಕಾರಿಯನ್ನು ಮೆಚ್ಚಿಸುವಂತೆ ಕೆಲಸ ತೂಗಿಸಿಕೊಂಡು ಹೋಗಲು ಅವಳ ಆಶಾಗೋಪುರಗಳೆಲ್ಲ ನೆಲಸಮವಾಗಿ ಬಿಡುತ್ತವೆ. ನುಸುಕಿನಲ್ಲಯೇ ಎದ್ದರೂ ಮುಗಿಯದ ಮನೆಗೆಲಸಗಳಿಂದಾಗಿ ಪ್ರತಿ ದಿನವೂ ಬಸ್ ಹಿಡಿಯಲು, ಕೈಗಡಿಯಾರ ನೋಡುತ್ತ ನಾಗಾಲೋಟ ಹಾಕಲೇಬೇಕಾಗುತ್ತದೆ. ಇಂಥ ಕಾಲದಲ್ಲಿಯೇ ಅವಳೆಷ್ಟು ಸಬಲೆ? ಎಂಬ ಪರೀಕ್ಷೆಯಾಗಿ ಬಿಡುತ್ತದೆ. ಅವಳಿನ್ನೂ ಕಾಲೇಜಿನ ಗುಂಗಿನಲ್ಲಿಯೇ ಇದ್ದು ಸಿದ್ದ ಬಟ್ಟೆಗಳನ್ನು ತೊಡುವವಳಾಗಿದ್ದರೆ, ಒಳಅಂಗಿಯ ಹುಕ್‌ಗಳನ್ನು ಸರಿಯಾಗಿ ಹಾಕಿಕೊಳ್ಳಲು ಮರೆತಿರುತ್ತಾಳೆ. ಫ್ಯಾಷನೆಬಲ್ ಎಂದು ಕೊಂಡ ಒಳಕುಪ್ಪುಸ ಸ್ವಸ್ಥಾನದಲ್ಲಿರಲು ನಿರಾಕರಿಸಿ, ಅವಸರದಿಂದ ತೊಟ್ಟ ರವಕೆಯ ಕೆಳಗಿಳಿದು ಬಂದಿರುತ್ತದೆ. ಚಡ್ಡಿಗೆ ಬಳಸಿದ ದೇಶಿ ಇಲಾಸ್ಟಿಕ್ ತನ್ನ ನಿಜಸ್ವರೂಪವನ್ನು ತೋರಿಸಲಾರಂಭಿಸಿ, ಅದು ಜಾರದಂತೆ ಜಾಗರೂಕತೆ ವಹಿಸಬೇಕಾಗುತ್ತದೆ. ಅದರಲ್ಲಿಯೂ ಮಾಸಿಕ ರಜಾದಿನಗಳಾದರಂತೂ ಈ ವನಿತೆಯರ ಬವಣೆಗೆ ಭಗವಂತನೇ ಗತಿ. ನಾಲ್ಕೂ ಕಡೆಯಿಂದ ಕಣ್ಣುಗಳ ಚುಚ್ಚು ಬಾಣಗಳಿಂದ ಸಂರಕ್ಷಿಸಿಕೊಳ್ಳುವದೇ ಕಷ್ಟವಾಗಿರುತ್ತದೆ. ಇವುಗಳಿಂದ ಬದುಕಿಕೊಂಡೆ ಎನ್ನುವದರಲ್ಲಿ ಅಂದ-ಚೆಂದಕ್ಕಾಗಿ ಕೊಂಡ ಚಪ್ಪಲಿ ಕೈಕೊಟ್ಟು ಬಿಡುತ್ತದೆ. ಕೇಶರಾಶಿ ಸ್ವಸ್ಥಾನದಲ್ಲಿ ಇರುವಂತೆ ಹಾಕಿದ ಕ್ಲಿಪ್ಪನ್ನೆ ಬಳಸಿ ದುರಸ್ತಿಯನ್ನು ನಡುರಸ್ತೆಯಲ್ಲೆ ಕೈಕೊಳ್ಳಬೇಕಾಗುತ್ತದೆ. ಇಂಥ ಚಪ್ಪಲಿಗಳನ್ನು ಹಿಡಿದು ಬರಿಗಾಲಿನಲ್ಲಿ ಧಾವಿಸುವ ಹೆಂಗಳೆಯರು ಅಪರೂಪವೇನಲ್ಲ. ಆಫೀಸಿನಿಂದ ಆರೆತಾಸು ಮೊದಲೇ ಹೊರಟರೂ, ಮನೆ ಸೇರುವಾಗ ಕತ್ತಲಾಗಿ ಬಿಡುತ್ತದೆ. ಮನೆಯಲ್ಲಿ ತಿರುಗಿ ಗಾಣದೆತ್ತಿನಂತೆ ದುಡಿಯಲೇ ಬೇಕಾಗುವದರಿಂದ, ಹೊಸ ಚೈತನ್ಯ ಪಡೆಯುವದಕ್ಕಾಗಿ ದಾರಿಯಲ್ಲಿ ಕೆಲ ಹಣ್ಣು-ಹಂಪಲು ಕೊಂಡು ತಿನ್ನುವವರೂ ಇದ್ದಾರೆ. ದಿನಂಪ್ರತಿ ಕಾಣಸಿಗುವ ಈ ಹೆಂಗಳೆಯರು ಹೇಗೆ ಹೊರಟಿರುತ್ತಾರೆಂದು ಸುಲಭವಾಗಿ ಊಹಿಸಿ ಕಾಣದ ಕ್ಯಾಮರಾವನ್ನು ಸುಲಭವಾಗಿ ಸಜ್ಜುಗೊಳಿಸಿಕೊಳ್ಳಬಹುದಾಗಿದೆ.

ವಿವಿಧ ಭಂಗಿಗಳಲ್ಲಿ ಹೆಣ್ಣಿನ ಛಾಯಾಗ್ರಹಣಕ್ಕಾಗಿ ರಜಾ ದಿನಗಳೇ ಅನುಕೂಲ. ದಿನಂಪ್ರತಿ ಗೆಳತಿಯರೊಂದಿಗೆ ಹರಟೆಹೊಡೆಯುತ್ತ ಕಾಲೇಜಿಗೆ ಹೊರಡುವ ವಿದ್ಯಾರ್ಥಿನಿಯರಿಗೆ ಬಿಡುವಿನ ದಿನಗಳಲ್ಲಿ ಮನೆಯ ಸೀಮಿತ ವಾತಾವರಣದಲ್ಲಿ ಕುಳಿತು ಓದಿಕೊಳ್ಳುವದೆಂದರೆ ಶುದ್ಧ ಅನ್ಯಾಯವಲ್ಲವೇ? ಅಂತೆಯೇ ಅರ್ಥವಾಗದ್ದನ್ನು ವಿಚಾರಿಸಿಕೊಳ್ಳುವ ನೆಪದಿಂದ ಅಥವಾ ಕೂಡಿ ಓದುವ ಕಾರಣದಿಂದ ಸ್ನೇಹಿತೆಯರು ಒಂದೆಡೆ ಸೇರುವದು ಸುಲಭ. ಸಮವಯಸ್ಕರು ಸೇರಿದಾಗ. ವಿದ್ಯಾಭ್ಯಾಸ ಒಂದು ಬಿಟ್ಟು ಉಳಿದೆಲ್ಲ ವಿಷಯಗಳ ಮೇಲೆ ಚರ್ಚೆಯಾಗುತ್ತದೆ.

ಹೊಸದಾಗಿ ಕೊಂಡ ಅಥವಾ ಹೊಲಿಸಿದ ಬಟ್ಟೆ ಬರೆ, ಮ್ಯಾಚಿಂಗ್ ಬಳೆ, ಚಪ್ಪಲ್, ಕಿವಿ-ಕಂಠಾಭರಣಗಳ ಸಮೀಕ್ಷೆ, ಪತ್ರಿಕೆಗಳನ್ನು ಓದಿ ನೋಡಿ ಅರಿತುಕೊಂಡ ಹೊಸ ಫ್ಯಾಶನ್ನುಗಳ ವಿಚಾರ ವಿನಿಮಯ, ಹೊಚ್ಚ ಹೊಸ ಚಲಚ್ಚಿತ್ರ, ದೂರದರ್ಶನ ಕಾರ್ಯಕ್ರಮಗಳ ಪರಾಮರ್ಶೆ, ಚುಡಾಯಿಸುವ ಹುಡುಗರು, ತಂದೆ ತಾಯಿಗಳ ಹಣದ ಕುರಿತಾದ ಸಣ್ಣತನ ಇತ್ಯಾದಿ ಮಾತಾಡಿ

ಮುಗಿಯದ ವಿಷಯುಗಳು ಹರಟೆಯ ತರಂಗಗಳಲ್ಲಿ ತೇಲುತ್ತ ಮೈಮರೆತಾಗ ಕಾಣದ ಕ್ಯಾಮರಾಕಾರನಿಗೆ ಹಬ್ಬದೂಟ ಬಡಿಸಿದಂತೆ! ಯಾವ ಭಂಗಿ ಕ್ಲಿಕ್ಕಿಸಲಿ? ಎಂದು ಗೊಂದಲವಾಗುತ್ತದೆ. ರಸ್ತೆ, ಪಕ್ಕದ ಅವರ ಬೃಹದ್ ಸಮ್ಮೇಲನ ಮುಗಿಯುವ ಪೂರ್ವದಲ್ಲಿಯೇ ಕ್ಯಾಮರಾದ ಫಿಲ್ಮ್ ವಿದಾಯ ಹೇಳುವದು ತೀರ ಸಾಮಾನ್ಯ. ಸಂಪಾದನೆ ಮಾಡುವ ಹೆಂಗಳೆಯರು ಲಾಲ್‌ಬಾಗ್, ಕಬ್ಬನ್ ಪಾರ್ಕ್, ಚಲಚ್ಚಿತ್ರ ಇಲ್ಲವೇ ಆಪ್ತರ ಭೇಟಿಗೆ ಹೋಗಲು ಸಿಗದ ಆಟೋಗಾಗಿ ಆಕಳಿಸುತ್ತ ನಿಂತಿರುತ್ತಾರೆ. ಕೇಳಿಸಿಕೊಳ್ಳುವ ಪತಿ ಜೊತೆಯಲ್ಲಿ ಇದ್ದರೆ, ಅತ್ತೆ ಮಾವ ನಾದಿನಿಯರ ಬಗ್ಗೆ ಏಕಪ್ರಕಾರವಾಗಿ ದೂರಿಕೊಳ್ಳುತ್ತ ಮೈಮರೆಯುತ್ತಾಳೆ, ಮಹಿಳೆಯೋರ್ವಳು. ಅವನೋ, ಇದೆಲ್ಲ ಹೊಸದೇನಲ್ಲ! ಎಂದು ಕೇಳುತ್ತಿರುವಂತೆ ನಟಿಸಿ ಆಕಳಿಸುತ್ತಿರುತ್ತಾನೆ. ಮಕ್ಕಳೆಲ್ಲ, ಕುಕ್ಕುಟ ಸಂಸಾರದಂತೆ ಚಲ್ಲಾಪಿಲ್ಲಿಯಾಗಿ ಅತ್ತಿತ್ತ ಓಡಾಡುತ್ತಿರುತ್ತವೆ. ಯುವ ತಲೆಮಾರಿನವರು ಹೊರ ಹೋಗಿದ್ದರಿಂದ ನೆರೆಮನೆಯವರೊಂದಿಗೆ ಅದುಮಿಕೊಂಡ ಅನಿಸಿಕೆಗಳನ್ನೆಲ್ಲ ಹಂಚಿಕೊಳ್ಳಲು ಹಿರಿಯರು ಅನುಕೂಲ ಮಾಡಿಕೊಂಡಿರುತ್ತಾರೆ. ಹೊರ ಹೋದವರು ಹಿಂದಿರುಗುವ ವರೆಗೆ ಹಿರಿಯರ ಆಲಾಪ ಮುಂದುವರಿದರೆ ಆಶ್ಚರ್ಯವಿಲ್ಲ.

ಉಡುವ ಸೀರೆಗಳಿಂದಲೇ ಸ್ತ್ರೀಯರನ್ನು ಗುರುತಿಸುವ ಕಾಲವೊಂದಿತ್ತು. ಸೇಲಂ ಸೀರೆಯ ಸಿದ್ದಮ್ಮ ಇಳಕಲ್ ಸೀರೆಯ ಈರವ್ವ, ಶಹಾಪುರ ಸೀರೆಯ ಶಾಂತಾಬಾಯಿ, ಜಮ್ಮಲ್ ಮಡುಗು ಸೀರೆಯ ಜಯಮ್ಮ, ಕಡವಾರ ಸೀರೆಯ ಕಾಳಮ್ಮ ಇತ್ಯಾದಿ. ಆದರೆ ಈಗ ನಾವು ಸಮತಾವಾದದತ್ತ ಹೊರಟಿದ್ದರಿಂದ ಮೇಲು-ಕೀಳು ಎಂಬ ಭಾವನೆ ತೊರೆದು ಮನಕ್ಕೊಪ್ಪುವಂತೆ ಬಟ್ಟೆ ಬರೆ ತೊಡುವ ಸ್ವಾತಂತ್ರ್ಯಗಳಿಸಿದ್ದೇವೆ. ಇದರ ಸಂಪೂರ್ಣ ಲಾಭ ಪಡೆದು ವ್ಯಾಪಾರಿಗಳು ಕೇವಲ ಜಾಹೀರಾತುಗಳಿಂದಲೇ ನೈಲಾನ್, ಪಾಲಿಯಸ್ಟರ್, ಕಳಪೆ ಕ್ವಾಲಿಟಿಯ ಆಕರ್ಷಕ ಡಿಸೈನ್‌ಗಳ ಸಿದ್ದ ಬಟ್ಟೆಗಳನ್ನು ಸ್ತ್ರೀಯರಿಗೆ ಮಾರಿ ಧನಿಕರಾಗುತ್ತಿದ್ದಾರೆ. ಇಂಥ ಉಡುಪುಗಳಲ್ಲಿ ಅನಾಕರ್ಷಕ ಅಂಗಾಂಗಗಳನ್ನು ಪ್ರದರ್ಶಿಸುತ್ತ ಹೊರಟ ಅಬಲೆಯರ ಅಭಿರುಚಿಗಾಗಿ ಮರುಗುವಂತೆ ಆಗುತ್ತದೆ. ಹದಿವಯಸ್ಸಿನವರು ಧರಿಸುವ ಉಡಿಗೆಯನ್ನು ಅರವತ್ತು ವರ್ಷದ ಹಿರಿಯರು ಧರಿಸಿದರೆ ಅವರ ಮುದಿತನ ಮರೆಯಾಗುವದೇ? ರಂಗುರಂಗಿನ ಚೂಡಿದಾರ್ ಧರಿಸಿ ದುಪಟ್ಟಾ ಗಾಳಿಯಲ್ಲಿ ಹಾರಬಿಟ್ಟು ಕಪ್ಪು ಕನ್ನಡಕ ಏರಿಸಿ ಹೊರಟ ಬೆಡಗುಗಾತಿ ಪಕ್ಕದ ಮನೆಯ ಸಿಂಧಿ ಯುವತಿ ಎಂದು ಕ್ಲಿಕ್ಕಿಸಿದರೆ, ತೀರ ಸಮೀಪ ಬಂದಾಗ, ಹೊರಟವಳು ಅವಳ ಅಜ್ಜಿ ಎಂದು ಅರಿತಾಗ ಆಗುವ ನಿರಾಶೆಗೆ ಮಾಪನ ಇದೆಯೇ? ದಿನಕ್ಕೊಂದು ಬಗೆಯ ಉಡುಪನ್ನು ಧರಿಸುವ ಹುಡುಗಿಯರನ್ನು ಗುರುತಿಸುವದು ಇನ್ನೂ ಕಷ್ಟ. ಮಿನಿ ಮಿಡಿ ಚೂಡಿದಾರ ಜೀನ್ಸ್, ಗರಾರಾ, ಘಾಗರಾ, ಲಂಗಗಳಲ್ಲದೇ ವಿಶೇಷ ಸಮಾರಂಭಗಳಲ್ಲಿ ಸೀರೆಯನ್ನು ಉಡುವದೂ ಇದೆ. ಸ್ವಂತದ ಬಟ್ಟೆಗಳಲ್ಲದೇ ಅಕ್ಕ-ತಂಗಿ- ತಾಯಿಯವರದೂ ಎರವಲು ಪಡೆದು ಉಡುವದಿದೆ. ಇಂದಿನ ದಿನಗಳಲ್ಲಿ ಹುಡುಗಿಯರು ಹುಡುಗರನ್ನು ಅನುಕರಣ ಮಾಡಿ ಅಲಂಕರಿಸಿಕೊಳ್ಳುವದರಿಂದ ದೂರದಿಂದ ಅವರನ್ನು ಪ್ರತ್ಯೇಕಿಸುವದೇ ಕಷ್ಟಕ್ಕಿಟ್ಟುಕೊಳ್ಳುತ್ತದೆ. ಅದೆಷ್ಟೋ ಸಲ ಪುರುಷನೆಂದು ಅಲಕ್ಷಿಸಿದವಳು ಹತ್ತಿರ ಬಂದಾಗ ದೇಹದ ಉಬ್ಬು-ದಗ್ಗುಗಳಿಂದ ನಾರೀಮಣಿಯೆಂದು ಅರಿತು ವಿಸ್ಮಯಪಡುವಂತಾಗುತ್ತದೆ! ಅಂತೆಯೇ ಕಣ್ಣಿಗೆ ಆಕರ್ಷಕರೆನಿಸಿದವರನ್ನೆಲ್ಲ ಕ್ಲಿಕ್ಕೀಕರಿಸುವದೆಂಬ ಹೊಸ ಕಾನೂನನ್ನು ಜಾರಿಗೆ ತರಬೇಕಾಯಿತು.

ಬೆಂಗಳೂರು ಮಹಾನಗರ ನಿರ್ಮಾಣದಲ್ಲಿ ತೀರ ಬಡವರಾದ ಕಾರ್ಮಿಕರ ಕೊಡುಗೆ ಬಲುದೊಡ್ಡದು. ಇಷ್ಟಾದರೂ ಅವರು ಅತ್ಯಂತ ದುಸ್ಥಿತಿಯಲ್ಲಿ ಬಾಳುವೆ ನಡೆಸಬೇಕಾಗಿದೆ. ಅತ್ಯಾಧುನಿಕ ಗಗನಚುಂಬಿ ಕಟ್ಟಡಗಳನ್ನು ಬೆವರು ಸುರಿಸಿ ರಕ್ತ ಕುದಿಸಿ ನಿರ್ಮಿಸಿದರೂ ಅವರ ತಲೆಯ ಮೇಲೊಂದು ಸೂರು ಇಲ್ಲ. ಮರಳು ರಾಶಿಯೇ ಅವರ ಶಯನ ಗೃಹ, ಮರದ ನೆರಳೇ ಅಡಿಗೆ ಮನೆ, ಬಯಲಿನತುದಿಯೇ ಶೌಚಾಲಯ, ಕತ್ತಲಿರುವಾಗಲೇ ಎದ್ದು ಯಾರೂ ನೋಡುತ್ತಿಲ್ಲ ಎಂದು ಖಚಿತಪಡಿಸಿಕೊಂಡು ಹೆಂಗಳೆಯರು ಲಗುಬಗೆಯಿಂದ ರಸ್ತೆಯಂಚಿನಲ್ಲಿ ಪಾತ್ರರ್ವಿಧಿಗಳನ್ನು ಮುಗಿಸಿಕೊಳ್ಳಬೇಕಾದ ದುಃಸ್ಥಿತಿ ನೆನೆಸಿಕೊಂಡಾಗ ಕನಿಕರ ಉಂಟಾಗುತ್ತದೆ. ಸಾರ್ವಜನಿಕ ಸ್ಥಳಗಳಲ್ಲಿ ಜಲಬಾಧೆ ತೀರಿಸಿಕೊಳ್ಳುವವರಿಗೆ ನೂರು ರೂಪಾಯಿಗಳ ಜುಲ್ಮಾನೆ ಹೇರುವ ಮೊದಲು ಹೆಂಗಳೆಯರಿಗಾಗಿ ಸುರಕ್ಷಿತ ಶೌಚಾಲಯಗಳು ನಿರ್ಮಾಣವಾಗಲಿ. ಬೀದಿ ಬೀದಿಗಳಿಂದ ಕಸಕಡ್ಡಿ ಎತ್ತುವವರು ಇದಕ್ಕೂ ಕಳಪೆಯಾದ ಜೀವನ ನಡೆಸುತ್ತಿದ್ದಾರೆ. ಕೋಳಿಕೂಗುವ ಮುನ್ನವೇ ಎದ್ದು ಬೃಹದಾಕಾರದ ಪ್ಲಾಸ್ಟಿಕ್ ಚೀಲವನ್ನು ಹೆಗಲಮೇಲೆ ಹೊತ್ತು ಒಂದು ಕಸದ ತೊಟ್ಟಿಯಿಂದ ಇನ್ನೊಂದಕ್ಕೆ ಓಡುತ್ತಲೇ ಇರುತ್ತಾರೆ. ಎಣ್ಣೆ ಕಾಣದ ಕೂದಲು, ನೀರು ಕಾಣದ ದೇಹ, ಯೌವನದಲ್ಲಿ ಆವರಿಸಿದ ಮುಪ್ಪು, ಹೆಣ್ಣುತನ ಮುಚ್ಚಲಾಗದ ಕುಪ್ಪಸ, ಹರಿದು ಚಿಂದಿಯಾದ ಸೀರೆ ನೋಡಿದಾಗ ಕನಿಕರವಾಗುತ್ತದೆ. ಪಾಶ್ಚಾತ್ಯ ಪ್ರವಾಸಿಗರ ಕ್ಯಾಮರಾಕ್ಕೆ ಅವರು ಅತ್ಯಾಕರ್ಷಕವೆನಿಸಿದರೂ ನಮಗೆ ಅವರುಗಳು, ಕಳೆದ ಅರೆಶತಮಾನದಲ್ಲಿ ಸರಕಾರ ಸಾಧಿಸಿದ ಬಡತನ ನಿರ್ಮೂಲನದ ದ್ಯೋತಕವಾಗಿದ್ದಾರೆ. ರದ್ದಿ ಕಾಗದ, ಹಳೆಯ ಕಬ್ಬಿಣ, ಮುದುಡಿದ ಪ್ಲಾಸ್ಟಿಕ್ ಶೇಖರಣೆಯಲ್ಲಿ ದಿನವಿಡೀ ದುಡಿದರೂ ಅವರ ಸಂಪಾದನೆ ದಿನ ಒಂದಕ್ಕೆ ಐದೋ ಹತ್ತೋ ರೂಪಾಯಿಗಳು ಮಾತ್ರ. ಇವರ ಬೆವರ ದುಡಿತದ ಲಾಭ ಮಾಡಿಕೊಳ್ಳುವವನು ಠೋಕ್ ವ್ಯಾಪಾರಿ. ಕೆಲವೊಮ್ಮೆ ಈ ಅಲೆಯುವ ಹೆಂಗಳೆಯರು ಬೀದಿ ಕಾಮಣ್ಣರಿಗೆ ಬಲಿಯಾಗುವದೂ ಇದೆ.

ವಿವಿಧ ಕಾರ್ಖಾನೆಗಳಲ್ಲಿ ಮಹಿಳಾ ಕಾರ್ಮಿಕರಿಗೆ ಹೆಚ್ಚಿನ ಅವಕಾಶಗಳಿರುವದರಿಂದ ಮನೆಯೊಳಗೆ ದುಡಿಯುವವರ ಸಂಖ್ಯೆ ಕುಗ್ಗಲಾರಂಭಿಸಿದೆ. ಆದ್ದರಿಂದ ತೀರಾ ನಿರ್ವಾಹವಿಲ್ಲದವರು ಮಾತ್ರ ಮನೆಗೆಲಸದವರು ಕೇಳಿದಷ್ಟು ಸಂಬಳ ತೆತ್ತು, ಮಾಡಿದಷ್ಟು ಕೆಲಸದಿಂದಲೇ ತೃಪ್ತಿ ಪಡೆಯಬೇಕಾಗಿದೆ. ಕೆಲಸ-ಜವಾಬ್ದಾರಿಗಳಲ್ಲಿ ಖೋತಾ ಮಾಡಿಕೊಂಡು ಸಾಧ್ಯವಿದ್ದಷ್ಟು ಹೆಚ್ಚಿನ ಸವಲತ್ತುಗಳನ್ನು ಪಡೆಯುವದು ಇಂದಿನ ಪೀಳಿಗೆಯವರ ಚಮತ್ಕಾರ. ಮಾಲಿಕರ ಮನೆಯಲ್ಲಿ ಕಾಫಿ, ತಿಂಡಿ, ಸ್ನಾನ, ಊಟ, ಬಡತಿಗಳಿಂದ ಗಿಟ್ಟಸಿದ ಒಳ್ಳೆಯ ಬಟ್ಟೆ, ಬರೆಗಳಿಂದ ಕೆಲಸದವಳೇ ಮನೆಯವರಿಗಿಂತ ಹೆಚ್ಚು ಆಕರ್ಷಕವಾಗಿ ಕಂಡರೆ ಆಶ್ಚರ್ಯವಿಲ್ಲ! ಒಂದು ಮನೆಯಲ್ಲಿ ಮಗಳೆಂದು ಭಾವಿಸಿದವಳು ಊರಿನಿಂದ ಕರೆತಂದ ಕೆಲಸದವಳು ಎಂದು ಆನಂತರ ಅರಿತಾಗ ನಂಬಲಾಗಲಿಲ್ಲ. ಈ ವರ್ಗದಲ್ಲಿ ಕೆಲವರಾದರೂ ಮನೆ ಕಟ್ಟಿಸಿ ಬಾಡಿಗೆಗೆ ಕೊಟ್ಟವರಿದ್ದಾರೆ. ಇದರಂತೆ ಪೌರಕಾರ್ಮಿಕ ಸಲ್ಲಿಸುವ ಸೇವೆಗಿಂತ ಗಿಟ್ಟಿಸುವ ಸವಲತ್ತುಗಳು ಅಪಾರ. ಸಮವಸ್ತ್ರಗಳಿಗಾಗಿ ಪರದಾಡಿದರೂ ಸದಾ ಉಡುವುದು ಪಾಲಿಯೆಸ್ಟರ್ ಸೀರೆಗಳನ್ನು. ಬುಟ್ಟಿ ಕೈಗಾಡಿಗಳನ್ನು ಪೂರೈಸಿದರೂ ಅವನ್ನೆಲ್ಲ ಇನ್ನೊಬ್ಬರು ಸೊತ್ತಾಗಿಸಿಕೊಂಡಿರುತ್ತಾರೆ. ವಾಸಕ್ಕಾಗಿ ಇವರಿಗೆ ಕಟ್ಟಿಸಿಕೊಟ್ಟ ಮನೆಗಳನ್ನು ಬಾಡಿಗೆಗೆ ಕೊಟ್ಟು ತಾವು ರೆವೆನ್ಯೂ ಸೈಟಿನ ಜೋಪಡಿಗಳಲ್ಲೇ ವಾಸಿಸುತ್ತಾರೆ. ಸದಾಕಾಲ ವೀಳ್ಯ, ಜರ್ದಾ

ಸೇವಿಸುವದು, ಕಳ್ಳು ಕುಡಿಯುವದು, ಲಾಟರಿ ಟಿಕೇಟು ಖರೀದಿಸುವದು, ಮಟಕಾಕ್ಕೆ ನಂಬರು ಹಚ್ಚುವಂಥ ಹವ್ಯಾಸಗಳು ಇವರಿಗಿಲ್ಲದೇ ಹೋಗಿದ್ದರೆ, ಕುಟುಂಬದ ಸದಸ್ಯರೆಲ್ಲರ ಸಂಬಳದಲ್ಲಿ ಎಂಥ ನೆಮ್ಮದಿಯ ಜೀವನ ನಡೆಸಬಹುದಾಗಿತ್ತು!

ಸರಕುಗಳನ್ನು ಹೊತ್ತು ಮಾರುವದಕ್ಕಾಗಿ ಅಲೆಯುವ ಹೆಂಗಳೆಯರು ಛಾಯಾಗ್ರಹಣಕ್ಕೆ ಹೇಳಿ ಮಾಡಿಸಿದಂತೆ ಇರುತ್ತಾರೆ. ತಲೆಯ ಮೇಲೆ ಪೂರಕೆರಾಶಿ, ಕಂಕುಳಲ್ಲಿ ಮಗು ಹೊತ್ತು, ಓಣಿಓಣಿಗಳಲ್ಲಿ ತಿರುಗುವವಳಿಗೆ, ಕಲಾಕಾರನಿಗೆ ತಾನೆಷ್ಟು ಆಕರ್ಷಕ ವಸ್ತು! ಎನ್ನುವ ಅರಿವೇ ಇರುವದಿಲ್ಲ. ರಂಗೋಲಿಯ ಪುಡಿಯವಳು ಸೇಡಿಮಣ್ಣಿಗೆ ಹಣ ಪಡೆಯುವದರ ಜೊತೆಗೆ ದಯಾಳು ಗೃಹಿಣಿಯರಿಂದ ತಿಂಡಿ, ತಿನಸು, ಹಳೇ ಸೀರೆ ಕುಪ್ಪಸಗಳನ್ನು ಗಿಟ್ಟಿಸುತ್ತಾಳೆ. ಕರುಳುಕಿತ್ತು ಬರುವಂತೆ ಭಿಕ್ಷುಕಳು ತಂಗಳ ಅನ್ನಕ್ಕಾಗಿ ಕಿರುಚಿಕೊಳ್ಳುವದು, ಮನೆಯ ಜನ ಇದ್ದು ಬಿದ್ದ ಅಡಿಗೆ ಅವಳಿಗೆ ನೀಡುವದು, ದಿನಂಪ್ರತಿಯ ಮಾತು. ಅವಳೋ ತನಗ ಸೇರಿದಿದ್ದನ್ನು ಬೀದಿಯ ನಾಯಿಗೆ ಕೊಟ್ಟು ಪುಣ್ಯ ಕಟ್ಟಿಕೊಳ್ಳುವದೂ ಇದೆ. ತರಕಾರಿಯವಳು ಮಾತಿನ ಮಾಟದಿಂದಲೇ ಹಳೆಯದ್ದನು ಮಾರಿ ಹಣ ಮಾಡುವದನ್ನು ಕಂಡಾಗ ಅವಳ ಕಸಬಿಗೆ ತಲೆದೂಗಲೇ ಬೇಕಾಗುತ್ತದೆ. ಹೂವು ಮಾರುವವಳು ಅಗ್ಗವಾಗಿ ಕೊಡುತ್ತೇನೆಂದು ವಾಗ್ದಾನ ಮಾಡಿ ಮೂರು ಮೊಳದ ಬದಲಾಗಿ ಎರಡನ್ನೇ ಕೊಟ್ಟು ತನ್ನ ಜಾಣ್ಮೆಗೆ ಮೆಚ್ಚುತ್ತಾಳೆ. ಆಧುನಿಕ ಮಹಿಳೆಯರಿಗೆ ನಿತ್ಯೋಪಯೋಗಿ ಸರುಕುಗಳನ್ನು ಮಾರುವವಳು ಕಲ್ಯಾಣಮಂಟಪಕ್ಕೆ ಹೋಗಿ ಬಂದವಳಂತೆ ಅಲಂಕರಿಸಿಕೊಂಡಿರುತ್ತಾಳೆ. ಇವರನ್ನೆಲ್ಲ ಕ್ಯಾಮರಾದಲ್ಲಿ ಸೆರೆ ಹಿಡಿಯುತ್ತಿದ್ದಂತೆ ಹೊಸ ಹೊಸ ಸತ್ಯಗಳು ಗೋಚರಿಸುತ್ತವೆ. ಅಂತೆಯೇ ಬಿಡುವಿನ ವೇಳೆ, ಕಾಫಿಯ ಕಾಸುಗಳು ಈ ಚಪಲಕ್ಕೆ ಮೀಸಲು. ಮುಂದಿನ ರೂಪದರ್ಶಿ ನೀವೇ ಆದರ್ರೆ ಆಶ್ಚರ್ಯವಿಲ್ಲ, ಆದ್ದರಿಂದ ಮೈಮರೆತು ರಸ್ತೆಯಲ್ಲಿ ಹೋಗಬೇಡಿ!

ಮಕ್ಕಳ ಬೆಳವಣಿಗೆ

ನೋಬೆಲ್ ಪಾರಿತೋಷಕ ಅಸ್ತಿತ್ವಕ್ಕೆ ಬಂದ ಕಳೆದ ಎಪ್ಪತ್ತೆಂಟು ವರ್ಷಗಳಲ್ಲಿ ಕೇವಲ ಇಬ್ಬರು ಭಾರತೀಯರು ಅದಕ್ಕೆ ಅರ್ಹತೆ ಪಡೆದರು. ಭಾರತದ ಜನಸಂಖ್ಯೆಯ ಒಂದು ಮೂರಂಶದಷ್ಟಿರುವ ಅಮೇರಿಕಕ್ಕೆ ಕಳೆದ ಒಂದೇ ವರ್ಷದಲ್ಲಿ ಆರು ನೋಬೆಲ್ ಪುರಸ್ಕಾರಗಳು ದೊರೆತವು. ಅದೇ ದೇಶ, ಒಲಿಂಪಿಕ್ ಪಂದ್ಯಾಟಗಳಲ್ಲಿ ಬಹುಸಂಖ್ಯೆಯಲ್ಲಿ ಸುವರ್ಣ ಪದಕಗಳನ್ನು ಗಳಿಸುತ್ತದೆಯಲ್ಲದೇ ವಿಶ್ವಚಾಂಪಿಯನ್‌ಶಿಪ್‌ನ್ನೂ ಪಡೆಯುತ್ತದೆ. ಆದರೆ ಭಾರತ, ಹಾಕಿಯಲ್ಲಿ ಗಳಿಸುತ್ತಿದ್ದ ಒಂದೇ ಒಂದು ಸುವರ್ಣ ಪದಕಕ್ಕೂ ಎರವಾಗಬೇಕಾಗಿ ಬಂತು. ಒಂಟಿ ಸ್ತ್ರೀ ಪುಟ್ಟ ವಿಮಾನದಲ್ಲಿ ಭೂಪ್ರದಕ್ಷಿಣೆ ಹಾಕುವದುಸ ಬೆಲೂನಿನಲ್ಲಿ ಅಟ್ಲಾಂಟಿಕ್ ಮಹಾಸಾಗರ ದಾಟುವದು, ಚಂದ್ರಲೋಕಕ್ಕೆ ಹೋಗಿಬರುವದು, ಗುರು-ಶುಕ್ರ ಗ್ರಹಗಳಿಗೆ ಯಂತ್ರೋಪಕರಣಗಳನ್ನು ಕಳಿಸುವದು, ಹಲವಾರು ವೈಜ್ಞಾನಿಕ ಶೋಧಗಳು, ಕೃಷಿ-ಕಾರಖಾನೆ ಉತ್ಪಾದನೆಗಳು ಮುಂತಾದವುಗಳಲ್ಲೆಲ್ಲ ಅಮೇರಿಕೆಯದೇ ಎತ್ತಿದ ಕೈ. ಕೇವಲ ಮೂರು ಶತಮಾನಗಳ ಇತಿಹಾಸ ಹೊಂದಿದ ಅಮೇರಿಕ, ಇಷ್ಟೊಂದು ಸಾಧಿಸುವಂತಾಗಿದ್ದರೆ ಮೂವತ್ತು ಶತಮಾನಗಳ ಇತಿಹಾಸವಿರುವ ಭಾರತ ಇಷ್ಟೇಕೆ ಹಿಂದೆ ಬಿದ್ದಿದೆ? ಎಂಬುದು ಎಲ್ಲರೂ ವಿಚಾರಿಸಬೇಕಾದ ಮಾತು. ನಮ್ಮಲ್ಲಿಯೂ ಪುಷ್ಪಕ ವಿಮಾನಗಳಿದ್ದವು, ನಮ್ಮ ಪೂರ್ವಜರು ಅಣ್ವಸ್ತ್ರಗಳನ್ನು ಬಲ್ಲವರಾಗಿದ್ದರು, ಶಸ್ತ್ರಕ್ರಿಯೆಯ ಯಾವತ್ತೂ ಚಮತ್ಕಾರಗಳನ್ನು ಸಾಧಿಸಿದ್ದರು, ಎಂದು ಒಣ ಡೌಲಿನ ಮಾತುಗಳನ್ನು ಹೇಳುವದಕ್ಕಿಂತ ನಮ್ಮ ಸಾಹಸ ಮುಂದೆ ಹೋಗಿಲ್ಲ. ಬಹುಶಃ ಇದಕ್ಕೆ ಹಲವಾರು ಕಾರಣಗಳ ಜೊತೆ ನಾವು ಬೆಳೆದು ಬಂದ ವಾತಾವರಣವೂ ಒಂದು ಪ್ರಬಲ ಕಾರಣವಾಗಿದೆ.

ತಾತನಿಗೆ ಮಗನಿನ್ನೂ ಶಿಶು

ಮುದಿಯ ತಂದೆ ಮೊಮ್ಮಕ್ಕಳನ್ನು ಪಡೆದರೂ ತನ್ನ ಮಗನನ್ನು ಇನ್ನೂ ಮಗುವಿನಂತೆ ನೋಡಿಕೊಳ್ಳುವದು ನಮ್ಮಲ್ಲಿ ತೀರಾ ಸಾಮಾನ್ಯ. ಏನೇ ಕಲಿತಿರಲಿ, ಎಷ್ಟೇ ಆಧುನಿಕರೆಂದು ಜಂಭ ಕೊಚ್ಚಿಕೊಳ್ಳಲಿ, ಏನಾದರೂ ಶೌರ್ಯ-ಸಾಹಸಗಳ ಪ್ರಮೇಯ ಬಂದಾಗ ಪಾಲಕರ ಹೆಸರು ಹೇಳಿ ಪಲಾಯನ ಮಾಡುವದು ನಮ್ಮಲ್ಲಿ ಧರ್ಮವಾಗಿದೆ. ಮಕ್ಕಳೆಂದರೆ ಮರ್ಕಟದಂತೆ. ಹಾಗೆ ಮಾಡಬೇಡ, ಹೀಗೆ ನೋಡಬೇಡ, ಅಲ್ಲಿ ಹೋಗಬೇಡ, ಇಲ್ಲಿ ಬರಬೇಡ ಎಂಬ ತರಬೇತಿಯಿಂದ ಎಳೆಯರ ವ್ಯಕ್ತಿತ್ವವನ್ನು ಅದುಮಿಬಿಡುವದರಲ್ಲಿ ನಾವು ಯಶಸ್ವಿಯಾಗಿದ್ದೇವೆ. ಹೇರಳವಾಗಿ ಹಣ ಖರ್ಚು ಮಾಡಿದರೆ ಮಕ್ಕಳು ಉತ್ತಮ ಬೆಳವಣಿಗೆ ಪಡೆಯುತ್ತಾರೆ, ಎಂದು ಸಿರಿವಂತರು ಪರಿಗಣಿಸಿದರೆ, ಮಧ್ಯಮ ವರ್ಗದವರು ಅತೀ ಹೆಚ್ಚಿನ ವೈಯಕ್ತಿಕ ಲಕ್ಷ್ಯ ಮತ್ತು ಮುದ್ದಿನಿಂದ ಮಕ್ಕಳನ್ನು ನಾಲಾಯಕರನ್ನಾಗಿ ಮಾಡುತ್ತಾರೆ. ಬಡವರಂತೂ ಮಕ್ಕಳೆಂದರೆ ದುಡಿಯುವ ಇನ್ನೆರಡು ಕೈ ಎಂದು ತಿಳಿಯುವುದರಿಂದ ಅವರಿಗೆ ಬಾಲ್ಯಾವಸ್ಥೆಯೇ ಇರುವದಿಲ್ಲ. ಇಂದಿಗೂ ನಗರವಾಸಿಗಳಲ್ಲಿ ಅಮೇರಿಕನ್ನರಂತೆ ವೇಷಭೂಷಣ ಧರಿಸಿ, ಅವರ ಚಲಚ್ಚಿತ್ರಗಳನ್ನು ನೋಡಿ,

ಅವರ ಸಾಹಿತ್ಯದ ಅಲ್ಪ ಪರಿಚಯ ಪಡೆಯುವದು, ಸುಸಂಸ್ಕೃತರ ಲಕ್ಷಣವಾಗಿದೆ. ಸಾಲವಾದರೂ ಮಾಡಿ ಮಕ್ಕಳನ್ನು ಕಾನ್ವೆಂಟ್ ಅಥವಾ ಇಂಗ್ಲಿಷ್ ಮಾಧ್ಯಮವುಳ್ಳ ಶಾಲೆಗೆ ಕಳಿಸುವದು ಮಧ್ಯಮ ವರ್ಗದವರ ಗುರಿ. ಐದು ಇಂಗ್ಲೀಷ್ ಶಬ್ದಗಳನ್ನು ಮಕ್ಕಳು ಮಾತನಾಡಿದವೆಂದರೆ ಇವರು ಧನ್ಯತೆಯನ್ನು ಪಡೆಯುತ್ತಾರೆ. ಈ ಡಂಭಾಚಾರದಿಂದ ಮಕ್ಕಳಲ್ಲಿ ಡೌಲು ಬೆಳೆಯುತ್ತದೆಯೇ ಹೊರತು ಸಾಹಸ-ಶೌರ್ಯಗಳಲ್ಲ.

ಪ್ರತಿಯೊಬ್ಬ ಅಮೇರಿಕನ್ನನೂ ತಾನು ಸ್ವತಂತ್ರನಾಗಬೇಕೆಂದು ಬಯಸುತ್ತಾನೆ. ಸದಾ ಯತ್ನಿಸುತ್ತಾನೆ. ಮೂರು ದಿನದ ಪ್ರಸೂತಿಯ ದಣಿವು, ಒಂದು ವಾರದ ವಿಶ್ರಾಂತಿಗಳ ನಂತರ ಅಮೇರಿಕನ್ ತಾಯಿ, ತಿರುಗಿ ತನ್ನ ದೈನಂದಿನ ಕೆಲಸಗಳನ್ನು ಪ್ರಾರಂಭಿಸುತ್ತಾಳೆ. ಅಳುವದು ಮಗುವಿನ ಜನ್ಮಸಿದ್ಧ ಹಕ್ಕು ಎಂದು, ತಿಳಿದ ಭಾರತೀಯನಿಗೆ ಅಮೇರಿಕನ್ ಮಗು ಅಳುವದು ತೀರಾ ಕ್ವಚಿತ್ತಾಗಿ ಎಂದು ಅರಿವಾದಾಗ ಆಶ್ಚರ್ಯವಾಗದೇ ಇರದು. ಮಗುವಿನ ಬೆಳವಣಿಗೆಗೆ ಯಾವ ಯಾವ ಆಹಾರ, ಎಷ್ಟು ಪ್ರಮಾಣದಲ್ಲಿ ಬೇಕು? ಎಂದು ವೈಜ್ಞಾನಿಕವಾಗಿ ನಿರ್ಧರಿಸಿದ್ದನ್ನು ಕಾಲ ಕಾಲಕ್ಕೆ ಕೊಡುವದಲ್ಲದೇ ರೋಗಜೀವಿಗಳಿಂದ ಅದು ಕಲುಷಿತವಾಗದಂತೆ ಎಚ್ಚರಿಕೆ ವಹಿಸುತ್ತಾರೆ. ಮಲಮೂತ್ರಗಳಿಂದ ಸ್ವಚ್ಛವಾಗಿಡಲು ಡಾಯಪರಗಳನ್ನು ತೊಡಿಸುವದಲ್ಲದೇ ಅವುಗಳನ್ನು ಕ್ರಿಮಿನಾಶಕಗಳಿಂದ ಸ್ವಚ್ಛಗೊಳಿಸುತ್ತಾರೆ. ಮಗುವಿನ ಯಾವತ್ತೂ ಬೇಡಿಕೆಗಳನ್ನು ಪೂರೈಸಿದರೆ ಅದು ಅಳುವ ಅವಶ್ಯ ಕತೆಯಾದರೂ ಎಲ್ಲಿದೆ? ಅದೇ ನಮ್ಮಲ್ಲಿ ಮಗು, ಅತ್ತು ರಂಭಾಟ ಮಾಡಿದಾಗಲೇ ಅದು ಹಸಿದಿದೆ ಎಂದು ತಾಯಿಗೆ ಎಚ್ಚರವಾಗುತ್ತದೆ. ಜೀರ್ಣವಾಗದ ಆಹಾರ, ಕಲುಷಿತ ಆಹಾರ ಕೊಡುವದರಿಂದ ಅದಕ್ಕೆ ಹೊಟ್ಟೆ ಝುೂಡಿಸುತ್ತದೆ. ಅಲವರಿಕೆಯಿಂದ ಅದು ಅತ್ತರೂ ಹಸಿದಿರಬೇಕು ಎಂಬ ಭ್ರಮೆಯಿಂದ ತಾಯಿ ಮತ್ತೆ ಹಾಲೂಡಿಸುತ್ತಾಳೆ! ಮನೆಯ ಮೂಲೆಗಳೆಲ್ಲ ಮಗುವಿಗೆ ಕಕ್ಕಸು, ಮೂತ್ರಾಲಯಗಳು. ಟೆಟನಸ್, ಪೋಲಿಯೋ, ಡಿಫ್ತೀರಿಯಾಗಳಂತಹ ಮಕ್ಕಳ ರೋಗಗಳ ವಿರುದ್ಧ ಮುನ್ನೆಚ್ಚರಿಕೆ ವಹಿಸುವದು ನಮ್ಮಲ್ಲಿ ವಿರಳ. ಮಗು ಹಾಸಿಗೆ ಹಿಡಿದಾಗ ಮಾತ್ರ ಡಾಕ್ಟರರ ಹತ್ತಿರ ಹೋಗುವದು ಪದ್ಧತಿ.

ಲಗಾಮು

ನಾವು ಮಗುವಿಗೆ ಶೀತಬಾಧೆಯಾಗಬಾರದೆಂದು ಕೋಣೆಯಲ್ಲಿ ಗಾಳಿಯಾಡದಂತೆ ಮಾಡಿದರೆ, ಇದಕ್ಕೆ ತದ್ವಿರುದ್ಧವಾಗಿ ಅಮೇರಿಕನ್ನರು ಜಾಗ್ರತೆಯಿಂದ ತಮ್ಮ ಮಕ್ಕಳಿಗೆ ಬೆಚ್ಚಗಿನ ಬಟ್ಟೆ ತೊಡಿಸಿ ಮೈ ಕೊರೆಯುವ ಚಳಿಯಲ್ಲಿ ಸ್ಟ್ರೋಲರದಲ್ಲಿ ಕೂಡಿಸಿ ಸ್ವಚ್ಛ ಹವೆ ಸಿಗುವದಕ್ಕಾಗಿ ಮನೆಯ ಹೊರಗೆ ಕೆಲಕಾಲ ಇಟ್ಟಿರುತ್ತಾರೆ. ಇದರಿಂದಾಗಿ ಮಕ್ಕಳು ಚಳಿಗಾಳಿಗಳಿಗೆ ಸಹಿಷ್ಣುವಾಗಿ ಬೆಳೆಯುತ್ತದೆ. ತಾನು ಹೋದಲ್ಲೆಲ್ಲ ಮಗುವನ್ನು ತಾಯಿ ಒಯ್ಯುವದಲ್ಲದೇ, ಮನರಂಜನೆಗೆಂದು ಹೂದೋಟ, ಪಾರ್ಕು, ಪ್ರಾಣಿ ಸಂಗ್ರಹಾಲಯಗಳಿಗೆ ಒಯ್ಯುತ್ತಾಳೆ. ತೋಳ ಬಂಧನದಲ್ಲಿ ಅದನ್ನು ಎತ್ತಿ ಹಿಡಿಯುವದಕ್ಕಿಂತ ಮನದಣಿ ಅದನ್ನು ಓಡಾಡಬಿಡುತ್ತಾಳೆ. ಜನಸಂದಣಿ ಬಹಳವಿದ್ದಲ್ಲಿ, ಗಂಡಾಂತರ ಸ್ಥಳಕ್ಕೆ ಅದು ಧಾವಿಸಬಾರದೆಂದು ಕೆಲವಕ್ಕೆ "ಲಗಾಮು" ಕಟ್ಟಿರುತ್ತಾರೆ. ನಮ್ಮ ಮಾತೆಯರಲ್ಲಿ ಯಾರಾದರೂ ಅದನ್ನು ನೋಡಿದರೆ "ನಾಯಿ, ಕೋತಿಗಳಂತೆ ಮಕ್ಕಳನ್ನು ನಿಯಂತ್ರಿಸುತ್ತಾರೆ" ಎನ್ನುತ್ತಿದ್ದರೋ ಏನೋ! ಅಮೇರಿಕನ್ನರು, ವೈಯಕ್ತಿಕ ಸುಖ-ನೆಮ್ಮದಿಗಳಿಗೆ

ವಿಶೇಷ ಲಕ್ಷ್ಯ ಪೂರೈಸುವದರಿಂದ ಮಕ್ಕಳ ಬಗ್ಗೆ ಅಂತಃಕರಣ ಪ್ರೀತಿಗಳು ಇರುವದಿಲ್ಲ ಎಂದು ಸರ್ವಸಾಮಾನ್ಯರ ಕಲ್ಪನೆಯಿದ್ದಂತಿದೆ. ವಿವಾಹ ವಿಚ್ಛೇದನೆಯ ಆಟದಲ್ಲಿ ತೊಡಗಿದವರು, ಅತಿ ಕಾಮುಕರು, ಕುಡುಕರು ಕೆಲವರನ್ನು ಬಿಟ್ಟರೆ, ಸಾಮಾನ್ಯ ಅಮೇರಿಕನ್ ತಾಯಿ-ತಂದೆಗಳು, ಬಾಲಕರ ಸಾಹಸ-ಸ್ವತಂತ್ರ ಪ್ರವೃತಿಗಳಿಗೆ ಅಡ್ಡಿಬಾರದಂತೆ ಆತ್ಮೀಯತೆಯಿಂದ ಬೆಳೆಸುತ್ತಾರೆ.

ತಬ್ಬಲಿಗಳಿಗೆ ಸ್ವರ್ಗ

ಮಕ್ಕಳು ಇಲ್ಲದವರು, ಒಂದೇ ಮಗು-ಇದ್ದವರು, ಅವಿವಾಹಿತರು ಮಕ್ಕಳನ್ನು ಸಾಕಲು ತೆಗೆದುಕೊಳ್ಳುವದು ಅಮೇರಿಕೆಯಲ್ಲಿ ತುಂಬ ಪ್ರಚಲಿತವಿದೆ. ಇದಕ್ಕಾಗಿ ಅವರು ಜಗತ್ತಿನ ಎಲ್ಲ ರಾಷ್ಟ್ರಗಳಿಂದ ಮಕ್ಕಳನ್ನು ಸ್ವಾಗತಿಸುತ್ತಾರೆ. ಮಗುವನ್ನು ಸಾಕುವ ಅರ್ಹತೆ ಪಡೆಯಲು ಅವರು ಪೂರೈಸಬೇಕಾದ ಸವಲತ್ತುಗಳು ವಿಸ್ಮಯಕಾರಿಯಾಗಿವೆ. ಸಂಬಂಧಿತ ಅಧಿಕಾರಿಗಳು ಬಂದು, ಮನೆ ಎಷ್ಟು ದೊಡ್ಡದಿದೆ? ಆಟಕ್ಕೆ ಸ್ಥಳವಿದೆಯೇ? ದಂಪತಿಗಳು ಒಮ್ಮತ್ರದಿಂದ ಇದ್ದಾರೆಯೇ, ಕುಡುಕರಿರುವರೇ? ಹಣಕಾಸಿನಿಂದ ಅನುಕೂಲವಿದ್ದಾರೆಯೇ ಎಂದೆಲ್ಲ ಪರಿಶೀಲಿಸುತ್ತಾರೆ. ಹತ್ತಾರು ಕಾರಾರುಗಳನ್ನು ಒಪ್ಪಿಕೊಂಡು, ಜಾಮೀನು ನಿಂತ ನಂತರವೇ ಮಗುವನ್ನು ಸಾಕಲು ಅನುಮತಿ ದೊರೆಯುತ್ತದೆ. ಪ್ರತಿ ಮೂರು ತಂಗಳಿಗೊಮ್ಮೆ ಮಗುವನ್ನು ಹೇಗೆ ಬೆಳೆಸುತ್ತಿದ್ದಾರೆ? ಎಂದು ಅಧಿಕಾರಗಳು ತನಿಖೆ ನಡೆಸುತ್ತಾರೆ. ಮಗುವನ್ನು ಅಲಕ್ಷಿಸಿದರೆ ಅದನ್ನು ತಿರುಗಿ ಒಯ್ಯಲು ಹಿಂದೆ ಮುಂದೆ ನೋಡುವದಿಲ್ಲ. ವಿಯಟ್ನಾಂ ಯುದ್ಧದಲ್ಲಿ ತಂದೆ-ತಾಯಿಗಳನ್ನು ಕಳೆದು ಕೊಂಡ ತಬ್ಬಲಿಗಳು, ಪಾಕಿಸ್ತಾನಿ ಸೈನಿಕರ ಅತ್ಯಾಚಾರದಿಂದ ಹುಟ್ಟಿದ ಬಂಗ್ಲಾದೇಶದ ಮಕ್ಕಳು, ಬೇಡಾಗಿ ಗಿಡ-ಗಂಟೆಗಳೆಡೆಯಲ್ಲಿ ಬಿಸಾಕಿದ ಭಾರತದ ಮಕ್ಕಳಿಗೆಲ್ಲ ಅಲ್ಲಿ ಸ್ವಾಗತವಿದೆ. ದಿಕ್ಕಿಲ್ಲದ ಇವು ಅನಾಥ ಮಕ್ಕಳಿಗಿಂತ ಸುದೈವಿಗಳೇ ಎನ್ನಬೇಕು. ಭಾರತದಲ್ಲಿ ಸಾದಾ ನೌಕರಿಯೊಂದನ್ನು ಗಳಿಸಲಾಗದೇ ಅಮೇರಿಕೆಗೆ ಹೋಗಿ ಡಾ॥ ಖುರಾನಾರು ನೋಬೆಲ್ ಪಾರಿತೋಷಕ ಗಳಿಸಿದಂತೆ ಇಂಥ ಮಕ್ಕಳಲ್ಲಿ ಕೆಲವರು ಮಿತಿಮೀರಿದ ಬುದ್ಧಿಶಾಲಿಗಳಾದರೆ ಆಶ್ಚರ್ಯವಿಲ್ಲ.

ಪುರುಷರು, ಮಕ್ಕಳ ಲಾಲನೆ-ಪಾಲನೆಯಲ್ಲಿ ಹೆಚ್ಚಿನ ಆಸಕ್ತಿ ವಹಿಸುತ್ತಾರೆ. ಕಾರಿನ ರಿಪೇರಿ ಮಾಡುವಾಗ, ಬಡಿಗತನ, ಕಮ್ಮಾರಿಕೆ ಮಾಡುವಾಗ, ಅವನ್ನು ಪಕ್ಕದಲ್ಲಿ ಕೂಡಿಸಿಕೊಂಡು ಮಾತನಾಡಿಸುತ್ತ, ರಮಿಸುತ್ತ ಇರುತ್ತಾರೆ. ಪತ್ನಿ ನೌಕರಿ ಮಾಡುತ್ತಿದ್ದರೆ, ಕಲಿಯುತ್ತಿದ್ದರೆ, ವಿಶೇಷ ತರಬೇತಿ ಇತ್ಯಾದಿ ಪಡೆಯುತ್ತಿದ್ದರೆ, ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರೆ, ಹೊರ ಹೋದಾಗಿನ ಮಕ್ಕಳ ಆರೈಕೆಯ ಹೊಣೆ ಪತಿಯದೇ. ಆತನೂ ಹಾಲು ಕುಡಿಸಬಲ್ಲ, ಆಹಾರ ತಿನ್ನಿಸಬಲ್ಲ, ಹಣ್ಣಿನ ರಸ ಮಾಡಿ ಕುಡಿಸಬಲ್ಲ, ಸ್ವಚ್ಛವಾಗಿ ಇಡಬಲ್ಲ. ಕಾರನ್ನು ನಡಿಸುವಾಗ ಮಗುವಿಗಾಗಿಯೇ ರಚಿತವಾದ ಸ್ಟೀರಿಂಗ್ ಇದ್ದ ಆಸನದಲ್ಲಿ ಅದನ್ನು ಕೂಡಿಸಿ ಬೆಲ್ಟ್ ತೊಡಿಸಿ ತನ್ನನ್ನು ಅದು ಅನುಕರಿಸುವದನ್ನು ನೋಡಿ ಆನಂದಿಸುತ್ತಾನೆ. ಆಟ-ಪಾಟ, ಕಸರತ್ತು, ಸರ್ಕಸ್ಸು, ತಮಾಷೆಗಳು ಮಗುವಿಗೆ ಕಾಣಿಸದಿದ್ದರೆ ಭುಜದ ಮೇಲೆ ಎತ್ತಿಹಿಡಿದು ತೋರಿಸಲು ತಂದೆ, ಹಿಂದೆ ಮುಂದೆ ನೋಡುವದಿಲ್ಲ.

ನೀರಾಟ

ಮಕ್ಕಳಿಗೆ ನೀರಾಟವೆಂದರೆ ಪಂಚಪ್ರಾಣ. ಆದರೆ ನೀರು, ಬೆಂಕಿಯಷ್ಟೇ ಅನಾಹುತಕಾರಿ ಎಂದು ನಾವು ಮಕ್ಕಳನ್ನು ಸದಾ ನೀರಿನಿಂದ ದೂರ ಇಡುತ್ತೇವೆ. ಮಳೆನೀರಿಗೆ ಕೈ ಒಡ್ಡಿ ನಿಂತರೂ, ಮಕ್ಕಳನ್ನು ಒಳಗೆಳೆದು ಬಂಧಿಸಿಡುವವರಿದ್ದಾರೆ. ಅಮೇರಿಕನ್ನರು ದೊಡ್ಡ ಪ್ಲಾಸ್ಟಿಕ್ ಮರಗೆಗಳಲ್ಲಿ ನೀರು ತುಂಬಿ, ಮಕ್ಕಳನ್ನು ಆಡಲು ಬಿಡುತ್ತಾರೆ. ಸ್ವಲ್ಪ ದೊಡ್ಡವರಾದಮೇಲೆ ಮನೆಯ ಹೊರಗೂ ನೀರಾಟಕ್ಕೆ ಒಯ್ಯುತ್ತಾರೆ. ನಡುವಿಗೊಂದು ತೇಲುವ ರಿಂಗ್ ಸಿಗಿಸಿ ಸರೋವರ, ಸಮುದ್ರಗಳಲ್ಲೂ ಹೋಗಗೊಡುತ್ತಾರೆ. ನದಿ, ಕಡಲ ತೀರಗಳಲ್ಲೆಲ್ಲ ಹೇಸಿಗೆ ಮಾಡಿ ಈಸಲೂ ಕಲಿಯದ, ಭಾರತೀಯ ಮತ್ತು ಅಮೇರಿಕನ್ ಮಕ್ಕಳಿಗೆ ಎಲ್ಲೆಯ ಹೋಲಿಕೆ? ಇನ್ನೂ ಸ್ವಲ್ಪ ದೊಡ್ಡವರಾದರೆಂದರೆ, ಅವರು ಎಲುಮಿನಿಯಂ ನಾವೆಗಳಲ್ಲಿ ಹುಟ್ಟು ಹಾಕುತ್ತ ದೂರ ದೂರ ಹೋಗಿ, ಬರುವವು. ಹಿಮವೆಂದರೂ ಅಲ್ಲಿಯವರಿಗೆ ಪ್ರಾಣ. ಹಿಮದಲ್ಲಿ ಹಕ್ಕಿ ಗೂಡು, ಮನೆಕಟ್ಟಡ, ಕೋಟೆ-ಕೊತ್ತಳಗಳನ್ನು ಮಾಡುತ್ತಾರೆ. ಹಿಮ-ಶಿಲ್ಪಗಳನ್ನು ನಿರ್ಮಿಸುತ್ತಾರೆ. ಜಾರುಬಂಡಿಯಾಡುತ್ತಾರೆ. ಹಿಮದುಂಡೆ ಮಾಡಿ ಆಡುತ್ತಾರೆ. ದೊಡ್ಡವರಾದಮೇಲೆ, ಎತ್ತರ ಪ್ರದೇಶಗಳಿಂದ ಜಾರುತ್ತ ಶೀಯಿಂಗ್ ಮಾಡುತ್ತಾರೆ. ಇವನ್ನು ಆಡುವಾಗ, ಕಾಲು ನೋವು ಮಾಡಿಕೊಳ್ಳುವದು, ಮುರಿದುಕೊಳ್ಳುವುದು, ಪ್ಲಾಸ್ಟರ್ ಹಾಕಿಸಿಕೊಳ್ಳುವದು ಸಾಮಾನ್ಯವಾದರೂ, ಮಕ್ಕಳ ಉತ್ಸಾಹ ಇದರಿಂದ ಕುಗ್ಗುವದಿಲ್ಲ. ಪಾಲಕರೂ ವಿರೋಧಿಸುವದಿಲ್ಲ. ಅಪೂರ್ವ ತಿಳುವಳಿಕೆ-ಸಹನೆಗಳಿಂದ ನಡೆದುಕೊಳ್ಳುತ್ತಾರೆ.

ಸ್ವತಂತ್ರ ಪ್ರವೃತ್ತಿ

ಆರ್ಥಿಕವಾಗಿಯೂ ಸ್ವತಂತ್ರವಾಗುವಂತೆ ಬಾಲಕರು ಸದಾ ಯತ್ನಿಸುತ್ತಾರೆ. ಅವರಿಗೆ ಬೇಕಾದ ಆಟಿಗೆ, ಬಟ್ಟೆ ಬರೆಗಳಿಗಾಗಿ ತಾಯಿಯನ್ನು ಪೀಡಿಸಿ, ಆಕೆ ಪತಿಯನ್ನು ಹಂಗಿಸಿ ಅವನ್ನು ಕೊಡಿಸುವ ವಿಧಾನಗಳಿಲ್ಲ. ಸ್ವಸಂಪಾದನೆಯಿಂದಲೇ ತಮ್ಮ ಆಸೆಗಳನ್ನು ಪೂರೈಸಿಕೊಳ್ಳಲು ಅಮೇರಿಕನ್ ಪಾಲಕರು ಪ್ರೋತ್ಸಾಹಿಸುತ್ತಾರೆ. ತಮ್ಮ ಮಕ್ಕಳು ವೃತ್ತಪತ್ರಿಕೆ ಹಂಚಿ, ಇತರರ ಬೂಟ್‌ಪಾಲಿಶ್ ಮಾಡಿ, ಕಾರು ತೊಳೆದು, ಹಣ ಸಂಪಾದಿಸುವದು ತಮಗೆ ಅವಮಾನವೆಂದು ತಿಳಿಯುವ ಬದಲಾಗಿ ಅಭಿಮಾನ ಪಡುತ್ತಾರೆ. ಈ ಹಣದಿಂದ ತಮಗೆ ಬೇಕಾದ ಚಿಕ್ಕಪುಟ್ಟ ಸಾಮಾನುಗಳನ್ನು ಪಾಲಕರ ಮೇಲ್ವಿಚಾರಣೆಯಿಲ್ಲದೇ ಅವರೇ ಕೊಳ್ಳುತ್ತಾರೆ. ಒಮ್ಮೆ ಮೋಸಹೋದರೆ ಇನ್ನೊಮ್ಮೆ ಜಾಣರಾಗುತ್ತಾರೆ ಎಂದು ಪಾಲಕರ ತಿಳುವಳಿಕೆ. ನಾವು ನಮ್ಮ ಎಳೆಯರಿಗೆ ಮೂರು ಚಕ್ರದ ಟ್ರಾಯಿಸಿಕಲ್ ತರಬೇಕು, ಅನ್ನುತ್ತಿರುವಾಗಲೇ ಅಲ್ಲಿಯವು ಬೈಸಿಕಲ್ ತರುವ ಹವಣಿಕೆಯಲ್ಲಿ ಇರುತ್ತವೆ! ಮಕ್ಕಳು ಗಳಿಕೆಯವರಾದರೆ, ಹಿತ್ತಿಲಲ್ಲಿ ಗೂಡುಮಾಡಿ ಹಕ್ಕಿಗಳನ್ನು ಸಾಕುವದು, ಮೀನು ಸಾಕುವದು ಮಾಡುತ್ತಾರೆ. ವಿರಳವಾದ ಪ್ರಾಣಿಗಳನ್ನು ಸಾಕುವವರೂ ಇದ್ದಾರೆ. ಹುಲಿಮರಿಗಳೊಂದಿಗೆ ಆಡುವ ಎಳೆಯರು, ಮೀನಿನಂತೆ ಮೊಸಳೆಮರಿಗಳನ್ನು ಸಾಕುವವರು, ಹಾವುಗಳನ್ನು ಪೋಷಿಸುವವರು, ಕೋತಿಗಳನ್ನು ಪಾಲಿಸುವವರು ಅವರಲ್ಲಿದ್ದಾರೆ. ಕೀಟಗಳನ್ನು ಕುತೂಹಲಪೂರ್ವಕವಾಗಿ ಅಭ್ಯಸಿಸುತ್ತಾರೆ. ನಮ್ಮ ಅದೆಷ್ಟೋ ಪ್ರಾಣಿಶಾಸ್ತ್ರ

ಪದವೀಧರರಿಗಿಂತ ಅಲ್ಲಿಯ ಮಕ್ಕಳಿಗೆ ಪ್ರಾಣಿಗಳ ಬಗ್ಗೆ ವ್ಯಾವಹಾರಿಕ ಜ್ಞಾನವಿರುತ್ತದೆಯೆಂದರೆ ಅತಿಶಯೋಕ್ತಿಯಾಗಲಾರದು. ಬಾಲ್ಯದಿಂದ, ಕಪ್ಪೆಯಿಂದ ಕಜ್ಜಿ ಬರುತ್ತದೆ, ಹಲ್ಲಿ ವಿಷಾರಿ, ಓತಿಕಾಟ ದೇವರನ್ನು ಬಯ್ಯುತ್ತದೆ, ಬೆಕ್ಕು ಹಾಯ್ದರೆ, ಹಲ್ಲಿ ಲೊಚಗುಟ್ಟಿದರೆ, ಅಪಶಕುನ, ಜೊಂಡಿಗ ಕಿವಿಯೊಳಗಿಂದ ಹೊಕ್ಕು ಮಿದುಳು ತಿಂದುಬಿಡುತ್ತದೆ, ಇತ್ಯಾದಿ ಮಾತುಗಳನ್ನು ಸ್ವತಃ ನಂಬುವದರ ಜೊತೆಗೆ, ಮಕ್ಕಳಿಗೆ ಹೇಳಿಕೊಡುವದರಿಂದ ನಮ್ಮಲ್ಲಿ ಪ್ರಾಣಿಗಳ ಬಗೆಗೆ ಸಹಜವಾಗಿಯೇ ಪ್ರೀತಿ ಸಾಧ್ಯವಾಗುವದಿಲ್ಲ. ಭೂತ-ಪಿಶಾಚಿಗಳಿಗೆ ಹೆದರುವಂತೆ, ಗುಡುಗು-ಸಿಡಿಲುಗಳಿಗೆ ಮಕ್ಕಳು ಹೆದರಲು ನಾವೇ ಕಾರಣ.

ಈ ದೇಶದಲ್ಲಿ ಆಟವು ಪಾಠವೆಂಬಂತೆ, ಪಾಠವು ಕಾಟವೆಂಬಂತೆ ಕಲಿಸಲ್ಪಡುವದರಿಂದ, ಅವುಗಳಲ್ಲಿ ಆಸಕ್ತಿ ಹುಟ್ಟುವದು ವಿರಳ. ಅಮೇರಿಕನ್ನರಲ್ಲಿ ಪಾಠವನ್ನು ಆಟದಂತೆ ರಂಜಕವಾಗಿ ಮಾರ್ಪಡಿಸಿದ್ದರಿಂದ ಮಕ್ಕಳು ಶಾಲೆಯನ್ನು ಮನೆಯಂತೆಯೇ ಪ್ರೀತಿಸುತ್ತವೆ. ಶಿಕ್ಷಕರು ವಿದ್ಯಾರ್ಥಿಗಳ ಆಸಕ್ತಿಯ ಚಟುವಟಿಕೆಗಳತ್ತ ಲಕ್ಷ್ಯ ಕೊಡುವದರಿಂದ ಎಳೆಯರ ಗೆಳೆಯರಾಗಿಯೇ ಪರಿಣಮಿಸುತ್ತಾರೆ. ವಿದ್ಯಾರ್ಥಿಗಳು, ಸ್ವತಃ ಪಾಲನೆ-ಪೋಷಣೆ ಕೈಕೊಂಡು ಪ್ರಾಣಿ ಪ್ರಪಂಚದ ಗುಟ್ಟುಗಳನ್ನು ಅರಿಯಲು ಯತ್ನಿಸುತ್ತಾರೆ. ಇಂತಹ ಸಮಯದಲ್ಲಿ ಮಕ್ಕಳು ಎದುರಿಸಬಹುದಾದ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸುವ ಪುಸ್ತಕಗಳು ಅವರ ವಾಚನಾಲಯಗಳಲ್ಲಿ ತುಂಬಿ ತುಳುಕುತ್ತವೆ. ಬಡಿಗ, ಕಮ್ಮಾರರು ಬಳಸುವ ಸಲಕರಣೆಗಳು ಮಕ್ಕಳ ಬಳಕೆಗಾಗಿ ಇರುತ್ತವೆ. ಶಾಲೆಗೊಂದು ಈಜುಗೊಳ ಒಳ-ಹೊರಗೆ ಆಟದ ಬಯಲುಗಳು ಇದ್ದೇ ಇರುತ್ತವೆ. ನೃತ್ಯ-ನಾಟಕಗಳಿಗೂ ಪ್ರೋತ್ಸಾಹ ಸಿಗುತ್ತದೆ. ಹೆಣ್ಣಿನ ಪಾತ್ರವಹಿಸಲು ಪ್ರಮೇಯವೇ ಇಲ್ಲ. ಇಂಥ ಆಟಗಳಲ್ಲಿ ಭಾಗವಹಿಸಿದ್ದಕ್ಕೆಲ್ಲ ಗುಣಗಳು ಸಿಗುವದರಿಂದ ಯಾವದು ಪಾಠ, ಯಾವದು ಆಟವೆಂದು ಭೇದ ಕಲ್ಪಿಸುವದು ಕಷ್ಟ.

ಟೊಳ್ಳು ಆದರ್ಶ ಬೇಡ

ಅಮೇರಿಕನ್ ಮಕ್ಕಳ ಪಾಲನೆ ಪೋಷಣೆಗಳು ಜಗತ್ತಿನಲ್ಲಿ ಅತ್ಯುತ್ತಮ ಎಂದು ಯಾರೂ ತಿಳಿಯಬೇಕಾಗಿಲ್ಲ. ಅತಿ ಹೆಚ್ಚಿನ ಸ್ವಾತಂತ್ರ್ಯದಿಂದಾಗಿ, ದುಷ್ಟ ಚಟಗಳಿಗೆ ಬಲಿಯಾಗಿ, ಕಳ್ಳದಾರಿ ಹಿಡಿಯುವವರೂ ಇದ್ದಾರೆ. ಇವರಲ್ಲಿ ಎಷ್ಟೋ ಜನ ದರೋಡೆ, ಕೊಲೆ-ಸುಲಿಗೆಗಳ ತಂಡಕ್ಕೆ ಸೇರಿಕೊಳ್ಳುತ್ತಾರೆ. ಮಾದಕ ವಸ್ತುಗಳಿಗೆ ಬಲಿಯಾಗುತ್ತಾರೆ. ಇಂಥ ಅಪವಾದಗಳು ನಮ್ಮಲ್ಲೂ ಇವೆ. ಬಹುಸಂಖ್ಯಾತರು ಕಳ್ಳಕಾಕರಿಗೆ, ದರೋಡೆಕೋರರಿಗೆ, ಸುಲಿಗೆಗಾರರಿಗೆ ಹೆದರುವ ಟೊಳ್ಳು ವ್ಯಕ್ತಿತ್ವ ಉಳ್ಳವರಾಗಿದ್ದರೂ, ಎಲ್ಲ ಸನ್ನಿವೇಶಗಳನ್ನೂ ಎದುರಿಸುವ ಸಾಹಸಿಗಳು ನಮ್ಮಲ್ಲಿಯೂ ಬೆಳೆಯುತ್ತಾರೆ. ಆದರೆ ಅಂತರವಿಷ್ಟೆ ನಮ್ಮಲ್ಲಿ ಗಟ್ಟಿತನ ಕಡಿಮೆ, ಟೊಳ್ಳುತನ ಹೆಚ್ಚು ಪ್ರಮಾಣದಲ್ಲಿದ್ದರೆ, ಅವರಲ್ಲಿ ಸಾಹಸಿಗಳು ಹೆಚ್ಚು, ಕಳ್ಳಕಾರರು ಕಡಿಮೆ ಪ್ರಮಾಣದಲ್ಲಿ ಇದ್ದಾರೆ.. ನಮ್ಮಲ್ಲಿಯ ಒಳ್ಳೇತನ ಬಿಟ್ಟುಕೊಡದೇ, ಅಮೇರಿಕನ್ ಸಂಸ್ಕೃತಿಯ ದುರ್ಬಲ ಅಂಶಗಳನ್ನು ನಮ್ಮದಾಗಿಸದೇ, ಧೈರ್ಯ, ಸ್ವಾತಂತ್ರ್ಯ, ಸಾಹಸ ವೃತ್ತಿಗಳನ್ನು ಮಕ್ಕಳಲ್ಲಿ ಬೆಳೆಸಲು ಉದ್ದೇಶಪೂರ್ವಕ ಯತ್ನಿಸಿದರೆ, ನಮ್ಮದೂ ಉತ್ತಮ ಜನಾಂಗವಾದೀತು; ಟೊಳ್ಳು ಆದರ್ಶ, ಟೊಳ್ಳು ನಾಯಕರನ್ನು ಓಡಿಸಿ ರಾಷ್ಟ್ರವನ್ನು ಕಟ್ಟುವ ಕಳಕಳಿಯುಳ್ಳವರಿಗೆ ಅವಕಾಶವಾದೀತು!

ಭಿಕ್ಷಾಟನೆಯ ಪರಂಪರೆ

ಸಕಲವೂ ಸುಲಭವಾಗಿ ಸಿಗುವ ಕೈಲಾಸದಲ್ಲಿ ಶಿವನಿಗೆ ಜೀವನದ ಏಕತಾನತೆ ಬೇಸರಕ್ಕಿಟ್ಟುಕೊಂಡಿರಬೇಕು. ಅಂತೆಯೇ ಭೂಲೋಕದಲ್ಲಿ ಭಿಕ್ಷಾಟನ ಕೈಕೊಂಡು, ಭಕ್ತಾದಿಗಳನ್ನು ಸಂದರ್ಶಿಸುವಂತೆ ಕೊಂಚ ಮನರಂಜನೆಯೂ ಆಗಬಹುದೆಂದು ನಿರೀಕ್ಷಿಸಿ ಕಾಯೋನ್ಮುಖಿಯಾದ, ದಾರುವನದಲ್ಲಿ ಋಷಿ-ಮುನಿಗಳು, ಅವರ ಪತ್ನಿಯರು ಮಕ್ಕಳ ಸಮೇತ ಕಠಿಣವಾದ ತಪಸ್ಸಿನಲ್ಲಿ ತೊಡಗಿ ಲೋಕವ್ಯವಹಾರಗಳನ್ನೆಲ್ಲ ಕಡೆಗಣಿಸಿ ಬಿಟ್ಟಿದ್ದರು. ಜೊತೆಗೆ ತಾವೇ ಶ್ರೇಷ್ಠರೆಂದು ನಂಬಿ ಪರಮಾತ್ಮನನ್ನೇ ಉಟ್ಟು ಸಲಾರಂಭಿಸಿದ್ದರು. ತನ್ನ ಭಿಕ್ಷಾಟನೆಯನ್ನು ಅಲ್ಲಿಂದಲೇ ಪ್ರಾರಂಭಿಸುವದು ವ್ಯಾವಹಾರಿಕವೆಂದು ಶಿವನು ನಗ್ನರೂಪಧರಿಸಿ ತನ್ನ ಗಣದ ಕುಬ್ಬನೋರ್ವನ ಮೇಲೆ ಭಿಕ್ಷಾಪಾತ್ರ ಹೊರಿಸಿ, ಕಾಲಲ್ಲಿ ಪಾದುಕೆ ಧರಿಸಿ, ಜೊತೆಗೆ ಜಿಂಕೆಮರಿಯನ್ನು ಹೊಂದಿಸಿ, "ಭವತಿ ಭಿಕ್ಷಾಂ ದೇಹಿ", ಎಂದು ಅನುಕಂಪ ಹುಟ್ಟಿಸುವ ಧ್ವನಿಯಲ್ಲಿ ಯಾಚಿಸಿದ. ಧ್ವನಿಯಲ್ಲೇ ಆಕರ್ಷಿತರಾದ ಋಷಿಪತ್ನಿಯರು ಭಿಕ್ಷೆ ನೀಡಲು ಬಂದಾಗ ಶಿವ ಅದ್ವಿತೀಯ ದೇಹಸೌಂದರ್ಯಕ್ಕೆ ಮಾರು ಹೋಗಿಬಿಟ್ಟುರು. ಉಟ್ಟಬಟ್ಟೆ ಜಾರಿಕೊಂಡದ್ದು ಸಹ ಅವರ ಗಮನಕ್ಕೆ ಬರಲಿಲ್ಲ! ಅನಂತರ ಅವರೇ ಲೌಕಿಕದತ್ತ ಗಮನ ಹರಿಸಿರಬೇಕು. ಶಿವನ ಉಪಾಯ ಫಲಿಸಿತು. ಈ ಘಟನೆ ಭಿಕ್ಷಾಟನೆಗೆ ನಾಂದಿಯಾಗಿರಬೇಕು! ಕರ್ನಾಟಕದ ವಿವಿಧ ಭಾಗಗಳಲ್ಲಿ ಇರುವ ಶಿವಾಲಯಗಳಲ್ಲಿ ಈ ಸನ್ನಿವೇಶವನ್ನು ರಸಭರಿತವಾಗಿ ನಿರುಪಿಸಲಾಗಿದೆ. ಕುರುಡುಮಲೈ (ಕೋಲಾರ ಜಿಲ್ಲೆ)ಯಲ್ಲಿ ಚೋಳ ಶೈಲಿಯಲ್ಲಿ ಕೆತ್ತಿದ ಸುಂದರ ಶಿಲ್ಪವಿದ್ದರೆ, ಲೇಪಾಕ್ಷಿ (ಆಂಧ್ರಪ್ರದೇಶದ ಹಿಂದು ಪುರದಲ್ಲಿದೆ) ದೇವಾಲಯದಲ್ಲೂ ಸೊಗಸಾದ ಶಿಲ್ಪ ಹಾಗೂ ಭಿತ್ತಿ ಚಿತ್ರಗಳಲ್ಲಿ ಕಾಣಬಹುದಾಗಿದೆ.

ಶಿವನ ಮೇಲ್ಪಂಕಿಯಿಂದಾಗಿ ಪ್ರಾಚೀನ ಧರ್ಮಗ್ರಂಥಗಳಲ್ಲಿ ಭಿಕ್ಷಾಟನೆಯನ್ನು ಗೌರವದಿಂದ ನಮೂದಿಸಲಾಗಿದೆ. ಅದು ವಿರಕ್ತಿಯ ಅಸಂಗ್ರಹದ, ತ್ಯಾಗದ ಪ್ರತೀಕ. ದೇವರನ್ನು ಮೆಚ್ಚಿಸಬೇಕೆಂದಿರುವವರೆಲ್ಲ ಅಹಂಕಾರವನ್ನು ತ್ಯಜಿಸಿ, ವೈರಾಗ್ಯ ಬೆಳಿಸಿಕೊಳ್ಳಬೇಕು. ಕಿಂಚಿತ್ ಕೂಡ ಭೋಗದ ಆಸೆ ಇರಕೂಡದು. ತನ್ನ ಸುಖಕ್ಕೆ ಯಾವ ಸಾಮಗ್ರಿಗಳನ್ನೂ ಕೂಡ ಹಾಕಬಾರದು, ಹಸಿವು ನೀಗಿಸಲಿಕ್ಕಷ್ಟೆ ಅಗತ್ಯವಣಿರುವ ಆಹಾರವನ್ನು ಭಿಕ್ಷೆಯಿಂದಲೇ ಸಂಪಾದಿಸಬೇಕು. ಈ ತತ್ತ್ವವನ್ನು ಪಾಲಿಸಿ ವಿರಕ್ತರು, ಸನ್ಯಾಸಿಗಳು ಭಿಕ್ಷೆಗೆ ಶರಣು ಹೋದರು. ಹಿಂದೆ ವಿದ್ಯಾರ್ಜನೆಗೆ ಗುರುಕುಲ ಸೇರಬೇಕಾದ ಹುಡುಗರು ಕೂಡ ಭಿಕ್ಷೆ ಬೇಡಿಯೇ ಉದರ ನಿರ್ವಹಣೆ ಮಾಡಿಕೊಳ್ಳಬೇಕಾಗಿತ್ತು. ಹೀಗಾಗಿ ಇಂದಿಗೂ ಬ್ರಹ್ಮೋಪದೇಶ ಅಥವಾ ಮುಂಜಿಯ ಸಂದರ್ಭದಲ್ಲಿ ಸಾಂಕೇತಿಕವಾಗಿಯಾದರೂ ವಟುವು ಭವತಿ ಭಿಕ್ಷಾಂದೇಹಿ ಎಂದು ಆಮಂತ್ರಿತ ಸಭೆಯ ಕೆಲವರ ಹತ್ತಿರ ಭಿಕ್ಷೆಯಾಚಿಸುವ ಪರಿಪಾಠ ಬೆಳೆದು ಬಂದಿದೆ.

ಈ ಧಾರ್ಮಿಕ ಹಿನ್ನೆಲೆಯಿಂದಾಗಿ ಭಾರತದಲ್ಲಿ ಹುಟ್ಟಿಕೊಂಡ ಎಲ್ಲ ಮತ ಪಂಥದವರಲ್ಲೂ ಭಿಕ್ಷಾಟನೆ ಗೌರವದ ಸ್ಥಾನ ಪಡೆಯಿತು. ಬೌದ್ಧಧರ್ಮದಲ್ಲಿ ಭಿಕ್ಕುಗಳು ಭಿಕ್ಷಾಟನೆಯನ್ನೇ ಉದರ ನಿರ್ವಹಣೆಗೆ ಅವಲಂಬಿಸಬೇಕಾಗಿತ್ತು. ಜೈನ ಧರ್ಮದಲ್ಲೂ ಸವಣ ಸವಣೆಯರು ಹೊಟ್ಟೆಪಾಡಿಗೆ ಇನ್ನಿತರರ ದಾನವನ್ನೇ ಅವಲಂಬಿಸಿರುತ್ತಾರೆ. ಅವರ ಆಹಾರದಲ್ಲಿ ತಾಮಸ ಅಂಶಕ್ಕೆ ಅವಕಾಶವಿಲ್ಲ.

ಕೇವಲ ಸಾತ್ವಿಕವಾದ (ಉಪ್ಪು, ಹುಳಿ, ಕಾರಗಳಿಲ್ಲದ) ಆಹಾರ ಸೇವಿಸಬೇಕಿದ್ದರೂ ಇಲ್ಲಿ ನೀಡಿದ್ದನ್ನು ಉಂಡು ಹಸಿವೆಯನ್ನು ತಣಿಸಬೇಕು. ಇದನ್ನು ಮನಗಂಡ ಭಾರತೀಯ ಪರಂಪರೆಯಲ್ಲಿ ಭಿಕ್ಷೆ ಯಾಚಿಸುವವರೂ, ಭಿಕ್ಷೆ ನೀಡುವವರೂ ಗೌರವಾನ್ವಿತರೇ! ಹೀಗಾಗಿ ಭಿಕ್ಷಾಟನೆ ಒಂದು ಅನಪೇಕ್ಷಣೀಯ ವೃತ್ತಿ, ಎಂಬ ಭಾವನೆ ಇರಲಿಲ್ಲ. ಅಂತೆಯೇ ಅನೇಕರು ಇದನ್ನು ವಂಶ ಪರಂಪರೆಯಿಂದಲೇ ಆಚರಿಸುತ್ತ ಬಂದಿದ್ದಾರೆ. ಡೊಂಬರು, ಹಾವಾಡಿಗರು, ಕಿಳ್ಳೇ ಕ್ಯಾತರು ಕೊರವಂಜಿಗಳು, ದುರುಗಮುರಗಿಯವರೆಲ್ಲ ಈ ಗುಂಪಿಗೆ ಸೇರುತ್ತಾರೆ.

ಯಲ್ಲಮ್ಮನ ಭಕ್ತಾದಿಗಳಲ್ಲಿ ಜೋಗವ್ವ, ಜೋಗಪ್ಪರು ದೇವಿಯ ದೀಕ್ಷೆ ಪಡೆಯುವಾಗ ತಾತ್ಪೂರ್ತಿಕವಾಗಿಯಾದರೂ, ಭಿಕ್ಷಾಟನೆ ನಡೆಸುವ ಕಡ್ಡಾಯವಿರುತ್ತದೆ. ಅಂತೆಯೇ ರೇಣುಕೆಯ 'ಶಿರ'ವನ್ನು ಕಲಶದಲ್ಲಿ ಅಥವಾ ಬುಟ್ಟಿಯಲ್ಲಿಟ್ಟು, ಹೂವಿನ ಅಲಂಕಾರ ಮಾಡಿ ತಲೆಯ ಮೇಲೆ ಹೊತ್ತು, ಕೇರಿ, ಓಣಿ, ಬೀದಿಗಳಲ್ಲಿ ಅಲೆದು 'ಎಕ್ಕಯ್ಯ ಜೋಗಮ್ಮ' ಎಂದು ಯಾಚಿಸಿ ದಾನಧರ್ಮಗಳನ್ನು ಪಡೆಯುತ್ತಾರೆ. ಅನೇಕರು ಜೋಗತಿ, ಜೋಗಪ್ಪ ಹಾಗೂ ಹಿಜಡಾ (ಖೋಜ) ರಲ್ಲಿ ಗೊಂದಲ ಮಾಡಿಕೊಳ್ಳುತ್ತಾರೆ. ಯಲ್ಲಮ್ಮನ ಭಕ್ತರಾದ ಜೋಗಮ್ಮ ಜೋಗಪ್ಪರುಗಳು ಧರ್ಮಿಷ್ಠರು. ತಮ್ಮ ಇಷ್ಟದೇವತೆಗೆ ಜೀವನ ಮುಡುಪಿಟ್ಟವರು. ಆಕೆಯ ಹಿರಿಮೆ ಸಾರುವದಕ್ಕಾಗಿ ಕಂಕಣ ಬದ್ಧರು. ಅಂತೆಯೇ ಅವರಿಗೆ ಜೀವನದ ವ್ಯಾಮೋಹ ಕಡಿಮೆ. ಆದರೆ ಹುಟ್ಟಾ ನಪುಂಸಕರಾದ ಹಿಜಿಡಾಗಳಲ್ಲಿ ಸ್ತ್ರೀ ಹೊರಜನನಾಂಗ ಪಡೆದವರು, ಗಡ್ಡಮೀಸೆ ಹೊಂದಿದ್ದರೆ, ಪುರುಷ ಜನನಾಂಗ ಪಡೆದವರು, ಗಡ್ಡಮೀಸೆಗಳಿಂದ ವಂಚಿತರಾಗಿರುತ್ತಾರೆ. ಮೋಜಿನ ಮಾತೆಂದರೆ ಗಡ್ಡಮೀಸೆಯಿದ್ದವರು ಬೋಳಿಸಿಕೊಂಡು ಸೀರೆ ಉಡುತ್ತಾರೆ. ಅವುಗಳು ಇಲ್ಲಿದವರು ಧೋತರ ಉಡುತ್ತಾರೆ! ಈ ಎರಡೂ ಗುಂಪಿನವರಿಗೆ ಸಂತಾನೋತ್ಪತ್ತಿ ಆಗುವದಿಲ್ಲ. ಸಾಮಾನ್ಯವಾಗಿ ಅವರು ಭಿಕ್ಷಾಟನೆಯನ್ನು ಮುಖ್ಯವೃತ್ತಿಯಾಗಿ ಮಾಡಿಕೊಂಡಿದ್ದಾರೆ. ಯಲ್ಲಮ್ಮಳ ಈ ಜೋಗಿ (ಯೋಗಿ)ಗಳು ಕರ್ನಾಟಕ, ಮಹಾರಾಷ್ಟ್ರ ಆಂಧ್ರಪ್ರದೇಶಗಳಿಗೆ ಸೀಮಿತವಾಗಿದ್ದರೆ, ಹಿಜಡಾಗಳು ಹಿಂದುಸ್ತಾನದ ತುಂಬ ಹರಡಿಕೊಂಡಿದ್ದಾರೆ.

ಉತ್ತರ ಭಾರತದ ಸಾಮಾಜಿಕ ಜೀವನದಲ್ಲಿ ಹಿಜಡಾಗಳಿಗೆ ವಿಶಿಷ್ಟ ಸ್ಥಾನವಿದೆ. ಇಂದಿನ ದಿನಗಳಲ್ಲಿ ಮಧ್ಯಪ್ರದೇಶ, ರಾಜಸ್ಥಾನಗಳಲ್ಲಿ ಪ್ರಜೆಗಳು ಅವರಲ್ಲಿ ಹಲವರ ಪ್ರಾಮಾಣಿಕತೆ, ನಿರ್ಭಿಡೆಗಳಿಂದ ಪ್ರಭಾವಿತರಾಗಿ ನಗರಪಾಲಿಕೆ, ವಿಧಾನಸಭೆಗಳಿಗೆ ಸಹ ಆರಿಸಿ ತರಲಾರಂಭಿಸಿದ್ದಾರೆ.

ನಾಲ್ಕು-ಐದು ಹಿಜಡಾಗಳು ತಂಡ ಕಟ್ಟಿಕೊಂಡು ಢೋಲಕ್ ಬಾರಿಸುತ್ತ ಚಪ್ಪಾಳೆ ತಟ್ಟುತ್ತ, ಧನಿಕರಿಂದ ಭಿಕ್ಷೆಯನ್ನು ವಸೂಲು ಮಾಡುತ್ತ ಅಲೆಯುತ್ತಾರೆ. ಭಿಕ್ಷೆ ನೀಡುವದರಲ್ಲಿ ಜಿಪುಣತನ ತೋರಿದವರಿಗೆ ಅವರ ಕೊಡುಗೆಯನ್ನು ಮುಖಕ್ಕೆಸೆದು ಹೋಗುವಲ್ಲಿ ಹಿಂದೆ ಮುಂದೆ ನೋಡುವದಿಲ್ಲ. ಚುಡಾಯಿಸಿದವರಿಗೆ ಅವಮಾನ ಮಾಡದೇ ಇರುವದಿಲ್ಲ. ಪ್ರತಿ ಹಿಜಡಾ ತಂಡದವರಿಗೆ ಒಬ್ಬಳು 'ಮೊಕಾದಮ್' ಇದ್ದೇ ಇರುತ್ತಾಳೆ. ತಂಡದವರಿಗೆ ಸದಸ್ಯರ ಕೊರತೆ ಅನಿಸಿದಾಗ, ಬಡವರ ಮಕ್ಕಳನ್ನು ಕದ್ದೊಯ್ದು, ಅವರ ಜನನೇಂದ್ರಿಯಗಳನ್ನು ಛೇದಿಸಿ, ಹಿಜಡಾ ದೀಕ್ಷೆಕೊಟ್ಟು ಭಿಕ್ಷಾಟನೆಯಲ್ಲಿ ತೊಡಗಿಸುತ್ತಾರೆ. ಮದುವೆ, ಮುಂಜಿ, ಪುತ್ರೋತ್ಸವ, ಸಾರ್ವಜನಿಕ ಉತ್ಸವಗಳಲ್ಲಿ ಅವರನ್ನು ಆಮಂತ್ರಿಸಿ, ನರ್ತನ ಮಾಡಿಸಿ ಉಪಹಾರ ಉಡುಗೊರೆಗಳನ್ನು ಧಾರಾಳವಾಗಿ ಕೊಟ್ಟು ಕಳಿಸುವ ಪದ್ಧತಿಯಿದೆ.

ಊರಿಗೊಂದು ಧರ್ಮಶಾಲೆ ಇರುತ್ತಿದ್ದ ಕಾಲವೊಂದಿತ್ತು. ಮಾರವಾಡಿಗಳು, ದಾನಿಗಳು ಉತ್ತರ ಭಾರತದಲ್ಲಿ ನಿಲ್ಲಿಸುತ್ತಿದ್ದ ಧರ್ಮಾಶ್ರಯಗಳಿಗಿಂತ ಇವು ತೀರ ಭಿನ್ನ. ಅಲ್ಲಾದರೋ ದಕ್ಷಿಣ ಭಾರತದ ಛತ್ರಗಳಂತೆಯೇ ದುಬಾರಿಯಾದ ಖರ್ಚಿನ ಉಳಿತಾಯಕ್ಕಾಗಿ, ಭಕ್ತಾದಿಗಳ ಅನುಕೂಲಕ್ಕಾಗಿ ಕಟ್ಟಿಸಿದ ತಂಗುದಾಣಗಳು. ಉತ್ತರ ಕರ್ನಾಟಕದವುಗಳಲ್ಲಿಯವು ಸಂಪೂರ್ಣವಾಗಿ ಭಿಕ್ಷುಕರಿಗೆ ಮೀಸಲು! ಅವುಗಳಲ್ಲಿ ಒಂದು ರಾತ್ರಿ ಕಳೆಯುವ ವಲಸೆಯವರಿಂದ ಶಾಶ್ವತವಾಗಿ ಸಂಸಾರ ಹೂಡಿದವರೂ ಇರುತ್ತಿದ್ದರು. ಅದೆಷ್ಟೋ ದೇವಸ್ಥಾನದ ಪೌಳಿಗಳನ್ನು ಅವುರುಗಳಿಗೆ ಮೀಸಲು ಇಡಲಾಗಿತ್ತು. ಶಿರ್ಸಿಯ ಮಾರಿಕಾಂಬಾ ದೇವಾಲಯ ಅಸಂಖ್ಯಾತ ಭಿಕ್ಷುಕರ ಆಲಯವಾಗಿತ್ತು. ಜಾತಿ, ಲಿಂಗ, ಧರ್ಮ, ಭೇದಗಳನ್ನು ಪರಿಗಣಿಸದೇ ಸರ್ವರೂ ಸದಾಕಾಲ ಕಿಕ್ಕಿರಿದು ತುಂಬಿರುತ್ತಿದ್ದರು. ಅಲ್ಲಿಯ ಚಟುವಟಿಕೆಗಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುವದು ಚಿಕ್ಕಂದಿನಲ್ಲಿ ಕುತೂಹಲಕರ ವಿಷಯವಾಗಿತ್ತು. ಧರ್ಮ, ಸ್ವಚ್ಛತೆಗಳಲ್ಲಿ ವಿಶ್ವಾಸವಿಟ್ಟವರು ಮಳೆ-ಚಳಿಯೆನ್ನದೆ ತಣ್ಣೀರಿನ ಸ್ನಾನ ಮಾಡುತ್ತಿದ್ದರು. ಚಹದ ಚಟ ಅಂಟಿಸಿಕೊಂಡವರು, ಮೂರು ಕಲ್ಲಿನ ಒಲೆಯ ಮೇಲೆ ಎಲ್ಯುಮಿನಿಯಂ ಪಾತ್ರೆಯಲ್ಲಿ ಚಾ 'ಕಾಸಿ' ತಲಬನ್ನು ಪೂರೈಸಿಕೊಳ್ಳುತ್ತಿದ್ದರು. ಬಾವಾಜಿಗಳು ಒಡೆದು ಹೋದ ಕನ್ನಡಿ ಚೂರಿನಲ್ಲಿ ತಮ್ಮ ಮುಖ ಕಮಲ ವೀಕ್ಷಿಸಿಕೊಳ್ಳುತ್ತ ವಿಭೂತಿ ಕುಂಕುಮ ಬಳಿದುಕೊಂಡು ಶಿವನ ಶಿಷ್ಯೋತ್ತಮರಾಗಿ ಮಾರ್ಪಡುತ್ತಿದ್ದರು. ಹೆಚ್ಚಿನವರು ಬೇಗನೆ ತಮ್ಮ ದಿನಂಪ್ರತಿಯ ಉದ್ಯೋಗಕ್ಕಾಗಿ ಹೊರಟುಹೋದರೆ, ನವಮಾಸ ತುಂಬಿದ ಗರ್ಭಿಣಿಯರು, ಬಾಣಂತಿಯರು, ಸೋಮಾರಿಗಳು ಅಲ್ಲಿಯೇ ಉಳಿದು ಹೇನು ಹೆಕ್ಕಿಕೊಳ್ಳುತ್ತ ಹರಟೆ ಕೊಚ್ಚುತ್ತ ದಿನಗಳೆಯುತ್ತಿದ್ದರು.

ಕಗ್ಗತ್ತಲು ಆವರಿಸಲಾರಂಭಿಸಿದಾಗ, ಭಿಕ್ಷಾಟನೆಗೆ ಹೋದವರೆಲ್ಲ ವಿಶ್ರಾಂತಿಧಾಮಕ್ಕೆ ಹಿಂದಿರುಗವರು. ದಾನಿಗಳು ಜೋಳಿಗೆಗೆ ಸುರಿದ ಕಾಳು ಕಡಿಗಳನ್ನು ಮಡಕೆಗೆ ಸೇರಿಸಿ ಬೇಯಲಿಕ್ಕಿಡುವರು. ಅದರಲ್ಲಿ ದಪ್ಪಕ್ಕಿ, ಸಣ್ಣಕ್ಕಿ, ನುಚ್ಚಕ್ಕಿ, ಕೆಂಪಕ್ಕಿಗಳೆಲ್ಲವೂ ಸಮಾವೇಶವಾಗಿರುತ್ತಿದ್ದವು. ಅದಕ್ಕಷ್ಟು ಉಪ್ಪು ಮೆಣಸಿನ ಕಾಯಿ ಸೇರಿಸಿ ಕುದಿಸಿದರೆ ಅಡಿಗೆ ಮುಗಿದಂತೆ. ನಂತರ ಹೊತ್ತಿಸಿದ ಬೆಂಕಿಯ ಸುತ್ತ ಸೇರಿ ಹರಟೆಹೊಡೆಯುತ್ತಿ ಬೀಡಿ ಸೇದುವರು. ಭಿಕ್ಷಾಟನೆಯಲ್ಲಿ ಗಂಡಸರಿಗೆ ಸರಿಸಮ ಅನಿಸಿಕೊಂಡ ಸ್ತ್ರೀಯರೂ ಧೂಮಪಾನದಲ್ಲಿ ಹಿಂದೆ ಬೀಳುವದಿಲ್ಲ. ಗುಡಗುಡಿ ಸೇದುವವರು, ಅಫೀಮು, ಗಾಂಜಾ ರೂಢಿಸಿಕೊಂಡವರು ಸ್ನೇಹಿತರೊಂದಿಗೆ ಪಾಲ್ಗೊಳ್ಳುವರು. ಅಂಥವರಿಗೆ ದಮ್ಮು-ಕೆಮ್ಮುಗಳ ಕೊರತೆ ಇರುವದಿಲ್ಲ. ಹರಕು ಸೀರೆ, ಧೋತ್ರ, ಕೌದಿಗಳನ್ನು ಬಳಸಿ ತಂತಮ್ಮ ನಿದ್ರಾತಾಣದ ಏಕಾಂತತೆಯನ್ನು ಸಂರಕ್ಷಿಸಿಕೊಳ್ಳುವರು. ಇಷ್ಟಾದರೂ ಪರಸ್ತ್ರೀ ಸುಂದರಿ! ಎಂದು ಅನಿಸದೇ ಇರುವದಿಲ್ಲ. ಇವರಲ್ಲಿ ಗಂಡ ಹೆಂಡತಿ ಅದಲು ಬದಲಾಗಿರುವದು ಸದಾ ಕಾಲ ನಡದೇ ಇರುವುದು ತೀರ ಸಾಮಾನ್ಯ! ಹೀಗೆ ಕೆಲ ಪುರುಷರಿಗೆ ಮೋಸ ಮಾಡಿದಾಕೆಯ ಮೂಗುಕೊಯ್ದು ಶೂರ್ಪನಖಿಯನ್ನಾಗಿಸಿದ ಘಟನೆಗಳು ಇಲ್ಲದಿಲ್ಲ. ಅಳುವ ಮಕ್ಕಳು, ಒಂದೇ ಸಮ ರಕ್ತ ಹೀರುವ ಗುಂಗಾಡುಗಳು ಅನಾರೋಗ್ಯದಿಂದ ಬಳಲುವವರ ಆಕ್ರಂದನಗಳ ನಡುವೆ ಸುಖನಿದ್ರೆಯಾದರೆ ಅದೇ ಮಹಾಪುಣ್ಯವೆಂದು ತಿಳಿಯಬೇಕು.

ರಾಜಕಾರಣಿಗಳೇನೋ ತಾವು ಜಾತ್ಯತೀತರೆಂದು ಘಂಟಾಘೋಷವಾಗಿ ಸಾರುತ್ತಿದ್ದರೂ ಭಿಕ್ಷುಕವರ್ಗ ಮಾತ್ರ ಯಾವ ಭೇದ-ಭಾವ ಇಲ್ಲದೇ ಸಕಲರಿಂದಲೂ ಭಿಕ್ಷೆಯನ್ನು ಪಡೆಯುವರು.

ರವಿವಾರ ಚರ್ಚು, ಈದ್ ಸಮಯಕ್ಕೆ ಮಸೀದೆ, ಹಬ್ಬ ಹುಣಿವೆಗಳಲ್ಲಿ ದೇವಸ್ಥಾನಗಳ ಆವಾರದಲ್ಲಿ ತಪ್ಪದೇ ನೆರೆಯುವರು. ಶಾಲೆಯ ಮೆಟ್ಟಲನ್ನೇ ಏರದಿದ್ದರೂ, ಎಲ್ಲಾ ಪವಿತ್ರ ದಿನಗಳು ಅವರಿಗೆ ಕಂಠಪಾಠ. ಶಿವರಾತ್ರಿ, ಗಣೇಶ ಚತುರ್ಥಿ, ಕೃಷ್ಣಾಷ್ಟಮಿ, ನಾತಾಳಿ ಹಬ್ಬ (ಕ್ರಿಸ್ಮಸ್) ಈದ್ ಮಿಲಾದ್‌ಗಳಲ್ಲೆಲ್ಲ ಧರ್ಮಿಷ್ಟರು ಕೊಡಮಾಡುವ ಭಿಕ್ಷೆಗೆ ಹಾಜರಾಗಿರುತ್ತಾರೆ. ಇದಲ್ಲದೇ ಗ್ರಹಣಕಾಲ, ಮೃತರನ್ನು ಕೈಲಾಸ ವೈಕುಂಠಗಳಿಗೆ ಕಳಿಸುವ ದಿನಗಳನ್ನು ಪತ್ತೆ ಹಚ್ಚುತ್ತಾರೆ. ಹೆಚ್ಚಿನ ದಾನಧರ್ಮ ದೊರೆಯುವ ದಿನಗಳಲ್ಲಿ ನೂಕು-ನುಗ್ಗಲು ಹೇಳತೀರದು. ಸೀರೆ, ಧೋತರಗಳ ವಿತರಣೆಯ ಸಂದರ್ಭದಲ್ಲಿ ತುಳಿತಕ್ಕೊಳಗಾಗಿ ಮೃತ ಪಟ್ಟವರೂ ಇದ್ದಾರೆ. ಅಂತೆಯೇ ಅವರು ತಂತಮ್ಮ ಸರಹದ್ದುಗಳನ್ನು ಗುರುತಿಸಿಕೊಂಡಿರುತ್ತಾರೆ. ಸಾಯಿಬಾಬಾ ದೇವಾಲಯದವನು ರಾಘವೇಂದ್ರ ಸ್ವಾಮಿಯ ಮಠಕ್ಕೆ ಹೋಗುವಂತಿಲ್ಲ. ಕಾಡುಮಲ್ಲೇಶ್ವರ ದೇವಸ್ಥಾನದವರು ಗಣೇಶನ ಗುಡಿಯತ್ತ ಸುಳಿಯುವಂತಿಲ್ಲ. ತಂತಮ್ಮ ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಳ್ಳಲು ಶರೀರ ದಾರ್ಢ್ಯವುಳ್ಳ 'ದಾದಾ' ಒಬ್ಬ ಇದ್ದೇ ಇರುತ್ತಾನೆ. ಅವನಿಗೆ ಗೌರವ ತೋರ್ಪಡಿಸಲು ಹಣ, ತಿಂಡಿ ತೀರ್ಥರೂಪದ ಕಾಣಿಕೆಗಳನ್ನು ಸಲ್ಲಿಸುತ್ತಲೇ ಇರಬೇಕಾಗುತ್ತದೆ. ಹೊರಗಿನ ಹೊಸಬನು ತನ್ನ ತಂಡದೊಂದಿಗೆ ಸೇರ್ಪಡೆಯಾಗಲು ಯತ್ನಿಸಿದಾಗ, ಅವರನ್ನೆಲ್ಲ ಛೀಮಾರಿ ಹಾಕಿ ಹೊಡೆದೋಡಿಸಿ ಬಿಡುತ್ತಾರೆ. ಅಂತೆಯೇ ಅನೇಕರು, ಈ ಸಂಘಟಿತ ಸಂಘಗಳ ತಳ್ಳಿಯೇ ಬೇಡವೆಂದು ಒಂಟಿಸಲಗನಂತೆ ತನ್ನಪಾಡಿಗೆ ಒಂಟಿಯಾಗಿದ್ದು ಭಿಕ್ಷಾಟನೆಯಲ್ಲಿ ತೊಡಗಿರುತ್ತಾರೆ.

ಶಾಲೆಗೆ ಹೋಗಲು ತಂಟೆ ಮಾಡಿದರೆ ಪರೀಕ್ಷೆಗಳಲ್ಲಿ ಉತ್ತಮ ಗುಣ ಪಡೆಯದಿದ್ದರೆ ಮಕ್ಕಳಿಗೆ, 'ಭಿಕ್ಷೆ ಬೇಡಲು ಕಳಿಸುತ್ತೇವೆ' ಎಂದು ಹಿರಿಯರು ಹೆದರಿಸುವ ದಿನಗಳಿದ್ದವು. ಅಂದು, ಭಿಕ್ಷಾಟನೆಗಾದರೋ ಯಾವ ತರಬೇತಿಯೂ ಬೇಕಿಲ್ಲ! ಎಂಬ ಭಾವನೆ ಇತ್ತು. ಆದರೆ ಇಂದು ಭಿಕ್ಷಾ-ಉದ್ದಿಮೆ, ವಿಪರೀತ ತುರುಸಿನದಾಗಿದೆ, ಅದರ ಸ್ವರೂಪ, ಪ್ರತಿದಶಕದಲ್ಲಿ ಅಷ್ಟೇಕೆ ವರ್ಷವರ್ಷವೂ ಬದಲಾಗುತ್ತಿರುತ್ತದೆ. ಕೇವಲ ಎರಡು-ಮೂರು ದಶಕಗಳ ಹಿಂದೆ, ಶನಿವಾರ, ಸೋಮವಾರ, ಮನೆಯ ಬಾಗಿಲಿಗೆ ಬರುವ ಭಿಕ್ಷುಕರಿಗೆಲ್ಲ ಒಂದು ಅಳ್ಳ ಅಕ್ಕಿ ಇಲ್ಲವೇ ಜೋಳ ಕೊಟ್ಟು ಕಳಿಸುವ ಪರಿಪಾಠ ಇತ್ತು. ಆದರಂತೆ, ಪ್ರತಿ ಗುರುವಾರ ತಾಳ ಹಾಕುತ್ತ ಭಜನೆ ಮಾಡುತ್ತ ಬೀದಿಯಲ್ಲಿ ಹೊರಟ ಗುರುಭಕ್ತನಿಗೆ ಆದರದಿಂದ ಕರೆದು, ಕಾಲು ತೊಳೆದು, ನಮಸ್ಕರಿಸಿ ಆಶೀರ್ವಾದ ಪಡೆದು, ಜೋಳಿಗೆ ತುಂಬ ಕಾಳು-ಕಡಿ ನೀಡುವ ಕ್ರಮವಿತ್ತು. ಆದರೆ ಇಂದಿನ ದಿನಗಳಲ್ಲಿ ಸಿರಿವಂತಿಕೆ ಹೆಚ್ಚಿದಂತೆ ದಾನಿಗಳು ಹೆಚ್ಚೆಚ್ಚು ಸ್ವಾರ್ಥಿಗಳು, ಸಂಕುಚಿತ ಮನೋಭಾವದವರು ಆಗುತ್ತಿದ್ದಾರೆ.! ಧರ್ಮಲಂಪಟರು ಹೆಚ್ಚುತ್ತಿದ್ದಾರೆ! ಸಾಲದಕ್ಕೆ ಸರಕಾರದವರೂ ಇಂಥವರೊಡನೆ ಒಳಸಂಚು ಮಾಡಿ ಹಲವಾರು ನಿರ್ಬಂಧಗಳನ್ನು ಹೇರಿಲು ಯತ್ನಿಸುತ್ತದೆ. ಅವನ್ನೆಲ್ಲ ಸಂಪೂರ್ಣವಾಗಿ ಕಾರ್ಯಾಚರಣೆಯಲ್ಲಿ ತರುವದು ಅಸಾಧ್ಯವಾದಾಗ, ಭಿಕ್ಷಾಟನೆಗೆ ಪ್ರತಿ ಬಂಧವನ್ನು ಸಂಪೂರ್ಣ ಮಾಡಲಿದೆ, ಎಂಬ ಪರಿಣತ ಭಿಕ್ಷುಕರ ಅಭಿಪ್ರಾಯವನ್ನು ಅಲ್ಲಗಳೆಯುವಂತಿಲ್ಲ.

ಯಾವುದು ಭಿಕ್ಷಾಟನೆ? ಯಾವುದು ಅಲ್ಲ? ಎಂದು ವ್ಯಾಖ್ಯಾನ ನೀಡುವದು ಅಸಾಧ್ಯ. ಐದು ನಿಮಿಷಗಳಿಂದ ಐವತ್ತು ವರ್ಷಗಳ ದೀರ್ಘಾವಧಿಯಲ್ಲಿ ಈ ವೃತ್ತಿಯನ್ನು ತಮ್ಮದನ್ನಾಗಿ ಮಾಡಿಕೊಂಡವರಿದ್ದಾರೆ. ಯಾತ್ರೆಗೆ ಹೊರಟವರು, ಕಳ್ಳ-ಕಾಕರ ಸುಲಿಗೆಗೆ ತುತ್ತಾಗಿ ಕೆಲಕಾಲ

ಈ ವೃತ್ತಿಯನ್ನು ಕೈಕೊಳ್ಳಲೇ ಬೇಕಾಗುತ್ತದೆ. ಬುದ್ಧಿ-ಭ್ರಮೆಯಾಗಿಯೋ, ಮಂಕುಕವಿದೋ, ಮನೆಯಿಂದ ಹೊರಗೆ ಹಾಕಿಸಿಕೊಂಡವರು, ಜನರ ದಾನ ಧರ್ಮದ ಮೇಲೆಯೇ ಅವಲಂಬಿಸಬೇಕಾಗುತ್ತದೆ. ಸೇವಾಜೀವನ ಅತ್ಯಂತ ದುರ್ಭರ ಹಾಗೂ ನಿರಾಶಾದಾಯಕವಾದಾಗ ಹೆರವರ ಮುಂದೆ ಕೈಯೊಡ್ಡಬೇಕಾಗುತ್ತದೆ. ದುರ್ಬಲತೆಯ ಮತ್ತು ಇಂಥ ದೀನಸ್ಥಿತಿಯಲ್ಲಿ ಅವರಿಂದ ಎಂಥ ಕಸಬು ತಾನೇ ಸಾಧ್ಯ? ಹೊಟ್ಟೆ ಹೊರೆದು ಕೊಳ್ಳಲು ಹೇಗೆ ಸಾಧ್ಯ?

ಶಾರೀರಿಕವಾಗಿ ಸಮರ್ಥರಾಗಿದ್ದು ಕೈತುಂಬ ಗಳಿಕೆ ಇದ್ದಾಗ ಮನೆಯವರೆಲ್ಲ ಸ್ವಾಗತಿಸಿದರೂ, ವೃದ್ಧಾಪ್ಯದಿಂದ ದುಡಿಮೆ ಸಾಧ್ಯವಾಗದಿದ್ದಾಗ, ಅವರನ್ನು ಅಲಕ್ಷಿಸಿ, ಹೊಟ್ಟೆ ತುಂಬ ಅನ್ನಕೂಡ ನೀಡದೇ ಮನೆಯಿಂದ ಹೊರಗೆ ಹಾಕಿಬಿಡುವರು. ಮಗ, ಸೊಸೆ, ಮಗಳು, ಅಳಿಯ, ಮೊಮ್ಮಕ್ಕಳು, ಇದ್ದವರೂ ಅನಾಥರಾಗಿ ಭಿಕ್ಷಾವೃತ್ತಿಯ ಮೊರೆ ಹೋಗಬೇಕಾಗುತ್ತದೆ. ಅತ್ಯಾಧುನಿಕರು, ಸುಶಿಕ್ಷಿತರು ಅನಿಸಿಕೊಂಡವರು ಕೂಡ, ಅತಿ ಸ್ವಾರ್ಥಿಗಳಾಗಿ ಹಿರಿಯರ ಸಕಲ ಚರಾಚರ ಆಸ್ತಿಯನ್ನು ಕಬಳಿಸಿ ಅವರನ್ನು ನಿರ್ಗತಿಕರನ್ನಾಗಿಸುವದು ಇತ್ತೀಚಿನ ಬೆಳವಣಿಗೆ. ಕಂಡವರ ನೆರವು ಕೇಳಲು ಆತ್ಮಾಭಿಮಾನ ಅಡ್ಡಬಂದಾಗ ಆತ್ಮಹತ್ಯೆ ಮಾಡಿಕೊಳ್ಳುವದು ಹೆಚ್ಚಾಗಿದೆ.

ಅರ್ಧ ಶತಮಾನದ ಹಿಂದೆಯೇ ರಚಿತವಾದ ಭಾರತದ ಶಾಸನಾಂಗದಲ್ಲಿ ಸ್ತ್ರೀಯರು ಸರ್ವವಿಧದಲ್ಲಿಯೂ ಪುರುಷರ ಸಮಾನರು, ಎಂದು ಸಾರಲಾಗಿದೆ. ಜೊತೆಗೆ ಅವರಿಗೆ ಹಲವಾರು ವಿಶೇಷ ಹಕ್ಕು ಬಾಧ್ಯತೆಗಳನ್ನೂ ನೀಡಲಾಗಿದೆ. ಇಂದಿನ ದಿನಗಳಲ್ಲಿ ಅವರ ಹೆಚ್ಚಿನ ಪ್ರಗತಿ ಸಾಧಿಸಲು ಮೀಸಲಾತಿಯನ್ನು ಜಾರಿಗೆ ತರುವ ಯತ್ನಗಳು ಏಕಪ್ರಕಾರವಾಗಿ ನಡೆದಿವೆ. ಆದರೆ ಸಾಮಾನ್ಯ ಸ್ತ್ರೀಯರ ನಿಜವಾದ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳಬೇಕೆಂದು ಬಯಸುವವರು ಬೀದಿಗಿಳಿದು ಕಣ್ತೆರೆದು ನೋಡಬೇಕು. ಪರಿತ್ಯಕ್ತ ಮಹಿಳೆಯರ ಸಂಖ್ಯೆ ಸಾಕಷ್ಟು ದೊಡ್ಡದಿದೆ. ದೈನ್ಯತೆಯಿಂದ ಭಿಕ್ಷೆಬೇಡುವವರಲ್ಲಿ ಅವರೇ ಹೆಚ್ಚಿನವರು. ಮಾನ ಮರ್ಯಾದೆ ಮುಚ್ಚಿಕೊಳ್ಳಲು ಎಷ್ಟೇ ಹಕ್ಕು ಬಾಧ್ಯತೆಗಳನ್ನು ದಯಪಾಲಿಸಿದರೂ ಈ ನಿರ್ಗತಿಕ ವರ್ಗಕ್ಕೆ ಅದರಿಂದ ಆಗಬೇಕಾದದ್ದು ಏನೂ ಇಲ್ಲವೆಂದು ಬೇರೆ ಹೇಳಬೇಕಿಲ್ಲ.

ಸ್ವಾರ್ಥ ಸಾಧನೆಗೆ, ಇಷ್ಟಪೂರ್ತಿಕೆಗೆ, ದೇವರಿಗೆ ಮೊರೆಹೊಕ್ಕು, ಕೆಲಕಾಲ ಭಿಕ್ಷೆ ಬೇಡುತ್ತೇನೆ ಎಂದು ಹರಕೆ ಹೊರುವ ಪರಿಪಾಠ ಹಿಂದಿನಿಂದ ಬೆಳೆದು ಬಂದಿದೆ. ಹುಟ್ಟಿದ ಮಕ್ಕಳೆಲ್ಲ ಸಾವನ್ನು ಅಪ್ಪಲಾರಂಭಿಸಿದಾಗ, ಮುಂದೆ ಹುಟ್ಟಲಿರುವ ಮಗು ಭಿಕ್ಕೆ ಬೇಡಿ ಜೀವಿಸಲಿ ಎಂದು ಅವಕ್ಕೆ ಭಿಕ್ಕು ಅಥವಾ ಭಿಕ್ಕಿ ಎಂದು ನಾಮಕರಣ ಮಾಡುವ ಪದ್ಧತಿ ಇದೆ. ಧನದ ಅನುಕೂಲ ಇರುವವರೂ ಹರಕೆ ಹೊತ್ತು ಕಾಲು ನಡಿಗೆಯಲ್ಲಿ ಕಾಶಿ, ವೃಂದಾವನ, ಧರ್ಮಸ್ಥಳ, ತಿರುಪತಿ, ರಾಮೇಶ್ವರ, ಗೋಕರ್ಣಗಳಂತಹ ಯಾತ್ರಸ್ಥಳಗಳಿಗೆ ಪಯಣಬೆಳಸಿ, ಸಾಂಕೇತಿಕವಾಗಿ ಭಿಕ್ಕೆ ಬೇಡುವರು. ಬಡವರಲ್ಲಿ ಶ್ರಾವಣ ಮತ್ತು ಕಾರ್ತಿಕ ಮಾಸಗಳಲ್ಲಿ ಶನಿವಾರ, ಸೋಮವಾರಗಳಂದು, ಪರಿಚಿತ ಮನೆಗಳಲ್ಲಿ ಭಿಕ್ಷೆಯಾಚಿಸಿ ತಮ್ಮ ವ್ರತವನ್ನು ಪೂರೈಸಿ ಕೊಳ್ಳವರು.

ಹುಟ್ಟು ಕಿವುಡರು, ಮೂಕರು, ಕೈಕಾಲು ಕಳೆದು ಕೊಂಡವರು ಇಲ್ಲವೇ ಬಾಲ್ಯದಲ್ಲೊ, ವೃತ್ತಿಜೀವನದಲ್ಲೊ ಗಳಿಕೆಯ ಅಂಗಗಳನ್ನು ಕಳೆದು ಕೊಂಡವರು ಭಿಕ್ಷಾವೃತ್ತಿಗೆ ಮೊರೆ ಹೋಗಲೇ ಬೇಕಾಗುತ್ತದೆ. ಚಿಕ್ಕವನಿದ್ದಾಗ ಪ್ರತಿದಿನ ನೋಡುತ್ತಿದ್ದ ತಿರಕ ದಂಪತಿಗಳು ಇಂದಿಗೂ ಕಣ್ಣಿಗೆ

ಕಟ್ಟಿದಂತೆ ಇದ್ದಾರೆ. ಅವನಿಗೆ ಕಾಲು, ಅವಳಿಗೆ ಕಣ್ಣು ಇರಲಿಲ್ಲ. ಒಬ್ಬರಿಗೊಬ್ಬರು ಅಂಟಿಕೊಂಡು 'ಶಿವಶಿವಾ! ಕಣ್ಣು ಕಾಲಿಲ್ಲದವಗೆ ನೀನೇ ಶಿವಾ!' ಎಂದು ಹಾಡುತ್ತ ಹಾವಿನಂತೆ ಹರಿದಾಡುತ್ತ ಭಿಕ್ಷೆ ಬೇಡುತ್ತಿದ್ದರು. ಮಾನವನಾಗಿ ಹುಟ್ಟಿದ್ದರಿಂದ ಇಷ್ಟನ್ನಾದರೂ ಮಾಡಬಹುದು. ಹುಲಿ-ಕರಡಿಗಳು, ಇತರ ಪಶು-ಪಕ್ಷಿಗಳು ಅಂಗವಿಕಲರಾಗುವದುಂಟು. ಅವುಗಳನ್ನು ಭಿಕ್ಷೆ ಹಾಕಿ ಸಾಕುವವರಿಲ್ಲವಾದ್ದರಿಂದ ಹಸಿವಿನಿಂದ ಸಾವನ್ನು ಅಪ್ಪುವದೊಂದೆ ಮಾರ್ಗ.

ಹಳ್ಳಿ, ನಗರ, ಮಹಾನಗರಗಳಲ್ಲಿ, ಪ್ರಸೂತಿಗೃಹ ಆಸ್ಪತ್ರೆಗಳಿಂದ, ಬಡಬಗ್ಗರ ಮಕ್ಕಳನ್ನು ಅಪಹರಿಸಿಕೊಂಡು ಹೋಗಿ ಅವರನ್ನು ಹೊಡೆದು ಬಡಿದೋ, ಅಂಗವಿಕಲರನ್ನಾಗಿಸಿಯೋ ಭಿಕ್ಷಾಟನೆಯಲ್ಲಿ ತೊಡಗಿಸುವ ತಿರುಕವರೇಣ್ಯರಿದ್ದಾರೆ. ಈ ಮಕ್ಕಳು ತಮ್ಮ ವೃತ್ತಿಯಲ್ಲಿ ಪರಿಣತರಾಗುತ್ತಿದ್ದಂತೆ, ಹಣ, ಕಾಯಿ ಕದಿಯವದು, ಸಮಾರಂಭಗಳಲ್ಲಿ ಹೊರಗಿದ್ದ ಬೂಟ್ ಚಪ್ಪಲಿಗಳನ್ನು ಒಯ್ಯುವದು, ಜನ-ಜಂಗುಳಿ- ನೂಕು-ನುಗ್ಗಲಿನಲ್ಲಿ ಮಕ್ಕಳ ಆಭರಣಗಳನ್ನು ಹಾರಿಸುವದು, ಮುಂತಾದವನ್ನು ರೂಢಿಸಿಕೊಳ್ಳುತ್ತಾರೆ. ಸಾರಿಗೆಯ ನಿಲ್ದಾಣಗಳಲ್ಲಿ ಪ್ರಯಾಣಿಕರ ಚಿಕ್ಕಪುಟ್ಟ ವಸ್ತುಗಳನ್ನು ಲಪಟಾಯಿಸಿ ಕಣ್ಮರೆಯಾಗಿ ಬಿಡುತ್ತಾರೆ. ಕಳ್ಳ-ಕಾಕರು ತಮ್ಮ ವೃತ್ತಿಗಳ ಅಭಿವೃದ್ಧಿಗಾಗಿ ಭಿಕ್ಷುಕ ಮಕ್ಕಳನ್ನು ಬಳಸಿಕೊಳ್ಳುವದುಂಟು. ಸರಾಯಿ, ಅಫೀಮು, ಗಾಂಜಾ, ಹಶೀಸ್‌ಗಳ ಕಳ್ಳ ಸಾಗಾಣಿಕೆಯಲ್ಲಿ ಈ ಮಕ್ಕಳು ಸಕ್ರಿಯವಾಗಿ ಪಾಲುಗೊಳ್ಳುತ್ತಾರೆ. ಬೆಳ್ಳಿ-ಬಂಗಾರ, ಶ್ರೀಗಂಧದ ವಿಗ್ರಹಗಳನ್ನು ಲಪಟಾಯಿಸುವ ಕಲೆಯನ್ನು ಕರಗತ ಮಾಡಿಕೊಂಡ ಎಳೆಯರಿದ್ದಾರೆ. ಕಾನೂನು ಪಾಲಕರ ಕೈಗೆ ಸಿಕ್ಕಿಹಾಕಿಕೊಂಡಾಗೊಮ್ಮೆ ಅವರನ್ನು ಅನಾಥಾಶ್ರಮಕ್ಕೊ, ರಿಮ್ಯಾಂಡ್ ಹೋಂಗೋ, ಬೋರ್ಸ್ಟಲ್ ಸ್ಕೂಲಿಗೋ ಸೇರಿಸಿದರೆ ಅವರಿಗೆ ಆಗುವ ಹಾನಿ ಅಷ್ಟರಲ್ಲೇ ಇದೆ. ಬಾಲಾಪಾರಾಧಿಗಳಿಗೆ ಶಿಕ್ಷೆಯಿಲ್ಲವಾದ್ದರಿಂದ ಬಿಡುಗಡೆ ಬೇಗನೇ ಹೊಂದಿ ಹಿಂತಿರುಗಿ ಬಂದು ಮೊದಲಿನ ಚಟುವಟಿಕೆಗಳಿಗೇ ತಮ್ಮನ್ನು ಮುಡಿಪಾಗಿಡುವರು.

ವಿವಿಧ ರೋಗಗಳಿಂದ ಬಳಲುವ ದೀನದರಿದ್ರರಿಗೆ ನಮ್ಮಲ್ಲಿ ಯಾವ ಚಿಕಿತ್ಸೆಯೂ ದೊರೆಯದ್ದರಿಂದ ಅವರೆಲ್ಲ ದಾನಿಗಳ ಎದುರಿನಲ್ಲಿ ಕೈಯೊಡ್ಡಲೇ ಬೇಕಾಗುತ್ತದೆ. ಕುಷ್ಟರೋಗವು ಭಿಕ್ಷುಕರನ್ನು ಭೀಕರವಾಗಿ ಕಾಡುತ್ತಿರುತ್ತದೆ. ಪ್ರಾರಂಭದಲ್ಲಿಯೇ ಇದನ್ನು ಗುರುತಿಸಿ ನಿಯಂತ್ರಿಸಬಹುದಾದರೂ ಆ ಜವಾಬ್ದಾರಿಯನ್ನು ನಿರ್ವಹಿಸುವವರು ಯಾರು? ಈ ಕುರಿತು ರೋಗಿಗಳಲ್ಲಿ ಜಾಗೃತಿ ಹುಟ್ಟಿಸುವವರು ಯಾರು? ಅಂತೆಯೇ ರೋಗ ಬಲಿತು ಮೂಗು ಕೈ ಕಾಲುಗಳ ಬೆರಳುಗಳನ್ನು ಕಳೆದುಕೊಂಡವರು ಭಿಕ್ಷಾಟನೆ ನಡೆಸುವದು ತೀರ ಸಾಮಾನ್ಯ. ಇವರ ಎಂಜಲು, ಸಂಪರ್ಕಗಳಿಂದ ಇನ್ನಿತರರಿಗೆ ಈ ರೋಗ ಹಬ್ಬುವ ಸಾಧ್ಯತೆಗಳಿದ್ದರೂ ಆ ಕುರಿತು ಯಾರೂ ತಲೆ ಕೆಡಿಸಿಕೊಳ್ಳುವದೇ ಇಲ್ಲ.

ಎಷ್ಟೋ ಭಿಕ್ಷುಕರು ಭವಿಷ್ಯಕ್ಕಾಗಿ ಹಣದ ಉಳಿತಾಯ ಮಾಡಿ ತೀರ ಕೃಪಣ ಜೀವನ ನಡೆಸುವದರಿಂದ, ಅನೇಕರಲ್ಲಿ ಊಹೆಗೂ ಮೀರಿದ ಮೊತ್ತ ಸಂಗ್ರಹವಾಗಿರುತ್ತದೆ. ಬಡವಿಧವೆ ಯೋರ್ವಳು ಧರ್ಮಶಾಲೆಯಲ್ಲಿ ಮೃತಪಟ್ಟಾಗ, ಅವಳ ಹರಕುಗಂಟುಮೂಟೆಯ ನಡುವೆ ಹತ್ತು ಸಹಸ್ರ ರೂಪಾಯಿಗಳು ದೊರೆತಾಗ, ಊರವರಿಂದ ನಂಬಲು ಸಾಧ್ಯವಾಗಲಿಲ್ಲ. ಹೆಚ್ಚಿನವರು ಆಗತ್ಯಗಳೆಲ್ಲ ಪುಕ್ಕಟೆಯಾಗಿ ಪೂರೈಸಿಕೊಳ್ಳುವ ವ್ಯವಸ್ಥೆ ಮಾಡಿ ಕೊಂಡಿರುತ್ತಾರೆ.. ಕವಳ ತಂಗಳು,

ಹೋಟೇಲುಗಳಲ್ಲಿ ಮಿಕ್ಕಿದ್ದು, ಕಲ್ಯಾಣ ಮಂಟಪದಲ್ಲಿ ಚೆಲ್ಲಿದ್ದು ಮುಂತಾದವುಗಳಿಂದ ಉದ ಪೋಷಣೆ ಮಾಡಿ ಕೊಂಡರೆ, ಪುಕ್ಕಟೆಯಾಗಿ ಒದಗಿದ, ಬೇಡಿತಂದ ಬಟ್ಟೆಗಳನ್ನು ಧರಿಸುತ್ತಾ ರೇಲು-ಬಸ್‌ಗಳಲ್ಲಿ ಪುಕ್ಕಟೆ ಪ್ರವಾಸ ಮಾಡಗೊಡುವ ಪುಣ್ಯಾತ್ಮರಿದ್ದಾರೆ. ಕುಷ್ಟರೋಗಿಗಳಿಗೆ ಸರಕಾ ಆಸ್ಪತ್ರೆಗಳಲ್ಲಿ ಪುಕ್ಕಟೆ ಔಷಧೋಪಚಾರ ದೊರೆಯುತ್ತದೆ. ಜನನ-ಮರಣ, ಸಂಕಟ ಸಮಯಗಳ ಅವರೆಲ್ಲ ಒಬ್ಬರಿಗೊಬ್ಬರು ನೆರವಿಗೆ ಬಂದೇ ಬರುತ್ತಾರೆ. ಅಂತೆಯೇ ಪ್ರತಿಯೊಂ ಊರಿನಲ್ಲಿಯೋ, ಸಮಾಜದಲ್ಲಿಯೋ ಅವರುಗಳು ಅವಿಭಾಜ್ಯ ಅಂಗವಾಗಿ ಪರಿಣಮಿಸುತ್ತಾ

ಮಹಮ್ಮದೀಯ ಫಕೀರರು ಡಮ್‌ಡುಮಕ್ ಎಂದು ಹಲಗೆಯನ್ನು ನುಡಿಸುತ್ತ ಉರಿಯು ಕೆಂಡಗಳಿಗೆ ಇನ್ನಷ್ಟು ಧೂಪ ಸೇರಿಸಿ, ನವಿಲುಗರಿಯ ಕುಂಚದಿಂದ ಹೊಗೆಯು ಎಲ್ಲೆಡೆ ಹರಡುವ ಮಾಡಿ ಎಲ್ಲರಿಂದ ಕಾಣಿಕೆ ಪಡೆಯುತ್ತಾರೆ. ಕೂಡಲ ಸಂಗಮ ಅನುಯಾಯಿಗಳು ಕಾವಿಬ ಧರಿಸಿ, ವಿಭೂತಿ ಪಟ್ಟೆ ಎಳೆದುಕೊಂಡು ನಡುಬೀದಿಯಲ್ಲಿ ಮುಳ್ಳುಕಂಟೆಗಳ ಮೇಲೆ ನಿಂತುಕೊಂ ಭವಿಷ್ಯವಾಣಿ ನುಡಿದು ದಕ್ಷಿಣೆ ಪಡೆಯುತ್ತಾರೆ. ದಾಸಯ್ಯಗಳು ಉರಿಯುವ ದೀವಟಿಗೆ ಹೊ ಜಾಗಟೆ ಬಾರಿಸುತ್ತ ಶಂಖ ಊದುತ್ತ ಗೋವಿಂದಾ, ಗೋವಿಂದಾ! ಎಂದು ಘೋಷಿಸುತ್ತ ತವ ಬೇಳೆ ಬೇಯಿಸಿಕೊಳ್ಳುವರು. ಕೆಲವರು ಶಂಖದ ಬದಲಿಗೆ ಕಹಳೆ ಊದುವ ಪದ್ಧತಿಯಿ ಶನಿಕಾಟ ತೊಲಗಿಸುವವರು, ಕೊರಳಿಗೆ ಶನಿದೇವರ ಪಟ ನೇತುಹಾಕಿಕೊಂಡು, ಭಕ್ತಾದಿಗಳಿಂ ಕಾಸು ಪಡೆಯುವರು. ರಟ್ಟಿನ ಹಗುರಾದ ರಥವನ್ನು ಬೆನ್ನಿಗೆ ಜೋಡಿಸಿದ ಹಗ್ಗದಿಂದ ಎಳೆದು ಇದೆಲ್ಲ ಅಯ್ಯಪ್ಪನ ಕೃಪೆ! ಎಂದು ಮನವರಿಕೆ ಮಾಡಿ ಭಕ್ತಾದಿಗಳನ್ನು ಮರುಳು ಮಾಡುವ ಸದಾಕಾಲ ನಡೆದೇ ಇರುತ್ತದೆ. ವಿವಿಧವಾದ್ಯಗಳೊಂದಿಗೆ ದೇವ ದೇವತೆಗಳಿದ್ದ ಪಲ್ಲಕ್ಕಿ ಹೊ ದಾರಿಹೋಕರಿಂದ ಚಂದಾ ವಸೂಲ ಮಾಡುವ ವರ್ಗ ಒಂದಿದೆ. ಸತ್ಯನಾರಾಯಣ ಪೂ ಮಾಡುವವರು, ಬೇರೆ ಬೇರೆ ದೇವತೆಗಳಿಗೆ ಅಭಿಷೇಕ ಹೇಳಿಕೊಂಡವರು ಯಾತ್ರೆಯ ಹ ಹೊತ್ತವರು ಹಣ ಪಡೆದು, ರಶೀದಿ ಬರೆದುಕೊಟ್ಟು ಗೌರವಯುತರು ಅನಿಸಿಕೊಳ್ಳುತ್ತಾರೆ.

ವಿನೋದವೃತ್ತಿಯ ಭಿಕ್ಷಾತಂಡವೂ ಇದೆ. ಇನ್ನಿತರರಿಗಿಂತ ತಾವು ಮೇಲೆ ಇದ್ದೇವೆ ಎಂ ತೋರ್ಪಡಿಸಿಕೊಳ್ಳುತ್ತಾರೆ. ದುರುಗಮುರುಗಿ, ಹಾವಾಡಿಗರು, ಡೊಂಬರು, ಕೋಲೆ ಬಸವ ಕರಡಿ ಕುಣಿಸುವವರು, ಕೋತಿ ಪಳಗಿಸಿದವರು, ವಿವಿಧ ವಾದ್ಯ ನುಡಿಸುವವರು, ಜಾದುಗಾರರು ಹುಲಿವೇಷ ಹಾಕುವವರು, ಹೋಳಿ ಹಬ್ಬ, ಬಂಡಿಹಬ್ಬದ ಪಾತ್ರಧಾರಿಗಳು, ಭಿಕ್ಷೆಯನ್ನು ಪಡೆಯು ಉದ್ದೇಶ ಹೊಂದಿದರೂ ಸಿಗುವ ನೆರವಿಗಾಗಿ ವಿವಿಧ ವಿನೋದಾವಳಿಗಳನ್ನು ಪೂರೈಸುತ್ತಾ ರೇಡಿಯೋ, ಟೆಲಿವಿಷನ್, ಇಂಟರ್‌ನೆಟ್‌ಗಳು ಇಲ್ಲದ ದಿನಗಳಲ್ಲಿ ಮಕ್ಕಳೆಲ್ಲ ವಿನೋದಾವಳಿಯ ಭಿಕ್ಷುಕರ ಹಿಂದೆಯೇ ಅಲೆದೂ ಅಲೆದೂ, ಕಲೆತು ಆಟಗಳನ್ನು ನೋ ಸಂತೋಷ ಪಡುತ್ತಿದ್ದರು.

ಡವ್! ಡವ್! ಡವಕ್! ಎಂಬ ರುದ್ರನಾದ ಕೇಳಿದಾಗ ಕೇರಿಯ ಚಿಕ್ಕಮಕ್ಕಳು ಬೆಚ್ಚಿಬಿದ್ದರೂ ಕೊಂಚ ದೊಡ್ಡವು ಹಿರಿಯರೊಂದಿಗೆ ದುರುಗಮುರಗಿಯ ದೇವಿದರ್ಶನಕ್ಕೆ ಧಾವಿಸಿ ಬರುತ್ತಿದ್ದು ಖಚಿತ ವಿತ್ತು. ಬಾಯ್ತುಂಬ ಎಲೆ ಅಡಿಕೆ ತುಂಬಿಕೊಂಡು ಹೆಣ್ಣು ಭುಜದಿಂದ ಇಳಿಬಿಟ್ಟ ಥೋಲನ ಏಕಪ್ರಕಾರವಾಗಿ ನುಡಿಸುತ್ತಿದ್ದಳು. ಕಾಡಿಗೆಯ ಮೈಬಣ್ಣದ ಗಂಡಸು ವೀರಗಚ್ಚೆ ಹಾಕಿ ಧೋತರವುಟ್ಟು, ಬರಿಯ ಮೇಲ್ಮೈಯವ. ಥಾಳಾಗಿ ಹಣೆಗೆ ಬಳಿದುಕೊಂಡ ಭಸ್ಮ ಅರಿಸಿ

ಕುಂಕುಮ, ಉದ್ದಕೂದಲು ಬೆಳೆಸಿ, ಮುಡಿ ಕಟ್ಟಿಕೊಂಡು, ಹೂವಿನ ದಂಡೆ ಮುಡಿದು ಸೊಂಟಕ್ಕೆ ಬಣ್ಣ ಬಣ್ಣದ ಬಟ್ಟೆ ಸುತ್ತಿಕೊಂಡು ನೋಡಿದವರಲ್ಲಿ ಭಯ ಹುಟ್ಟಿಸುತ್ತಿದ್ದ. ಕೈಯಲ್ಲಿದ್ದ ಭೀಕರ ಚಾಟಿಯನ್ನು ನೆಲಕ್ಕಪ್ಪಳಿಸುತ್ತ ನಡುನಡುವೆ ತಾನೇ ಆದರ ಸುತ್ತೇಟನ್ನು ಹಾಕಿಕೊಳ್ಳುತ್ತಿದ್ದ. ದೇವಿಯ ವಿಗ್ರಹಕ್ಕೆ ಆಶ್ರಯವಿತ್ತ ಆತನ ಕೊರಡು ಪೆಟ್ಟಿಗೆ ವಿವಿಧ ಕಲೆಗಳ ಆಶ್ರಯವೇ ಆಗಿರುತ್ತಿತ್ತು. ಅದರ ಮೇಲೆ ದೇವ ದೇವತೆಗಳ ಚಿತ್ರಗಳು, ಹೂಬಳ್ಳಿಗಳ ಕೆತ್ತನೆ, ಕೆಂಬಣ್ಣದ ತೆರೆಯಬಹುದಾಗಿದ್ದ ಪರದೆ, ದೇವಿಯ ರಹಸ್ಯ ಮರೆಮಾಚುವಂತೆ ತೋರುತ್ತಿತ್ತು. ಅವನು ದೇವಿಯ ಮಹಿಮೆ ಕುರಿತು ಮಾತನಾಡುಲಾರಂಭಿಸಿದಾಗ, ಪತ್ನಿ ವಾದ್ಯಕ್ಕೆ ವಿಶ್ರಾಂತಿ ನೀಡಿ ಅವನ ಮಾತಿಗೆ 'ಹೌದೌದು'! ಹಾಕುತ್ತ ದೇವಿಯ ಕೃಪಾಕಟಾಕ್ಷ ಅವನ ಮೇಲೆಯೇ ಇದೆ! ಎಂದು ಸಿದ್ಧಮಾಡಲು ಹೊರಡುವಳು. ಆತ ಕುಂಕುಮದ ಡಬ್ಬಿ, ಹಣದ ಹುಂಡಿ, ಕೈಯಲ್ಲಿದ್ದ ಕೊರಡಿನಿಂದ, ಚಾವಟಿಯಿಂದ ಹೊಡೆದುಕೊಳ್ಳುತ್ತ ಒಂದು ಕಾಳು ನೆಲಕ್ಕೆ ಬೀಳದಂತೆ, ತೂಕತಪ್ಪದೇ ನರ್ತಿಸುತ್ತ, ಆವೇಶದಿಂದ ತೂರಾಡುವ. ಅಲ್ಲದೇ ಭಕ್ತಾದಿಗಳು ದೇವಿಗೆ ಹಾಕಿದ ನಾಣ್ಯವು ಅವನು ಅಜ್ಞಾಪಿಸಿದಾಗಲೇ ಜಾರಿ ಬೀಳುವ ಚಮತ್ಕಾರ ತೋರಿಸುತ್ತಿದ್ದ. ಅಲ್ಲದೇ ಭಕ್ತರಿಂದ ಐದು ಪಾವಲಿ (ಒಂದೂ ಕಾಲು ರೂಪಾಯಿ) ವಸೂಲು ಮಾಡಿ ಕೊಲ್ಲಾಪುರದ ಮಹಾಲಕ್ಷ್ಮಿ, ಕೊಲ್ಲೂರಮ್ಮ ಕೋಲಾರಮ್ಮನವರುಗಳಿಗೆಲ್ಲ ಅದನ್ನು ತಲುಪಿಸುವ ವಾಗ್ದಾನ ಮಾಡುತ್ತಿದ್ದ. ಕಾಸು ಇಲ್ಲದವರು, ಕಾಳು-ಕಡಿಯ ರೂಪದಲ್ಲಿ ಕೊಡುಗೆಯನ್ನು ನೀಡುತ್ತಿದ್ದರು. ದೇವಿಯನ್ನು ಹೊತ್ತದಂಪತಿಗಳು ಊರಹೊರಗೆ ಹೋಗುವಾಗಲೂ ಅವರನ್ನು ಹಿಂಬಾಲಿಸಿದ ಮಕ್ಕಳು, ಅಶ್ವತ್ಥ ಕಟ್ಟೆಯ ಮೇಲೆ ತಮ್ಮ ವೇಷ-ಭೂಷಣಗಳನ್ನು ಕಳಚಿ, ನೆರೆಯ ಊರಿಗೆ ದುರುಗಮುರಗಿ ಪಯಣ ಬೆಳೆಸಿದಾಗ, ಮುಂಕು ಕವಿದಂತೆ ಮನೆಗೆ ಮರಳುತ್ತಿದ್ದರು.

ಸತ್ಯವನ್ನು ಅರಿಯಲು ತಲೆಕೆಡಿಸಿಕೊಳ್ಳದ ಧರ್ಮಿಷ್ಟರು, ಢೋಂಗಿಗಳಿಂದ ಸದಾಕಾಲ ಮೋಸ ಹೋಗುತ್ತಲೇ ಇರುತ್ತಾರೆ. ಜೇಬುಕಳ್ಳರಿಂದ ಊರಿಗೆ ಹಿಂದಿರುಗಲೂ ಕಾಸು ಇಲ್ಲವೆಂದು ಕಣ್ಣೀರು ಹಾಕುವವರು ಇದ್ದಂತೆ, ಮೃತಪಟ್ಟ ಮಡದಿ, ಮಕ್ಕಳೂ, ಅಂತ್ಯ ಸಂಸ್ಕಾರಕ್ಕೆ ನೆರವು ನೀಡುವಂತೆ ದುಂಬಾಲು ಬೀಳುವವರಿಗೆ ಕೊರತೆ ಇಲ್ಲ. ಕಾಲಿಗೆ ಬೆಲ್ಲ ಮೆತ್ತಿಕೊಂಡು ದೈನ್ಯ ನಟಿಸುವವರು ಇದ್ದಾರೆ. ಅತಿವೃಷ್ಟಿ, ಭೂಕಂಪ, ಅನಾವೃಷ್ಟಿಗಳಿಂದ ಪಾಪರ್ ಆದ ಯಜಮಾನ, ಕುಟುಂಬದವರನ್ನೆಲ್ಲ ಅರೆನಾಗ್ನಾವಸ್ಥೆಯಲ್ಲಿ ಮಲಗಿಸಿ ಅವರ ಪರವಾಗಿ ದಾನವನ್ನು ಯಾಚಿಸುತ್ತಾನೆ. ಒಂದುವಾರದಿಂದ ಊಟವಿಲ್ಲವೆಂದು ಆರ್ತದನಿಯಲ್ಲಿ ಗೋಗರೆಯುವಾಕೆ, ದೂರದ ಹೊಟೇಲಿನಲ್ಲಿ ಕಾಫಿ-ತಿಂಡಿ ಮುಗಿಸಿಕೊಂಡೇ ಬಂದಿರುತ್ತಾಳೆ.

ಭಿಕ್ಷಾಟನೆ ಕುರಿತಾಗಿ ಸಚಿತ್ರ ಲೇಖವೊಂದನ್ನು ನಮ್ಮ ಇಂಟರ್‌ನೆಟ್‌ದಲ್ಲಿ ಬಿತ್ತರಿಸಿದಾಗ, ವಿವಿಧ ದೇಶಗಳಿಂದ ಬಂದ ಪ್ರತಿಕ್ರಿಯೆಗಳಿಂದ ವಿಸ್ಮಯವಾಗಿತ್ತು. ರೇಡಿಯೋ ಆಸ್ಟ್ರೇಲಿಯದವರು ಫೋನಿಸಿ ತಮ್ಮ ಅಧಿಕಾರಿಯೋರ್ವರನ್ನು ನಮ್ಮಲ್ಲಿ ಕಳಿಸಿದರೆ, ಅವನಿಗೆ ಹಲವಾರು ಭಿಕ್ಷುಕರೊಂದಿಗೆ ಮಾತುಕತೆ ನಡೆಸುವ ಏರ್ಪಾಡು ಮಾಡಲು ಸಾಧ್ಯವೇ? ಎಂದು ವಿಚಾರಿಸಿಕೊಂಡರು! ಬಿ.ಬಿ.ಸಿ.ಯವರು ಲಂಡನ್ನಿನಿಂದ ದೂರವಾಣಿಯ ಮೂಲಕ ಸಂಪರ್ಕಿಸಿ, ಭಿಕ್ಷುಕರನ್ನು ಕುರಿತಾಗಿ ವಿಶೇಷ ಆಸ್ಥೆವಹಿಸಿ ಲೇಖನ ಬರೆಯಲು ಕಾರಣವೇನು? ಎಂದು ವಿಚಾರಿಸಿ ತಿಳಿದುಕೊಂಡರು. ನಾವು ಬರೆದು ಬಿತ್ತರಿಸಿದ ನೂರಾರು ಕಾರ್ಯಕ್ರಮಗಳಲ್ಲಿ ಇದೂ ಒಂದು ಎಂದು ವಿವರಿಸಿದಾಗ,

ಹೆಚ್ಚಿನ ವಿವರಗಳಿಗಾಗಿ, ತಮ್ಮ ಇನ್ನೊಬ್ಬ ಅಧಿಕಾರಿ ಸಂಪರ್ಕ ಬೆಳೆಸಲಿದ್ದಾನೆ! ಎಂದು ಹೇಳಿದರು. ಅಮೇರಿಕದ ವಿಸ್ಕಾನ್ಸಿನ್ ರಾಜ್ಯದ ಸಾರ್ವಜನಿಕ ಟೆಲಿವಿಜನ್‌ದವರು, ಫೋನಿನ ಮೂಲಕ ವಿವರವಾದ ಪ್ರಶ್ನೋತ್ತರಗಳನ್ನು ನಡೆಸಿ, ಇಂಥ ಅಪೂರ್ವ "ರಸ್ತೆ-ಸಂಸ್ಕೃತಿ"(Street culture) ವನ್ನು ನಿಮ್ಮ ಸರಕಾರವು ಏಕೆ ಪ್ರತಿಬಂಧಿಸಲು ಯತ್ನಿಸಬೇಕು? ಇದು ಪ್ರಜಾಪ್ರಭುತ್ವದ ತತ್ವಕ್ಕೆ ವಿರೋಧಿಯಾಗಿಲ್ಲವೆ? ಎಂದು ದೂರಿದರು. ಅಮೇರಿಕೆಯಲ್ಲಿ ಕೈತುಂಬ ಸಂಪಾದಿಸುವ ಭಾರತೀಯರು ಇದನ್ನು ಇಷ್ಟಪಡಲಿಲ್ಲ. ತಾವೆಂದೂ ದೇಶದ ಬಡಬಗ್ಗರ ಬಗ್ಗೆ ತಲೆಕೆಡಿಸಿಕೊಂಡೇ ಇಲ್ಲವೆಂದ ಒಪ್ಪಿಕೊಂಡರು.

ಇಷ್ಟೆಲ್ಲ ದೊಳೆಬ್ಬಿಸಿದ ವಿಷಯದ ಕುರಿತು ಹೆಚ್ಚಿನ ಅಧ್ಯಯನ ಕೈಕೊಳ್ಳಲೆಂದು ನಗರದ ವಿವಿಧ ಭಾಗಗಳಲ್ಲಿ ಕ್ಯಾಮರಾದೊಂದಿಗೆ ಅಲೆದಾಡಲಾರಂಭಿಸಿದೆ. ಈ ಪ್ರಯತ್ನದಲ್ಲಿ ಪಾಶ್ಚಾತ್ಯರಿಗಾದ ವಿಸ್ಮಯಕ್ಕಿಂತ ನಾನೇ ಈ ವೃತ್ತಿಯ ಕುರಿತು ಹೆಚ್ಚಿಗೆ ತಲೆಕೆರೆದುಕೊಳ್ಳುವಂತೆ ಆಯಿತು. ಸರಕಾರವು ಭಿಕ್ಷಾಟನೆಯನ್ನು ಪ್ರತಿಬಂಧಿಸಿ, ಅವರಿಗೆ ಆಶ್ರಯ ಕಲ್ಪಿಸಿ ವಿವಿಧ ವೃತ್ತಿ ಕಸಬುಗಳಲ್ಲಿ ತರಬೇತಿ ಕೊಡುತ್ತಿರುವದಾಗಿ ಘಂಟಾ ಘೋಷವಾಗಿ ಸಾರುತ್ತ ಬಂದರೂ ಭಿಕ್ಷೆ ಸಿಗುವಲ್ಲೆಲ್ಲ ಭಿಕ್ಷುಕರಿಗೆ ಕೊರತೆ ಇಲ್ಲವೇ ಇಲ್ಲ, ಎಂದು ಬೇರೆ ಬೇರೆ ಸಂದರ್ಭಗಳಲ್ಲಿ ಕಂಡುಕೊಳ್ಳುವಂತೆ ಆಯಿತು.

ಅಂದು ರವಿವಾರ, ನಸುಕಿನಲ್ಲೇ ದೇವಾಲಯದ ಎದುರಿನಲ್ಲಿ ಹತ್ತು ಭಿಕ್ಷುಕರು ತಮ್ಮ ವೃತ್ತಿಗೆ ಹಾಜರಾಗಿದ್ದರು. ಗಂಡು, ಹೆಣ್ಣು, ರೋಗಿ, ವಿಕಲಾಂಗರೆಂಬ ಭೇದ-ಭಾವವಿಲ್ಲದೇ ಹೂವಿನದಂಡೆ, ಹೆಣೆದಂತೆ ಒಬ್ಬರಿಗೊಬ್ಬರು ಅಂಟಿಕೊಂಡು ಕುಳಿತಿದ್ದರು. ತೀರ ಅಪರಿಚಿತನೊಬ್ಬನು ಸ್ವಯಂ ಪ್ರೇರಣೆಯಿಂದ ಭಿಕ್ಷೆನೀಡಲು ಬಂದಿದ್ದು ಅವರಿಗೆಲ್ಲ ಅಪರಿಮಿತ ಆಶ್ಚರ್ಯ. ಚಿಲ್ಲರೆಗಾಗಿ ಹುಡುಕಾಟ ನಡೆಸಿದಾಗ, ಗಟ್ಟಿನೋಟು ಕೊಟ್ಟರೆ ತಾವೇ ಸರಿಯಾಗಿ ಹಂಚಿಕೊಳ್ಳುವದಾಗಿ ಆಶ್ವಾಸನೆಯಿತ್ತರು. ಯಾರಿಂದ ಎಷ್ಟು ಬರಬೇಕು? ಎಂಬ ಲೆಕ್ಕಾಚಾರದ ನಂತರ, ಹಣದ ವಿಲೇವಾರಿ ಶಾಂತರೀತಿಯಿಂದ ನಡೆಯಿತು. ಕೈಚೀಲದಿಂದ ಕ್ಯಾಮರಾ ಹೊರಗೆಳೆದಾಗ ಎಲ್ಲರೂ ಕಂಗಾಲಾದರು. 'ಅದೊಂದನ್ನು ಮಾಡಬೇಡಿ ಮಾಸೋಮಿ' ಎಂದು ಅಂಗಲಾಚಿದರು. 'ನಾನು ಪೋಲಿಸಿನೋರ ಆಸಾಮಿ ಅಲ್ಲ ಕಣ್ಣಯ್ಯ!.... ನಿಮಗೆ ಭಿಕ್ಷೆ ಕೊಡ್ತಾ ಇದೀನಿ ಅಂತ ಅವರಿಗೇನಾದ್ರೂ ಸುಳಿವು ಸಿಕ್ರೆ, ನನ್ನನ್ನೇ ಠಾಣೆಗೆ ಎಳಕೊಂಡು ಹೋಗ್ತಾರೆ ಬಿಡ್ರಯ್ಯ!' ಅಂದಾಗ ನೋವು ಮರೆತು ನಕ್ಕರು. ಬೇಕಾದ ಬಗೆಯಲ್ಲಿ ಕ್ಲಿಕ್ಕಿಸಿದ ಬಳಿಕ, ಅವರೊಂದಿಗಿದ್ದ ಸಮಯದಲ್ಲಿ ಅವರ ಬಗ್ಗೆ ಸಾಕಷ್ಟು ಅರಿತುಕೊಳ್ಳುವಂತೆ ಆಯಿತು. ಗುರುವಾರ ಮುಂಜಾನೆ ರಾಘವೇಂದ್ರಸ್ವಾಮಿ ಮಠದ ಎದುರಿನಲ್ಲಿ ಭಿಕ್ಷುಕರ ತಂಡ ಕಿಕ್ಕಿರಿದು ತುಂಬಿತ್ತು. ಅದೇ ಸಂಜೆ ಸತ್ಯಸಾಯಿಬಾಬಾ ಮಂದಿರದ ಹೊರಗೆ ಸಹಾಯ ಕೋರುವವರು ಜಮಾಯಿಸಿದ್ದರು. ಗಣೇಶ ಚತುರ್ಥಿಯಂದು ಗಣಪತಿ ದೇವಾಲಯ, ಫೇಸ್ತದ ದಿನ ಇಗರ್ಜಿ, ಈದ್‌ದಿನ ಮಸೀದೆಗಳಿಗೆ ತಪ್ಪದೇ ಜಮಾಯಿಸುವ ತಂಡಗಳಿವೆ. ನಗರದ ಮುಖ್ಯ ಮುಖ್ಯಸ್ಥಳಗಳಾದ ಯಶವಂತಪುರ, ಮಲ್ಲೇಶ್ವರಂ, ಮೆಜೆಸ್ಟಿಕ್, ಸಿಟಿ ಮಾರ್ಕೆಟ್‌ಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಕಾಣಿಸಿಕೊಂಡರೂ, ಇತರ ಉಪನಗರಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಇದ್ದೇ ಇದ್ದಾರೆ.

ಧಾರ್ಮಿಕ ಸಂಸ್ಕಾರಗಳ ಹಿನ್ನೆಲೆ ಹಾಗೂ ಅದನ್ನು ಬೆಳೆಸಿದ ಮನೋಭಾವಗಳಿಂದಾಗಿ

ಭಿಕ್ಷೆ ನೀಡುವದು ಪುಣ್ಯದ ಕೆಲಸವೆಂದು ಪರಿಗಣಿಸಲ್ಪಡುತ್ತದೆ. ಈ ದಾನದಿಂದಾದ ಪುಣ್ಯ ಸಂಚಯದಿಂದ ಮೋಕ್ಷ ಸಂಪಾದನೆ ಸುಲಭವಾಗುತ್ತದೆಂಬ ನಂಬಿಕೆ ದೇಶದಾದ್ಯಂತ ಕಂಡು ಬರುತ್ತಿದೆ. 'ತಿರಿವರಿಂ ಸಿರಿವಂತರಾರು?' ಎಂದು ಸಾರಿದ ಸರ್ವಜ್ಞನೇ, ಆಗಬಾ! ಈಗಬಾ! ಹೋಗಿ ಬಾ! ಎನ್ನದಲೆ, ಆಗಲೇ ಕರೆದು ಕೊಡುವವನ ಧರ್ಮ ಹೊನ್ನಾಗದೇ ಬಿಡದು! ಎಂದು ದಾನಿಗಳಿಗೆ ಸೂಚನೆಯಿತ್ತಿದ್ದಾನೆ. ಭಿಕ್ಷೆಯೆಂಬುದು ದಾನಧರ್ಮದ ಮೂರ್ತರೂಪವೆಂಬುದು ಸಾಮಾನ್ಯ ತಿಳವಳಿಕೆ. ಭಿಕ್ಷೆಗೆ ಬಂದವನನ್ನು ಮನೆಯೊಡೆಯ ಬೆದರಿಸಿ ಓಡಿಸಿದರೆ, ಗೃಹಿಣಿ ಹಿಂಬಾಗಿಲಿನಿಂದಲೊ, ಕಿಟಕಿಯಿಂದಲೋ ಮೆಲ್ಲಗೆ ಎಡೆ ನೀಡುವದನ್ನು ಕಾಣಬಹುದು. ಹಾವಾಡಿಗನ ಹಾವಿಗೆ ಹಾಲೆರೆದು ಪೂಜಿಸುವದು, ಕೋಲೆ ಬಸವನಿಗೆ ಕುಂಕುಮ ಹಚ್ಚಿ, ಬಟ್ಟೆ ಹೊದಿಸುವದು, ಸರ್ಕಸ್ಸಿನ ಆನೆ, ಮಠದ ಮುದಿ ಆನೆ ಬೀದಿಗೆ ಬಂದಾಗ ಹಣ್ಣು-ಕಾಯಿ ನೀಡಿ ಗಜಲಕ್ಷ್ಮಿಯನ್ನು ನಮಸ್ಕರಿಸುವದು, ಕಸರತ್ತು ಮಾಡಿತೋರಿಸುವ ಕೋತಿಗೆ ಕಳ್ಳೆಕಾಯಿ ಕೊಡುವದು, ಇತರ ಪ್ರಾಣಿಗಳ ಬಗ್ಗೆ ನಮಗಿರುವ ಅನುಕಂಪದ ದ್ಯೋತಕ ಮಾನವ ಮಾತ್ರರ ಬಗ್ಗೆಯೂ ಅದು ಸ್ವಾಭಾವಿಕ. ಹೀಗೆ ಮಾಡುವದು ಅಪರಾಧ! ಎಂದು ಸಾರುವ ಎದೆಗಾರಿಕೆ ಯಾರಿಗಿದೆ?

ಹಿಂದೊಮ್ಮೆ ಕೊಳಚೆ ಪ್ರದೇಶ ನಿರ್ಮೂಲನೆಗಾಗಿ ಕೋಟಿಗಟ್ಲೆ ರೂಪಾಯಿಗಳನ್ನು ವ್ಯಯಿಸಿದ ದಾಖಲೆಗಳಿವೆ. ಇಟ್ಟುಕೊಂಡ ಉದ್ದೇಶಕ್ಕೆ ವಿರುದ್ಧವಾಗಿ ಕೊಳಚೆಪ್ರದೇಶಗಳು ಕಾಡುಕಿಚ್ಚಿನ ವೇಗದಲ್ಲಿ ಬೆಳೆಯಲಾರಂಭಿಸಿದವು. ಪುಕ್ಕಟೆ ವಸತಿ, ವಿದ್ಯುತ್ತು, ನೀರುಗಳ ಸರಬರಾಯಿಯಿಂದ ವಂಚಿತರಾಗಲು ಯಾರು ತಾನೇ ಸಿದ್ಧರಿದ್ದಾರೆ? ನಾಲ್ಕಂಕೆಯ ವೇತನ ಪಡೆಯುವ ಸರಕಾರಿ ನೌಕರರೂ ಕೊಳಚೆ ನಿವಾಸಿಯೆಂಬ ಹಣೆಪಟ್ಟಿ ಲಾಭ ಪಡೆದು, ಫ್ರಿಜ್, ಟಿ.ವಿ. ಸ್ಕೂಟರ್ ಇಡುವ ನೆಮ್ಮದಿಯೊಂದಿಗೆ ಸರಕಾರಿ ಸೌಲಭ್ಯಗಳನ್ನು ಕೊಳ್ಳೆ ಹೊಡೆಯಲಾರಂಭಿಸಿದರು. ಅಂತೆಯೇ ಈ ಸಂಸ್ಥೆ 'ಕೊಳಚೆ ಪ್ರದೇಶ ಅಭಿವೃದ್ಧಿ'ಯನ್ನು ತನ್ನ ಉದ್ದೇಶವಾಗಿ ಮಾರ್ಪಡಿಸಿತೊಂಡಿತು. ಆದರಂತೆ ಬೆಂಗಳೂರು ನಗರ ನಿಗಮದವರು ಭಿಕ್ಷಾ ವೃತ್ತಿಯನ್ನು ಕೊನೆಗಾಣಿಸಲು ಆಸ್ತಿಯ ಕರದೊಂದಿಗೆ 'ಭಿಕ್ಷಾವೃತ್ತಿ ನಿರ್ಮೂಲನ ಕರ'ವನ್ನು ಬಹಳ ವರ್ಷಗಳಿಂದ ನಾಗರಿಕರಿಂದ ವಸೂಲ ಮಾಡುತ್ತ ಬಂದಿದ್ದಾರೆ. ಆ ಹಣವನ್ನೆಲ್ಲ ವ್ಯಯಿಸಿದರೂ ಭಿಕ್ಷಾಟನೆ ಯಥಾವತ್ತಾಗಿ ನಡೆದುಬಂದಿದೆ. ವೇಶ್ಯಾವೃತ್ತಿಯಂತೆ, ಭಿಕ್ಷಾಟನಾ ಪ್ರವೃತ್ತಿ ಮಾನವನ ಆದಿಯೊಂದಿಗೆ ಕಾಣಿಸಿಕೊಂಡಿದ್ದು ಅಂತ್ಯದವರೆಗೂ ಇರುವದು ಖಂಡಿತ. ಆದ್ದರಿಂದ ಅದನ್ನು ಪ್ರತಿಬಂಧಿಸುವದು ಅಸಾಧ್ಯವಾದ ಮಾತು. ಕಳೆದ ಅರ್ಧಶತಮಾನದಲ್ಲಿ ಸುರಾಪಾನ ಪ್ರತಿಬಂಧಕ್ಕೆ ವ್ಯಯಿಸಿದ ಹಣಕ್ಕೆ ಲೆಕ್ಕವಿಲ್ಲ. ಅದು ಯಾವ ರಾಜ್ಯದಲ್ಲೂ ಯಶಸ್ವಿಯಾಗಲಿಲ್ಲವೆಂದು ಬೇರೆ ಹೇಳಬೇಕಿಲ್ಲ. ಪ್ರಜೆಗಳಿಗೆ ಹಿತಮಿತ ಮದ್ಯಪಾನ ಮಾಡುವದು ಹೇಗೆ? ಎಂದು ತಿಳಿಸಿಕೊಡುವಲ್ಲಿ ಜಾಣತನವಿದೆ. ಅದರಂತೆ ಭಿಕ್ಷುಕರನ್ನು ಬಂಧಿಸಿ, ಅಭಿಕ್ಷಾಗೃಹಕ್ಕೆ ಸಾಗಿಸುವ ವಿಫಲ ಯತ್ನಕ್ಕಿಂತ, ಅವರು ವೃತ್ತಿಯಲ್ಲಿ ಎದುರಿಸಬೇಕಾಗಿ ಬರುವ ಗಂಡಾಂತರಗಳು ಕುಂದುಕೊರತೆಗಳನ್ನು ಹೋಗಲಾಡಿಸಿ, ಶಿಸ್ತಿನ ಆರೋಗ್ಯದ, ಸ್ವಚ್ಛತೆಯ ಜೀವನ ಹೇಗೆ ನಡೆಸಬೇಕು? ಎಂದು ಅವರಲ್ಲಿ ಅರಿವು ಮೂಡಿಸುವದು ಸರ್ವದೃಷ್ಟಿಯಿಂದಲೂ ಕ್ಷೇಮಕರ.

ಮೇರೆ ಅರಿಯದ ಹದ್ದುಗಳು

ಹದ್ದುಗಳು ವರ್ತುಲಾಕಾರದಲ್ಲಿ ಸುತ್ತುತ್ತ ಗಗನ ಮಂಡಲವನ್ನೆಲ್ಲ ತಮ್ಮದನ್ನಾಗಿಸುವದನ್ನು ಕಂಡಾಗೊಮ್ಮೆ ಬಾಲ್ಯದ ದಿನಗಳು ಕಣ್ಣಿಗೆ ಕಟ್ಟಿದಂತಾಗುತ್ತವೆ. ನಮ್ಮ ಪೂರ್ವಜರ ತೆಂಗಿನ ತೋಟದಲ್ಲಿ ಅತಿ ಎತ್ತರವಾದ ಒಂಟೆ ಮಾವಿನ ಮರವೊಂದಿತ್ತು. ಅದನ್ನೇರುವ ಸಾಹಸವನ್ನು ಯಾರೂ ಮಾಡದ್ದರಿಂದ, ಕಾಯಿ-ಹಣ್ಣುಗಳು ಬಿದ್ದಾಗೆಲ್ಲ ಕೇರಿಯ ಮಕ್ಕಳಿಗೆ ಮೀಸಲಾಗಿರುತ್ತಿದ್ದವು. ಕಾಗೆ, ಇಣಚಿ, ಅಬ್ಬರದ ಗಾಳಿಗಳು ಅವನ್ನು ಬೀಳಿಸಿದಾಗ, ತುರುಸಿನ ಸ್ಪರ್ಧೆ ಇರುತ್ತಿದ್ದುದರಿಂದ, ಹಣ್ಣಿನ ಕಾಲದಲ್ಲಿ ಬಿಡುವಿನ ವೇಳೆಯಲ್ಲಿ ಆ ಮರದಡಿ ಕಳೆಯುವ ರೂಢಿ ಬೆಳೆದು ಒಂದಿತ್ತು. ಮಾವಿನ ಮರದ ನೆತ್ತಿ, ಇತರೇ ವೈರಿಗಳಿಂದ ಸುರಕ್ಷಿತವೆಂದು ಭಾವಿಸಿದ, ಹಲವಾರು ಹದ್ದುಗಳು, ತಮ್ಮ ಗೂಡುಗಳನ್ನು ಅಲ್ಲಿ ಕಟ್ಟಿದ್ದವು. ಕೈ ಬಾಯಿಗೆ ಕೆಲಸವಿಲ್ಲದಿದ್ದಾಗ ಹದ್ದುಗಳ ವೀಕ್ಷಣೆ ಆಕರ್ಷಕವಾಗಿ ಕಾಣುತ್ತಿತ್ತು. ಚಿಕ್ಕಮಕ್ಕಳನ್ನು ಎತ್ತಿಕೊಂಡು ಹೋಗುವಷ್ಟು ಶಕ್ತಿ, ಸಾಮರ್ಥ್ಯ, ಶೌರ್ಯಗಳು, ಹದ್ದುಗಳಲ್ಲಿ ಇರುತ್ತದೆ ಎಂದು ಯಾರೋ ಹೆದರಿಸಿದ್ದರು ಬೇರೆ! ಹೀಗಾಗಿ ಅವುಗಳ ಗೊಡವೆಗೆ ಹೋಗದಿದ್ದರೂ ನಾನೂ ಹದ್ದಾಗಿದ್ದರೆ ಏನೇನು ಮಾಡಬಹುದಾಗಿತ್ತು... ಎಂದು ಕನಸು ಕಾಣಲು ಏನೇನೂ ಕೊರತೆಯಾಗಿರಲಿಲ್ಲ. ಕಳೆದ ಅರೆಶತಕದಲ್ಲಿ ಹದ್ದುಗಳ ಕುರಿತಾದ ಆಕರ್ಷಣೆ ಹದ್ದು ಮೀರಿ ಹೆಚ್ಚುತ್ತಲೇ ಇದೆ!

ನಮ್ಮ ನೆರೆಮನೆಯ ಪಾವಲಿನ್ ಬಾಯಿ, ಕುಕ್ಕಟ ಸಂಸಾರ ಹೊಂದಿದ್ದಳು. ಎಂಟೂ ಮೊಟ್ಟೆಗಳಿಂದ ಮರಿ ಪಡೆದ ಸಂಭ್ರಮದ ಮಾತೆಯು ಸಂತತಿಯೊಂದಿಗೆ ಹಿತ್ತಲಲ್ಲಿ ನಡೆದ ಮೆರವಣಿಗೆಯನ್ನು ಕಂಡ ಶ್ರೀವಿಷ್ಣುವಿನ ವಾಹನರೂಪೀ ಗರುಡ ವಂಶಜನಿಗೆ ಹೊಟ್ಟೆ ಕಿಚ್ಚುಂಟಾಯಿತು! ಒಂದು ಮರಿಯನ್ನಾದರೂ ವೈಕುಂಠಕ್ಕೆ ಕಳಿಸಲು ಭೂಮಿಗಿಳಿಯುವ ಸಾಹಸವನ್ನು ಪ್ರಾರಂಭಿಸಿದ! ಪ್ರತಿಬಾರಿಯು ಹತ್ತಿರ ಸುಳಿದಾಗ ಕುಕ್ಕುಟಮಾತೆ ಗರ್ಜಿಸಿ, ಮರಿಗಳಿಗೆ ರೆಕ್ಕೆಯ ಆಶ್ರಯ ಕೊಡುತ್ತಿತ್ತು. ಸೋಲನ್ನೊಪ್ಪಿಕೊಳ್ಳದೇ ಗರುಡಾಗ್ರಜನು, ಗುಂಪನ್ನು ಅಗಲಿ, ಅಲೆದ ಮರಿಯನ್ನು ಕ್ಷಣಾರ್ಧದಲ್ಲಿ ಹಾರಿಸಿ ಮಾಯವಾಗಿಯೇ ಬಿಟ್ಟ. ಶೋಕಪೀಡಿತ ಮಾತೆ ಕೂಗಿ ಶಾಪ ಹಾಕಿತು. ಇನ್ನೇನು ಮಾಡುವಂತಿತ್ತು?

ಅಂಗವಸ್ತ್ರ ಮಾಯ

ಪಕ್ಕದ ಮನೆಯ ನಾಗೇಶನ ಹಿತ್ತಿಲು ನಿರ್ಜನವಾಗಿತ್ತು. ಹೀಗಾಗಿ ಅಲ್ಲಿಯ ತೆಂಗಿನ ಮರಗಳನ್ನು ಹದ್ದುಗಳು, ತಮ್ಮ ತಂಗುದಾಣವಾಗಿಸಿದ್ದವು. ದಿನವಿಡೀ ಪೋಲಿಯಲೆದು, ಕೊಲೆ, ಭಕ್ಷಣ ನಡೆಸಿ, ದಣಿದಾಗ ಹೆಡೆಪೆಂಟೆಯ ಮೇಲೆ ಆರೂಢವಾಗಿ ತಮ್ಮ ಕೆದರಿಕೊಂಡಿದ್ದ ಗರಿಗಳನ್ನು ಸರಿಪಡಿಸಿಕೊಳ್ಳುವದು, ಹೇನು ಹೆಕ್ಕಿಕೊಳ್ಳುವದು, ಮಾಡುತ್ತಿದ್ದವು. ಹದ್ದುಗಳ ಕ್ರೂರವಾ ಕೊಕ್ಕು, ಪಂಜುಗಳಿಗೆ ಹೆದರಿಕೊಂಡ ಪಾಡೇಕಾರನು ಆ ಮರಗಳ ತೆಂಗಿನ ಕೊಯ್ಲಿಗೆ ಹರಿತವಾದ ಕತ್ತಿಯೊಂದಿಗೆ ಧೈರ್ಯದಿಂದ ಮರವನ್ನು ಏರಲಾರಂಭಿಸಿದ. ಎಲ್ಲಿಂದಲೋ ಪ್ರತ್ಯಕ್ಷವಾದ

ಹದ್ದೊಂದು ಕರ್ಕಶ ಕಂಠದಿಂದ ಕಿರುಚಿಕೊಳ್ಳಲಾರಂಭಿಸಿತು. ಅದನ್ನು ಅಲಕ್ಷಿಸಿ ತೆಂಗಿನ ಕಾಯಿಗೆ ಆತನು ಕೈಗತ್ತಿ ತಾಗಿಸುತ್ತಿದ್ದಂತೆ, ಭರ್! ಎಂದು ಹಾರಿಬಂದು ತನ್ನ ಶಕ್ತಿಯುತ ಪಂಜಿನಿಂದ ತಲೆಗೆ ಬಡಿಯಿತು. ಕೈಗತ್ತಿಯನ್ನು ಅದರತ್ತ ತಿರುಗಿಸಿದರೂ ಕ್ಷಣಾರ್ಧದಲ್ಲಿ ತಲೆಗೆ ಸುತ್ತಿದ ಅಂಗವಸ್ತ್ರದೊಂದಿಗೆ ಅದು ಗಗನಕ್ಕೆ ಹಾರಬೇಕೇ? 'ಇದರ ಮನೆ ಹಾಳಾಗ'! ಎಂದು ಶಾಪ ಹಾಕುತ್ತ ಭೂಮಿಗೆ ಇಳಿದ ಪಾಡೇಕಾರನನ್ನು ಆ ಹದ್ದು, ನಾಲ್ಕಾರು ಹಿತ್ತಿಲು ಅಲೆಯುವಂತೆ ಮಾಡಿ ಕೊನೆಗೆ ಬಟ್ಟೆಯನ್ನು ಒಂದೆಡೆ ಬಿಸಾಕಿ ಹಾರಿ ಹೋಗಿತ್ತು. ಆ ಬಳಿಕ ಯಾರೂ ಆ ಮರಗಳನ್ನು ಹತ್ತುವ ಸಾಹಸ ಮಾಡಲಿಲ್ಲ. ಒಣಗಿ ನೆಲಕ್ಕುರುಳಿದ ತೆಂಗಿನ ಕಾಯಿಗಳಷ್ಟೆ ಮಾಲಿಕನಿಗೆ ದಕ್ಕುವಂತೆ ಆಗಿತ್ತು.

ಶರಾವತಿ ನದಿಯ ದಂಡೆಯಲ್ಲಿ ನಡೆಯುವ ಮತ್ಸ್ಯ ವ್ಯವಹಾರಗಳಲ್ಲೆಲ್ಲ ಹದ್ದುಗಳಿಗೆ ವಿಶೇಷ ಆಸ್ಥೆ. ಆದರೆ ಕಾಸಿಲ್ಲದೇ ಮೀನು ಹಾರಿಸುವ ಈ ಗಿರಾಕಿಗಳನ್ನು ಬೆದರಿಸಿ ಓಡಿಸಲು ವ್ಯಾಪಾರಿಗಳು ದೊಣ್ಣೆಯೊಂದನ್ನು ಸದಾಕಾಲ ತಮ್ಮೊಂದಿಗೆ ಇಟ್ಟಿರುತ್ತಾರೆ. ಇದರಿಂದ ಒಂದಿಷ್ಟೂ ಅಳುಕದೇ, ಅವಕಾಶ ಸಿಕ್ಕಾಗೊಮ್ಮೆ ತಮ್ಮ ಪಾಲು ಪಡೆಯುವಲ್ಲಿ ಹದ್ದುಗಳು ಹಿಂದೆ ಮುಂದೆ ನೋಡುವುದಿಲ್ಲ. ದಿನದ ವ್ಯಾಪಾರ ಮುಗಿದ ಬಳಿಕ ಅದು ಅಲ್ಲೆಲ್ಲೂ ಆಶ್ರಯ ಪಡೆಯುವ ಗೋಜಿಗೆ ಹೋಗದೇ ಎರಡು ಕಿಲೋ ಮೀಟರ್ ದೂರದ ತಾಣಕ್ಕೆ ಧಾವಿಸುವವು. ಅಲ್ಲಿ ನದಿಗೆ ಚಾಚಿಯೇ ದೊಡ್ಡ ಬಂಡೆಗಲ್ಲುಗಳ ರಾಶಿಯಿದೆ. ಅತಿ ಇಕ್ಕಟ್ಟಾದ ಬಂಡೆಗಲ್ಲಿನಲ್ಲಿ ಅವು ಆಶ್ರಯ ಪಡೆಯುವವು. ವಸಂತ ಋತುವಿನಲ್ಲಿ ಮರಿ ಮಾಡುವಾಗ, ಎತ್ತರವಾದ ಮರಗಳ ಮೇಲೆ ಕಟ್ಟುವ ಗೂಡುಗಳಂತೆಯೇ ಪಾಷಾಣದ ರಾಶಿಯ ಮೇಲೆಯೂ ಕಟ್ಟುವವು. ಇದಕ್ಕಾಗಿ ಗೃಧ್ರ ದಂಪತಿಗಳು ದೂರ ದೂರದವರೆಗೆ ಅಲೆದು, ಕಸ-ಕಡ್ಡಿಗಳನ್ನು ರಾಶಿ ಹಾಕಿ ಶರಪಂಜರಗಳ ಗೂಡನ್ನು ಹೊಂದಿಸುತ್ತವೆ. ಅದರ ಮೇಲೆ ಹುಲ್ಲುಗರಿಗಳನ್ನು ಆಚ್ಛಾದಿಸಿ, ಎರಡು ಇಲ್ಲವೇ ಮೂರು ಮೊಟ್ಟೆಗಳನ್ನು ಇಡುವವು. ಸರದಿಯೊಂದಿಗೆ ಕಾವು ಕೊಡುವದರ ಜೊತೆಗೆ ಸದಾಕಾಲ ಸರ್ಪಕಾವಲು ಇಡುವವು. ಮರಿಗಳು ಕಾಣಿಸಿಕೊಂಡ ಎರಡು ಮೂರು ತಿಂಗಳಿಗೆ ಹಾರುವುದು, ಸ್ವಸಂರಕ್ಷಣೆ, ಆಕ್ರಮಣಗಳಲ್ಲಿ ತರಬೇತಿ ನೀಡಿ ಆ ಬಳಿಕ ಅವನ್ನು ಹೊರಗಟ್ಟಿಬಿಡುವವು!

ಸಾಂಘಿಕ ಆಕ್ರಮಣ

ಹದ್ದು-ಕಾಗೆಗಳೆಂದರೆ, ಎಣ್ಣೆ, ಸೀಗೆಕಾಯಿ ಇದ್ದಂತೆ! ಆ ಜನ್ಮ ವೈರಿಗಳು, ಕಾಳಗಕ್ಕೆ ಇಳಿದರೆ ಶಕ್ತಿಯುತ ಪಂಜು ಹಾಗೂ ಕೊಕ್ಕಿನಿಂದ ಹದ್ದು, ಕಾಗೆಯನ್ನು ಕ್ಷಣಾರ್ಧದಲ್ಲಿ ಸೋಲಿಸಬಹುದಲ್ಲದೇ ಯಮಸದನಕ್ಕೂ ಕಳಿಸಬಲ್ಲದು. ಇದನ್ನು ಅರಿತ ಕಾಗೆಗಳು ಒಂಟಿ ಹದ್ದನ್ನು ಸಾಂಘಿಕವಾಗಿ ಆಕ್ರಮಿಸುತ್ತವೆ. ಆನೆ - ಇರುವೆ ಕಾಳಗದಲ್ಲಿ ಕೆಲವೊಮ್ಮೆ ಪ್ರಬಲವಾದ ಪಕ್ಷವೇ ಹಿಂದೇಟು ಹಾಕಬೇಕಾಗಿ ಬರಬಹುದಾದಂತೆ, ಕಾಕ ಸಮೂಹ ಬಂದು ಎರಗಿದಾಗ ಹದ್ದಿಗೆ ಪಲಾಯನ ಮಾಡುವುದೊಂದೇ ಉಳಿದ ಮಾರ್ಗ. ಕಾಗೆಗಳು, ಮೀನು, ಕಪ್ಪೆ, ಇಲಿಗಳ ಭೋಜನ ನಡೆಸಿದ್ದನ್ನು ಗಗನದಿಂದ ವೀಕ್ಷಿಸಿದ ಹದ್ದು, ಕ್ಷಣಾರ್ಧದಲ್ಲಿ ಭೂಮಿಗಿಳಿದು, ಥಕ್ಕನೆ ಅವುಗಳ ಭೋಜನವೆತ್ತಿ ಮಾಯವಾಗಿ ಬಿಡುವದು! ತತ್‌ಕ್ಷಣ, ಕಾಕಸಮೂಹ ನಾಲ್ದೆಸೆಗೂ ಹರಡಿ ಹದ್ದಿನ ಶೋಧ ಆರಂಭಿಸುತ್ತದೆ. ಎತ್ತರವಾದ ಮರದಲ್ಲಿ ಕುಳಿತು ಸುಖವಾಗಿ ಭೋಜನದಲ್ಲಿ ಮೈಮರೆತು

ವೈರಿಯು ಗೋಚರಿಸಿದ್ದಾಕ್ಷಣ, 'ಕಾವ್ ಕುರ್ಃ! ಎಂದು ಕ್ರಂದಿಸುತ್ತ ಕಾಕ ಪರಿವಾರಕ್ಕೆ ಕ
ಕೊಡುತ್ತ ಕಂಡು ಹಿಡಿದ ಕಾಗೆಗಳು ಆಕ್ರಮಣ ನಡೆಸುವವು. ಹದ್ದಿನ ಎಡಕ್ಕೆ, ಬಲಕ್ಕೆ, ಮೇಲಕ್
ಕೆಳಗೆ ಕುಕ್ಕಲಾರಂಭಿಸುವವು. ಆಕ್ರಮಣ ಸಹಿಸದಾದಾಗ, ಪಂಜುವಿನಲ್ಲಿದ್ದ ಮೃತ ಪ್ರಾಣಿಯ
ಅಳಿದುಳಿದ ಭಾಗದೊಂದಿಗೇ ಹದ್ದು ಕಾಲಿಗೆ ಬುದ್ಧಿ ಹೇಳವದು. ವೈರಿಯು ಎಟುಕದಷ್ಟು ದೂ
ಹಾರಿ ಹೋದಾಗ, ತಮ್ಮ ಉಪಾಯ ಫಲಿಸದ ಕಾಕವೃಂದ, ಅದಕ್ಕೆ ಶತಶತ ಶಾಪ ಹಾಕುತ್ತ
ಬೇರೆ ಆಹಾರದ ಶೋಧದಲ್ಲಿ ತೊಡಗುತ್ತದೆ. ಬೇರೆ ಬೇರೆ ವೃಕ್ಷಗಳಲ್ಲಿ ಗೂಡುಕಟ್ಟಿ ಮೊಟ್ಟೆ
ಮರಿ ಮಾಡುವಾಗಲೂ ಕಾಗೆಗಳು ಸಮೀಪದಲ್ಲಿ ಹದ್ದಿನ ಸುಳಿವು ಸಿಕ್ಕರೂ ಇದೇ ರೀತಿಯ
ಆಕ್ರಮಣ ನಡೆಸುವವು.

ಬೆಂಗಳೂರಿನ ಯಶವಂತಪುರದ ಮಾಂಸದ ಮಾರುಕಟ್ಟೆಯ ಸಮೀಪದ ವಿಶಾಲವಾ
ವೃಕ್ಷವೊಂದನ್ನು ಹದ್ದುಗಳು ತಮ್ಮದನ್ನಾಗಿಸಿವೆ. ಮರಿ ಮಾಡುವಾಗ ಬೇರೊಂದು ಗೂಡನ್
ಕಟ್ಟುವ ಗೋಜಿಗೆ ಹೋಗದೇ, ಇದ್ದವುಗಳಿಗೇ ಇನ್ನಷ್ಟು ಕಟ್ಟಡ ಸಾಮಗ್ರಿ ತಂದು ಸೇರಿಸುವುದರಿಂದ
ಈಗ ಗೂಡುಗಳೆಲ್ಲ ಬೃಹದಾಕಾರ ತಾಳಿವೆ! ಇದರಿಂದಾಗಿ ಈ ವಿಶಾಲ ಮರ, ಯಾವುದೊ
ವಿಚಿತ್ರ ವೃಕ್ಷ ಎನ್ನುವ ಭಾಸವಾಗುತ್ತದೆ. ಮಲ್ಲೇಶ್ವರ ಬಾಲಿಕೆಯರ ಸರಕಾರಿ ಶಾಲೆಯ
ಆವಾರದಲ್ಲಿರುವ ವಿಸ್ತಾರವಾದ ಮರವೊಂದರಲ್ಲಿ ನೆಲೆಯಾಗಿರುವ ಹದ್ದುಗಳು ನಸುಕಿನಲ್ಲಿಯೇ
ಎದ್ದು ದಾರಿಹೋಕರನ್ನು ತಮ್ಮ ವಿಚಿತ್ರ ಸಿಳ್ಳಿನಿಂದ ಬೆದರಿಸುತ್ತಿರುತ್ತವೆ. ಶಿರೂರ್ ಪಾರ್ಕಿನಲ್ಲಿ
ಸಂಜೆಗತ್ತಲು ಆವರಿಸಿದಾಗ, ನಿಯಾನ್ ದೀಪಗಳು ಬೆಳಗಲಾರಂಭಿಸಿದಾಗ, ಒಮ್ಮೆ ಹತ್ತಾರು
ಹದ್ದುಗಳು ಅತ್ತಿತ್ತ ಶತಪಥ ಹಾಕುವುದು ಕಂಡು ಮೋಜೆನಿಸಿತು. ಕಣ್ಣಲ್ಲಿ ಕಣ್ಣಿಟ್ಟು ವೀಕ್ಷಿಸಿದಾಗ
ಸತ್ಯ ಸಂಗತಿ ಅರಿಯುವಂತಾಯಿತು. ಸಂತಾನೋತ್ಪತ್ತಿಗಾಗಿ ಗೆದ್ದಲು ಹುಳು ತಮ್ಮ ಹುತ್ತವನ್ನು
ತ್ಯಜಿಸಿ ದೀಪದ ಸುತ್ತಲೂ ಹಾರಲಾರಂಭಿಸಿದ್ದವು. ಪೌಷ್ಟಿಕ ಆಹಾರ ತುಂಬಿಕೊಂಡ ಅವುಗಳ
ದೇಹಕ್ಕೆ ಮಾರುಹೋದ ಹದ್ದುಗಳು, ಹಾರಾಡುತ್ತ ತಮ್ಮ ಕೂರಾದ ಪಂಜುಗಳಲ್ಲಿ ಅವನ್ನು
ಹಿಡಿದು, ಕೂಡಲೇ ಭಕ್ಷಿಸಿ, ಕೆಲಸಕ್ಕೆ ಬಾರದ ಅವುಗಳ ರೆಕ್ಕೆಗಳನ್ನು ನೆಲದತ್ತ ತೂರಿಬಿಡುತ್ತಿದ್ದವು.
ಕೆಲವೊಮ್ಮೆ ಮುಸ್ಸಂಜೆಯಲ್ಲಿ ನೂರಾರು ಹದ್ದುಗಳ ಸಮೂಹವೇ ಒಂದೇ ದಿಕ್ಕಿನಲ್ಲಿ
ಹಾರಿಹೋಗುವದನ್ನು ಕಾಣಬಹುದು. ಬಹುಶಃ ಆಹಾರದ ಕೊರತೆಯಿಂದಾಗಿ ಗುಳೆ
ಹೋಗುತ್ತಿರಬೇಕು.

ಬಣ್ಣದ ಕೊಕ್ಕರೆಗಳ ವೀಕ್ಷಣೆಗೆ, ಬೆಳ್ಳೂರಿಗೆ ಹೋದಾಗ ಅಲ್ಲಿ ಹದ್ದುಗಳ ದರ್ಶನವೂ
ಆಯಿತು. ಮತ್ಸ್ಯಾಹಾರಿಗಳಾದ ಕೊಕ್ಕರೆಗಳು ಹತ್ತಿರದ ಶಿಂಸಾ ನದಿಯಿಂದ ಚೋಟುದ್ದ
ಮೀನುಗಳನ್ನು ಹಿಡಿದು ಕೊರಳಿನಲ್ಲಿ ಸಂಗ್ರಹಿಸಿ, ಮರಿಗಳಿಗೆ ಉಣಿಸಲು ಬೆಳ್ಳೂರಿಗೆ ಧಾವಿಸುವವು.
ಕೆಲವೇ ಹದ್ದುಗಳು, ನದಿಯಲ್ಲಿ ಮೀನುಗಾರಿಕೆ ನಡೆಸಿದರೂ, ಸುಖಜೀವಿ ಹದ್ದುಗಳು, ಕೊಕ್ಕರೆಗಳನ್ನು
ಹಿಂಬಾಲಿಸಿ ಮರದಿಂದ ಆಗಾಗ ನೆಲಕ್ಕೆ ಉರುಳುವ ಜಲಜೀವಿಗಳನ್ನು ನುಂಗಿಯೇ ಕಾಲ ಹಾಕುತ್ತ
ಇದ್ದವು. ಮರಿಗಳಿಗೆ ಗುಟುಕು ಕೊಡುವಾಗ ಕೊಕ್ಕರೆಗಳ ಮತ್ಸ್ಯ ಸಂಗ್ರಹದ ಒಂದು ಪಾಲು,
ಮರದ ಕೆಳಗೆ ಬೀಳುವದು ಸಾಮಾನ್ಯವಾಗಿದ್ದರಿಂದ ಹಲವಾರು ಹದ್ದುಗಳು ಅಲ್ಲಿ ನುಸುಳಿ
ಆಹಾರಕ್ಕಾಗಿ ತೀವ್ರ ಸ್ಪರ್ಧೆ ನಡೆಸಿದ್ದವು. ಒಂದೇ ಮೀನಿಗೆ ಎರಡು, ಮೂರು ಹದ್ದು ಎರಗಿದಾಗ,
ಕಚ್ಚಾಟ, ಚೀರಾಟಗಳು ನಡದೇ ಇದ್ದವು. ಈ ಅನ್ಯಾಯ ಮೋಸ ಸಹಿಸದವುಗಳು, ಪ್ರತಿ
ಸ್ಪರ್ಧಿಯೊಡನೆ ಸೆಣಸಾಡಿಯೇ ಸೋಲುತ್ತಿದ್ದವು. ಮೈಸೂರು ಪ್ರಾಣಿ ಸಂಗ್ರಹಾಲಯದ ಕೆರೆಯಲ್ಲಿ

ಹೆಜ್ಜಾರ್ಲೆಗಳ ಹಿಂಡೊಂದು ಬೀಡು ಬಿಟ್ಟಿದೆ. ಅವುಗಳ ಉದರ ಪೋಷಣೆಗೆ ಬೇಕಾದ ಮತ್ಸ್ಯಾಹಾರ ಆ ಕಿರಿದಾದ ಕೆರೆಯಲ್ಲಿ ಇಲ್ಲದ್ದರಿಂದ ಸಿಬ್ಬಂದಿಯೇ ದಿನಕ್ಕೊಮ್ಮೆ ಆಹಾರ ಪೂರೈಸುತ್ತದೆ. ಈ ಅಮೃತ ಗಳಿಗೆಗಾಗಿ ಹೆಜ್ಜಾರ್ಲೆಗಳಂತೆ ಹದ್ದುಗಳೂ ಕಾಯುತ್ತಿರುತ್ತವೆ. ಕೆರೆದಂಡೆಯ ಮರದಲ್ಲಿ ಆಶ್ರಯ ಪಡೆದ ಹದ್ದುಗಳು, ಉದ್ದವಾದ ಗೋಣನ್ನು ಇನ್ನಷ್ಟು ಹಿಗ್ಗಿಸಿ, ಒಮ್ಮೆ ಅನ್ನದಾತನನ್ನು, ಇನ್ನೊಮ್ಮೆ ಕೆರೆಯ ದಂಡೆಯಲ್ಲಿರುವ ಹೆಜ್ಜಾರ್ಲೆಗಳನ್ನು ವೀಕ್ಷಿಸುತ್ತಲೇ ಇರುತ್ತವೆ. ಜೊತೆಗೆ ಅಪರೂಪಕ್ಕೆ ಅಲ್ಲಿ ತಲುಪಿದ ಕ್ಯಾಮರಾಧಾರಿಯ ಮೇಲೂ ಒಂದು ಕಣ್ಣು ಇದ್ದದೇ! ಒಂದೇ ಕಡೆ ಸ್ಥಾಯಿಯಾಗಿದ್ದು ನಾಲ್ಕೂ ನಿಟ್ಟಿನಲ್ಲಿ ನೋಡಬಲ್ಲ ಹದ್ದುಗಣ್ಣು, ಮಾನವನಿಗೂ ಇದ್ದಿದ್ದರೆ ಅದೆಷ್ಟು ಸಹಾಯವಾಗುತ್ತಿತ್ತು ಎಂದೆನಿಸದೇ ಇರಲಿಲ್ಲ!

ಹದ್ದುಗಳ ನಾಶ್ತಾ

ರಾಜಸ್ಥಾನದ ರಾಜಧಾನಿಯಾದ ಜೈಪುರದಲ್ಲಿ ಧರ್ಮಿಷ್ಟ ವ್ಯಾಪಾರಿಗಳು ನಸುಕಿನಲ್ಲಿಯೇ ಎದ್ದು ಆದಾಗಲೇ ಎಣ್ಣೆಯಲ್ಲಿ ತಿಂಡಿಗಳನ್ನು ಕರಿಯುತ್ತಿರುವ ಅಂಗಡಿಗಳ ಮೇಲೆ ದಾಳಿಯಿಟ್ಟು ಕಿಲೋಗಳ ಲೆಕ್ಕದಲ್ಲಿ ಪಕೋಡಾ, ಭಜ್ಜಿಗಳನ್ನು ಖರೀದಿಸುತ್ತಾರೆ. ಇವೆಲ್ಲ ತಂತಮ್ಮ ಕುಟುಂಬಕ್ಕೆ ಆಗಿರದೇ ಹದ್ದುಗಳ ನಾಶ್ತಾಕ್ಕೆ ಎಂದರೆ ನಂಬುವದು ಕಷ್ಟ! ಈ ದಾನಿಗಳು ಒಂದೊಂದೇ ಪಕೋಡವನ್ನು ಗಗನದಲ್ಲಿ ತೂರಿದಾಗ ಎಲ್ಲಿಂದಲೋ ಹದ್ದೊಂದು ಪ್ರತ್ಯಕ್ಷವಾಗಿ, ನುರಿತ ಕ್ರಿಕೆಟ್ ಪಟು ಚೆಂಡನ್ನು ಹಿಡಿವ ಗತ್ತಿನಲ್ಲಿ, ನಖಗಳಲ್ಲಿ ಅದನ್ನು ಸೆರೆಹಿಡಿದು, ಹಾರುತ್ತಲೇ ಉದರಕ್ಕೆ ಇಳಿಸಿ ಮತ್ತೊಂದನ್ನು ಪಡೆಯಲು ಕಾತರಿಸುತ್ತದೆ. ಜೈನದಾನಿಗಳ ಪರೋಪಕಾರ ಪ್ರವೃತ್ತಿ ಹೀಗೆ ಮುಂದುವರಿದರೆ, ಹದ್ದುಗಳ ಮುಂದಿನ ಪೀಳಿಗೆ, ಶುದ್ಧ ಶಾಕಾಹಾರಿಯಾಗಿ ಪರಿವರ್ತನೆ ಹೊಂದಿದ್ದರೆ ಆಶ್ಚರ್ಯವಿಲ್ಲ! ದೇಶದಲ್ಲಿಯೇ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪಾರ್ಸಿಜನ, ಮುಂಬೈಯಲ್ಲಿ ವಾಸವಾಗಿದ್ದಾರೆ. ಅವರ ಧರ್ಮವೇ ಬೇರೊಂದು ಬಗೆಯ ಅತಿದೊಡ್ಡ ಪರೋಪಕಾರ ಬೋಧಿಸಿದೆ. ಸತ್ತವರನ್ನು ಸುಡುವದಾಗಲೀ, ಹೂಳುವುದಾಗಲೀ ಮಾಡದೇ ಇನ್ನಿತರ ಪ್ರಾಣಿ - ಕೀಟಗಳಿಗೆ ಆಹಾರವಾಗಬೇಕೆಂಬ ತತ್ವದಿಂದಾಗಿ ಎತ್ತರವಾದ ಕಟ್ಟಡದ ಮೇಲೆ ಇಟ್ಟು ಬಿಡುತ್ತಾರೆ. ಶಾಂತಿ ಗೋಪುರ (ಟವರ್ ಆಫ್ ಸೈಲೆನ್ಸ್) ಎಂದು ನಿರ್ಜನ, ನೀರವ ಸ್ಥಾನದಲ್ಲಿ ಈ ಕಟ್ಟಡ ಇದ್ದರೂ, ಆಹಾರಕ್ಕಾಗಿ ಕಾದು, ಹಾರಾಡುವ ಮಾಂಸಾಹಾರಿ ಹದ್ದುಗಳು, ವಾರಗಟ್ಲೆ ಕೊಳೆಯುತ್ತಿರುವ ಶರೀರಗಳ ಮೇಲೆ ಭೋಜನ ನಡೆಸುತ್ತ ಎಡಬಿಡದ ಸದ್ದು ನಡೆಸುತ್ತಿರುತ್ತವೆ. ಇಂಥ ಆಹಾರದಿಂದ ಅವಕ್ಕೆ ಯಾವ ಬೇನೆಯೂ ಬಾರದಿರುವುದೇ ಕುತೂಹಲಕಾರಿ.

ಶಾಲಾ ವಿದ್ಯಾರ್ಥಿಯಾಗಿದ್ದಾಗ ಪ್ರತಿ ಬೇಸಿಗೆಯಲ್ಲೂ ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ ಊರಿನಲ್ಲಿದ್ದ ಅಜ್ಜನ ಮನೆಗೆ ಧಾವಿಸಿ ರಜಾ ದಿನಗಳನ್ನು ಕಳೆಯುವುದು ರೂಢಿಯಾಗಿತ್ತು. ಆ ದಿನಗಳಲ್ಲಿ ಅಲ್ಲಿ ಕಣ್ಣು ಹಾಯಿಸಿದಲ್ಲೆಲ್ಲ ಅರಣ್ಯ ಹಬ್ಬಿಕೊಂಡಿದ್ದು, ವಿಪರೀತ ಚಳಿ ಇರುತ್ತಿತ್ತು. ಅಂತೆಯೇ ಊರವರು ಬೆಚ್ಚಗೆ ಇರಲು ಮನೆಗಳನ್ನು ಅಂಗಡಿಗಳಂತೆ ಒತ್ತಾಗಿ ಕಟ್ಟುತ್ತಿದ್ದರು. ಮನೆಗಳ ಸಾಲಿನ ಹಿಂದಿನಲ್ಲಿ ವಿಸ್ತಾರವಾದ ಬೇಣ (ಬಯಲು). ಅಂತೆಯೇ ಕಕ್ಕಸುಗಳನ್ನು ಪ್ರತ್ಯಕವಾಗಿ ಕಟ್ಟುವ ತಾಪತ್ರಯವೇ ಊರವರಿಗಿರುತ್ತಿರಲಿಲ್ಲ! ಸ್ತ್ರೀ ಪುರುಷರಿಗೆ ಪ್ರತ್ಯೇಕ ವ್ಯವಸ್ಥೆ ಇದ್ದರೂ ಹಾಗೆ ಎಲ್ಲೂ ಬರೆದಿದ್ದಿಲ್ಲ. ಮಕ್ಕಳಿಗೆ ಮಾತ್ರ ಬೇಕಾದಲ್ಲೆಲ್ಲ ಹೊಲಸು ಮಾಡುವ

ಸರ್ವಾಧಿಕಾರವಿತ್ತು. ಮೃತಪಟ್ಟ ದನ, ಕರುಗಳನ್ನೂ ಅದೇ ಬೇಣಕ್ಕೆ ಸಾಗಿಸಿ ಒಗೆಯುವ ರೂಢಿಯಿತ್ತು. ಅವುಗಳ ಮೇಲೆ ಭೋಜನ ಕೂಟ ನಡೆಸಲು ರಣಹದ್ದುಗಳ ಸೈನ್ಯ ಸದಾಕಾಲ ಸೇರಿರುತ್ತಿತ್ತು! ಅವುಗಳ ಬಕ್ಕತಲೆ, ಕೆಂಪಾದ ಗೋಣು ನೋಡಿದರೇ ಹೆದರಿಕೆ ಬರುವಂತಿತ್ತು. ಅವುಗಳತ್ತ ಕಲ್ಲು ಎಸೆದರೆ ಸ್ಥಾನಪಲ್ಲಟ ಮಾಡುತ್ತಿದ್ದವೇ ಹೊರತು ಹಾರಿ ಹೋಗುತ್ತಿರಲಿಲ್ಲ. ಅದೆಷ್ಟೋ ಸಲ ಅವುಗಳಲ್ಲಿ ಒಮ್ಮತವಿಲ್ಲದೇ ಕಾದಾಟ ಚೀರಾಟಗಳ ಬೊಬ್ಬೆಯೆದ್ದಾಗ ನಾವು ಹೆದರಿ ಮನೆಗೆ ಓಡಿ ಬಂದ ಪ್ರಸಂಗಗಳು ಇದ್ದವು.

ಕಣ್ಣಿಗೆ ಹಬ್ಬ

ಕಾಶ್ಮೀರ ಹಿಮಾಚಲ ಪ್ರದೇಶಗಳ ಜನರು ಸ್ಫುರದ್ರೂಪಿಗಳಾಗಿದ್ದಂತೆ ಅಲ್ಲಿಯ ಹದ್ದುಗಳೂ ಶ್ವೇತವರ್ಣೀಯವಾಗಿ ಅಂದವಾಗಿವೆ! ಅಲ್ಲೊಂದು, ಇಲ್ಲೊಂದು ಹದ್ದು ನಾಶೀಪುಡಿ ಬಣ್ಣದ ನಾಮ ತಳೆದೂ ಇರುತ್ತವೆ. ಅವು ಸ್ವೇಚ್ಛೆಯಿಂದ ಗಗನದಲ್ಲಿ ಸುತ್ತಾಡುತ್ತಲೇ ಇರುವುದನ್ನು ನೋಡುವದು ಕಣ್ಣಿಗೆ ಹಬ್ಬವಾಗಿರುತ್ತದೆ. ಮಾಶೊಬ್ರಾ (ಹಿಮಾಚಲ ಪ್ರದೇಶ)ದ ಗುಡ್ಡಗಾಡಿನಲ್ಲಿ ಎತ್ತರವಾಗಿ ಬೆಳೆದ ಸೂಚಿಕೇಪರ್ಣ ವೃಕ್ಷಗಳ ನಡುವೆ, ಹುಲ್ಲು ಹಾಸಿಗೆಯ ಮೇಲೆ ಪವಡಿಸಿ ಗಗನಮಂಡಲವಿಡೀ ತಮ್ಮದನ್ನಾಗಿಸಿ ಹಾರಾಡುವ ಹದ್ದುಗಳನ್ನು ನೋಡುತ್ತ ದಿನವಿಡೀ ಕಳೆಯಬಹುದು. ಆಶ್ರಯ ಪಡೆದ ವೃಕ್ಷದಿಂದ ಹಾರಿ ಮೇಲಕ್ಕೇರಲಾರಂಭಿಸಿದವೆಂದರೆ, ನಂತರ ವರ್ತುಲಾಕಾರದಲ್ಲಿ ತೇಲುತ್ತ ಇನ್ನೂ ಮೇಲಕ್ಕೆ ಬರಿಗಣ್ಣಿಗೆ, ಚುಕ್ಕಿಯಂತೆ ಕಾಣುವಷ್ಟು ಎತ್ತರಕ್ಕೆ ಹೋಗಿಬಿಡುತ್ತವೆ. ಬಿಸಿಲಿನ ತಾಪಕ್ಕೆ ಕಾದು ಹಗುರಾದ ಹವೆ ಭೂಮಿಯಿಂದ ಮೇಲೇರುವಾಗ, ಅದರ ಲಾಭವನ್ನು ಪಡೆಯುವ ಈ ಹದ್ದುಗಳು ಒಮ್ಮೆಯೂ ರೆಕ್ಕೆ ಬಡೆಯುವ ಪರಿಶ್ರಮ ವಹಿಸದೇ ಅಷ್ಟೊಂದು ಎತ್ತರವನ್ನು ಸೇರಬಲ್ಲವು ಎಂದು ಪಕ್ಷಿ ವಿಜ್ಞಾನಿಗಳು ವಿವರಿಸುತ್ತಾರೆ. ನಮಗೂ ಅಂಥ ಅವಕಾಶವಿದ್ದರೆ ಹಕ್ಕಿಯ ತೆರದಲ್ಲಿ ರೆಕ್ಕೆಗಳಿದ್ದರೆ!

ಮೇಲೆ ಅರಿಯದ ಹದ್ದುಗಳು

ಅನಾದಿ ಕಾಲದಿಂದಲೂ ಹದ್ದು ಅಥವಾ ಗೃಧ್ರವರ್ಗ ಭಾರತೀಯರಿಗೆಲ್ಲ ಚಿರಪರಿಚಿತ. ವಿಷಕಾರಿ ಸರ್ಪಗಳ ಭಕ್ಷಕನಾದ ಗರುಡನು ವಿಷ್ಣುಪರಮಾತ್ಮನ ವಾಹನವಾಗಿ ಸೇವೆ ಸಲ್ಲಿಸುತ್ತ ಬಂದಿದ್ದಾನೆ. ಸೀತೆಯನ್ನು ಅಪಹರಿಸಿದ ರಾವಣನೊಡನೆ ಕಾಳಗಕ್ಕಿಳಿದು ಜಟಾಯು, ಈ ವಿಚಾರವನ್ನು ಶ್ರೀರಾಮನಿಗೆ ತಿಳಿಸಿಯೇ ಮೃತಪಟ್ಟ. ಇವರಿಬ್ಬರೂ ನಮಗೆ ಹತ್ತಿರದ ಹದ್ದಿಗೆ ನಿಕಟ ಸಂಬಂಧಿಗಳೆಂದು ಮರೆಯುವಂತಿದೆಯೇ? ನ್ಯಾಯನಿಷ್ಠೆಗೆ ಹೆಸರಾದ ಶಿಬಿ ಚಕ್ರವರ್ತಿಯ ಸತ್ವಪರೀಕ್ಷೆಯಲ್ಲಿ ಗಿಡಗವು ಕೇಳಿದ ಮಾಂಸದ ಪ್ರಮಾಣದ ಕತೆ ಜನಜನಿತವಾಗಿದೆ. ಡೇಗೆ, ಜಕಾನ್, ಈಗಲ್, ಶಿಖಾಗೃಧ್ರ, ಗಿಡಗ, ಗರುಡ ಎಂದೆಲ್ಲ ಗುರುತಿಸಲಾಗುವ ಹಕ್ಕಿಗಳು ಹದ್ದಿಗೆ ಹತ್ತಿರದ ನೆಂಟನ್ನು ಹೊಂದಿವೆ. ಹಾರುವ ತೋಳಗಳೆಂದು ಕ್ರೌರ್ಯಕ್ಕೆ ಹೆಸರಾದರೂ ಈ ಪಕ್ಷಿ ವರ್ಗವನ್ನು ಮಾನವನು ಸಾಕಿ, ಪಳಗಿಸಿ ಅವುಗಳಿಂದ ವಿವಿಧ ಸೇವೆ ಪಡೆಯುತ್ತಲೇ ಬಂದಿದ್ದಾನೆ. ಗೂಡಿನಿಂದ ಮರಿಗಳನ್ನು ಅಪಹರಿಸಿ, ಇಲ್ಲವೇ ಬಲೆಗಳಲ್ಲಿ ಪ್ರೌಢಹಕ್ಕಿಗಳನ್ನು ಹಿಡಿದು ಅವುಗಳನ್ನು ಪಳಗಿಸುತ್ತಾರೆ.

ಮೊಗಲರು ಬೇಟೆಯಾಡುವದನ್ನು ಶಾಸ್ತ್ರೀಯವಾಗಿ ರೂಢಿಸಿಕೊಂಡು, ಈ ಹಕ್ಕಿಗಳನ್ನು ದೊಡ್ಡ ಪ್ರಮಾಣದಲ್ಲಿ ಹಕ್ಕಿಯ ಶಿಕಾರಿಗೆ ಬಳಸುತ್ತಿದ್ದರು. ಪಂಜರದಲ್ಲಿಟ್ಟು ಸಾಕಿ ತಮ್ಮೊಂದಿಗೆ ಕಾಡಿಗೆ ಸಾಗಿಸುವರು. ಬೇಟೆಯನ್ನು ಕಂಡಾಗ ಅವುಗಳ ಕಣ್ಣಿಗೆ ಕಟ್ಟಿದ ಪರದೆ ಸರಿಸಿ, ಬಿಟ್ಟಾಗ, ಕ್ಷಣಾರ್ಧದಲ್ಲಿ ಗಗನಕ್ಕೆ ಹಾರಿ, ಬೇಟೆಯ ಹಕ್ಕಿಯನ್ನು ಆಕ್ರಮಿಸಿ ನೆಲಕ್ಕುರುಳಿಸಿ ಬಿಡುತ್ತಿದ್ದವು. ಬಂದೂಕುಗಳು ಬಳಕೆಯಲ್ಲಿ ಬಂದ ಬಳಿಕ ಈ ಪದ್ಧತಿ ಕಡಿಮೆ ಆದರೂ, ಇಂದಿಗೂ ಸಿರಿವಂತ ಅರಬ್‌ರಲ್ಲಿ ಈ ಬಗೆಯ ಶಿಕಾರಿ ಪ್ರಚಲಿತವಿದೆ. ತಾವು ಪಳಗಿಸಿದ ಹದ್ದುಗಳೊಂದಿಗೆ ರಾಜಸ್ಥಾನಕ್ಕೆ ಬಂದು ಎರಲದ್ದು (ಬಸ್ಟರ್ಡ್) ಹಕ್ಕಿಗಳ ಶಿಕಾರಿ ನಡೆಸುತ್ತಿದ್ದರು. ಹಿಂದೆ, ರಣಾಂಗಣದಲ್ಲಿ ವೈರಿಯ ಚಲನವಲನಗಳನ್ನು ಅರಸನಿಗೆ ತಿಳಿಯಪಡಿಸಲು, ಸೇನಾಪತಿಗಳು, ಪಳಗಿಸಿದ ಹದ್ದುಗಳನ್ನು ಬಳಸುತ್ತಿದ್ದ ದಾಖಲೆಗಳಿವೆ.

ಹದ್ದುಗಳು ವಿಶ್ವವ್ಯಾಪಿಯಾಗಿವೆ. ಮಹಾಸಾಗರಗಳೊಳಗಿನ ಕಿರಿದಾದ ನಡುಗಡ್ಡೆಗಳು ಮತ್ತು ಧ್ರುವ ಪ್ರದೇಶಗಳನ್ನು ಮಾತ್ರ ಅವು ಆಕ್ರಮಿಸಿಲ್ಲ. ಸುಮಾರು ಎರಡುನೂರಾ ಎಂಬತ್ತೆಂಟು ಜಾತಿಯ ಹದ್ದುಗಳನ್ನು ಗುರುತಿಸಲಾಗಿದೆ. ಏಳುನೂರು ಭೌಗೋಳಿಕ ಉಪಪಂಗಡಗಳಿವೆಯಂತೆ. ಕ್ರಿಸ್ತಶಕಪೂರ್ವ ಮೂರು ಸಹಸ್ರ ವರ್ಷಗಳಷ್ಟು ಹಿಂದೆಯೇ ಸುಮೇರಿಯನ್ ನಗರವಾದ ಲಾಗಕರವು ಹದ್ದನ್ನು ತನ್ನ ಚಿಹ್ನೆಯಾಗಿ ಬಳಸುತ್ತಿತ್ತು.

ಹಿಟ್ಟಾಯಿಟ್ ಜನಾಂಗ ಜೋಡಿ ಶಿರಗಳ ಹದ್ದನ್ನು ತಮ್ಮ ನಿಶಾನೆಯಾಗಿಸಿತ್ತು. ತುರ್ಕೋಮನ್ ಮತ್ತು ಕೆಲವು ಮಹಮ್ಮದೀಯ ಅರಸರು ಹದ್ದಿನ ಚಿಹ್ನೆಗೆ ಮಾರು ಹೋಗಿದ್ದರು. ಸ್ವಾತಂತ್ರ್ಯ, ಶೌರ್ಯ, ಪೌರುಷಗಳ ಸಂಕೇತವೆಂದು ಅನೇಕ ದೇಶಗಳು ಪ್ರತಿನಿಧಿಸಲು ಈ ಖಗೋತ್ತಮವನ್ನು ಸ್ವೀಕರಿಸಿವೆ. ಅತಿ ಬಲಿಷ್ಠ ರಾಷ್ಟ್ರವೆಂದು ಗಣಿಸಲ್ಪಟ್ಟ ಅಮೇರಿಕ, ಎರಡು ವಿಶ್ವಯುದ್ಧಗಳನ್ನು ಸಾರಿದ ಜರ್ಮನಿಗಳಿಗೆ 'ಈಗಲ್' ರಾಷ್ಟ್ರಪಕ್ಷಿ. ಅತಿ ಪುರಾತನ ನಾಡಾದ ಈಜಿಪ್ಟ್, ಹಿಂದುಳಿದ ದೇಶವೆನಿಸಿಕೊಂಡ ಮೆಕ್ಸಿಕೊ ಕೂಡ ಈ ಗುಂಪಿಗೇ ಸೇರುತ್ತವೆ. ಈ ದೇಶಗಳಲ್ಲೆಲ್ಲ ಪಾತಾಕೆ, ಪೀಠ, ನಾಣ್ಯಗಳಲ್ಲಿ ಇದೇ ಪಕ್ಷಿರಾಜನ ಚಿಹ್ನೆಯಿರುತ್ತದೆ. ಯುದ್ಧಗಳಲ್ಲಿ ಸಾಹಸ ಶೌರ್ಯ ತೋರಿದ ಸೈನಿಕರಿಗೆ ಕೊಡಮಾಡುವ ಗೌರವಪದಕಗಳ ಮೇಲೂ ಈ ಪಕ್ಷಿ ರಾರಾಜಿಸುತ್ತದೆ.

ಕೆಲವು ದೇಶಗಳಲ್ಲಿ ಅವನ್ನು ಬೇಟೆಯಾಡುತ್ತಾರೆ. ಕೆಲವೆಡೆ ಆಹಾರವಾಗಿ ಸೇವಿಸುವುದೂ ಉಂಟು. ಆದರೆ ಹೆಚ್ಚಿನ ದೇಶಗಳು ಅದರ ಉಪಯುಕ್ತತೆಯನ್ನು ಅರಿತು ಸಂರಕ್ಷಣಾ ಕಾನೂನನ್ನು ಜಾರಿಗೆ ತಂದಿವೆ. ಹೊಲಸನ್ನೆಲ್ಲ ತಿಂದುಹಾಕಿ ಕಾಕವರ್ಗ, ಊರಿನ ಸ್ವಚ್ಛತೆಯನ್ನು ಕಾಪಾಡಿಕೊಂಡರೆ, ಗಗನವಿಹಾರಿಯಾದ ಗೃಧ್ರವರ್ಗ, ಕೊಳೆತುನಾರುವ ಪಶು ಪಕ್ಷಿಗಳನ್ನೆಲ್ಲ ಭಕ್ಷಿಸಿ ಊರು, ಒಳ ಹೊರಗಿನ ಪೂರ್ತಿ ವಲಯದ ಪರಿಸರವು, ಮಲಿನವಾಗದಂತೆ ಮುನ್ನೆಚ್ಚರಿಕೆ ವಹಿಸುತ್ತದೆ. ಈ ಜವಾಬ್ದಾರಿಯನ್ನು ನಮ್ಮ ನಗರ ಅಥವಾ ಪೌರ ಕಾರ್ಮಿಕ ವರ್ಗದವರು ನಿರ್ವಹಿಸುವ ಸಂದರ್ಭ ಬಂದಿದ್ದರೆ ಈಗಿನ ಹತ್ತು ಪಟ್ಟು ಕೆಲಸಗಾರರನ್ನು ನೇಮಿಸಿಕೊಳ್ಳಬೇಕಾಗುತ್ತಿತ್ತು! ನಮ್ಮ ದೇಶದಲ್ಲಿ ಗರುಡನೆಂದು ಪೂಜಿಸಿದರೂ ಇವುಗಳ ಆಳವಾದ ಅಧ್ಯಯನವನ್ನೇ ನಡೆಸಿಲ್ಲ. ರಕ್ಷಣೆಯ ಮಾತು ದೂರವೇ ಉಳಿಯಿತು!

ಮನೆ ಚೊಕ್ಕಟ, ಊರು ಹೊಲಸು

ನಾವು ಭಾರತೀಯರು ವೈಯಕ್ತಿಕವಾಗಿ ನ್ಯಾಯ, ಧರ್ಮ, ಸರಳತನಗಳನ್ನು ಮನಸಾ ಒಪ್ಪಿಕೊಂಡು ವಂಚನೆ, ಕಪಟತನ, ಡಂಭಾಚಾರಗಳನ್ನು ಖಂಡಿಸಿದರೂ, ಸಾಮೂಹಿಕವಾಗಿ ನಮ್ಮ ವರ್ತನೆ ತದ್ವಿರುದ್ಧವಾಗಿದೆ. ಪ್ರತಿಯೊಬ್ಬರೂ ಸ್ವಂತ ಸ್ವಚ್ಛತೆಗಾಗಿ ಅಪಾರ ಆಸಕ್ತಿ ವಹಿಸಿದರೂ, ಊರಿನ, ಪರಿಸರದ ಸ್ವಚ್ಛತೆ ಇನ್ನಾರದೋ ಜವಾಬ್ದಾರಿ ಅನ್ನುವಂತೆ ವರ್ತಿಸುತ್ತೇವೆ. ಸ್ವಂತಕ್ಕೆ ಲಾಭ ಮಾಡಿಕೊಳ್ಳಲು ಎಷ್ಟೊಂದು ಪರಿಶ್ರಮ ವಹಿಸಲು ಸಿದ್ಧರಿದ್ದರೂ ಸಾರ್ವಜನಿಕರ, ಸಮಾಜದ, ದೇಶದ ಹಿತ ನಮ್ಮದಲ್ಲವೆಂಬಂತೆ ಅಲಕ್ಷಿಸುತ್ತೇವೆ. ನಮ್ಮ ಕೊರತೆಗಳಿಗಾಗಿ ಇನ್ನೊಬ್ಬರನ್ನು ದೂರಿಕೊಳ್ಳುತ್ತೇವೆ. ಸಕಲ ಸವಲತ್ತುಗಳಿಗಾಗಿ ಸರಕಾರದ ಆಶ್ರಯ ಕೋರುತ್ತೇವೆ. ನಮ್ಮ ಈ ವರ್ತನೆ, ವಿದೇಶೀಯರಿಗೆ ವಿಪರ್ಯಾಸವಾಗಿ ಕಂಡರೆ ಆಶ್ಚರ್ಯವಿಲ್ಲ. ಜಪಾನ್, ಜರ್ಮನಿ, ಅಮೇರಿಕಗಳಂತಹ ಯಶಸ್ವಿ ರಾಷ್ಟ್ರಗಳ ಮೌಲ್ಯಮಾಪನದಿಂದ ನಮ್ಮನ್ನೇ ನಾವು ಅಳೆದುಕೊಂಡಾಗ ಅಯ್ಯೋ! ಅನಿಸದಿರದು. ಇಪ್ಪತ್ತೊಂದನೆಯ ಶತಕದಲ್ಲಿ ನಾವೊಂದು ಯಶಸ್ವಿ ರಾಷ್ಟ್ರವಾಗಿ ಬಾಳಿ ಬದುಕಬೇಕಾದರೆ ನಮ್ಮ ಕೊರತೆಗಳನ್ನು ಹೋಗಲಾಡಿಸಿಕೊಳ್ಳಲು ಯತ್ನಿಸುವದು ಅತ್ಯವಶ್ಯ.

ಸಂಯುಕ್ತ ರಾಷ್ಟ್ರಗಳ ಸಂಘದ ಆಡಳಿತ ವರ್ಗದಲ್ಲಿ ಉಚ್ಚ ಅಧಿಕಾರದಲ್ಲಿದ್ದ ಭಾರತೀಯರು ಅತ್ಯಂತ ದಕ್ಷ ಮತ್ತು ಪ್ರಾಮಾಣಿಕರೆನಿಸಿಕೊಂಡಿದ್ದಾರೆ. ಅಮೇರಿಕೆಯ ವಿವಿಧ ವಿಶ್ವವಿದ್ಯಾಲಯಗಳಲ್ಲಿರುವ ನಮ್ಮವರೆಲ್ಲ ಉತ್ತಮ ವಿದ್ಯಾರ್ಥಿ ಮತ್ತು ಸಂಶೋಧಕರೆಂದು ಪ್ರಾಧ್ಯಾಪಕರಿಂದ ಬೆನ್ನು ತಟ್ಟಿಸಿಕೊಂಡಿದ್ದಾರೆ. ಕರ್ನಾಟಕದವರೇ ಆದ ಡಾ|| ಎ.ಕೆ. ರಾಮಾನುಜನ್ ಶಿಕಾಗೋದಂತಹ ಹೆಸರುವಾಸಿ ವಿಶ್ವವಿದ್ಯಾಲಯದಲ್ಲಿ ವಿಭಾಗದ ಮುಖ್ಯಸ್ಥರಾಗಿರುವದರ ಜೊತೆಗೆ ಭಾಷಾ ಬೆಳವಣಿಗೆಗೆ ಭಾರೀ ಮೊತ್ತದ ದತ್ತಿ ಪಡೆಯುವದರಲ್ಲಿ ಯಶಸ್ವಿಯಾಗಿದ್ದಾರೆ. ಡಾ|| ಖುರಾನಾ ನೋಬೆಲೆ ಪಾರಿತೋಷಕವನ್ನು ತಮ್ಮದನ್ನಾಗಿ ಮಾಡಿಕೊಂಡಿದ್ದಾರೆ. ಅರಬ್ ದೇಶಗಳಿಗೆ ಧಾವಿಸಿ ಚಿಕ್ಕ ಪುಟ್ಟ ಕೆಲಸಗಳನ್ನು ಕೈಕೊಂಡ ಭಾರತೀಯರೂ ಅವರಿಂದ ಸೈ! ಎನಿಸಿಕೊಂಡು ತಮ್ಮ ಜೇಬನ್ನೂ ತುಂಬಿಸಿಕೊಂಡಿದ್ದಾರೆ. ಇವರೆಲ್ಲ ಭಾರತದಲ್ಲೇ ಇದ್ದರೆ, ಜೀವನದಲ್ಲಿ ಇಷ್ಟೇ ಯಶಸ್ವಿ ಆಗುತ್ತಿದ್ದರೇ? ಎಂಬ ಪ್ರಶ್ನೆಗೆ ಖಂಡಿತವಾಗಿಯೂ ಇಲ್ಲ ಎಂದು ವಿಷಾದಿಸಲೇಬೇಕಾಗಿ ಬರುತ್ತದೆ. ಇದಕ್ಕೆ ವ್ಯಕ್ತಿಗಳು ಕಾರಣರಾಗಿರದೇ ನಮ್ಮ ವ್ಯವಸ್ಥೆಯೇ ಅವರನ್ನು ಅಯೋಗ್ಯರನ್ನಾಗಿ ಮಾಡಿಬಿಡುತ್ತಿತ್ತು.

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ದಕ್ಷರನ್ನು ಹುಡುಕಿಕೊಂಡು ಕಂಪನಿಗಳು, ಸರಕಾರದ ಉಚ್ಚ ಅಧಿಕಾರಿಗಳು, ಕಾಲೇಜು ವಿಶ್ವವಿದ್ಯಾಲಯಗಳಿಗೆ ಭೇಟಿ ಕೊಡುತ್ತಾರೆ. ಪ್ರಾಧ್ಯಪಕರೊಂದಿಗೆ ವಿಚಾರವಿನಿಮಯ ಮಾಡಿ ಅವರು ಶಿಫಾರಸು ಮಾಡಿದವರನ್ನು ಭೇಟಿ ಮಾಡಿ ಅವರನ್ನೂ ಅತಿಥಿಯಾಗಿ ತಮ್ಮ ಸಂಸ್ಥೆಗೆ ಬರಮಾಡಿಕೊಂಡು, ಅಭ್ಯರ್ಥಿ ಯೋಗ್ಯನೆನಿಸಿಕೊಂಡರೆ ಕೂಡಲೇ

ತಮ್ಮ ಸಂಸ್ಥೆಗೆ ಸೇರಿಸಿಕೊಳ್ಳುತ್ತಾರೆ. ಇದರಿಂದ ವಿದ್ಯಾರ್ಥಿ ತನ್ನ ಶಿಕ್ಷಣ ಮುಗಿಸುವದಕ್ಕೆ ಮೊದಲೇ ಒಂದಕ್ಕಿಂತ ಹೆಚ್ಚು ನೌಕರಿ ಸಂಪಾದಿಸಿಕೊಂಡರೆ ಆಶ್ಚರ್ಯವಿಲ್ಲ. ಆದರೆ ಆತ ಸೇರಿಕೊಂಡ ಸಂಸ್ಥೆಗೆ ನಿಷ್ಠೆಯಿಂದ, ದಕ್ಷತೆಯಿಂದ ಸೇವೆ ಸಲ್ಲಿಸುವದು ಅತಿ ಮುಖ್ಯ. ಅವನ ಕಾರ್ಯ ನಿರ್ವಹಣೆಯಲ್ಲಿ ಸ್ವಲ್ಪವಾದರೂ ಕುಂದುಕೊರತೆಗಳು ಕಂಡುಬಂದಲ್ಲಿ ಒಂದು ತಿಂಗಳ ಸಂಬಳವನ್ನು ಮುಂಗಡವಾಗಿ ಕೊಟ್ಟು ಮನೆಗೆ ಕಳುಹಿಸಿಬಿಡುತ್ತಾರೆ. ಕೆಲಸಕ್ಕೆ ನೇಮಿಸಿಕೊಂಡವನಿಗೆ, ವಜಾ ಮಾಡುವ ಸರ್ವ ಅಧಿಕಾರವೂ ಇದೆ.

ನಮ್ಮ ಭಾರತದ ಕಾರ್ಯವೈಖರಿ ನೋಡಿ. ದುಡಿಮೆಯಿಂದ ಮಾತ್ರ ಯಶಸ್ಸು ಸಾಧ್ಯವೆಂಬ ಸಿದ್ಧಾಂತ ಹಳೆಯ ಸಂಪ್ರದಾಯಕ್ಕೆ ಸೇರಿದ್ದರಿಂದ ಹೊಸ ಪೀಳಿಗೆಯವರು ಬಂಡಾಯದ ಹೊಸ ವಿಧಾನವನ್ನು ಕಂಡುಕೊಂಡಿದ್ದಾರೆ. ರ್‍ಯಾಂಕಿಗಾಗಿ ಪರದಾಡಿ ಬೆವರು ಸುರಿಸಿ ಬೆನ್ನು ಮುರಿದು ದುಡಿದರೆ, ಅವನ್ನು ಗಿಟ್ಟಿಸಲು ಕೇವಲ ಕೆಲವೇ ವಿದ್ಯಾರ್ಥಿಗಳಿಗೆ ಸಾಧ್ಯ. ಆದರೆ ಪ್ರಶ್ನೆ ಪತ್ರಿಕೆಗಳನ್ನು ಮೊದಲೇ ಸಂಪಾದಿಸಿ ಗೊತ್ತಿದ್ದವರಿಂದ ಅವುಗಳಿಗೆ ಉತ್ತರ ಪತ್ರಿಕೆಗಳೊಂದಿಗೆ ಸೇರಿಸಿದರೆ ಹೆಚ್ಚಿನ ಗುಣಗಳು ಬರುವುದು ಖಂಡಿತ. ಈ ಯಶಸ್ಸಿಗಾಗಿ ಪಾಲಕರು ವಾಮಮಾರ್ಗದಿಂದ ಸಂಪಾದಿಸಿದ ಹತ್ತಾರು ಸಾವಿರ ರೂಪಾಯಿ ಖರ್ಚಾದರೆ ಅದಕ್ಕಾಗಿ ಅಳುವವರು ಯಾರೂ ಇಲ್ಲ. ಇಷ್ಟರಿಂದಲೇ ಡಾಕ್ಟರ್, ಇಂಜಿನಿಯರ್, ಕೃಷಿ ವಿಜ್ಞಾನಿ ಆಗಲು ಸಾಧ್ಯವಾಗದಿದ್ದರೆ, ಮೀಸಲಾತಿ ಗುಂಪಿಗೆ ಸೇರಿದವರೆಂದೋ, ಪರಿಶಿಷ್ಟ ವರ್ಗಗಳಿಗೆ ಸೇರಿದವರೆಂದೋ ಸರ್ಟಿಫಿಕೇಟು ಪಡೆಯುವದು, ಸಿನಿಮಾ ಟಿಕೇಟು ಪಡೆದಷ್ಟು ಸುಲಭ. ಇವೆಲ್ಲ ಇದ್ದೂ ಪ್ರವೇಶ ಕಷ್ಟ ಸಾಧ್ಯವಾದರೆ ಹೊರ ನಾಡಿನ ಕನ್ನಡಿಗನ ಕುಟುಂಬದವನೆಂದೋ ಶಿಫಾರಸು ಹಾಜರು ಮಾಡಬಹುದು. ಒಮ್ಮೆ ವಿದ್ಯಾರ್ಥಿಗಳಾಗಿ ಸೇರಿದರೆಂದರೆ ಪ್ರತಿವರ್ಷ ಪಾಸಾಗುತ್ತ ಹೋಗಲೇಬೇಕೆಂಬ ಒತ್ತಾಯವಿಲ್ಲ. ಕೊನೆಯ ವರ್ಷ ಮುಟ್ಟಿದರೂ ಮೊದಲ ವರ್ಷದ ಪರೀಕ್ಷೆ ಹಾಗೇ ಉಳಿದರೂ ಚಿಂತೆಯಿಲ್ಲ. ಓದಿನಿಂದಲೇ ಪಾಸು ಮಾಡಲಾಗದಿದ್ದರೆ, ಪ್ರಿನ್ಸಿಪಾಲರ ವಿರುದ್ಧ ಉಪಕುಲಪತಿಗಳ ವಿರುದ್ಧ, ಸರಕಾರದ ವಿರುದ್ಧ, ಸಂಪು ಹೂಡಿ, ನಾಲ್ಕಾರು ಬಸ್ಸುಗಳನ್ನು ಸುಟ್ಟು ಹತ್ತಾರು ಬಸ್ಸುಗಳಿಗೆ ಕಲ್ಲು ತೂರಿದರೆಂದರೆ ಅಧಿಕಾರಿಗಳು ತಾವಾಗಿ ಮಾತುಕತೆಗೆ ಮುಂದಾಗುತ್ತಾರೆ. ನೀವು ಸಾಮೂಹಿಕ ನ್ಯಾಯಕ್ಕಾಗಿ ಹೋರಾಡಿದ್ದರಿಂದ ಪರೀಕ್ಷೆಗಳನ್ನು ಮುಂದೆ ಹಾಕದೇ ಇರುತ್ತಾರೆಯೇ! ಹೀಗೆ ಎರಡು ಮೂರು ಬಾರಿ ಶಿಕ್ಷಣಾಧಿಕಾರಿಗಳಿಗೆ ಆತಂಕ ತಂದೊಡ್ಡಿದರೆಂದರೆ, ಪದವಿಗಳು ದೊರೆತಂತೆಯೇ. ಈ ಮಾರ್ಗವೂ ಕಷ್ಟಸಾಧ್ಯವಾದರೆ ಹಣಕ್ಕಾಗಿ ಪದವಿಗಳನ್ನು ಮಾರುವ ಸಿಬ್ಬಂದಿ, ಶಿಕ್ಷಣ ಇಲಾಖೆಗಳಲ್ಲಿ ಇರುವದರಿಂದ ಅಷ್ಟೊಂದು ತಲೆಕೆಡಿಸಿಕೊಳ್ಳಬೇಕಾಗಿಲ್ಲ.

ಪಾಲಕರು ಆಗರ್ಭ ಶ್ರೀಮಂತರಾಗಿದ್ದರೆ ಇಷ್ಟು ದುಡಿಯಬೇಕಾಗಿಲ್ಲವೇನೋ! ವಿದ್ಯಾರ್ಥಿಗಳು ವರ್ಚಸ್ವಿ ಪ್ರಾಧ್ಯಾಪಕರನ್ನು ಹಿಡಿದು, ಪ್ರಿನ್ಸಿಪಾಲರಿಗೆ ದಕ್ಷಿಣೆ ಕೊಟ್ಟು ಸಂಸ್ಥೆಯ ಏಳ್ಗೆಗಾಗಿ ಹಣ ಸುರಿದರೆಂದರೆ ಅಭ್ಯರ್ಥಿಗಳನ್ನು ಸಂಸ್ಥೆಗೆ ಸೇರಿಸಿಕೊಂಡಬಿಡುತ್ತಾರೆ. ಹಾಸ್ಟೆಲು ವಾಸಕ್ಕೆ ಠೇವಣಿ, ಖಾಸಗೀ ಟ್ಯೂಶನ್‌ಗೆ ಹಣ ಪೂರೈಸುತ್ತಲೇ ಇದ್ದರೆ ವಿದ್ಯಾರ್ಥಿಯ ಭವಿಷ್ಯದ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಾಗಿಯೇ ಇಲ್ಲ. ಶಿಕ್ಷಣ ಮುಗಿದಾಗ ಧನಬಲದಿಂದಲೋ ಅಧಿಕಾರಿಗಳ ಪ್ರಭಾವದಿಂದಲೋ ನೌಕರಿಯೊಂದನ್ನು ಗಿಟ್ಟಿಸಿಕೊಳ್ಳುವದು ಕಷ್ಟವಲ್ಲ.

ನೆನಪು

ಇಷ್ಟೊಂದು ಅದೃಷ್ಟವಂತರಲ್ಲದವರು ತಮ್ಮ ಹೆಸರನ್ನು ಉದ್ಯೋಗವಿನಿಮಯ ಸಂಸ್ಥೆಯಲ್ಲಿ ನೋಂದಾಯಿಸಬೇಕು. ಪ್ರತಿ ತಿಂಗಳೂ ನಿರ್ದಿಷ್ಟ ಅವಧಿಗೋ ತಾನು ನಿರುದ್ಯೋಗಿ ಎಂದು ಅವರಿಗೆ ನೆನಪಿಸುತ್ತಿರಲೇಬೇಕು. ನಂತರ ಯಾವುದಾದರೊಂದು ಖಾತೆಯಲ್ಲಿ ತನಗೆ ಸರಿಹೋಗುವ ನೌಕರಿ ಇದ್ದರೆ ಅವರಿಗೆ ಶಿಫಾರಸು ಮಾಡುವವರಲ್ಲಿ ತನ್ನ ಹೆಸರೂ ಸೇರುವಂತೆ ನೋಡಿಕೊಳ್ಳಲು ಒಂದಿಷ್ಟು ಹಣ ತೆರಬೇಕು. ಅನಂತರ ಆಯ್ಕೆಯ ಸಮಿತಿಯಲ್ಲಿ ಯಾರಾರು ಇದ್ದಾರೆಂದು ಶತಪ್ರಯತ್ನ ಮಾಡಿ ಪತ್ತೆಹಚ್ಚಿ ಅವರು ಮಾತು ಪಾಲಿಸುವಂತಹ ರಾಜಕಾರಣೆಯಿಂದ ಹೇಳಿಸಬೇಕು. ಈ ಎಲ್ಲ ಕೆಲಸಗಳು ಕೈಗೂಡಬೇಕಾದರೆ ಐದಾರು ಸಾವಿರ ರೂಪಾಯಿಗಳು ಜೇಬಿನಿಂದ ಜಾರಿಕೊಳ್ಳುವವೆಂದು ಬೇರೆ ಹೇಳಬೇಕಾಗಿಲ್ಲ. ಏನೇನೋ ಕುಂಟ ನೆವಗಳಿಗಾಗಿ ಆಯ್ಕೆಯ ದಿನಾಂಕ ಮುಂದೆ ಬೀಳುವದುಂಟು. ಕೊನೆಗೊಮ್ಮೆ ಆ ಸುದಿನ ಬಂದಾಗ ನಿನ್ನ ಹೆಸರೇನು? ಶಾಲಾ ಅಭ್ಯಾಸ ಯಾವ ವರ್ಷ ಮುಗಿಸಿದ್ದು, ಪದವಿ ಪಡೆದದ್ದು ಯಾವಾಗ? ಆರಿಸಿದರೆ ನೌಕರಿಗೆ ಕೂಡಲೇ ಸೇರುವಿಯಾ? ಎಂಬಿವೇ ಬಂದ ತಜ್ಞರು ಕೇಳುವ ಪ್ರಶ್ನೆ! ಪೂಜೆ-ಪುರಸ್ಕಾರಗಳಿಂದಲೋ ಜಾತಕ ಬಲದಿಂದಲೋ ಆಯ್ಕೆ ಆಯ್ತು ಎಂದು ಆನಂದಿಸುತ್ತಿದ್ದಾಗ ಸೋತವನು ಕೋರ್ಟಿಗೆ ಹೋಗುವದರಿಂದ ಸಿಕ್ಕ ನೌಕರಿಯ ನೇಮಕಾತಿ ಮುಂದೆಬೀಳುವದು, ಆಯ್ಕೆ ರದ್ದಾಗುವದೂ ಉಂಟು.

ಕಾಲೇಜು, ವಿಶ್ವವಿದ್ಯಾಲಯ, ಸಂಶೋಧನಾ ಕೇಂದ್ರಗಳಿಗೆ ಪರಿಣತರನ್ನು ಆರಿಸುವ ಕ್ರಮವೇ ಬೇರೆ. ಯಾರನ್ನು ಆಯಾ ಸ್ಥಳಕ್ಕೆ ನೇಮಿಸಿಕೊಳ್ಳಬೇಕೆಂದು ಎಂದೋ ನಿರ್ಧರಿಸಲಾಗುತ್ತದೆ. ಅಭ್ಯರ್ಥಿ ತಾತ್ಪೂರ್ತಿಕವಾಗಿ ಕೆಲಸಕ್ಕೆ ಸೇರಿಕೊಂಡಿರುತ್ತಾನೆ ಕೂಡ. ಆ ವ್ಯಕ್ತಿಯಲ್ಲಿರುವ ಎಲ್ಲ ಪದವಿ ತರಬೇತಿಗಳುಳ್ಳ ಅಭ್ಯರ್ಥಿ ಬೇಕು ಎಂದು ಜಾಹಿರಾತಿನಲ್ಲಿ ನಮೂದಿಸಿದ್ದರಿಂದ ಬೇರೆ ವ್ಯಕ್ತಿಯ ಹೆಸರು ಬರಬೇಕಾದ ಅಭ್ಯರ್ಥಿಗಳ ಪಟ್ಟಿಯಲ್ಲಿ ಸೇರ್ಪಡೆಯಾಗಲು ಆಸ್ಪದವೇ ಇರುವುದಿಲ್ಲ. ಹೀಗಾಗಿ ವಿಷಯಜ್ಞಾನ ಇಲ್ಲದವರು ಬಂದು ಸೇರಿಕೊಳ್ಳುವದು ರೂಢಿ. ಕನ್ನಡ ಸಂಶೋಧನಾ ಕೇಂದ್ರವನ್ನು ಕನ್ನಡ ಬಾರದವ ಅಲಂಕರಿಸಿದ್ದಿದೆ, ಕೀಟಶಾಸ್ತ್ರ ಅರಿಯದವರು ಆ ಶಾಖೆಯ ಮುಖ್ಯಸ್ಥರಾಗಿದ್ದಾರೆ. ಇಲೆಕ್ಟ್ರಾನಿಕ್ ಎಂಜಿನಿಯರ್, ಬ್ಯಾಂಕಿನ ಉಚ್ಚ ಅಧಿಕಾರವನ್ನು ಗಿಟ್ಟಿಸಿಕೊಂಡಿದ್ದಾರೆ.

ವಿಶಿಷ್ಟ ಗುಂಪುಗಳಿಗೆ ಕಾದಿಟ್ಟ ಸ್ಥಳಗಳಂತೂ ಸಮಾಜಕ್ಕೆ, ದೇಶಕ್ಕೆ, ಶಾಪವಿದ್ದಂತೆ, ಎನ್.ಸಿ.ಸಿ. ವಿದ್ಯಾರ್ಥಿ ಸೈನ್ಯ ತರಬೇತಿಯಲ್ಲಿ ನೈಪುಣ್ಯ ತೋರಿಸಿದರೆ ಸೈನ್ಯಕ್ಕೇ ಸೇರಿ ಯೋಗ್ಯತೆ ಪ್ರದರ್ಶಿಸಲಿ. ಅವನ ಈ ತರಬೇತಿಯನ್ನೇ ಗಮನಿಸಿ ಮೇಲೆತ್ತಿ ಡಾಕ್ಟರ್ ಮಾಡುವದರಲ್ಲಿ ಏನು ಅರ್ಥವಿದೆ? ಕನ್ನಡಿಗನು ಹೊರನಾಡಿನಲ್ಲಿ ಪ್ರಗತಿ ಸಾಧಿಸಿದರೆ ಅವನ ಮಕ್ಕಳು ಅಲ್ಲಿಯವರೊಂದಿಗೆ ಸ್ಪರ್ಧಿಸಲಿ. ಇಲ್ಲಿ ಸ್ಥಳ ಕಾದಿರಿಸಬೇಕೇ? ಶತಕಗಳಿಂದ ಅಲಕ್ಷ್ಯ ಅನಾದರಕ್ಕೆ ಗುರಿಯಾದವರಿಗೆ ನ್ಯಾಯದೊರೆಯಲಿ. ತಮ್ಮ ಬುದ್ಧಿಮತ್ತೆ, ಕರಕೌಶಲಗಳನ್ನು ಬೆಳೆಸಲು ಬೇಕಾದಷ್ಟು ಅವಕಾಶಗಳು ಸಿಗುವಂತೆ ಆಗಲಿ. ಆದರೆ ಸವಲತ್ತುಗಳನ್ನು ನೀಡಿ ನೀಡಿ ಅವರದೇ ಒಂದು ಹೊಸ ಜಾತಿಯನ್ನು ನಿರ್ಮಿಸಿ ಸರಕಾರ ಅವರನ್ನು ಔರಸಪುತ್ರರಂತೆ ನಡೆಸಿಕೊಳ್ಳುವದೇಕೆ? ಇಂಥ ಡಾಕ್ಟರರು ಶೇಕಡಾ ೪೫ ರಷ್ಟು ರೋಗಿಗಳನ್ನು ಬದುಕಿಸಿಕೊಂಡರೆ ಸಾಕೇ? ಅಥವಾ ಹೆಚ್ಚೆಚ್ಚು ಅರೆಬೆಂದ ಇಂಜಿನಿಯರರು

ಹೊರಬೀಳುತ್ತಿರುವುದರಿಂದ ಹೆಚ್ಚೆಚ್ಚು ಸಂಖ್ಯೆಯಲ್ಲಿ ಗಂಗಾರಾಮ ಕಟ್ಟಡಗಳು ತಲೆ ಎತ್ತುತ್ತಿರಬಹುದೇ? ಎಲ್ಲರನ್ನೂ ಒಂದೇ ಎರಕದಲ್ಲಿ ಹೊಯ್ಯುವ ಸರಕಾರಿ ಧೋರಣೆ ಖಂಡನೀಯವಲ್ಲವೇ? ಶತಕಗಳಿಂದ ಕೊರಡು ಕೊನರಿಸಿ, ಕಲಾ ಕುಸುರಿನ ಕೆಲಸದಲ್ಲಿ ನೈಪುಣ್ಯ ಸಂಪಾದಿಸಿದ ಗುಡಿಗಾರರ ಮಕ್ಕಳನ್ನು ಕಾರಕೂನ ಮಾಡವದು ಸರಿಯೇ? ಆ ಜನಕ್ಕೆ ಯೋಗ್ಯ ಬೆಲೆಗೆ ಶ್ರೀಗಂಧ ದೊರಕದೆ ಕನಿಷ್ಠ ದಿನಗೂಲಿ ಕೂಡ ದೊರೆಯದೆ ಅರಹೊಟ್ಟೆಯ ಅರೆಜೀವನ ನಡೆಸುವ ಸಂದರ್ಭ ಏಕೆ ಬಂದಿತು?

ಹಲವಾರು ತಲೆಮಾರುಗಳಿಂದ ಮೀನುಗಾರರಾಗಿ ಜೀವನೋಪಾ ಕೈಕೊಂಡವರಿಗೆ ಅವರ ಆದಾಯ ಹೆಚ್ಚಿಸಲು ಸಹಾಯ ನೀಡುವದರ ಬದಲಾಗಿ ಸರಕಾರ ಧನಿಕರಿಗೇ ರಿಯಾಯತಿ ನೀಡಿದೆ. ಅವರೇ ಬ್ಯಾಂಕುಗಳಿಂದ ಸಾಲ ಪಡೆದು ಮತ್ಸ್ಯೋದ್ಯಮದ ಮಿಲಿಯ ಪತಿಗಳಾಗಿ ಹುಟ್ಟು-ಸಂಪ್ರದಾಯಗಳಿಂದ ಮೀನುಗಾರರಾದವರು ಉಪಜೀವನಕ್ಕೆ ಇತರೆಡೆಗೆ ಕೈಮುಖ ತಿರುಗಿಸಬೇಕಾಗಿದೆ. ಇದರಂತೆ ಸಮಗಾರರು, ರೈತರು, ಕುಂಬಾರರು, ನೇಕಾರರು, ಕಂಚುಗಾರರಿಗೆಲ್ಲ ತಮ್ಮ ವೃತ್ತಿಗಳನ್ನು ಮರೆಯುವಂತೆ ಸರಕಾರ ಸಕ್ರಿಯವಾಗಿ ಸಹಾಯ ಮಾಡಿದೆ.

ಕೃಪಾಕಟಾಕ್ಷ

ಸರ್ವರಿಗೂ ಅನ್ನದಾತ ತಾನೇ! ಎಂದು ಸರಕಾರ ನಡೆದುಕೊಳ್ಳವದರಿಂದ ಅದರ ಕೃಪಾಕಟಾಕ್ಷಕ್ಕೆ ಒಳಗಾದವರು ದುಡಿಯಬೇಕೆಂಬ ಕಡ್ಡಾಯವಿಲ್ಲವೆಂಬುದು ಎಲ್ಲರ ನಂಬಿಕೆ. ಹೊಸದಾಗಿ ನೌಕರಿಗೆ ಹಾಜರಾದ ಮೀಸಲು ವರ್ಗದ ಯುವಕ ನೋರ್ವನಿಗೆ ಮೇಲಧಿಕಾರಿ ದಿನದ ಕೆಲಸದ ವಿವರಣೆ ಕೇಳಿದಾಗ, 'ವೇಳೆಗೆ ಸರಿಯಾಗಿ ಆಫೀಸಿಗೆ ಬಂದು ಹೋಗ್ತಾ ಇದ್ದೀನಿ. ಜೊತೆಗೆ ಹೇಳಿದ ಕೆಲಸವೆಲ್ಲ ಮಾಡಬೇಕು, ಎಂದು ಅಪೇಕ್ಷಿಸುತ್ತೀರಾ?' ಎಂದು ಹೌಹಾರಿ ಮರುಪ್ರಶ್ನೆ ಹಾಕಿದನಂತೆ. ಪುಣ್ಯಕ್ಕೆ ತಾನು ಹಿಂದುಳಿದ ಕೋಮಿಗೆ ಸೇರಿದ್ದರಿಂದಲೇ ತನಗೆ ಕೆಲಸ ಮಾಡಲು ಹೇಳುತ್ತಾರೆ, ಎಂದು ತನ್ನ ಹಕ್ಕು-ಬಾಧ್ಯತೆಗಳ ಸಂರಕ್ಷಣಾ ಸಮಿತಿಗೆ ತೂರಿಕೊಂಡಿಲ್ಲ. ಬಡತನದ ಹಿನ್ನೆಲೆಯನ್ನು ಸಹಾನುಭೂತಿಯಿಂದ ನೋಡಬೇಕಾದದ್ದು ಅವಶ್ಯ ನಿಜ. ಆದರೆ ಯಾವ ಅತಂಕವಿಲ್ಲದೇ ಶಾಲೆ-ಕಾಲೇಜುಗಳಲ್ಲಿ ಪ್ರವೇಶ, ಅವರಿಗೇ ಮೀಸಲಾದ ಹಾಸ್ಟೆಲುಗಳು, ಉಚಿತವಾದ ಊಟ, ಪುಸ್ತಕಗಳು, ಚಿಲ್ಲರೆ ಖರ್ಚಿಗೆ ಕಾಸು, ಓದಲಿ, ಬಿಡಲಿ ಮುಂದಿನ ವರ್ಗಕ್ಕೆ ಹೋಗುವದು ಖಂಡಿತ. ಪಾಸಾದರೆ ನೌಕರಿ ಕಟ್ಟಿಟ್ಟದ್ದು, ಈ ಪರಂಪರೆ ರೂಢಿಯಾದಾಗ ಕೆಲಸಮಾಡವದು ಕಡ್ಡಾಯವಾದಾಗ ಅನ್ಯಾಯ ಎನಿಸುವದು ಸಹಜ. ಸೀನಿಯಾರಿಟಿ ಗೊಂದಲವಿಲ್ಲದೇ ರೋಸ್ಟರ್‌ಗಳ ಬಡ್ತಿಯ ಹಗಲುಗನಸು ಕಾಣುತ್ತಿರುವವರಿಗೆ ಆಯಾ ಅನುಕೂಲತೆಗಳನ್ನು ಕಲ್ಪಿಸಬೇಕಲ್ಲವೇ?

ಅರ್ಧತಾಸು ತಡವಾಗಿ ಆಫೀಸು ಸೇರಿದ ನೌಕರರಾದರೋ ತಾವು ರಜೆ ಪಡೆದಿಲ್ಲವೆಂದು ಸಾರುವುದಕ್ಕಾಗಿ ಬ್ಯಾಗು-ಕೋಟಗಳನ್ನು ಖುರ್ಚಿಗೆ ತಗುಲಿಸಿದರೆ ಅಂದಿನ ಕಾರ್ಯಕಲಾಪಗಳು ಆರಂಭವಾದಂತೆ ಆಫೀಸಿನ ಬಿಟ್ಟಿ ಪೋನು ಬಳಸಿ ಬಂಧು-ಮಿತ್ರರನ್ನು ಮಾತನಾಡಿಸಿದ ನಂತರ ಸಹೋದ್ಯೋಗಿಗಳೊಡನೆ ಮುಂಬಡ್ತಿ, ತುಟ್ಟಿಭತ್ತೆ, ಬೋನಸ್ಸುಗಳ ಬಗ್ಗೆ ಸುದೀರ್ಘ ವಿಚಾರ

ವಿನಿಮಯ ಮಾಡಲು ಅನುಕಾಲವಾಗುವುದು. ಇಷ್ಟೆಲ್ಲ ಕಂಠಶೋಷದ ಬಳಿಕ ಕಾಫಿ ತಿಂಡಿ ಬೇಡವೆ? ಸಾರ್ವಜನಿಕರು ಕಾರ್ಯನಿಮಿತ್ತ ಕಾದುಕೊಂಡಿದ್ದರೆ, ವಾರಾಂತ್ಯ ದಸರಾ-ದೀಪಾವಳಿಗಳ ರಜೆ ಕಳೆದ ನಂತರ ಕಾಣಲು ಆಜ್ಞಾಪಿಸಿದರೆ, ಬಂದ ಕುತ್ತಿನಿಂದ ಪಾರಾದಂತೆ. ತಮ್ಮ ಕಕ್ಷಿಗಳ ಪರವಾಗಿ ದಲಾಲಿಗಳು ಬಂದರೆ ಅವರಿಗೆ ಆದರದ ಸ್ವಾಗತ ಕೋರಿ ಕಾಫಿ-ತಿಂಡಿ-ಸಿಗರೇಟು ಗಿಟ್ಟಿಸಿ ವ್ಯಾಪಾರ ಕುದುರಿಸಲು ಅನುಕೂಲವಾಗುವುದು.

ಹಿಂದೆ ಕಾನೂನು ಪ್ರತಿಕೂಲವಿದ್ದಾಗ ಕೆಲಸ ಮಾಡಿಸಿಕೊಡಲು ದಕ್ಷಿಣೆ ತರಬೇಕಾಗಿತ್ತು. ಅನಂತರ ಕರ್ತವ್ಯಪಾಲನೆಗೇ ಕೈಯೊಡ್ಡುವ ದಿನಗಳನ್ನು ಕಾಣುವಂತಾಯಿತು. ಇಂದು ದೈನಂದಿನ ಮನಶಾಂತಿ ಕೆಡದಂತೆ ಇರಬೇಕಾಗಿದ್ದರೆ ಸರಕಾರೀ ಕಚೇರಿಗಳಲ್ಲಿ ಹಣ ಸುರಿಯಬೇಕು. ಆದಾಯಕರ, ಮಾರಾಟಕರ, ದೂರವಾಣಿ, ವಿದ್ಯುತ್ ಪೂರೈಕೆ, ಗೃಹನಿರ್ಮಾಣ, ನೀರು ಸರಬರಾಜು ಖಾತೆಗಳೆಲ್ಲ ಈ ಗುಂಪಿಗೆ ಸೇರಿವೆ.

ದಿನವೊಂದಕ್ಕೆ ಒಂದು ಗಂಟೆಯ ಕೆಲಸವನ್ನು ಆಫೀಸ ಜೀವಿ, ಮಾಡದಿದ್ದರೂ ಮೇಲಧಿಕಾರಿಗಳು ಏನೂಮಾಡಲು ಬರುವಂತಿಲ್ಲ. ಕೆಲಸ ಹೆಚ್ಚಾಗಿದ್ದರಿಂದ ಅಧಿಕ ಸಂಬಳ ಕೇಳುವದು, ಇನ್ನಷ್ಟು ನೌಕರರನ್ನು ನೇಮಿಸಿಕೊಳ್ಳುವಂತೆ ಕೇಳಿಕೊಳ್ಳುವದು ಸಾಮಾನ್ಯ. ದೊಡ್ಡ ಕಚೇರಿಗಳಲ್ಲಿ ಸರಕಾರಿ ಟೈಪಿಸ್ಟ್ ಒಂದೆರಡು ಪತ್ರ ಟೈಪ್ ಮಾಡುವಷ್ಟರಲ್ಲಿ ಸುಸ್ತಾಗಿಬಿಡುತ್ತಾನೆ. ಸ್ವಲ್ಪ ಕೆಲಸ ಹೆಚ್ಚಿದರೂ ಓ.ಟಿ. ಬೇಕೇಬೇಕು. ಇಷ್ಟೆ ಕೆಲಸಕ್ಕೆ ಅವನು ಪಡೆಯುವ ಕಾಗದ ಕಾರ್ಬನ್ ರಿಬ್ಬನ್‌ಗಳ ಲೆಕ್ಕಾಚಾರ ಹಾಕಿದರೆ ಹೌಹಾರುವಂತಾಗುವದು. ಇದಕ್ಕೇನಾದರೂ ತಡೆಹಾಕಲು ಯತ್ನಿಸಿದರೆ ಆ ಸಂಘ, ಈ ಅಸೋಸಿಯೇಶನ್ ಹಕ್ಕುಬಾಧ್ಯತೆಗಳ ರಕ್ಷಣಾ ಸಮಿತಿಯವರು ಚಳವಳಿಗೆ ಸಿದ್ಧ. ಲೇಖನಿ ಎತ್ತದ ಸಂಪು, ಕಾನೂನಿನಂತೆ ಕೆಲಸ (ಅರ್ಥಾತ್ ಕೆಲಸ ಮಾಡದಿರುವುದು), ಮುಷ್ಕರ, ಘೆರಾವು, ಸತ್ಯಾಗ್ರಹಗಳು ಪ್ರತಿನಿತ್ಯವೂ ಕೇಳಿಬರುವ ಪಿಡುಗು.

ಸವಲತ್ತು

ಎಲ್ಲ ಸೇವೆಗಾಗಿ ಸರಕಾರ ಕೊಡಮಾಡುವ ಸವಲತ್ತುಗಳಿಗೆ ಲೆಕ್ಕವೇ ಇಲ್ಲ. ವಾರಕ್ಕೆ ಎರಡು ದಿನಗಳ ರಜೆ ಹನ್ನೊಂದು ದಿನಕ್ಕೊಂದು ಗಳಿಕೆಯ ರಜೆ. ವರ್ಷಕ್ಕೆ ಹದಿನೈದು ಹಬ್ಬ ಹರಿದಿನಗಳ ರಜೆ, ಹದಿನೈದು ದಿನ ಅಸಾಮಾನ್ಯ ರಜೆ, ಶೋಕದ ರಜೆ, ಇವನ್ನೆಲ್ಲ ಪರಿಗಣಿಸಿದರೆ ವರ್ಷಕ್ಕೆ ಆರು ತಿಂಗಳ ರಜೆಯಿರುತ್ತದೆ. ಪೇಟೆಯಲ್ಲಿ ಬೆಲೆಗಳು ಏರಿದಂತೆ ಸರಕಾರಿ ನೌಕರರ ಸಂಬಳದಲ್ಲೂ ಏರಿಕೆಯ ಏರ್ಪಾಡಿದೆ. ಅಲ್ಲದೇ ಹಬ್ಬಗಳಿಗಾಗಿ, ವಾಹನ ಕೊಳ್ಳುವುದಕ್ಕಾಗಿ, ಸ್ಥಳ ಖರೀದಿಗಾಗಿ, ಮನೆ ಕಟ್ಟಿಸುವದಕ್ಕಾಗಿ ಮುಂಗಡ ಹಣ ಕೊಡುವ ಏರ್ಪಾಟಿದೆ. ಎರಡು ವರ್ಷಕ್ಕೊಮ್ಮೆ ಸಹಕುಟುಂಬದೊಡನೆ ತನ್ನೂರಿಗೆ ಸರಕಾರಿ ಖರ್ಚಿನಲ್ಲಿ ಹೋಗಿ ಬರಬಹುದು. ಅಲ್ಲದೇ ನಾಲ್ಕು ವರ್ಷಕ್ಕೊಮ್ಮೆ ದೀರ್ಘರಜೆ ಪಡೆದು ಪರಿವಾರದೊಂದಿಗೆ ಸಾರ್ವಜನಿಕರ ಖರ್ಚಿನಲ್ಲಿ ಭಾರತವನ್ನೆಲ್ಲ ಸುತ್ತಿಬರಬಹುದಾಗಿದೆ. ಊರಿನಿಂದ ಕದಲದೆ ಕಾಶ್ಮೀರ್ ಸಿಕ್ಕಿಮ್, ಆಸಾಮಗಳಿಗೆ ಹೋಗಿಬಂದ ರಶೀದಿ ಹಾಜರುಪಡಿಸಿ ಎರಡರಿಂದ-ಹತ್ತು ಸಾವಿರ ಗಿಟ್ಟಿಸಿ

ವುಜವಾಡುವವರಿಗೂ ಕೊರತೆಯಿಲ್ಲ. ಮಹಿಳಾ ನೌಕರರಿಗಂತೂ ಭ್ರೂಣಪಾತ ಮಾಡಿಸಿಕೊಳ್ಳುವುದು (ಅರ್ಧ ಹೆರಿಗೆ ರಜೆ) ಒಂದು ವರದಾನ ವಿದ್ದಂತೆ. ಅದಕ್ಕೆ ಸರಕಾರಿ ಪರಿಮಿತಿಯಿಲ್ಲ. ಕೇವಲ ಒಂದೂವರೆ ವರ್ಷದಲ್ಲಿ ಮೂರುಬಾರಿ ಈ ರಜೆ ಪಡೆದು ಪೂರ್ಣ ಸಂಬಳ ಹೊಂದಿದವರಿದ್ದಾರೆ. ಹಣಕ್ಕಾಗಿ ಅನುಕೂಲಕಾರಿ ಪ್ರಮಾಣಪತ್ರ ಕೊಡುವ ಡಾಕ್ಟರರು ಇರುವಾಗ ಸವಲತ್ತುಗಳನ್ನು ಬಳಸಿಕೊಳ್ಳದವರು ಮೂರ್ಖರೆನಿಸಿಕೊಳ್ಳುವರು. ಅವಿವಾಹಿತೆಯರಿಗೂ ಈ ಸವಲತ್ತು ಬೇಕೆಂಬ ಬೇಡಿಕೆಯಿಂದ ಸರಕಾರ ಹೌಹಾರುವಂತಾಗಿದೆ.

ಮೂವತ್ತು ವರ್ಷಗಳ ದೀರ್ಘ ನೌಕರಿಯ ನಂತರ ಅಯೋಗ್ಯರು ಲಂಚಕೋರರೆನಿಸಿಕೊಂಡವರಿಗೆ ಕೆಲಸದಿಂದ ವಜಾಮಾಡಲು ಸರಕಾರಕ್ಕೆ ಅಧಿಕಾರವಿದೆ ಎಂದು ಉಚ್ಚನ್ಯಾಯಾಲಯ ತೀರ್ಪನ್ನಿತ್ತಾಗ ಪ್ರತಿಭಟಿಸಿ ದೇಶದಾದ್ಯಂತ ಚಳವಳಿ ಮಾಡಿದ್ದರಿಂದ ಸರಕಾರಿ ನೌಕರರೆಲ್ಲ ಎಷ್ಟೊಂದು ಬೆಚ್ಚಗೆ ಮಲಗಿ ಗೊರಕೆ ಹೊಡೆಯಬಹುದಾಗಿದೆ ಎಂಬ ಕಲ್ಪನೆ ಬರುವಂತಿದೆ. ಒಮ್ಮೆ ನೌಕರಿಗೆ ಸೇರಿಕೊಂಡ ನಂತರ ಕಾಲಕಾಲಕ್ಕೆ ತುಟ್ಟಿಭತ್ತೆ, ನಾನಾ ಸವಲತ್ತುಗಳನ್ನು ಕೊಡುತ್ತ ನಿವೃತ್ತರಾಗುವವರ ಸೇವೆ ನಂತರ ಜನತೆಗೆ ಅವಶ್ಯವೆಂಬ ನೆಪದ ಮೇಲೆ ಇನ್ನಷ್ಟು ಕಾಲ ಸೇವೆಯಲ್ಲಿರುವಂತೆ ನೋಡಿಕೊಳ್ಳುವದು ಸರಕಾರದ ಧರ್ಮ. ಈ ಅವಧಿಯಲ್ಲಿ ಎಂಥ ಅಪರಾಧಗಳಿಗೂ ಶಿಕ್ಷಿಸುವಂತಿಲ್ಲ. ಗಂಭೀರ ಆಪಾದನೆಗಳಿದ್ದರೂ ಅಮಾನತ್ತು ಹೊಂದಿ ವೇತನ ಪಡೆಯುವ ಸೌಕರ್ಯವಿದೆ. ಆದರೆ ಇದೆಲ್ಲ ನೌಕರದಾರನು ನಿರಪರಾಧಿಯಿದ್ದುದರಿಂದ ಎಂದೇನೂ ಅಲ್ಲ. ಅವನು ವಿಶಿಷ್ಟ ಕೋಮು ಅಥವಾ ಗುಂಪಿಗೆ ಸೇರಿದವನೆಂದೋ ರಾಜಕೀಯ ಬೆಂಬಲ ಇರುವವನೆಂದೋ ಇಲ್ಲವೇ ಕುಟುಂಬದವರೆಲ್ಲ ನಿರ್ಗತಿಕರಾಗುತ್ತಾರೆಂಬ ನೆಪದ ಮೇಲೆ. ಅಂತೆಯೇ ಆಫೀಸಿನಲ್ಲಿ ಸತತವಾಗಿ ಕಳವು ಮಾಡುತ್ತಿರುವವರು, ಅನೈತಿಕ ವ್ಯವಹಾರದಲ್ಲಿ ತೊಡಗಿದವರು ಮೇಲಧಿಕಾರಿಗಳ ಮೇಲೆ ಕೈಮಾಡಿದವರೆಲ್ಲ ತಮ್ಮ ಕಳ್ಳ ವೃತ್ತಿಗಳನ್ನು ಮುಂದುವರಿಸಿಕೊಂಡು ಹೋಗಲು ಅನುಕೂಲವಾಗಿದೆ.

ನಮ್ಮ ಕಾರ್ಮಿಕವರ್ಗ, ಬಿಳಿ ಆನೆಗಳನ್ನು ಸಾಕಿದಂತೆ. ರಾಜ್ಯ ಮತ್ತು ರಾಷ್ಟ್ರೀಯ ಉದ್ದಿಮೆಗಳು ಸತತವಾಗಿ ಹಾನಿಗೊಳಗಾಗಲು ಈ ವರ್ಗದ ಕೊಡುಗೆ ಅಪಾರ. ಪಾಶ್ಚಾತ್ಯ ಕಾರ್ಮಿಕರಿಗೆ ಹೋಲಿಸಿದಾಗ ಅವರ ಸಂಬಳ ಅತ್ಯಲ್ಪವೆಂದು ಅನಿಸಿದರೂ ಸರಕಾರಿ ವಲಯದಲ್ಲಿ ಅವರು ಉತ್ಪಾದನೆಗೆ ನೀಡುವ ಸಹಾಯ, ಸಹಕಾರ, ದುಡಿಮೆಗಳನ್ನು ಪರಿಗಣಿಸಿದರೆ, ಇವರದು ವಿಶ್ವದಲ್ಲಿಯೇ ದುಬಾರಿ ವೇತನವೆನಿಸಿದರೆ ಆಶ್ಚರ್ಯವಿಲ್ಲ. ವಿವಿಧ ಸಂಘಗಳನ್ನು ಕಟ್ಟಿಕೊಂಡು ಆಡಳಿತ ಅಧಿಕಾರಿಗಳೊಡನೆ ಹೋರಾಡುವದೊಂದೇ ಅವರ ಗುರಿ ಎಂಬಂತೆ ನಡೆದುಕೊಳ್ಳುತ್ತಾರೆ. ಕೋಟಿಗಟ್ಟಲೆ ರೂಪಾಯಿಯ ಬಂಡವಾಳ ತೊಡಗಿಸಿದ ಕಾರಖಾನೆಗಳಿಂದ ರಾಷ್ಟ್ರದ ಮುನ್ನಡೆಗಾಗಲಿ, ಉಳಿತಾಯಕ್ಕಾಗಲಿ ಆಗುವ ಲಾಭವೇನೂ ಇಲ್ಲ. ಕಾರ್ಮಿಕರ ಮುಖಂಡರಾದವರು ತಮ್ಮ ಸ್ವಾರ್ಥಸಾಧನೆಗಾಗಿ ಸಹೋದ್ಯೋಗಿಗಳಿಗೆ ಯಾವದೇ ರೀತಿಯ ಲಾಭವಾಗುವಂತೆ ಇಲ್ಲದಿದ್ದರೂ, ಉತ್ಪಾದನೆಯಲ್ಲಿ ಹೆಚ್ಚಳವಾಗಲಾರದಾದರೂ, ಕಾರ್ಮಿಕರಿಗೆ ಸುಳ್ಳು ಭರವಸೆ ನೀಡಿ, ಮುಷ್ಕರ ಹೂಡುವಂತೆ ಪ್ರೇರೇಪಿಸುತ್ತಾರೆ. ಸಂಬಳ ಪಡೆಯುವ ಸಂಸ್ಥೆಗಾಗಿ ಮನಸ್ಸುಗೊಟ್ಟು ದುಡಿಯದಿದ್ದರೂ ಧಾರಾಳವಾಗಿ ಅಡೆ-ತಡೆಗಳನ್ನು ತಂದೊಡ್ಡುವ ತಮ್ಮ ಸಾಮರ್ಥ್ಯ ಬಲದಿಂದಲೇ ಸಕಲ ಸೌಕರ್ಯಗಳ ಜೊತೆಗೆ ಬಡತಿಯನ್ನು ಪಡೆಯುತ್ತಾರೆ.

ಮಹಾರಾಷ್ಟ್ರ ಜವಳಿ ಗಿರಣಿಗಳ ಕಾಮಗಾರರ ದೀರ್ಘ ಸಂಪು, ಮೈಸೂರಿನ ಕೆ.ಆರ್.ಮಿಲ್ ಕೆಲಸಗಾರರ ಮುಷ್ಕರಗಳಿಂದ ಯಾರಿಗೂ ಯಾವ ಲಾಭವಾಗದಿದ್ದರೂ ಬೃಹತ್ ಪ್ರಮಾಣದ ಹಾನಿಯಾಗಿದೆ ಎಂಬುದು ಸರ್ವವಿದಿತ. ಜಾಗತಿಕ ಕಾರ್ಮಿಕ ನಾಯಕ ಭಾರತಕ್ಕೆ ಆಗಮಿಸಿದಾಗ 'ವಿಶ್ವ ಕಾರ್ಮಿಕ ಸಮ್ಮೇಳನಕ್ಕೆ ಆಗಮಿಸುವ ನಾಯಕರು ತಮ್ಮ ಜೀವನದಲ್ಲಿ ಒಂದು ದಿನವಾದರೂ ಕಾರ್ಮಿಕನ ಕೆಲಸ ಮಾಡಿದಂತೆ ಅನಿಸುವದಿಲ್ಲವಲ್ಲ!' ಎಂದು ಉದ್ಗರಿಸಿದ್ದರು. ಇಂಥವರಿಂದ ಯಾರ ಉದ್ಧಾರವಾದೀತು?

ಖಾಸಗೀ ವಲಯ ದಕ್ಷತೆಯಿಂದ ಕಾರ್ಯನಿರ್ವಹಣೆ ಮಾಡುತ್ತದೇನೋ ನಿಜ. ಆದರೆ ಗಳಿಕೆಯ ಸಿಂಹಪಾಲು ಮುಖ್ಯಸ್ಥರ ಕುಟುಂಬಕ್ಕೆ ಮತ್ತು ಪ್ರಭಾವವಲಯಕ್ಕೆ ಸೇರುವ ಏರ್ಪಾಡು ಮಾಡಿಕೊಂಡಿರುತ್ತಾರೆ. ಆದಾಯಕರ, ಮಾರಾಟಕರ, ಪ್ರವೇಶಕರ, ಆಯಾತ ಕರಗಳನ್ನು ತುಂಬುವಾಗ ಕಪಟ-ವಂಚನೆಗಳ ಪ್ರಕರಣಗಳೇ ಜಾಸ್ತಿ. ಈ ಮುಚ್ಚುಮರೆಯಿಂದಾಗಿ ಉದ್ದಿಮೆದಾರ ಮನೆತನಗಳೆಲ್ಲ ಬಲುಬೇಗ ಆಗರ್ಭಶ್ರೀಮಂತರಾಗಿಬಿಡುತ್ತವೆ. ಆದರೆ ಅವರ ಲಾಭದ ಹಣ ಕಾರ್ಮಿಕರ, ಪ್ರಜೆಗಳ, ದೇಶದ ಹಿತಕ್ಕೆ ಬಳಕೆಯಾಗದೇ ಸ್ವಂತದ ಐಷಾರಾಮಕ್ಕೆ ಹೋಗುತ್ತದೆ! ಹೀಗಾಗಿ ಹಣವಂತರ ಹೊಸದೊಂದು ಸಮಾಜವೇ ನಿರ್ಮಾಣವಾಗುತ್ತದೆ. ಅವರ ಜೀವನ ಇನ್ನಿತರ ಭಾರತೀಯರಿಗಿಂತ ತೀರ ಭಿನ್ನವಾಗಿರುತ್ತದೆ. ಈ ಮೇಲ್ಪಂಕ್ತಿಯನ್ನು ಅನುಸರಿಸಿ ಚಿಕ್ಕಪುಟ್ಟ ವ್ಯಾಪಾರಿಗಳು ಅಲ್ಪ ಸಮಯದಲ್ಲಿ ಧನಿಕರಾಗುವ ಕನಸು ಕಾಣುತ್ತಿರುತ್ತಾರೆ. ಅಂತೆಯೇ ಕಲಬೆರಕೆಯ ಸಾಮಾನು ಮಾಡುವಲ್ಲಿ, ಜೀನುಸುಗಳ ಬೆಲೆ ಗಗನಕ್ಕೇರಿಸುವದರಲ್ಲಿ, ಹಿಂದೆ ಮುಂದೆ ನೋಡುವದಿಲ್ಲ.

ಮೇಲಿನ ಯಾವ ವರ್ಗಕ್ಕೂ ಸೇರದವನು ಶ್ರೀಸಾಮಾನ್ಯ. ಆತನ ಸಮಾಜ ದಿನವಿಡೀ ದುಡಿದರೂ ಉದರ ನಿರ್ವಹಣೆ ತೀರ ಕಷ್ಟದಾಯಕವಾಗಿ ಪರಿಣಮಿಸಿದೆ. ಜೀವನ ಮಟ್ಟ ಏರುವ ಯಾವ ಉಪಾಯವೂ ಅವರಿಗೆ ಎಟಕುವದಿಲ್ಲ. ಅವರಿಗೆ ಸಾದಾ-ಸರಳ ಆದರೆ ಆರೋಗ್ಯಕರ ಜೀವನ ಎಟಕುವಂತೆ ಉತ್ಪನ್ನದಲ್ಲಿ ಹೆಚ್ಚಳ ಮಾಡಿ, ಸಾಮಗ್ರಿಗಳ ಬೆಲೆ ಅಂಕಿತದಲ್ಲಿಡುವ ಬದಲಾಗಿ ಸರಕಾರ ಅವರಿಗಾಗಿ ಪುಕ್ಕಟೆ ತಾಳಿ, ಅಗ್ಗದ ಬಟ್ಟೆಬರೆ, ಪಠ್ಯಪುಸ್ತಕ, ಮಾಸಾಶನ ಕೊಡಲು ಮುಂದೆ ಬಂದಿದೆ. ಇದರಿಂದ ಈ ವರ್ಗದ ಕ್ರಿಯಾಶೀಲತೆ ಕುಂಠಿತವಾಗುವದಲ್ಲದೇ ಬೇರೇನೂ ಸಾಧಿಸಿದಂತೆ ಆಗುವದಿಲ್ಲ. ನಮ್ಮ ಈ ಅಸ್ತವ್ಯಸ್ತ ವ್ಯವಸ್ಥೆಯಿಂದಾಗಿ ರೋಸಿಹೋದ, ಭವಿಷ್ಯ ಕಾಣದ ಯುವಪೀಳಿಗೆಯವರು ತನ್ನ ದುಡಿಮೆ, ಬುದ್ಧಿಶಕ್ತಿಗಳನ್ನು ವರೆಗಲ್ಲಿಗೆ ಹಚ್ಚಿಸಲು ಅವಕಾಶಗಳಿರುವ ಪಾಶ್ಚಾತ್ಯ ದೇಶಗಳಿಗೆ ಹೆಚ್ಚೆಚ್ಚು ಸಂಖ್ಯೆಯಲ್ಲಿ ವಲಸೆ ಹೋಗುತ್ತಿದ್ದಾರೆ. ತಮ ಸಾಕುತಾಯಿ, ಭಾರತ ಮಾತೆಗಿಂತ ನೂರು ಪಾಲು ಮೇಲು! ಎಂದು ಅನಿಸುವಂತಾದರೆ ಅದಕ್ಕೆ ಹೊಣೆ ಯಾರು?

ಬತ್ತಿದ ಭೂಮಿ

ನಾವು, ಉತ್ತರ ಕನ್ನಡ ಜಿಲ್ಲಾ ನಿವಾಸಿಗಳು ಎತ್ತ ಸಾಗಿದ್ದೇವೆ, ಎಂದು ಧೀಮಂತರೆಲ್ಲ ಆತಂಕಪಡಬೇಕಾದ ಸಂದಿಗ್ಧ ಕಾಲ ಬಂದಿದೆ. ಒಂದು ಕಾಲದಲ್ಲಿ ದೇಶದಂತೆ ನಮ್ಮದೂ ಉಜ್ವಲವಾದ ನಾಡಾಗಿತ್ತು. ಬನವಾಸಿ ನಾಡಿನ ಬಗೆಗೆ ಪಂಪಮಹಾಕವಿಯ ಉದ್ಗಾರ ಮನೆಮಾತಾಗಿದೆ. ಬೆಟ್ಟಗಳಲ್ಲೂ ಉದ್ಯಾನವನಗಳಲ್ಲೂ ಸೊಗಸಾಗಿ ಫಲಬಿಟ್ಟ ಮಾವಿನ ಮರಗಳು, ದಟ್ಟವಾಗಿ ಸೇರಿಕೊಂಡ ವೀಳ್ಯದೆಲೆ ಬಳ್ಳಿಗಳು, ಸದಾ ಹೂಬಿಡುವ ಗಿಡಗಳು ಇರುವ ನಾಡಿನ ಜನ ತ್ಯಾಗ, ಭೋಗ, ವಿದ್ಯೆ, ಸಂಗೀತಗಳಲ್ಲಿ ಮಿಗಿಲಾದವರು ಇದ್ದರು. ಹೆಚ್ಚಿನ ದೇಶಸಂಚಾರ ಕೈಕೊಂಡು ಬಂದ ಆದಿಕವಿಯನ್ನು ಮೋಹಿಸಿ ಈ ಪ್ರದೇಶ, ನೂರು ವರ್ಷಗಳ ತರುವಾಯ ದೂರದ ಕಾಶ್ಮೀರದಿಂದ ಕನ್ನಡ ನಾಡಿಗೆ ಬಂದು ಚಾಲುಕ್ಯ ಆರನೇ ವಿಕ್ರಮಾದಿತ್ಯನ ಆಸ್ಥಾನ ಕವಿಯಾಗಿದ್ದ ಬಿಲ್ಹಣ ಮಹಾಕವಿಯೂ ಬನವಾಸಿ ನಾಡಿನ ನೈಸರ್ಗಿಕ ಸಂಪತ್ತನ್ನು ಮನತುಂಬಿ ವರ್ಣಿಸಿದ್ದಾನೆ. ೧೪ನೆಯ ಶತಮಾನದಲ್ಲಿ ಭಾರತವೆಲ್ಲ ಸಂಚರಿಸಿದ ಅರಬ್ ಪ್ರವಾಸಿ ಇಬ್ನಬತೂತನೂ ಅಂದಿನ ಹೊನ್ನಾವರದ ಸುಖಸೌಲಭ್ಯಗಳನ್ನು, ವನಸಿರಿಯನ್ನು ಬಣ್ಣಿಸುವದರ ಜೊತೆಗೆ ದಕ್ಷಿಣಕ್ಕೆ ಹೋಗುವ ರಾಜಮಾರ್ಗಗಳಲ್ಲಿದ್ದ ಪ್ರವಾಸ ಸೌಕರ್ಯಗಳನ್ನು ಬರೆದಿಟ್ಟಿದ್ದಾನೆ. ಹೊನ್ನಾವರ ಒಂದರಲ್ಲೆ ೨೩ ಶಾಲೆಗಳು ಹುಡುಗರಿಗೆ, ೧೩ ಶಾಲೆಗಳು ಹುಡುಗಿಯರ ಸಲುವಾಗಿ ಇದ್ದವೆಂದ ಮೇಲೆ ಆ ಕಾಲದ (ಮುಸ್ಲಿಂ) ಶಿಕ್ಷಣ ಪ್ರಸಾರದ ಕಲ್ಪನೆ ಬರುವದು. ಇಂಥ ಶಾಲೆಗಳನ್ನು ತಾನೆಲ್ಲೂ ಕಂಡಿರಲಿಲ್ಲವೆಂದು ಇಬ್ನಬತೂತ ಉದ್ಗರಿಸಿದ್ದಾನೆ. ಆಫ್ರಿಕದ ಟ್ಯಾಂಜಿಯರದಲ್ಲಿ ಹುಟ್ಟಿದ ಇಬ್ನಬತೂತ, ಅಂದಿನ ಮಧ್ಯಪ್ರಾಚ್ಯ ಹಾಗೂ ಪೂರ್ವದ ಹಲವಾರು ದೇಶಗಳನ್ನು ಸುತ್ತಿದವನಿದ್ದ.

ವಿಜಯನಗರ ಕಾಲದಲ್ಲಿ ಭಟಕಳ, ಅಂತರ್‌ರಾಷ್ಟ್ರೀಯ ಬಂದರವಾಗಿ, ಸಾಮ್ರಾಜ್ಯಕ್ಕೆ ಬೇಕಾಗುವ ಕುದುರೆಗಳು, ತೋಪು ಇನ್ನಿತರ ಯುದ್ಧಸಾಮಗ್ರಿ, ಚೀನದ ರೇಶ್ಮೆ ಇತ್ಯಾದಿ ವಾಣಿಜ್ಯ ವಸ್ತುಗಳ ಆಯಾತ, ದೇಶೀ ವಸ್ತುಗಳ ನಿರ್ಯಾತದ ಊರಾಗಿ ಮೆರೆಯಿತು. ಶತಕಗಳಿಂದ ಬ್ರಿಟಿಶರು ತಳವೂರಿದ ಮೊದಲ ದಿನಗಳ ತನಕ ನಮ್ಮ ಜಿಲ್ಲೆ ಅಕ್ಕಿಯನ್ನು ದೊಡ್ಡ ಪ್ರಮಾಣದಲ್ಲಿ ನಿರ್ಯಾತ ಮಾಡುತ್ತಲಿದ್ದಿತು. ಇ.ಸ. ೧೮೬೧ ರ ತನಕ ದಕ್ಷಿಣ ಉತ್ತರ ಕನ್ನಡ ಜಿಲ್ಲೆಗಳು ಒಂದೇ ಭೌಗೋಲಿಕ ವಿಭಾಗವಾಗಿದ್ದವು. ದಕ್ಷಿಣ ಜಿಲ್ಲೆಯನ್ನು ಮದರಾಸಿಗೂ, ಉತ್ತರ ಕನ್ನಡವನ್ನು ಮುಂಬಯಿ ಇಲಾಖೆಗೂ ಹಂಚಿದಾಗ ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಪಾತಳಿಗಳಲ್ಲಿ ಇವೆರಡೂ ಒಂದೇ ಸಮನಾಗಿದ್ದವು. ಆದರೆ ಇಂದು ಆಕಾಶ-ಪಾತಾಳಗಳಷ್ಟು ಅಂತರ! ಕೆನರಾ, ಸಿಂಡಿಕೇಟ, ವಿಜಯ, ಕಾರ್ಪೋರೇಶನ ಬ್ಯಾಂಕುಗಳು ಹುಟ್ಟಿ ಹೆಮ್ಮರವಾಗಿ ಹೊಮ್ಮಿದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ. ನಮ್ಮ ಜಿಲ್ಲೆಯಲ್ಲಿ ಒಂದಾದರೂ ಇಂತಹ ಬ್ಯಾಂಕು ಹುಟ್ಟಿ ಏಕೆ ಬೆಳೆಯಲಿಲ್ಲ? ವಿಸ್ತರಣೆ ಹೊಂದುಬಹುದಾಗಿದ್ದ ಒಂದೇ ಒಂದು "ರೂರಲ್ ಬ್ಯಾಂಕು" ದಿವಾಳಿ ತೆಗೆಯಿತು. ಬಡವರದೇ ಬಂಡವಳಾಗಿ ರೂಪಗೊಂಡ ಈ ಬ್ಯಾಂಕು ಮಣ್ಣುಮುಕ್ಕಿದಾಗ ತಲ್ಲಣಗೊಂಡ ಕುಟುಂಬಗಳು ಅದೆಷ್ಟೋ! ದಕ್ಷಿಣ ಕನ್ನಡ ವೈದ್ಯಕೀಯ ಕಾಲೇಜು, ಇಂಜಿನಿಯರಿಂಗ್ ಕಾಲೇಜು,

ಇನ್ನಿತರ ಸಂಸ್ಥೆಗಳು ಸ್ಥಳೀಯರ ಪ್ರಯತ್ನದಿಂದಲೇ ಸಾಂಸ್ಕೃತಿಕ, ಆರ್ಥಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿದೆ. ಈ ಪ್ರಗತಿಗೆ ಕಾರಣ ಸರಕಾರವಾಗಲೀ, ಹೊರಗಿನವರಾಗಲಿ ಅಲ್ಲ. ಧರ್ಮಸ್ಥಳ ಧಾರ್ಮಿಕ ಕೇಂದ್ರದ ಮುಖ್ಯಸ್ಥರಾದ ವೀರೇಂದ್ರ ಹೆಗ್ಗಡೆಯವರು ಧರ್ಮವೆಂಬುದು ಧನಿಕರ ಸೊತ್ತು ಎಂದು ನಂಬಿದವರಲ್ಲವಾದ್ದರಿಂದ ಅನೇಕ ಶಿಕ್ಷಣ ಸಂಸ್ಥೆಗಳನ್ನು ನಡೆಸುವದರ ಜೊತೆಗೆ ಸಾಮೂಹಿಕ ವಿವಾಹಾದಿಗಳನ್ನು ಏರ್ಪಡಿಸಿ ಬಡಬಗ್ಗರಿಗೆ ಹೆಚ್ಚಿನ ಸಹಾಯ ಮಾಡುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲೂ ಧರ್ಮಸ್ಥಳದ ವಿದ್ಯಾಸಂಸ್ಥೆಗಳಿವೆ. ಜಿಲ್ಲೆಯಲ್ಲಿ ಗೋಕರ್ಣದಂತಹ ಪ್ರಸಿದ್ಧ ಯಾತ್ರಾಸ್ಥಳವಿದೆ. ಆದರೆ ಶಿಕ್ಷಣ, ಸಂಸ್ಕೃತಿ ಪ್ರಚಾರ ಹೋಗಲಿ, ದೇವದರ್ಶನಕ್ಕೆ ಬಂದ ಯಾತ್ರಿಕರನ್ನೇ ಹಣದಾಸೆಗೆ ಬಲಿಗೊಟ್ಟ ಉದಾಹರಣೆಗಳು ಹಿಂದೆ ಕಂಡುಬಂದಿವೆ.

ಕಾರವಾರ, ಮಂಗಳೂರಿಗಿಂತ ಅನುಕೂಲವಾದ ನೈಸರ್ಗಿಕ ಬಂದರವಾದರೂ, ದಕ್ಷಿಣ ಕನ್ನಡದವರ ವಿಶೇಷ ಪ್ರಯತ್ನದಿಂದಾಗಿ ಮಂಗಳೂರು ಅಭಿವೃದ್ಧಿ ಪಡೆಯಿತು. ಹೊನ್ನಾವರ ಮಲ್ಪೆಯಷ್ಟೇ ಮೀನುಗಾರಿಕೆಗೆ ಅನುಕೂಲವಾದರೂ ಮಲ್ಪೆಯ ಸೌಲಭ್ಯಗಳು ಹೊನ್ನಾವರಕ್ಕೆ ಲಭಿಸಲು ಇನ್ನೆಷ್ಟು ದಶಕಗಳು ಬೇಕೋ! ಮಂಗಳೂರನ್ನು ಬ್ರಾಡಗೇಜ ರೇಲ್ವೆಯ ಮೂಲಕ ತ್ರಿವೇಂದ್ರಮ್‌ದಿಂದ ದಿಲ್ಲಿಯವರೆಗೆ ಜೋಡಿಸಿದರೆ, ನಮ್ಮ ಜಿಲ್ಲೆಗೆ ರೇಲ್ವೆಯೇ ಇಲ್ಲ! ಹಾಸನ ಮಾರ್ಗವಾಗಿ ಮಂಗಳೂರನ್ನು ಬೆಂಗಳೂರಿಗೆ ಜೋಡಿಸಿದ್ದಲ್ಲದೇ ಬೆಂಗಳೂರು-ಮುಂಬಯಿಗಳಿಗೆ ವಿಮಾನ ಸಂಪರ್ಕವೂ ಇದೆ. ಕುದುರೆಮುಖದ ಬೃಹದ್ ಯೋಜನೆಯಿಂದಾಗಿ ವ್ಯಾಪಾರ-ಉದ್ಯೋಗಗಳು, ಜೀವನ ಮಟ್ಟ ಬೆಳೆದು ಜನವಸತಿಯೂ ಬೆಳೆಯುತ್ತಿದೆ. ನಮ್ಮವರು ಹೊಟ್ಟೆಪಾಡಿಗೆ ವಲಸೆ ಹೋಗಿ, ಜನಸಂಖ್ಯೆ ಕುಗ್ಗುತ್ತಿದ್ದರೂ, ಬೊಬ್ಬಿಡಲಾರದಷ್ಟು ನಮ್ಮ ಧ್ವನಿ ಕ್ಷೀಣವಾಗಿದೆ. ಯಾಕೆ?

ಮಲೆನಾಡಿನಲ್ಲಿ ಸಮಾವೇಶವಾಗುವ ನಮ್ಮ ಜಿಲ್ಲೆಯಲ್ಲಿ ಸೃಷ್ಟಿ ಸೌಂದರ್ಯಕ್ಕೆ ಏನೇನೂ ಕೊರತೆಯಿಲ್ಲ. ಅಬ್ಬರಿಸುವ ತಡಸಲು, ಭೋರ್ಗರೆಯುವ ಕಡಲು, ಜುಳುಜುಳು ಹರಿಯುವ ನದಿಗಳು, ಸೈನಿಕ ಶಿಸ್ತಿನಿಂದ ನಿಂತ ಬೆಟ್ಟಗಳು, ಗಿರಿಕಂದರಗಳು, ಹಚ್ಚ ಹಸುರಾದ ಕಾಡು, ಹಣ್ಣು-ಹಂಪಲುಗಳ ತೋರಣ ಹೊತ್ತುನಿಂತ ಗಿಡಬಳ್ಳಿಗಳು, ಹಾಡುತ್ತ ಹಾರುತ್ತ ನಲಿಯುವ ಹಕ್ಕಿಗಳು, ಚೀರುತ್ತ, ಗರ್ಜಿಸುತ್ತ ಅಲೆಯುವ ಪ್ರಾಣಿಗಳೆಲ್ಲ ಇವೆ! ಇವೆಲ್ಲ ಸ್ಫೂರ್ತಿಯ ಸೆಲೆಗಳಿದ್ದರೂ, ಕುವೆಂಪು, ಬೇಂದ್ರೆಯವರಂತಹ ಮಹಾಕವಿಗಳು ನಮ್ಮಲ್ಲೇಕೆ ಇಲ್ಲ? ಹವ್ಯಕರ ಅತಿಥ್ಯ, ಕೊಂಕಣಿಗರ ವ್ಯಾಪಾರ-ವ್ಯವಹಾರ ಕುಶಲತೆ, ಸೇರುಗಾರರ ಶೌರ್ಯ, ನಾಡವರ ದೇಶಭಕ್ತಿ, ಸಾರಸ್ವತರ ಬುದ್ಧಿಮತ್ತೆ, ಹಾಲಕ್ಕಿಗಳ ಕಲಾತ್ಮಕತೆ, ಕಷ್ಟಕಾರ್ಪಣ್ಯ ಅನುಭವಿಸಲಿಕ್ಕೇ ಹುಟ್ಟಿಬಂದಂತಿದ್ದ ಖಾರ್ವಿ-ಆಗೇರ, ದಾರ್ಜಿಗಳು ನಮ್ಮಲ್ಲಿದ್ದರೂ, ಈ ಜನಾಂಗಗಳ ವೈವಿಧ್ಯಮಯ ಜೀವನ ಆಧರಿಸಿ ಶ್ರೇಷ್ಠ ಕಥೆ-ಕಾದಂಬರಿಗಳನ್ನು ಬರೆಯಬಲ್ಲ ಕಾರಂತ, ಭೈರಪ್ಪರಂತಹ ಮೇಧಾವಿಗಳು ನಮ್ಮಲ್ಲೇಕೆ ಬೆಳೆಯುತ್ತಿಲ್ಲ?

ಹೆಮ್ಮರಗಳನ್ನು ಹೊತ್ತು ನಿಂತ ದಟ್ಟ ಕಾಡುಗಳು ನಮ್ಮಲ್ಲಿದ್ದರೂ, ಅವನ್ನವಲಂಬಿಸಿದ ಪೋಷಕ ಉದ್ದಿಮೆಗಳು ಇಲ್ಲ. ಪ್ರತಿವರ್ಷ ಕೋಟ್ಯಂತರ ರೂಪಾಯಿ ಬೆಲೆಬಾಳುವ ಮರಗಳನ್ನು ಕಡಿವಿದರೂ ಅದರಲ್ಲಿ ನಮ್ಮವರ ಹಿತಕ್ಕಾಗಿ ಬಳಸುವದು ಅತ್ಯಲ್ಪ. ಜಿಲ್ಲೆಯ ಏಕಮಾತ್ರ ಕಾಗದದ

ಕಾರಖಾನೆ ನಡೆಸುವವರು ನಾವಲ್ಲ! ದೂರದ ರಾಜ್ಯದಿಂದ ಬಂದವರ ಬೊಕ್ಕಸ ತುಂಬಲು ಕಾಸಿಗೆ ಪಂಚೇರಿನಂತೆ ನಮ್ಮ ಬಿದುರು ಪೂರೈಕೆಯಾಗುತ್ತಿರುವದು ನ್ಯಾಯವೇ? ಮರವೊಂದರ ಉತ್ತಮ ಬೆಳವಣಿಗೆಗೆ ಒಂದು ಶತಮಾನ ಪೂರ್ತಿ ಕಾಲಾವಧಿ ಬೇಕಾಗಿರುವಾಗ ಅದರ ಲಾಭ ಬೇರೊಬ್ಬರು ದೋಚಿಕೊಂಡು ಹೋಗುವಾಗ ನಾವೇಕೆ ಪೆದ್ದರಂತೆ ಕೈಕಟ್ಟಿ ನೋಡುತ್ತ ನಿಲ್ಲಬೇಕು? ಸಾಗವಾನಿ, ಸಾಲ, ನಂದಿ, ಮತ್ತಿಗಳಂತಹ ಉತ್ತಮ ಇಮಾರತಿ ಕಟ್ಟಿಗೆ ಬೆಳೆಯುವ ಕಾಡಿನಲ್ಲಿ ನೀಲಗಿರಿ ಕಾನನ ಬೆಳೆಯುವದು ಯಾರ ಕಲ್ಯಾಣಕ್ಕಾಗಿ? ಈ ಪರಿವರ್ತನೆಯಿಂದ ದೀರ್ಘಕಾಲದಲ್ಲಿ ಭೂಮಿಗೆ ಆಗುವ ಹಾನಿಯು ಬಗ್ಗೆ ಯಾರಾದರೂ ತಲೆಕೆಡಿಸಿಕೊಂಡರೇ? ಯಾವ ಮುಂದಾಲೋಚನೆ ಇಲ್ಲದೇ ಕಾಡು ಕಡಿಯಲು ಬಿಟ್ಟಿದ್ದರಿಂದ ನಮ್ಮವರಿಗೆ ರೇಶನ್ ಕಾರ್ಡಿನ ಮೇಲೆ ಉರುವಲ ಕಟ್ಟಿಗೆ ಪೂರೈಸುವ ಸ್ಥಿತಿ ಬಂದಿದೆಯಲ್ಲವೇ? ಬಯಲುನಾಡಿನ ನಿವಾಸಿಗಳು ಅದು ಹೇಗೋ ಈ ದುಃಸ್ಥಿತಿಯಿಂದ ತಪ್ಪಿಸಿಕೊಂಡಿದ್ದಾರೆ!

ಕಾಳಿ, ಶರಾವತಿಯಂತಹ ಬೃಹದ್ ವಿದ್ಯುತ್ ಯೋಜನೆಗಳು ನಮ್ಮ ಜಿಲ್ಲೆಗೇ ಮೀಸಲು. ಆದರೆ ಅವುಗಳಲ್ಲಿ ಉತ್ಪತ್ತಿಯಾಗುವ ವಿದ್ಯುತ್ತಿನ ಎಷ್ಟುಪಾಲು ನಮ್ಮ ಅಭ್ಯುದಯಕ್ಕಾಗಿ ಬಳಸಲಾಗುತ್ತಿದೆ? ರಾಜಧಾನಿಯ ನೂರಾರು ಕಾರ್ಖಾನೆಗಳು ಉಸಿರಾಡುತ್ತಿರುವದು ಜಿಲ್ಲೆಯ ವಿದ್ಯುತ್ತಿನ ಮೇಲೆ. ಇವುಗಳಲ್ಲಿ ಶೇಕಡಾ ಹತ್ತರಷ್ಟಾದರೂ ಉದ್ದಿಮೆಗಳು ನಮ್ಮ ಜಿಲ್ಲೆಯಲ್ಲಿ ಸ್ಥಾಪಿಸುವಂತಾಗಿದ್ದರೆ! ನಾವು ಕಟ್ಟಿಗೆ ಕೊರೆದೋ, ಹಂಚನ್ನು ತಯಾರಿಸಿಯೋ ಅಲ್ಪ ತೃಪ್ತಿ ತಾಳುವಂತಾಗಿದೆ. ಕಾರವಾರದ ಸೋಡಾ ಏಶ್ ಕಾರಖಾನೆ, ಕಾಗದ ಕಾರಖಾನೆಯ ಮೇಲ್ಪಂಕ್ತಿ ಅನುಸರಿಸುತ್ತದೆ ಎಂದು ಗಮನಿಸಬೇಕಾಗದ ಮಾತು. ಇಷ್ಟೂ ಸಾಲದೆಂದು ಇನ್ನೂ ಅಧಿಕ ಪ್ರಮಾಣದ ವಿದ್ಯುತ್ ಯೋಜನೆಯನ್ನು ನಮ್ಮ ಜಿಲ್ಲೆಗೇ ಮಂಜೂರು ಮಾಡಿದ್ದಾರೆ. ಈ ಔದಾರ್ಯಕ್ಕಾಗಿ ಜಿಲ್ಲೆಯ ಜನತೆ ಜನ್ಮ ಜನ್ಮಾಂತರಗಳಲ್ಲಿ ಅಧಿಕಾರಿಗಳಿಗೆ ಋಣಿಯಾಗಬೇಕು. ಸರಕಾರದ ಈ ಧೋರಣೆ ವಿರೋಧಿಸಿ ಚಳುವಳಿ ಹೂಡಿದ ಧುರೀಣರಿಗೂ ಈ ಯೋಜನೆಯಿಂದ ಕಾಲಾಂತರದಲ್ಲಿ ನಮ್ಮವರಿಗೆ ಆಗುವ ಹಾನಿಯ ಸರಿಯಾದ ಕಲ್ಪನೆ ಇದ್ದಂತಿಲ್ಲ. ತಮ್ಮ ಸರ್ವಸ್ವವನ್ನೂ ನುಂಗಬಂದ ಕಾಳಿನದಿ ಪ್ರಯೋಜಕರಿಗೆ, ಅವಕಾಶ ಕೊಟ್ಟು ಅವರಿಂದ ಗೊತ್ತಾದ ಪರಿಹಾರಧನಕ್ಕಿಂತ ಒಂದೆರಡು ಸಾವಿರ ಹೆಚ್ಚಿಗೆ ಗಿಟ್ಟಿಸುವವರಲ್ಲೇ ಸುಪಾದವರು ಸ್ಪರ್ಧೆ ನಡೆಸಿದರು! ಸಂಗ್ರಹ ಮಾಡಿದ ನೀರು, ಎಂದೆಂದೂ ತುಂಬಿ ಬರದ ಹಾನಿ ಮಾಡುತ್ತದೆ ಎಂದು ನಮ್ಮವರು ಏಕೆ ಅರ್ಥಮಾಡಿಕೊಳ್ಳುತ್ತಿಲ್ಲ? ಕಾಡು, ಎಲ್ಲೆಡೆಯಲ್ಲಿ ಎಲ್ಲ ಕಾಲದಲ್ಲಿ ಬೆಳೆಯುವದಿಲ್ಲ. ದಟ್ಟ ಕಾಡು ನಿರ್ನಾಮವಾದಾಗ ಮಳೆಯ ನೀರಿನಿಂದ ಸವಕಳಿ ಉಂಟಾಗಿ ಆ ಪ್ರದೇಶವೆಲ್ಲ ಬರಡಾಗಿ ಬಿಡುತ್ತದೆ. ಜೋರ್ಡನ್ ನದಿಯ ಕೊಳ್ಳದ ಪ್ರದೇಶ ಹಿಂದೊಮ್ಮೆ ದಟ್ಟ ಕಾಡಾಗಿದ್ದು ಹುಲಿ-ಕರಡಿಗಳು ಅಲೆಯುತ್ತಿದ್ದವೆಂದು ಐತಿಹಾಸಿಕ ದಾಖಲೆಗಳಿದ್ದರೆ, ಇಂದು ಅದು ಮರುಭೂಮಿಯ ಹೃದಯಸ್ಥಾನ. ಕೊರಡಿಗಾಗಿ ಮಾನವನ ಹಪಾಪಿ, ಆತನ ಸಾಕುಪ್ರಾಣಿಗಳ ಹಸಿವು ನೀಗಿಸುವದರಲ್ಲಿ ಕಾಡು ಬಂಜರವಾಯ್ತು. ಇದೇ ಶ್ರೇಯಸ್ಸು ನಮ್ಮದೂ ಆಗಬಾರಾದಾಗಿದ್ದರೆ, ಇಂದೇ ನಾವು ಕಾಯೋನ್ಮಖಿಗಳಾಗಬೇಕು.

ಕಾಡಿನೊಂದಿಗೆ ಅದರಲ್ಲಿ ಆಶ್ರಯಿಸಿದ ಸಹಸ್ರಾರು ಸೂಕ್ಷ್ಮ ಕ್ರಿಮಿ-ಕೀಟ, ಸಸ್ಯಗಳು ನಾಶವಾಗುತ್ತವೆ. ಪ್ರಾಣಿ-ಪಶು-ಪಕ್ಷಿಗಳು ವಲಸೆ ಹೋಗದಿದ್ದರೆ ಬದುಕಿರಲಾರವು. ಈ ಬದಲಾದ

ಪರಿಸರ, ಹವಾಮಾನದ ಮೇಲೆ ಅತಿರಿಕ್ತ ಪ್ರಭಾವ ಬೀರುವದು. ಮೋಡಗಳನ್ನು ಅಡ್ಡಗಟ್ಟುವ ವೃಕ್ಷಗಳು ಇಲ್ಲವಾದ ಮೇಲೆ ಮಳೆಯ ಅಭಾವ, ಅದರಿಂದಾಗಿ ಝುರಿ, ಹೊಳೆ ನದಿಗಳು ಬತ್ತಿಹೋಗುವ ಸಾಧ್ಯತೆಯಿಂದ ವಿಪುಲವಾಗಿ ನೀರು ಬೇಕಾದ ಅಡಿಕೆ, ತೆಂಗು, ಗೇರು, ಮೆಣಸು, ಯಾಲಕ್ಕಿಗಳ ಬೆಳೆಗಳೂ ನಷ್ಟವಾಗಿ ಹೋಗಬಹುದು. ಬದಲಾದ ಹವಾಮಾನದಿಂದ ಕೃಷಿ ಉತ್ಪಾದನೆಯಲ್ಲಿ ಕಡಿತವಾಗುವದೆಂದು ತಜ್ಞರು ಕಂಡುಹಿಡಿದಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ವಿದ್ಯುತ್ ಉತ್ಪಾದನೆಗೆ ನಿರ್ಮಿಸಿದ ಜಲಾಶಯಗಳೂ ಬತ್ತಿಹೋಗುವದು ಸಾಮಾನ್ಯ. ಆಗ ವಿದ್ಯುತ್ ಖಾತೆ ಕೃತಕ ಮಳೆ ಉತ್ಪಾದನೆಯ ನೆಪದಲ್ಲಿ ಹಣ ಪೋಲು ಮಾಡುವದು ತೀರ ಸಾಮಾನ್ಯ. ಅವರು ಕೃತಕ ಮಳೆಯ ಬದಲಾಗಿ ಕೃತಕ ವಿದ್ಯುತ್ತನ್ನೆ ಕಂಡುಹಿಡಿಯುವದು ಸಮಸ್ಯೆಗೆ ಹೆಚ್ಚಿನ ಪರಿಹಾರವಲ್ಲವೇ? ಅನಾವೃಷ್ಟಿಯಾದಾಗ ಈ ಪಾಡಾದರೆ, ಅತಿವೃಷ್ಟಿಯಾದಾಗ ಗೋಳೆ ಬೇರೆ. ಸದಾಕಾಲ ನೀರಡಿಸಿಕೊಂಡಿರುವ ಲಿಂಗನಮಕ್ಕಿ ಜಲಾಶಯದಲ್ಲಿ ೧೯೮೦ ರಲ್ಲಿ ಅತಿವೃಷ್ಟಿಯಿಂದ ನೀರು ಏರಲಾರಂಭಿಸಿದರೂ ಹೆಚ್ಚಿನದನ್ನು ಬಿಟ್ಟು ಕೊಡಲು ತಂತ್ರಜ್ಞರು ಸಿದ್ಧರಿರಲಿಲ್ಲ. ತಾವು ನಿರ್ಮಿಸಿದ ಅಣೆಕಟ್ಟು ಕೊಚ್ಚಿಕೊಂಡು ಹೋಗಬಹುದೆಂಬ ಬೆದರಿಕೆಯಿಂದ ಒಮ್ಮೆಲೆ ಮಹಾಪೂರದಿಂದ ಸಂರಕ್ಷಿಸುವ ದ್ವಾರಗಳನ್ನು ಮುನ್ಸೂಚನೆ ಇಲ್ಲದೇ ತೆರೆದು ನೀರು ಹರಿಬಿಟ್ಟರು. ಆಗಿನ ಭೀಕರ ಪರಿಣಾಮಗಳಿಂದ ಅಧಿಕಾರಿಗಳು ಎಚ್ಚತ್ತಿಲ್ಲ. ಕೃಷಿಕರು, ಬಡಬಗ್ಗರು ತಮ್ಮದೆಂದು ಹೇಳುವ ದನಕರು, ಕಾಳುಕಡಿ, ಗುಡಿಸಲುಗಳೆಲ್ಲ ನೀರುಪಾಲಾದವು. ಈ ಹಾನಿಗೆ ಕಾರಣ ಯಾರು? ಎಂದು ತೀರ್ಮಾನಿಸುವ ಬದಲು, ಲಕ್ಷಾಂತರ ರೂಪಾಯಿಗಳನ್ನು ನೆರಹಾವಳಿ ಪೀಡಿತರ ಉದ್ಧಾರಕ್ಕೆಂದು ಮಂಜೂರ ಮಾಡಿಸಿ ತಮ್ಮ ಜೇಬು ಬರಿದಾಗದಂತೆ ನೋಡಿಕೊಂಡರು. ಪೀಡಿತರು ಮಾತ್ರ ಬರಿದಾಗಿಯೇ ಉಳಿದರು.

ಮೂರು ದಶಕಗಳ ಹಿಂದಿನ ವನ್ಯ ಜೀವನವನ್ನು ಇಂದಿನದಕ್ಕೆ ಹೋಲಿಸಿದಾಗ ನಮ್ಮ ಪ್ರಗತಿಯ ಕಲ್ಪನೆ ಬಾರದಿದು! ಹುಲಿರಾಯನನ್ನು ಕೊಂದು ದನಕರುಗಳನ್ನು ಸಂರಕ್ಷಿಸಿದವರಿಗೆ ಬಹುಮಾನ ಕೊಡುವ ಕಾಲಜಾರಿ ಹುಲಿರಾಯನ ಸಂರಕ್ಷಣೆಗೆಂದೇ ಕೋಟ್ಯಾವಧಿ ಖರ್ಚು ಮಾಡುವ ಸ್ಥಿತಿ ತಂದು ಕೊಂಡಿದ್ದೇವೆ. ಸರ್ಪದರ್ಶನದಿಂದಲೇ ಕಾಲಿಗೆ ಬುದ್ಧಿ ಹೇಳುವ ವಂಶದವರು, ಇಂದು ಅವುಗಳನ್ನು ಬಿಲದಿಂದ ಹೊರಗೆಳೆದು ಕೊಂದು, ಚರ್ಮವನ್ನು ಕಳ್ಳತನದಿಂದ ವಿದೇಶಿಯರಿಗೆ ಮಾರುತ್ತಿದ್ದಾರೆ. ಕೃಷಿಗೆ ಹಾನಿಕಾರಿಯಾಗಿದ್ದ ಕೀಟಗಳನ್ನು ಭಕ್ಷಿಸಿ, "ಟರಾಂವ್ ಟರಾಂವ್" ಎಂದು ರಾಗವೆಳೆಯುವ ಮಂಡೂಕ ರಾಜನ ತೊಡೆಗಳು ವಿದೇಶಿಯರಿಗೆ ಇಷ್ಟವೆಂದು ಆತನ ಸಂತತಿಯನ್ನೇ ನಿರ್ನಾಮ ಮಾಡಲು ಹೊರಟಿದ್ದೇವೆ. ಹಿಂದೊಮ್ಮೆ ಮನೆ ಹಿತ್ತಿಲಲ್ಲೇ ನರಿ ರಾಯನ ದರ್ಶನವಾಗುತ್ತಿದ್ದರೂ ಇಂದು ಆತನನ್ನು ಕಾಣಲು ಪ್ರಾಣಿ ಸಂಗ್ರಹಾಲಯಕ್ಕೆ ಹೋಗಬೇಕಾಗಿದೆ. ಕೋರೆ, ಹಲ್ಲು, ಮಾಂಸ ಖಂಡಗಳನ್ನು ಹೊತ್ತ ಕಾಡು ಹಂದಿಗೆ ಅವೇ ಮೃತ್ಯು ಪ್ರಾಯವಾಗಿವೆ. ಪಳಗಿಸಿದ ಆನೆಗಳನ್ನು ಕಾಡಿನಲ್ಲಿ ಬಳಸುವ ಕಾಲ ಬಂದಿದ್ದರೆ, ಇಂದು ಕಾಡಾನೆಗಳು ಕಾಡಿನಲ್ಲೂ ಕಾಣಸಿಗದಾಗಿವೆ!

ಊರಿಗೊಂದು ಕಾಲೇಜಿನ ಕಾರ್ಯಕ್ರಮ ಮುಗಿಸಿ ಹಳ್ಳಿಗೊಂದು ತೆರೆದರೆ ಹೇಗೆ? ಎಂಬ ವಿಚಾರ ನಡೆಸಿದ್ದಾರೆ-ನಮ್ಮ ಶಿಕ್ಷಣ ತಜ್ಞರು. ಹೆಚ್ಚಿನ ಕಾಲೇಜುಗಳಲ್ಲಿ ಹೈಸ್ಕೂಲಿನಲ್ಲಿ ಇರಬೇಕಾದ ಸವಲತ್ತುಗಳೂ ಇಲ್ಲದ್ದರಿಂದ ಅವು ಕೇವಲ ನಿರುದ್ಯೋಗ ಹೆಚ್ಚಿಸುವ ಕೇಂದ್ರಗಳಾಗಿವೆ.

ಎಂದು ವಿಶ್ವಾಸದಿಂದ ಒಪ್ಪಿಕೊಳ್ಳಬೇಕಾಗುತ್ತದೆ. ಜಿಲ್ಲೆಯ ತುಂಬ ಏಕ ಪ್ರಕಾರವಾಗಿ ಶಿಕ್ಷಣ ಕೊಡುವ ಕಾಲೇಜುಗಳ ಬದಲಾಗಿ ಒಂದೊಂದು ಊರಿನಲ್ಲಿ ಒಂದೊಂದು ಬಗೆಯ ತಾಂತ್ರಿಕ ಶಿಕ್ಷಣ ಕೊಡುವ ಕಾಲೇಜು ಪ್ರಾರಂಭಿಸಿದ್ದರೆ ಕೆಲಮಟ್ಟಿಗೆ ಪ್ರಗತಿಯಾಗುತ್ತಿರಲಿಲ್ಲವೇ? ನಮ್ಮವರು ವೃತ್ತಿ ಭಿಕ್ಷೆಗೆ ಹೊರಗೆ ಹೋಗದೇ ತಮ್ಮ ಊರಲ್ಲೇ ಉದ್ದಿಮೆಗಳನ್ನು ಪ್ರಾರಂಭಿಸಿ, ತಮ್ಮ ಹಾಗೂ ಇತರರ ಉದ್ಯೋಗಾವಕಾಶಕ್ಕೆ ಸಹಾಯವಾಗುತ್ತಿತ್ತು. ಈ ದೃಷ್ಟಿಯಿಂದ ಸುಮಾರು ದಶಕದ ಹಿಂದೆ, ಜಿಲ್ಲೆಗೆ ಒಂದು ಅರಣ್ಯ ಶಾಸ್ತ್ರ ತರಬೇತಿ ಕೇಂದ್ರವೊಂದನ್ನು ಪ್ರಾರಂಭಿಸಬೇಕೆಂದು, ಆಗ ಪಾರ್ಲಿಮೆಂಟಿನ ಸದಸ್ಯರಾಗಿದ್ದ ಕವಿದಿನಕರ ದೇಸಾಯಿರನ್ನು ವಿನಂತಿಸಿಕೊಂಡಾಗ, ಅವರು ತಮ್ಮ ಯತ್ನ ಮತ್ತು ಅನುಭವಗಳನ್ನೂ ವಿವರಿಸಿದ್ದು ಓದಿದಾಗ ಹೌಹಾರುವಂತಾಯಿತು. ನಮ್ಮ ಯುವಕ-ಯುವತಿಯರಿಗೆ ಹೊಲಿಗೆ, ಬೆರಳಚ್ಚು, ಮುದ್ರಣಗಳ ವ್ಯಾವಹಾರಿಕ ಶಿಕ್ಷಣ ಕೊಡುವದಕ್ಕಾಗಿ ಯಂತ್ರೋಪಕರಣ, ವಿದ್ಯಾರ್ಥಿ ವೇತನಗಳ ಏರ್ಪಾಡು ಮಾಡಿದರೂ ಅದರ ಲಾಭ ಪಡೆಯದೇ ಕ್ಲಾರ್ಕ್ ತರಬೇತಿ ಕೇಳಿದವರು ಇದ್ದರಂತೆ. ಅರಣ್ಯಾಧಿಕಾರಿಯಾಗಿಯೋ ಆ ಖಾತೆಯ ನೌಕರಿ ಹಿಡಿದೋ ಜೇಬುತುಂಬಿಸಿಕೊಳ್ಳಲಿಚ್ಚಿಸುವ ಕನಸುಗಾರರಿಗೆ ಅರಣ್ಯದ ತಾಂತ್ರಿಕ ಶಿಕ್ಷಣದ ಅವಶ್ಯಕತೆ ಎಲ್ಲಿದೆ?

ಹಿಂದೊಮ್ಮೆ ಅಕ್ಕಿಯ ಆಗರವಾಗಿದ್ದ ಗೇರುಸೊಪ್ಪೆಯಿಂದ ಉತ್ತಮ ಅಕ್ಕಿ ಹೊರದೇಶಗಳಿಗೆ ರಫ್ತಾಗುತ್ತಿತ್ತು. ಆದರೆ ಇಂದು...? ಗೇರಸೊಪ್ಪೆ ಅನಾಕರ್ಷಕವಾದ ಹಳ್ಳಿಯಾದರೆ, ಅಕ್ಕಿ, ಬೆಳೆದ ಜಿಲ್ಲೆಯವರಿಗೇ ಸಾಲದಾಗಿದೆ! ಕುಮಟಾದಿಂದ ನೇರವಾಗಿ ಒಳನಾಡಿನಿಂದ ಬಂದ ಹತ್ತಿ ವಿದೇಶಗಳಿಗೆ ಹೋಗುತ್ತಿತ್ತು. ಇಂದಿನ ಕುಮಟಾ ರೇವು, ರೇವೆಯಲ್ಲಿ ಹೂತು ಹೋಗಿದೆ. ಗೋಡಂಬಿ, ಮಾವಿನಹಣ್ಣು, ಅನಾನಸ, ಜೇನು, ತೆಂಗು, ಕತ್ತ, ಅಡಿಕೆ ಹಾಳೆ, ಬಾಳೆ, ವಿಪುಲವಾದ ಜಿಲ್ಲೆಯಲ್ಲಿ ಇವುಗಳನ್ನು ಆಧರಿಸಿದ ಹಲವಾರು ಪುಟ್ಟ ಉದ್ಯಮಗಳನ್ನು ಬೆಳೆಸಬಹುದಾಗಿತ್ತು. ಈ ದೃಷ್ಟಿಯಿಂದ ಪ್ರಾರಂಭವಾದ ಹೊನ್ನಾವರದ ಉದ್ಯೋಗ ಶಾಲೆ, ಶೀಘ್ರವೇ ನಿರುದ್ಯೋಗಿಯಾಯಿತು. ಕಡಲಿನ ಆಹಾರಕ್ಕೆ ವಿದೇಶಗಳಲ್ಲಿ ಅದರಲ್ಲೂ ಅಮೇರಿಕೆಯಲ್ಲಿ ವಿಪುಲವಾದ ಬೇಡಿಕೆಯಿದೆ. ತೀರ ಚಿಕ್ಕ ರಾಷ್ಟ್ರವಾದ ಫೊರ್ಮೋಸಾ ಸಿಂಪಿ ಮೀನು, ಆಣಬೆಗಳನ್ನು ರಫ್ತ ಮಾಡಿ ಕೋಟ್ಯಾವಧಿ ಡಾಲರುಗಳಿಸುತ್ತಿರುವಾಗ ನಮ್ಮವರಿಗೂ ಇದನ್ನು ಸುಲಭದಲ್ಲಿ ಮಾಡಲು ಸಾಧ್ಯವಿತ್ತು. ಹಿಡಿದ ಅಲ್ಪಮೀನನ್ನು, ಮಲ್ಪೆಯ ಸಾಹುಕಾರರಿಗೆ ಮಾರಿ ನಮ್ಮವರು ಕೃತಾರ್ಥರಾಗುವದು ಹಾಸ್ಯಾಸ್ಪದವಲ್ಲವೇ?

ಇದನ್ನೆಲ್ಲ ಅರಿಯಬಲ್ಲ ಧೀಮಂತರಿಗೆ ನಮ್ಮಲ್ಲಿ ಬರಗಾಲವೇ? ಅತಿರಥ-ಮಹಾರಥಿಗಳಿಗೆ ಕೊರತೆಯಿಲ್ಲ. ಬೆಂಗಳೂರು, ಮುಂಬಯಿ, ದಿಲ್ಲಿಗಳಲ್ಲಿ ಸರಕಾರಿ, ಕೋರ್ಟು ಕಛೇರಿ, ಬ್ಯಾಂಕ್ ಉದ್ದಿಮೆಗಳಲ್ಲಿ ಅನೇಕರು ಉಚ್ಚ ಅಧಿಕಾರಿಗಳಿದ್ದಾರೆ. ದಕ್ಷರು, ನಿಷ್ಠಾವಂತರು, ಪ್ರತಿಭಾವಂತರೆಂದು ಕೀರ್ತಿಗಳಿಸಿದ್ದಾರೆ. ವಿಶ್ವವಿದ್ಯಾಲಯ, ಸಂಶೋಧನಾಲಯಗಳಲ್ಲಿ ಮೇಲಧಿಕಾರಗಳಾಗಿದ್ದಾರೆ. ರಾಷ್ಟ್ರೀಯ ಅಂತರ್‌ರಾಷ್ಟ್ರೀಯ ಮಟ್ಟದ ಖ್ಯಾತಿಗಳಿಸಿದವರಿದ್ದಾರೆ. ವ್ಯಾಪಾರದಲ್ಲಿ ಎತ್ತಿದ ಕೈ, ದೇಶದ ಮಹಾನಗರಗಳಲ್ಲಿ ಕಾಫಿ-ತಿಂಡಿ ಪೂರೈಕೆ ಇನ್ನಿತರ ವ್ಯಾಪಾರಗಳಿಂದ ಶ್ರೀಮಂತರಾಗಿದ್ದಾರೆ. ಅತಿಬುದ್ಧಿಯೂ ಕೇಡಿಗೆ ಮೂಲವೆಂದು ನಮ್ಮವರನ್ನು ಹತ್ತಿರದಿಂದ ಕಂಡಾಗ ಅನಿಸದಿರದು. ತಾವಿರುವಲ್ಲಿ ಅವಕಾಶಗಳನ್ನು ಕಲ್ಪಿಸಿಕೊಳ್ಳುವ ಬದಲಾಗಿ, ಹಸಿರುಹುಲ್ಲು ಇರುವಲ್ಲಿ ಮೇಯುತ್ತ

ಹೋಗುವದು ನಮ್ಮವರ ಹವ್ಯಾಸ. ಆದ್ದರಿಂದ ಅವರ ಬುದ್ಧಿಚಾತುರ್ಯ, ಧನಸಂಗ್ರಹದ ಲಾಭ, ಹುಟ್ಟೂರಿನವರಿಗೆ ಆಗುವದೇ ಇಲ್ಲ. ಬ್ರಿಟಿಶರ ಕಾಲದಲ್ಲಿ ಅವಕಾಶಗಳು ಅತ್ಯಲ್ಪವಿದ್ದದ್ದರಿಂದ ವಲಸೆ ಹೋಗುವದು ಅನಿವಾರ್ಯವಾಗಿದ್ದರೂ ಸ್ವಾತಂತ್ರ್ಯದ ಅನಂತರವೂ ಇದು ಮುಂದುವರಿಯುತ್ತಿರುವದು ಅಕ್ಷಮ್ಯವಲ್ಲವೇ? ಶಿವರಾಮ ಕಾರಂತರು ಧನ ಸಂಪಾದನೆಯನ್ನೇ ಜೀವನದ ಅಳತೆಗೋಲು ಮಾಡಿಕೊಂಡಿದ್ದರೆ, ಇಷ್ಟೊಂದು ಸಾಹಿತ್ಯ ನಿರ್ಮಾಣ ಅವರಿಂದ ಸಾಧ್ಯವಿತ್ತೇ? ಕಷ್ಟಕಾರ್ಪಣ್ಯ ಎದುರಿಸಿಯೇ ಉತ್ತಮ ಸಾಹಿತ್ಯ ನಿರ್ಮಿಸಿದರು. ನಮ್ಮಲ್ಲಿಯೂ ಉತ್ತಮ ಸಾಹಿತಿಗಳಾಗಬಹುದಾದವರು ದೈನಂದಿನ ಬೇಡಿಕೆಗಳತ್ತ ವಿಶೇಷ ಗಮನ ಕೊಟ್ಟು ಹೊರಗೂ ಹೋಗಿ ಆ ದಿಕ್ಕಿನಲ್ಲಿ ಯಶಸ್ವಿಗಳಾದರು. ಪ್ರಾಧ್ಯಾಪಕರೆಂದೋ, ಪ್ರಿನ್ಸಿಪಾಲರೆಂದೋ ಜಿಲ್ಲೆಗೆ ಬಂದಿದ್ದ ಅಡಿಗ, ವೀಸೀಯವರನ್ನು ಇರಿಸಿಕೊಳ್ಳುವ ಯೋಗ್ಯತೆ ನಮ್ಮವರಿಗಿಲ್ಲದೇ ಹೋಯಿತು.

ನಿಸರ್ಗದತ್ತವಾದ ಇಷ್ಟೊಂದು ಸಂಪತ್ತು ನಮ್ಮದಾಗಿದ್ದರೂ ಅದನ್ನೇಕೆ ಜನಹಿತಕ್ಕೆ ಬಳಸಲಾಗುತ್ತಿಲ್ಲ? ಸರ್ವೇಜನಾ ಸುಖಿನೋಭವಂತು, ತತ್ವದಲ್ಲಿ ನಮ್ಮ ವಿಶ್ವಾಸವಿಲ್ಲದಿರುವದೇ ಕಾರಣವಾಗಿರಬಹುದೇ? ಟಾಟಾ-ಬಿರ್ಲಾಗಳು ನಮ್ಮಲ್ಲಿ ಇಲ್ಲದಿದ್ದರೂ ಹೊಸ ಉದ್ದಿಮೆಗಳಿಗೆ ಬೇಕಾಗುವ ಬುದ್ಧಮತ್ತೆ, ಚಾತುರ್ಯ, ಬಂಡವಾಳಗಳು ಖಂಡಿತ ಇವೆ. ಅವಶ್ಯಕತೆಯಿದ್ದಲ್ಲಿ ಸರಕಾರ, ಬ್ಯಾಂಕುಗಳ ನೆರವನ್ನೂ ಪಡೆಯಲು ಸಾಧ್ಯವಿದೆ. ಆದರೆ ನಮ್ಮವರು ಬ್ಯಾಂಕಿನಲ್ಲಿ ಹಣವಿಟ್ಟು, ಬಡ್ಡಿಯ ಲೆಕ್ಕಾಚಾರದಿಂದಲೇ ಖುಷಿ ಪಡುವವರೇ ಹೊರತು ಬಹುಜನಹಿತಕ್ಕಾಗಿ ಉದ್ದಿಮೆಗಳನ್ನು ಪ್ರಾರಂಭಿಸುವಲ್ಲಿ ಆಸಕ್ತಿ ತಾಳಿದವರಲ್ಲ. ಈಗ ಎಚ್ಚೆತ್ತರೂ ಕಾಲ ಮೀರಿ ಹೋಗಿಲ್ಲ. ಜಿಲ್ಲೆಯ ಬರಹಗಾರರು, ಆಡಳಿತಗಾರರು, ವ್ಯಾಪಾರಿಗಳು, ಶಿಕ್ಷಕರು, ಸಂಶೋಧಕರು, ಬಂಡವಾಳಗಾರರು, ಪುಢಾರಿಗಳು, ಹಿತೈಷಿಗಳು ಸೇರಿ ಸಮ್ಮೇಳನ ನಡೆಸಿ, ಪ್ರತಿಯೊಬ್ಬನೂ ಜಿಲ್ಲೆಯ ಅಭಿವೃದ್ದಿಗೆ ತಾನೇನು ಮಾಡಬಲ್ಲೆ? ಎಂದು ತೀರ್ಮಾನಿಸಿ ಕಾರ್ಯೋನ್ಮುಖನಾದರೆ ಅಭಿವೃದ್ಧಿಯಲ್ಲಿ ನಾವು ಪಂಜಾಬಿಗಳನ್ನು ಮೀರಿಸಬಹುದಾಗಿದೆ.

ನಮ್ಮ ಶಿಕ್ಷಣ

ಶಿಕ್ಷಣ ಸಂಸ್ಥೆ ಎಂಬ ಹೆಸರಿನಿಂದ ಅನೇಕಾನೇಕ ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳು ದೇಶದಾದ್ಯಂತ ನಾಯಿಕೊಡೆಗಳಂತೆ ಪ್ರತಿವರ್ಷವೂ ತಲೆಯೆತ್ತಿಕೊಂಡು ನಿಲ್ಲುತ್ತವೆ. ನಿರಕ್ಷರತೆ ನಿರ್ಮೂಲ ಮಾಡಬೇಕೆಂದು ಕನಸುಕಟ್ಟಿದ್ದ ಭಾರತದಲ್ಲಿ ಸ್ವಾತಂತ್ರ್ಯದ ನಂತರ, ಶೈಕ್ಷಣಿಕ ಕೇಂದ್ರಗಳ ಜೊತೆಗೆ ನಿರಕ್ಷರಿಗಳ ಸಂಖ್ಯೆಯೂ ಬೆಳೆಯುತ್ತಿರುವದು ಚಮತ್ಕಾರಿಕವಾಗಿದ್ದಂತೆ ನಿರುತ್ಸಾಹಕಾರಿಯಾಗಿದೆ. ರಾಜ್ಯ ಕೇಂದ್ರ ಸರಕಾರಗಳು. ಖಾಸಗಿ ಸಂಸ್ಥೆಗಳು ಶಿಕ್ಷಣದ ಹೆಸರಿನಿಂದ ಕೋಟ್ಯಾವಧಿ ರೂಪಾಯಿಗಳನ್ನು ಖರ್ಚುಮಾಡಿದರೂ ಆಪೇಕ್ಷಿಸಿದ ಪರಿಣಾಮ ಯಾಕೆ ದೊರೆಯುತ್ತಿಲ್ಲ? ಶತಕಗಳಿಂದ ಹಿಂದುಳಿದವರಿಗಾಗಿ ವಸತಿಸೌಕರ್ಯ, ಶಿಷ್ಯವೇತನ, ಇನ್ನಿತರ ಖರ್ಚು, ತಿಂಡಿ ತೀರ್ಥ, ಊಟ-ಉಪಚಾರಗಳನ್ನು ಪೂರೈಸಿ ಎಲ್ಲ ಸೌಲಭ್ಯಗಳನ್ನು ಪೂರೈಸಿದರೂ ಅವುಗಳ ಲಾಭವನ್ನು ಈವರ್ಗದವರು ಅದೆಷ್ಟು ಪಡೆದುಕೊಂಡರು? ನಮ್ಮ ಶಿಕ್ಷಣಸ್ತರವನ್ನು ಮುಂದರಿದ ರಾಷ್ಟ್ರಗಳೊಂದಿಗೆ ಹೋಲಿಸಬಹುದೋ? ಕಳೆದಮೂರುವರೆ ದಶಕಗಳಲ್ಲಿ ಶಿಕ್ಷಣ ವಿಸ್ತರಣೆಯಲ್ಲಿ ನಾವು ಸಾಧಿಸಿದ್ದೇನು? ಎಂಬ ಆತ್ಮಶೋಧನೆಯ ಸಂದಿಗ್ಧ ಕಾಲದಲ್ಲಿ ಕಾಲಿರಿಸಿದ್ದೇವೆ.

ಶಿಕ್ಷಣವೆಂಬುದು ಹೇಗಿರಬೇಕು? ಕೇವಲ ಹಸ್ತಾಕ್ಷರ ಹಾಕಲು ಬಂದವನು ಶಿಕ್ಷಿತನೇ? ಓದಲು. ಬರೆಯಲುಕಲಿಸುವದೇ ಶಿಕ್ಷಣದ ಗುರಿಯೇ? ಗಳಿಸಿದ ಪದವಿಗಳು ಶಿಕ್ಷಣದ ಮಾನದಂಡಗಳೇ? ಪಾಸಾದ ಶ್ರೇಣಿಗಳು ವಿದ್ಯಾರ್ಥಿಗಳ ಅರ್ಹತೆಯನ್ನು ಸೂಚಿಸುತ್ತವೆಯೇ? ಅಭ್ಯರ್ಥಿಗಳು ಪೂರೈಸಿದ ಸರ್ಟಿಫಿಕೇಟುಗಳು ನಂಬಲರ್ಹವೇ? ಹತ್ತು-ಹದಿನೈದು ನಿಮಿಷಗಳ ಅಭ್ಯರ್ಥಿ-ಸಂದರ್ಶನದಿಂದ ಅವನ ಸಾಮರ್ಥ್ಯ, ವಿದ್ವತ್ತೆ, ವೈಯಕ್ತಿಕ ಸಾಧನೆಯ ಆಳ ಅರಿಯಲು ಸಾಧ್ಯವೇ? ಹೇಳಿದ್ದನ್ನು ಇಲ್ಲವೇ ಬರೆದುಕೊಟ್ಟದ್ದನ್ನು ಬೆರಳಚ್ಚಿನಿಂದ ಮೂಡಿಸಲು ಪದವೀಧರ, ಸ್ನಾತಕೋತ್ತರ ತರಬೇತಿ ಪಡೆದವರು ಬೇಕೇ? ರಾಸಾಯನಿಕ ಶಾಸ್ತ್ರ, ಜೀವಶಾಸ್ತ್ರ, ಅಣುಶಾಸ್ತ್ರ ಮುಂತಾದವುಗಳಲ್ಲಿ ತರಬೇತಿ ಪಡೆದವರು ಬ್ಯಾಂಕ್ ಅಧಿಕಾರಿಗಳಾಗುವದು ಸರಿಯೇ? ಸಿಗುವ ಸಂಬಳ, ಬೋನಸ್, ಸೌಕರ್ಯಗಳೇ ಅಧಿಕಾರಿಗಳ ಶೈಕ್ಷಣಿಕ ಯಶಸ್ಸಿನ ಮಾಪನವೇ? ಕಾಲೇಜು-ವಿಶ್ವವಿದ್ಯಾಲಯಗಳಲ್ಲಿ ಕೊಟ್ಟ ಶಿಕ್ಷಣದ ಎಷ್ಟು ಲಾಭ, ವೃತ್ತಿಯಲ್ಲಿ, ದೈನಂದಿನ ಜೀವನದಲ್ಲಿ ಮಾಡಿಕೊಳ್ಳಲಾಗುತ್ತದೆ? ತಜ್ಞರೆನಿಸಿಕೊಂಡು ಸರಕಾರಿ, ಸಾಹುಕಾರಿ ಸಂಸ್ಥೆಗಳಲ್ಲಿ ದೊಡ್ಡ ದೊಡ್ಡ ಸ್ಥಾನಗಳನ್ನು ತಮ್ಮವನ್ನಾಗಿ ಮಾಡಿಕೊಂಡವರ ವಿದ್ಯೆಯ ಆಳವೆಷ್ಟು? ಈ ಪ್ರಶ್ನೆಗಳನ್ನೆಲ್ಲ ಒರೆಗಲ್ಲಿಗೆ ಹಚ್ಚಿ ನೋಡಿದಾಗ ನಮ್ಮ ಶಿಕ್ಷಣ ಟೊಳ್ಳೇ, ಗಟ್ಟಿಯೇ? ಎಂಬುದು ಕೂಡಲೇ ಅರಿವಾಗುವದು.

ಶಿಕ್ಷಣ ಕೇವಲ ಅಕ್ಷರಾಭ್ಯಾಸವಾಗಿರದೇ ವಿದ್ಯಾಭ್ಯಾಸವಾಗಿರಬೇಕು ಎಂದುಕೊಂಡರೆ, ಸರ್ವಸಾಮಾನ್ಯ ಭಾರತೀಯನು ಎಷ್ಟು ವಿದ್ಯೆಗಳಲ್ಲಿ ಪರಿಣಿತನಾಗಿರುತ್ತಾನೆ? ಅತ್ಯುಚ್ಚ ಬ್ಯಾಂಕ್ ಅಧಿಕಾರಿಯನ್ನು ನೌಕರಿಯಿಂದ ವಜಾಮಾಡಿದರೆ ಬೇರೊಂದು ವೃತ್ತಿಯಿಂದ ಉಪಜೀವನ ಮಾಡುವದು ಅವನಿಂದ ಸಾಧ್ಯವೇ? ದೇಶದ ನಾಯಕ-ನಾಯಕಿಯರು ರಾಜಕಾರಣ ಬಿಟ್ಟರೆ

ಅವರಿಂದ ಬೇರೆ ಏನಾದರೂ ಸಾಧಿಸುವದು ಶಕ್ಯವೇ? ವಿಶ್ವವಿದ್ಯಾಲಯದಿಂದ ಸುವರ್ಣಪದಕಗಳನ್ನು ಗಿಟ್ಟಿಸಿದ ಎಷ್ಟೊಂದು ಜಾಣರಿಗೆ ಕಾರಿನ ದುರುಸ್ತಿ ಬರುತ್ತದೆ? ಮನೆಯೊಳಗಿನ ವಿದ್ಯುತ್ ಸಲಕರಣೆಗಳು, ಹೇಗೆ ಕೆಲಸ ಮಾಡುತ್ತವೆಂದು ತಿಳಿದಿರುತ್ತದೆ? ಅಮೇರಿಕೆಯ ಇಪ್ಪತ್ತೊಂದು ಸಾವಿರವಿದ್ಯಾರ್ಥಿಗಳಿರುವ ವಿಶ್ವವಿದ್ಯಾಲಯದ ಅತ್ಯುಚ್ಚ ಅಧಿಕಾರಿ ತನ್ನ ಕಾರನ್ನು ತಾನೇ ನಡೆಸುತ್ತಾನೆ. ರಿಪೇರಿ ಮಾಡುತ್ತಾನೆ. ಮನೆಯಲ್ಲಿಯ ಸಣ್ಣ ಪುಟ್ಟ ರಿಪೇರಿಗಳೂ ಅವನದೇ ಜವಾಬ್ದಾರಿ. ಚಳಿಗಾಲದಲ್ಲಿ ಮನೆ ಮುಂದೆ ಬಿದ್ದ ಹಿಮವನ್ನು ಎತ್ತಿ ಹಾಕಿದರೆ, ಬೇಸಿಗೆಯಲ್ಲಿ ಅಧ್ವಾನವಾಗಿ ಬೆಳೆದು ನಿಂತ ಹುಲ್ಲಿನ ಹಜಾಮತಿ ಮಾಡುತ್ತಾನೆ. ಟ್ರಕ್-ಟ್ರ್ಯಾಕ್ಟರಗಳನ್ನೂ ನಡೆಸಬಲ್ಲ. ಇದ್ದ ನೌಕರಿ ಬಿಟ್ಟು ಅವನು ಕೃಷಿಕನಾಗಿಯೂ ಬಾಳಬಲ್ಲ. ಅಮೇರಿಕೆಯಂತಹ ಅತ್ಯಂತ ಪ್ರಬಲ ರಾಷ್ಟ್ರದ ಅಧ್ಯಕ್ಷರಾದವರು ನಿವೃತ್ತರಾದನಂತರ ಕಡಲೇಕಾಯಿಯ ಕೃಷಿಕರಾಗುವದು (ಜಿಮ್ ಕಾರ್ಟರಂತೆ) ಆ ದೇಶದಲ್ಲಿಮಾತ್ರ ಸಾಧ್ಯ. ಅವರು ವಿದ್ಯಾವಂತರು. ನಾವು ಸುಶಿಕ್ಷಿತರು. ಎಷ್ಟೊಂದು ಅಂತರ!

ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಅನೇಕ ಸಮಸ್ಯೆಗಳು ಧುತ್! ಎಂದು ಎದುರಿಗೆ ನಿಂತಿದ್ದರಿಂದ. ವಲ್ಲಭಭಾಯಿ ಪಟೇಲರಂತಹ ಅತ್ಯಂತ ಯೋಗ್ಯತಾವಂತರಿಗೆ ಅಂತಹ ಖಾತೆ ಒಪ್ಪಿಸಿದ್ದರಿಂದ ಎಲ್ಲಿಯೂ ಸರಿಹೋಗದವರಿಗೆ ಶಿಕ್ಷಣಮಂತ್ರಿ ಮಾಡಿ ಭಾರತದ ಭಾವೀ ನಾಗರಿಕರಿಗೆ ಭಾರೀ ಅನ್ಯಾಯ ಮಾಡಲಾಯಿತು. ಹೀಗಾಗಿ ಶಿಕ್ಷಣ ಕ್ಷೇತ್ರದ ಆಳವಾದ ಅರಿವು ಇಲ್ಲದ ಅಧಿಕಾರಿಗಳೇ ಶೈಕ್ಷಣಿಕ ಭವಿಷ್ಯದ ನಿರ್ಧಾರಕರಾದರು. ಶಿಕ್ಷಣದ ವಿಸ್ತರಣೆಗಾಗಿ ಪಂಚವಾರ್ಷಿಕ ಯೋಜನೆಗಳ ಅಪಾರಧನದ ಮೊತ್ತ ಮಂಜೂರು ಮಾಡಲಾರಂಭಿಸಿದ್ದರಿಂದ ಸರ್ವರಿಗೂ ಶಿಕ್ಷಣ ಉಚ್ಚ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸಂಶೋಧನೆ ಮೊದಲಾದ ನೆಪದಲ್ಲಿ ಈ ಹಣವನ್ನು ಪೋಲು ಮಾಡುವ ಹೆಗ್ಗಣಗಳು ಭರದಿಂದ ತಮ್ಮ ಪೀಳಿಗೆಯನ್ನು ಸಿದ್ದಮಾಡಲಾರಂಭಿಸಿದವು. ಇದಕ್ಕೂ ಪೂರ್ವದಲ್ಲಿ ಶಿಕ್ಷಣದಲ್ಲಿ ಇದ್ದ ಗೌರವ-ಅಭಿರುಚಿ, ತಾವು ಭಾವೀಪೀಳಿಗೆಯನ್ನು ತರಬೇತು ಮಾಡುವ ಅಭಿಮಾನಗಳಿಂದಾಗಿ ನೂರಿನ್ನೂರು ರೂಪಾಯಿಗಳಿಗೆ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸುವವರು ನಮ್ಮಲ್ಲಿದ್ದರು. ಪ್ರಾಥಮಿಕ ಶಾಲೆಗಿಂತ ಮುಂದೆ ಹೋಗದ ಅವರ ಸಹಪಾಠಿಗಳು ಚಾ ಕಾಫಿ ಹೊಟೇಲು ನಡೆಸಿ ಲಕ್ಷಾಧೀಶರಾದರೂ ಈ ಧೀಮಂತರು ಅಸೂಯೆ ಪಡಲಿಲ್ಲ, ಅಸಮಾಧಾನ ತಾಳಲಿಲ್ಲ. ತಮ್ಮ ವೃತ್ತಿಯಲ್ಲಿ ಅಚಲ ವಿಶ್ವಾಸವಿಟ್ಟು ದುಡಿದರು. ಅಂತಹ ಶಿಕ್ಷಕರನ್ನು ವಿದ್ಯಾರ್ಥಿಗಳು ತಮ್ಮ ಕೊನೆಯುಸುರು ಎಳೆಯುವ ತನಕಗೌರವದಿಂದ, ಕೃತಜ್ಞತಾಭಾವದಿಂದ ನೆನೆದುಕೊಳ್ಳುತ್ತಾರೆ. ಶಿಕ್ಷಕನಾದವನಿಗೆ ಇದ್ದಕ್ಕಿಂತ ಹೆಚ್ಚಿನ ಸಾರ್ಥಕತೆ ಏನು ಬೇಕು? ಆದರೆ ಈ ಮಾತಿನ ಅರ್ಥ ತೀರ ಬೇಗ ಬದಲಾಯಿತು. ವೃತ್ತಿಶಿಕ್ಷಕರು ಹೆಚ್ಚೆಚ್ಚಾಗಿ ಶಿಕ್ಷಣ ಸಂಸ್ಥೆಗಳನ್ನು ತಮ್ಮವನ್ನಾಗಿ ಮಾಡಿಕೊಳ್ಳಲಾರಂಭಿಸಿದಾಗ, ಹವ್ಯಾಸಿ ಗುರುವೃಂದದ ಕಿವಿಮಾತನ್ನು ಯಾರೂ ಕೇಳದ್ದರಿಂದ ಅವರ ಧ್ವನಿ ಕ್ಷೀಣವಾಗಿ ಕ್ರಮೇಣ ಮಾಯವಾಯಿತು.

ವೃತ್ತಿ ಶಿಕ್ಷಕರಿಗೆ ತಮ್ಮ ವೇಷ-ಭೂಷಣ ಸಂಬಳ, ಸ್ಥಾನ-ಮಾನ ಪ್ರತಿಷ್ಠೆ ಖ್ಯಾತಿಗಳ ವ್ಯಾಮೋಹದಿಂದಾಗಿ ವಿದ್ಯಾರ್ಥಿಗಳಿಗೆ ಕಲಿಸಲು ಬಿಡುವೆಲ್ಲಿ? ತಾನು ವಿದ್ಯಾರ್ಥಿಯಾಗಿದ್ದಾಗ ಕಲಿಯದ ವಿದ್ಯೆ ಇನ್ನಿತರರಿಗೆ ಹೇಗೆ ಕಲಿಸಿಯಾರು? ಸಿಕ್ಕ ವಿರಾಮದಲ್ಲಿ ಪಾಠ ತಯಾರಿಸುವದು, ಆಳವಾದವ್ಯಾಸಂಗ ಮಾಡುವದು, ಶಬ್ದಕೋಶ, ವಿಶ್ವಕೋಶಗಳನ್ನು ತಿರುವಿ ಹಾಕುವದು ಇವುಗಳು

ಬದಲಾಗಿ ಸಹೋದ್ಯೋಗಿಗಳುಅಥವಾ ಸಹಕುಟುಂಬದೊಂದಿಗೆ ಹೋಟೆಲ್, ವಿಹಾರ, ಚಲಚ್ಚಿತ್ರ ಮಂದಿರಗಳಿಗೆ ಎಡತಾಕಿದರೆ ಮರುದಿನದ ವರ್ಗದ ತಯಾರಿ ಮಾಡುವವರಾರು? ತನ್ನ ಕರ್ತವ್ಯ ಪಾಲನೆಯ ಬದಲಾಗಿ ಮೇಲಧಿಕಾರಿಗಳೊಂದಿಗೆ ಸ್ನೇಹ ಬೆಳೆಸಿ, ಸಿನೇಟ್-ಸಿಂಡಿಕೇಟ್‌ಗಳ ಸದಸ್ಯರೊಡನೆ ಸಂಪರ್ಕ ಇಟ್ಟುಕೊಂಡು. ಶಿಕ್ಷಣ ಮಂತ್ರಿಗಳಿಗೆ ತಾನಾರು? ಎಂದು ಪರಿಚಯವಾಗುವಂತೆ ಯತ್ನಿಸಿ. ಬೇಕಾದ ಧನಸಹಾಯ. ವಿದೇಶ ಪ್ರಯಾಣ, ಮುಂಬಡ್ತಿ ಮುಂತಾದವನ್ನು ಸುಲಭವಾಗಿ ಗಿಟ್ಟಿಸಬಹುದೆಂದು ಲೆಕ್ಕಾಚಾರದಲ್ಲಿ ತೊಡಗಿದಾಗಶಿಕ್ಷಕ ರಾಜಕಾರಣಿಯಾಗುತ್ತಾನೆ. ಈ ಸಾಹಸಗಳಲ್ಲಿ ಅಷ್ಟೊಂದು ಯಶಸ್ವಿಯಾಗದವರು ವಿವಿಧ ಸಂಘಗಳಲ್ಲಿ ಸೇರ್ಪಡೆಯಾಗಿ ತಮ್ಮ ಹಕ್ಕು-ಬಾಧ್ಯತೆಗಳಿಗಾಗಿ ಹೋರಾಡಲಾರಂಭಿಸುತ್ತಾರೆ. ಅಂತೆಯೇ ಇಂದಿನ ವಿಶ್ವವಿದ್ಯಾಲಯಗಳು ವಿದ್ಯಾಕೇಂದ್ರಗಳೆಂದು ಅನಿಸುವ ಬದಲಾಗಿ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡುವ ಕಾರ್ಮಿಕರ ಕಾರಖಾನೆ ಎಂದು ಅನಿಸಿದರೆ ಆಶ್ಚರ್ಯವಿಲ್ಲ. ಇಂಥ ಶಿಕ್ಷಕರ ಹಿರಿತನದಲ್ಲಿ ವಿದ್ಯಾರ್ಥಿಗಳ ವ್ಯಕ್ತಿತ್ವ ಹೇಗೆ ಅರಳೀತು?

ಇಂದಿನ ವಿದ್ಯಾರ್ಥಿಗಳು ಪ್ರಾಧ್ಯಾಪಕರಿಂದ ನಿರೀಕ್ಷಿಸುವದು ತೀರ ಅಲ್ಪ. ಯಾವುದಾದರೂ ಕುಂಟುನಪದಮೇಲೆ ರಜೆ ಕೊಡಬೇಕು. ಇಲ್ಲವೇ ಶಿಕ್ಷಕರೇ ರಜೆ ತಗೆದುಕೊಂಡು ವಿರಾಮಕೊಡಬೇಕು. ತಲೆಗೆ ತೊಂದರೆ ಕೊಡವಂತಹ ಸಿದ್ಧ ಟಿಪ್ಪಣಿಗಳನ್ನು ಕೊಡಬೇಕು. ಅತ್ಯಲ್ಪ ಕಲಿಸಿ ಪರೀಕ್ಷೆಗಳಲ್ಲಿ ಅದನ್ನೇ ಆಧರಿಸಿದ ಪ್ರಶ್ನೆಗಳನ್ನು ಕೇಳಬೇಕು. ಬರೆದ ಉತ್ತರಗಳು ಪ್ರಶ್ನೆಗಳಿಗೆ ಅನುಗುಣವಾಗಿರದಿದ್ದರೂ ಪೂರ್ಣ ಅಂಕಗಳನ್ನು ಕೊಡಬೇಕು. ಹತ್ತಿಪ್ಪತ್ತೇ ಗುಣಗಳಿಗೆ ಉತ್ತೀರ್ಣರನ್ನಾಗಿಸಬೇಕು ಇಲ್ಲವೇ ಸಿಗಬೇಕಾದ ಶ್ರೇಣಿ ತಪ್ಪುವಂತಿದ್ದರೆ, ಅಷ್ಟೊಂದು ಗುಣಗಳನ್ನು ಹೆಚ್ಚಾಗಿ ಕೊಡುವ ಔದಾರ್ಯ ತೋರಿಸಬೇಕು! ಬರೆದ ಉತ್ತರಗಳು ಬುದ್ಧಿ ಉಪಯೋಗಿಸಿ ಬರೆದವೇ ಇಲ್ಲವೇ ಪಠ್ಯದಿಂದ ಕದ್ದವೇ ಎಂದು ತಲೆಕೆಡಿಸಕೊಳ್ಳಬಾರದು. ವಿವಿಧ ಪುಟಗಳಲ್ಲಿ ಬೇರೆ ಬೇರೆ ಹಸ್ತಾಕ್ಷರಗಳಿದ್ದರೂ ಅವೆಲ್ಲ ಒಬ್ಬನೇ ಬರದದ್ದೆಂದು ಪರಿಗಣಿಸಬೇಕು. ಇವನ್ನಷ್ಟು ಸರಿಯಾಗಿ ಪಾಲಿಸಿದರೆ, ವಿದ್ಯಾರ್ಥಿ-ಪರೀಕ್ಷೆ ಒಳ್ಳೆ ಸೌಹಾರ್ದತೆ ಕಾಯ್ದುಕೊಳ್ಳುವದು ಸಾಧ್ಯವಾಗುವದರಿಂದ ಮತ್ತು ಈ ಅಲ್ಪ ನಿರೀಕ್ಷೆಗಳನ್ನು ಈಡೇರಿಸುವದು ಸರ್ವ ಶಿಕ್ಷಕರಿಗೂ ಸುಲಭವಾದದ್ದರಿಂದ ಸಾರ್ವಜನಿಕ ಹಿತದೃಷ್ಟಿಯಿಂದ ಇವನ್ನು ನೆರವೇರಿಸಲೇಬೇಕು! ಈ ಏರ್ಪಾಡಿಗೆ ಸ್ವಲ್ಪವಾದರೂ ಅತಂಕ ಬಂದರೆ ಚಳವಳಿ, ಸಂಪು, ಬಂದ್‌ಗಳಿಗೆ ಆಹ್ವಾನ ಕೊಟ್ಟು ಕಲ್ಲೆಸೆತ, ಕುರ್ಚಿಮುರಿತ, ವಾಹನ ದಹನ ಹೊಡೆತ ಬಡಿತಗಳಿಗೆ ಮುಕ್ತ ಆಮಂತ್ರಣ ಕೊಟ್ಟಂತೆಯೇ. ಇದರಲ್ಲಿ ಊರಪೋಲಿಗಳು ಸೇರಿಕೊಳ್ಳದೇ ಇರುವದುಂಟೇ?

ಶಿಕ್ಷಣಕ್ಷೇತ್ರದಲ್ಲಿ ಇಂಥ ಅರಾಜಕತೆ ತಾಂಡವಾಡುವಾಗ ರಾಜಕಾರಣಿಗಳು ಅದರ ಸಂಪೂರ್ಣ ಲಾಭಪಡೆದುಕೊಳ್ಳದೇ ಇರುವದುಂಟೇ? ಆಳುವ ಪಕ್ಷ ಒಂದು ಬಣವನ್ನು ಪ್ರೋತ್ಸಾಹಿಸಿದರೆ, ಇನ್ನೊಂದನ್ನು ವಿರೋಧಿಗಳು ಹುರಿದುಂಬಿಸುವರು. ಶಿಕ್ಷಣದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಈ ಕೋಳಿ ಅಂಕ ನಡೆಯುತ್ತಿದ್ದರೂ ವಿದ್ಯಾರ್ಥಿ ಹುದ್ದರಿ / ಶಿಕ್ಷಕ ಅಧಿಕಾರಿಗಳ ಆಯ್ಕೆ ಅಥವಾ ಚುನಾವಣೆಗಳ ಸಂದರ್ಭದಲ್ಲಿಈ ಜೂಜಾಟ ಭರದಿಂದ ನಡಯುವದು. ಗ್ರಾಮಪಂಚಾಯತಿ, ನಗರಸಭೆ, ಸಹಕಾರಿ ಸಂಘಗಳ ಚುನಾವಣೆಗಳನ್ನು ಒಂದಿಲ್ಲೊಂದು ಕುಂಟು ನೆಪದಮೇಲೆ ಮುಂದೂಡಿದರೂ ಶಾಲೆ, ಕಾಲೇಜು ವಿಶ್ವವಿದ್ಯಾಲಯಗಳ ಚುನಾವಣೆಗಳು

ಯಥಾಪ್ರಕಾರವಾಗಿ ನಡೆದು ಗದಾಯುದ್ಧ ಪ್ರಸಂಗಗಳು ತಪ್ಪದೇ ನಡೆಯುವದು ಪದ್ಧತಿ. ಇಷ್ಟು ಸಾಲದ್ದಕ್ಕೆ ಶಿಕ್ಷಣದ ಹೊರಕ್ಷೇತ್ರದಲ್ಲೂವಿದ್ಯಾರ್ಥಿಗಳನ್ನು ರಾಜಕೀಯ ಆಟದಲ್ಲಿ ಬಳಸುವದರಿಂದ ಮುಂದೆ ಬಳಿಸಬೇಕಾದ ವಿಧಾನಗಳನ್ನು ವಿದ್ಯಾರ್ಥಿ ಜೀವನದಲ್ಲಿಯೇ ಉಪಯೋಗಿಸಲಾರಂಭಿಸುತ್ತಾರೆ. ಹೊಸ ವಿದ್ಯಾರ್ಥಿಗಳಿಗೆ ಕೀಟಲೇಕೊಡುವದು, ತಮ್ಮದೇ ಶಿಕ್ಷಣ ಸಂಸ್ಥೆಯ ಕಟ್ಟಡಗಳ ಅಂದಚೆಂದ ಕೆಡಿಸುವದು, ಹುಡುಗಿಯರನ್ನು ಹೆದರಿಸುವದು, ಕ್ಲಾಸಿಗೆ ಚಕ್ಕರ್ ಕೊಟ್ಟು ಊರೆಲ್ಲ ಸುತ್ತುವದು. ಧೂಮಪಾನ ಮದ್ಯಪಾನ ಹಶಿಶ್ ಇತ್ಯಾದಿ ಅಮಲಿನ ಬಳಕೆಗಳಲ್ಲಿ ಇಂದಿನ ವಿದ್ಯಾರ್ಥಿದಗಳು ಪ್ರವೀಣರು. ವರ್ಗ ತಪ್ಪಿಸಿಕೊಂಡರೂ, ಯಾವದೇ ಹೊಸ ಚಲಚ್ಚಿತ್ರ ತಪ್ಪಿಸಿಕೋಳ್ಳದ ನಿಷ್ಠಾವಂತರವರು. ಈ ಎಲ್ಲಾ ಚಟುವಟಿಕೆಗಳಲ್ಲಿ ಮಿೂರಿದ ಹೆಸರುವಾಸಿಗಳಿಗೆ ರಾಜಕಾರಣಿಗಳು ಬಲು ಬೇಗ ತಮ್ಮಸಾಲಿಗೆ ಸೇರಿಸಿಕೊಳ್ಳುವದರಿಂದ ಅವರಿಗೆ ಪ್ರತಿಷ್ಠೆ ಬರುತ್ತದೆ.

ಬ್ರಿಟಿಷರು ಭಾರತೀಯರಿಗೆ ದಕ್ಷ ಆಡಳಿತಕ್ಕೆ ಬೇಕಾಗುವ ಗುಮಾಸ್ತರನ್ನು ತಯಾರಿಸಲು ಮಾತ್ರಸಾಕಾಗುವಷ್ಟು ಶಿಕ್ಷಣಕೊಟ್ಟರೆಂಬ ಅಪಾದನೆ ಇದ್ದೇ ಇದೆ. ಈ ಶಿಕ್ಷಣದಿಂದ ಬೇರೆಏನೂ ಸಾಧಿಸದಿದ್ದರೂ ಇಂಗ್ಲಿಷ್ ಭಾಷೆ ಕಲಿತಿದ್ದರಿಂದ ಇಂದು ನಾವು ಅಂತರ್ ರಾಷ್ಟ್ರೀಯ ಕ್ಷೇತ್ರದಲ್ಲಿ ಇತರರ ಸರಿಸಮಾನರಂತೆ ಎದೆಯುಬ್ಬಿಸಿ ನಡೆಯುವಂತಾಗಿದೆ. ಇಲ್ಲದಿದ್ದರೆ ತಿಬೇಟದಂತಹ ಶಾಂತಿಪ್ರಿಯ ಹಿಂದುಳಿದ ದೇಶ ಅನ್ನಿಸಿಕೊಳ್ಳಬೇಕಾಗುತ್ತಿತ್ತು. ಆಂಗ್ಲರು ಶಿಕ್ಷಣವನ್ನು ಕೇವಲ ಧನಿಕರಿಗಾಗಿ ಮಿೂಸಲಿಟ್ಟರು ಎಂಬುದು ಇನ್ನೊಂದು ಆಪಾದನೆ. ಅವರು ದೇಶಬಿಟ್ಟು ತೊಲಗಿದ ಮೂವತ್ತು ವರ್ಷಗಳ ನಂತರ ಈ ಕ್ಷೇತ್ರದಲ್ಲಿ ನಮ್ಮ ಸಾಧನೆ ನೆನೆಸಿದರೆ ಬೆಚ್ಚುವಂತಾಗುತ್ತದೆ. ಹಿಂದೆ ಊರಹಿರಿಯರು ಪ್ರತಿಷ್ಠಿತರು ಧೀಮಂತರು ಸುಸಂಸ್ಕೃತರು. ತಮ್ಮ ಮಕ್ಕಳು ಮರಿಮಕ್ಕಳಿಗೆವಿದ್ಯಾಭ್ಯಾಸದ ಸವಲತ್ತುಗಳುಸಿಗಬೇಕೆಂಬ ಸದುದ್ದೇಶದಿಂದ ಚಂದಾ ಸಂಗ್ರಹಿಸಿ ಶಾಲೆ-ಕಾಲೇಜುಗಳನ್ನು ಸ್ಥಾಪಿಸಿ ನಡೆಸುತ್ತಿದ್ದರು. ಅದರೆ ಇಂದು ಶಿಕ್ಷಣ ಸಂಸ್ಥೆಗಳನ್ನು ಧನ ಸಂಪಾದನೆಯ ಸುಲಭೋಪಾಯಕ್ಕೆ ಬಳಸುವದು ತೀರ ಶೋಚನೀಯ. ಬಂಡವಾಳವಿಲ್ಲದೇ ಜೇಬು ತುಂಬಿಸುಕೊಳ್ಳಬಹುದಾದ ವೃತ್ತಿ ಅಥವಾ ಉದ್ದಿಮೆ. ಬೇರಾವುದು ತಾನೇ ಇದ್ದೀತು? ಬೇಕಾಗುವ ಕಟ್ಟಡ, ಉಪಕರಣಗಳ ನೆವದಿಂದ ಸರಕಾರದ ಸಹಾಯ ಧನ ಪಡೆಯುವದು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಭವಿಷ್ಯಕ್ಕಾಗಿ ಕಂಗಾಲಾದ ಪಾಲಕರನ್ನು ದೋಚುವದು. ಇಷ್ಟರಿಂದಲೇ ತೃಪ್ತಿಯಾಗದೇ ಶಿಕ್ಷಕರ ಅರ್ಧ ಸಂಬಳವನ್ನುಕೊಡುಗೆ-ದೇಣಿಗೆಯ ರೂಪದಲ್ಲಿ ತಾವೇನುಂಗಿ ನೀರು ಕುಡಿಯುತ್ತಾರೆ ಶಿಕ್ಷಣ ವ್ಯಾಪಾರಿಗಳು!

ಇಂದಿನ ಶಿಕ್ಷಣದಿಂದ ಸಮತೋಲನದ ವ್ಯಕ್ತಿತ್ವ ಬೆಳೆಯುವದೇ ಇಲ್ಲ. ಪಡೆದ ಡಿಗ್ರಿಗಳಿಂದ ನೌಕರಿಗಳು ದೊರೆಯುವದಿಲ್ಲವೆಂದು ಅರಿತಿದ್ದರೂ ಪಾಲಕರು ಶಿಕ್ಷಣ ಮತ್ತು ಆಡಳಿತವರ್ಗದವರಿಂದ ತಲೆಬೋಳಿಸಿಕೊಂಡು ಮಕ್ಕಳನ್ನು ಶಾಲೆ-ಕಾಲೇಜುಗಳಿಗೆ ಸೇರಿಸುವದು ತೀರ ವಿರೋಭಾಸ. ಮಗು ಧರೆಗೆ ಇಳಿದು ಬರುತ್ತಿದ್ದಂತೆ ಅದರ ವಿದ್ಯಾಭ್ಯಾಸಕ್ಕಾಗಿ ಚಿಂತಿತರಾದ ತಾಯ್ತಂದೆಗಳು ನಂತರ ಅದಕ್ಕೆ ಪ್ರವೇಶ ಸಿಗಲಿಕ್ಕಿಲ್ಲವೆಂದು ಊಹಿಸಿಕೊಂಡೇ ಕಂಗಾಲಾಗಿ ದೇಣಿಗೆಕೊಟ್ಟು ಸ್ಥಳಕಾದಿರಿಸಿ ಮೂರು ವರ್ಷಕ್ಕೆ ಶಾಲೆಗೆ ಸೇರಿಸಿ ಬಿಡುವರು. ಆಡುತ್ತ ಹಾಡುತ್ತಾ ಬೆಳೆಯಬೇಕಾದ ಮಗು ಅಳುತ್ತಾ ಪಾಲಕರೊಂದಿಗೆ ಶಾಲೆಗೆ ಹೋಗುವಾಗ ಅಯ್ಯೋ ಅನಿಸದೇ

ಇರದು. ಎ.ಬಿ.ಸಿ ಎಂದು ತೋದಲು ಮಾತುಗಳನ್ನು ಕೇಳಿಸಿಕೋಂಡಾಗ ತಮ್ಮ ಮಗು ಭಾರೀಆಂಗ್ಲ ಭಾಷಾ ಪಂಡಿತನೋ, ವಿಜ್ಞಾನಿಯೋ ಆಗುತ್ತಾನೆಂಬ ಕನಸಿನಿಂದಲೇಸಕ್ಕರೆನಿದ್ದೆಯಲ್ಲಿದ್ದ ಮಗುವನ್ನು ಎಬ್ಬಿಸಿ ಬೆದರಿಸಿ, ಮುಖ ತೊಳಿಸಿ ಒತ್ತಾಯದ ನಾಷ್ತಾ ಮಾಡಿಸಿ,ಕಂಠ ಲಂಗೋಟ ಬೂಟುಗಳ ಸಮವಸ್ತ್ರ ತೊಡಿಸಿ, ಶಾಲೆಗೆ ಒಯು ಬಿಟ್ಟು ಬರುತ್ತಾರೆ. ಕಾಲಕಾಲಕ್ಕೆ ಅದಕ್ಕೆ ಬೇಕಾಗುವ ಊಟ-ತಿಂಡಿಗಳನ್ನು ಒದಗಿಸಿದರೂ ಆ ಮಗುವಿಗೆ ರುಚಿಸುವದು ಹತ್ತು ಪೈಸೆಯ ಸೀಬೆ ಹಣ್ಣು-ಕಡಲೇಕಾಯಿಗಳೇ! ಹೆಚ್ಚೆಚ್ಚು ಡೊನೇಶನ್ ಪಡೆಯುವ ಹೊಂಚಿನಲ್ಲಿದ್ದ ಮುಖ್ಯಾಧ್ಯಾಪಕಿ ನಿಮ್ಮ ಮುದ್ದಾದ ಜಾಣಮರಿ ವರ್ಗದಲ್ಲೇ ಮಿಗಿಲಾದ ಸ್ಮಾರ್ಟನೆಸ್‌ಪಡೆದಿದ್ದಾನೆ" ಎಂದು ಹೊಗಳಿದಾಗ ಪಾಲಕರು ಹಿರಿಹಿರಿ ಹಿಗ್ಗಿ, ಸಾಲವಾದರೂ ಮಾಡಿ ಮಗುವಿನ ಭವಿಷ್ಯ ನಿರ್ಮಾಣಕಾರ್ಯದಲ್ಲಿ ತೊಡಗಿರುತ್ತಾರೆ. ಪರೀಕ್ಷೆಯಲ್ಲಿ ಇನ್ನೂ ಹೆಚ್ಚು ಗುಣಗಳನ್ನು ಪಡೆಯುವ ಬುದ್ಧಿ-ಮತ್ತೆ ನಿಮ್ಮ ಮಗುವಿಗೆ ಇದೆ ಎಂದು ಮಿಮಾಂಸೆ ತೋರಿಸಿ, ವಿಶೇಷ ತರಬೇತಿಯ ಟ್ಯೂಶನ್ ಎಂದು ಇನ್ನಷ್ಟು ಸುರಿಯುತ್ತಾರೆ. ಸಮವಸ್ತ್ರ ಪಟ್ಟಿ-ಪುಸ್ತಕ, ಪಂತಿ, ಪ್ರವಾಸ, ಶಿಕ್ಷಕ-ಪಾಲಕ ದಿನಾಚರಣೆ ವಾರ್ಷಿಕೋತ್ಸವ ಛಾಯಾಚಿತ್ರಗಳೆಂದು ಎಳೆಯರ ಶಿಕ್ಷಣಕ್ಕೇ ಸಾವಿರಾರು ರೂಪಾಯಿಗಳು ಖರ್ಚಾಗುತ್ತವೆ.

ಆಡುವ ಶಾಲೆಯಿಂದ ಪ್ರಾಥಮಿಕ ಮಾಧ್ಯಮಿಕ ಶಾಲೆಗಳಿಗೆ ಸೇರಿಸುವಾಗಲೂ ಇದೇಹಾಡು. ಉದಾರ ಮನಸ್ಸಿನ ದೇಣಿಗೆ ಸಾಲದೆಂದು ಇಂದಿನ ದಿನಗಳಲ್ಲಿ ಠೇವಣಿ ಬೇರೆ ಕೇಳುತ್ತಾರೆ. ಐದರಿಂದ ಹತ್ತು ಸಾವಿರದ ಈ ಮೊತ್ತವನ್ನು ಬಡ್ಡಿ ಇಲ್ಲದೇ ಕೋಡಬೇಕಂತೆ! ಇದೆಲ್ಲ ಮುಗಿದು ಶಾಲಾಶಿಕ್ಷಣದ ಕೊನೆಯ ಪರೀಕ್ಷೆಯಲ್ಲಿ ವಿದ್ಯಾರ್ಥಿ ಅತ್ಯುಚ್ಚ ಗುಣ ಪಡೆದರೆ ಪಾಲಕರು ಬಚಾವ್. ಇಲ್ಲದಿದ್ದರೆ ಕಾಲೇಜ ಪ್ರವೇಶಕ್ಕೆ ನೆಪಮಾತ್ರದ ಸಂದರ್ಶನದಲ್ಲಿ ಕೇಳಿದ ಅಸಂಬದ್ಧ ಪ್ರಶ್ನೆಗಳಿಗೆ ಸಮರ್ಪಕ ಉತ್ತರಕೊಟ್ಟು. ಜೊತೆಗೆ ಸಾವಿರಾರು ರೂಪಾಯಿಗಳಿಂದ ಸಂಸ್ಥಾ-ಚಾಲಕ ವರ್ಗದವರ ಕೈಬೀಸಿ ಮಾಡಿದಾಗಲೇ ಇಚ್ಛಿಸಿದ ಕೆಲಸಗಳು ಕೈಗೂಡುವವು. ಒಳ್ಳೆಯ ವಾಚನಾಲಯವು ಪ್ರಯೋಗಾಲಯವು ಪ್ರಾಧ್ಯಾಪಕ ವೃಂದ ಇಲ್ಲದೇ ಕಾಲೇಜಿನ ಶಿಕ್ಷಣ ಹೇಗಿದ್ದೀತು? ಚಲಚ್ಚಿತ್ರಗಳ ಪ್ರಭಾವದಿಂದಲೋ ಹಿರಿಯ ವಿದ್ಯಾರ್ಥಿಗಳ ತರಬೇತಿಯಿಂದಲೋ ವರ್ಗದಲ್ಲಿ ಕುಚೋದ್ಯ ಸಹಪಾಠಿ, ವಿದ್ಯಾರ್ಥಿನಿಯರಿಗೆ ಕೀಟಲೆ ಶಿಕ್ಷಕರ ಗೇಲಿಗಳಿಗೆ ಹೆಚ್ಚಿನ ಪ್ರಾಧಾನ್ಯಸಿಗುತ್ತದೆ. ತಮ್ಮ ಕೆಟ್ಟ ಚಟಗಳಿಗೆ, ಐಷಾರಾಮಕ್ಕಾಗಿ ಹಣಬೇಕಾದಾಗ ಪಾಲಕರನ್ನು ದೋಚುವದು ಪ್ರಾರಂಭವಾಗುತ್ತದೆ. ಸಾಲದಕ್ಕೆ ತಮಗಿಂತ ಬಡವರಾದವರು ಇನ್ನೂ ಹೆಚ್ಚು ಖರ್ಚು ಮಾಡುತ್ತಾರೆಂಬ ಆಲಾಪ ಬೇರೆ.

ವಿದ್ಯಾರ್ಥಿಗಳ ಈ ದುಷ್ಕೃತ್ಯಗಳಿಗೆ, ಶಿಕ್ಷಕರ-ಪಾಲಕರ ಪೋಷಣೆ ಸಿಗುತ್ತಿರುವದು ನಮ್ಮದೇಶದ ದೌರ್ಭಾಗ್ಯ ಶಾಲೆ-ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ಪರೀಕ್ಷೆಗಳಲ್ಲಿ ಪ್ರಶ್ನೆಗಳನ್ನು ಉತ್ತರಿಸಲು ವಿದ್ಯಾರ್ಥಿಗಳು ವಾಮಮಾರ್ಗ ಬಳಸುವದು ಎಲ್ಲರಿಗೂತಿಳಿದ ವಿಷಯ. ಆದರೆ ತಮ್ಮ ಮತ್ತು ವಿದ್ಯಾರ್ಥಿಗಳ (!) ಭವಿತವ್ಯದ ಬಗ್ಗೆ ಕಳವಳ ಪಟ್ಟ ಶಿಕ್ಷಕರು ಕರೆಹಲಗೆಯ ಮೇಲೆ ಉತ್ತರಗಳನ್ನು ಬರೆದಿಡುವದು ಶಿಕ್ಷಣ ಕ್ಷೇತ್ರಕ್ಕೆ ನಮ್ಮ ಇತ್ತೀಚಿನ ಕೊಡುಗೆ ಶಾಲಾ ಸರ್ಟಿಫಿಕೇಟ್ ಪರೀಕ್ಷೆಯಲ್ಲಿ ಶೇಕಡಾ ಐದರಿಂದ ಹತ್ತಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಪಾಸಾದ ದಾಖಲೆಗಳೇ ಇಲ್ಲದೆ ಕೋಲಾರ, ಬೀದರ, ಬಿಜಾಪುರ ಜಿಲ್ಲೆಗಳಿಂದ ಒಮ್ಮಿಂದೊಮ್ಮೆ ಸೇಕಡಾ

ಎಂಬತ್ತರಿಂದ ತೊಂಭತ್ತರವರೆಗೆ ವಿದ್ಯಾರ್ಥಿಗಳು ತಮ್ಮಪರೀಕ್ಷೆಯಲ್ಲಿ ಲೀಲಾಜಾಲವಾಗಿ ಉತ್ತೀರ್ಣರಾದುದರಿಂದ ಅದೆಂತಹದೋ ಪವಾಡ ನಡೆದಿರಬೇಕೆಂದು ಎಲ್ಲರಿಗೂ ಅನಿಸಿತು. ವಿದ್ಯಾಭ್ಯಾಸ ಉತ್ತಮಗೊಳಿಸದಿದ್ದರೆ ಶಾಲೆಗಳ ಧನಸಹಾಯ ನಿಲ್ಲಿಸುವದಾಗಿ ಸರಕಾರಿ ಅಧಿಕಾರಿಗಳು ಬೆದರಿಸಿದ್ದರಿಂದ ವಿದ್ಯಾರ್ಥಿಗಳನ್ನು ದಿಡೀರ್ ಜಾಣ ಮಾಡುವ ಈ ಸುಲಭ ಉಪಾಯ ಬಳಸಲಾಯಿತು ಎಂಬ ಸತ್ಯ ಬೆಳಕಿಗೆ ಬಂದಿತು! ಪರೀಕ್ಷೆ ಮುಗಿದ ನಂತರ ಇನ್ನಷ್ಟು ಉತ್ತರಪತ್ರಿಕೆಗಳನ್ನು ಜೋಡಿಸುವದು. ಬೇರೆಯೇ ಉತ್ತರ ಪತ್ರಿಕೆಗಳನ್ನು ತಂದಿಡುವದು, ಪರೀಕ್ಷಕರ ಮೇಲೆ ಪ್ರಭಾವ ಬೀರುವದು, ಗುಣಗಳನ್ನು ಹೆಚ್ಚಿಸುವದು, ಗುಮಾಸ್ತರಿಂದ ಗುಣಗಳನ್ನು ಬದಲಿಸುವದು ಖೋಟಾ ಮಾರ್ಕ್ಸ್‌ಕಾರ್ಡ್ ಬಳಸುವದು ಇವೆಲ್ಲ ಪಾಲಕ-ಶಿಕ್ಷಕರ ಆಶೀರ್ವಾದದಿಂದ ನಡೆಯುವ ದುಷ್ಕೃತ್ಯಗಳು. ಉಚ್ಚ ಅಧಿಕಾರಿಗಳಿಗೆ ರಾಜಕಾರಣಿಗಳಿಗೆ ಶಿಕ್ಷಣ ಕ್ಷೇತ್ರದಲ್ಲಿದ್ದವರ ನೆರವು ಆನಂತರ ಪಡೆಯುವದು ಸರಿಬೀಳದ್ದರಿಂದ ಅವರುಹೊಸಹೊಸ ವಿಧಾನಗಳನ್ನು ತೆರೆದು ತರುತ್ತಿದ್ದಾರೆ. ಅಧಿಕಾರಿಯೋರ್ವನು ತನ್ನ ಕನಸುಗಾತಿ-ಮಗಳಿಗೆ, ಪ್ರಶ್ನೆ ಪತ್ರಿಕೆ ಮುಂಚಿತವಾಗಿ ಕೈಸೇರುವಂತೆ ನೋಡಿಕೊಂಡರೆ ಇನ್ನೊಬ್ಬನು ತನ್ನ ಮಗನ ಆಗಾಧ (ಅ) ಜ್ಞಾನದ ಅರಿವು ಇದ್ದುದರಿಂದ ಆದರ್ಶ ಉತ್ತರಗಳನ್ನೇ ಬರೆದುಕೊಡಲು ಕೇಳಿಕೊಂಡನಂತೆ. ಗೋವಾದ ಮಂತ್ರಿಯೊಬ್ಬ ತನ್ನ ಅಕ್ಕನ ಮಗಳ ಭವಿತವ್ಯವನ್ನು ಕೈಕೆಳಗಿನ ಅಧಿಕಾರಿಗೆ ಹೇಳಿಸಿ ರೂಪಿಸಿಕೊಂಡರೆ, ಬಿಹಾರದಲ್ಲಿ ಶಿಕ್ಷಣಾಧಾಕಾರಿಗಳೇ ಎಲ್ಲ ರ್‍ಯಾಂಕಗಳನ್ನು ಮಂತ್ರಿಗಳ ಮಕ್ಕಳಿಗೆ ನಿಷ್ಪಕ್ಷ ತತನದಿಂದ ಹಂಚಿದರಂತೆ! ಮಧ್ಯಪ್ರದೇಶದವರು ಇನ್ನೂ ಮುಂದೆ ಹೋಗಿ ಪ್ರಾಧ್ಯಾಪಕರ ಮಕ್ಕಳಿಗೆ ಎಲ್ಲ ಸುವರ್ಣ ಪದಕಗಳು ಸಿಗುವಂತೆ ನೋಡಿಕೊಂಡರಂತೆ. ಚರ್ಚಾಸ್ಪದ ರೀತಿಯಲ್ಲಿ ಡಾಕ್ಟರೇಟಗಳಿಸಿದ ಬಿಹಾರದ ಮಾಜಿ ಮುಖ್ಯಮಂತ್ರಿ ಜಗನ್ನಾಥ ಮಿಶ್ರರ ಮೇಲ್ವಿಚಾರಣೆಯಲ್ಲಿ ಹನ್ನೆರಡು ವಿದ್ಯಾರ್ಥಿಗಳು ಡಾಕ್ಟರೇಟ ಪದವಿಗೆ ಸಂಶೋಧನೆ ನಡೆಸಿದ್ದಾರೆ ಎಂದರೆ ಅಲ್ಲಿಯ ಶಿಕ್ಷಣದ ಅಧೋಗತಿಯ ಕಲ್ಪನೆ ಬರುವಂತಿದೆ.

ತಾಂತ್ರಿಕ ಶಿಕ್ಷಣದ ಸ್ಥಿತಿ-ಗತಿ ಇನ್ನೂ ಕುತೂಹಲಕಾರಿ. ಮಣಿಪಾಲದ ಪೈ ಕುಟುಂಬದವರು ಹಿಂದುಳಿದ ಪ್ರದೇಶದ ಅಭ್ಯುದಯಕ್ಕಾಗಿ ಅಲ್ಲೊಂದು ಮೆಡಿಕಲ್ ಕಾಲೇಜು ಸ್ಥಾಪಿಸಬೇಕೆಂಬ ಸದುದ್ದೇಶದಿಂದ ಪ್ರವೇಶ ದೊರಕಿಸಿದವರಿಂದ ಸಹಾಯಧನ ಪಡಯಲಾರಂಭಿಸಿದರು. ಆದರೆ ಬರುಬರುತ್ತ ಸಹಾಯಧನದಿಂದಲೇ ಪ್ರವೇಶ ದೊರಕಿಸಲು ಸಾಧ್ಯವಾದದ್ದು ಶಿಕ್ಷಣ ಕ್ಷೇತ್ರದ ದುರ್ಭಾಗ್ಯ. ಈ ತಂತ್ರವನ್ನೆ ಬಳಸಿ ಬೆಳಗಾಂವ, ಬಳ್ಳಾರಿ, ದಾವಣಗೆರೆ ಇನ್ನಿತರ ಕಡೆಗಳಲ್ಲಿ ಮೆಡಿಕಲ್ ಕಾಲೇಜು ತಲೆಯೆತ್ತಿಕೊಂಡು ಮೆರೆಯುತ್ತಿವೆ. ಅಂದಿಗೂ-ಇಂದಿಗೂ ಅಂತರವಿಷ್ಟೆ. ಪೈಕುಟುಂಬದವರು ಪ್ರಾರಂಭದಲ್ಲಿ ಕೇವಲ ೨-೩ ಸಾವಿರ ರೂಪಾಯಿಗಳ ಸಹಾಯ ಧನವನ್ನು ಮುಚ್ಚು ಮರೆಯಿಲ್ಲದೇ ಪಡೆದರೆ ಈಗ ಈ ಬೇಡಿಕೆ ಹೆಮ್ಮರವಾಗಿ ಮೂರು ಲಕ್ಷ ದಾಟಿದೆ! ನಮ್ಮ ರಾಜ್ಯದಲ್ಲಿ ಇಷ್ಟೊಂದು ಹಣ ಯೋಗ್ಯತೆಯಿಲ್ಲದ ಮಕ್ಕಳ ಮೇಲೆ ತೊಡಗಿಸುವವರು ಇರದಿದ್ದರೂ ಹೆದರಬೇಕಾಗಿಲ್ಲ. ಬೇರೆಡೆ ಹಣಮಾಡಿದ ಆಧುನಿಕರು ಸಾಲಾಗಿ ನಿಂತು ಪ್ರವೇಶ ಪಡೆದು ಕನ್ನಡಿಗರ ಉದಾರ ಹೃದಯವನ್ನು ಹೊಗಳುತ್ತಲೇ ಹಿಂದಿರುಗುತ್ತಾರೆ ಲಕ್ಷಾವಧಿ ರೂಪಾಯಿ ಖರ್ಚುಮಾಡಿ ಸಿದ್ದರಾದ ಈ ಡಾಕ್ಟರರ ವೈದ್ಯಕೀಯ ಯೋಗ್ಯತೆ ಮತ್ತು ಹಣ ಸಂಪಾದನೆಯ ವಿಧಾನಗಳ ಕುರಿತು ಹೇಳಿದಷ್ಟು ಕಡಿಮೆಯೇ!

ಸರ್ ವಿಶ್ವೇಶ್ವರಯ್ಯನವರು ಒಳ್ಳೆಯ ಇಂಜಿನಿಯರರು. ಲಕ್ಷಾವಧಿ ಜನರ ಜೀವನದ ಸಾರ್ಥಕತೆ ಮಾಡಬಹುದೆಂದು ತೋರಿಸಿಕೊಟ್ಟು, ಎಂಜಿನಿಯರಿಂಗ್ ಶಿಕ್ಷಣಕ್ಕೆ ರಾಜ್ಯದಲ್ಲಿ ಭದ್ರ ತಳಪಾಯ ಹಾಕಿಕೊಟ್ಟಿರುವದು, ನಮ್ಮೆಲ್ಲರ ಭಾಗ್ಯ. ಇನ್ನಿತರ ರಾಜ್ಯಗಳು ಈ ಕ್ಷೇತ್ರದಲ್ಲಿ ಹಿಂದುಳಿದಿದ್ದ ದಿನಗಳಲ್ಲಿ ನಮ್ಮಲ್ಲಿಂದ ತಂತ್ರಜ್ಞರು ರಾಜಸ್ಥಾನ, ಮಧ್ಯಪ್ರದೇಶಗಳಿಗೆ ಹೋಗಿ ಜಯಭೇರಿ ಹೊಡಿದಿದ್ದಾರೆ. ಆದರೆ ಇಂದು....? ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಹಣದ ಹೊಳೆ ಹರಿಯುತ್ತದೆ ಎಂದು ಮನಗಂಡ ರಾಜಕಾರಣಿಗಳು, ಸಮಾನಭಾವದ ನೆಪದಲ್ಲಿ ಹಿಂದುಳಿದ ಜಾತಿಗಳ ಒಂದೊಂದು ಮೆಡಿಕಲ್-ಇಂಜಿನಿಯರಿಂಗ ಕಾಲೇಜು ಪ್ರಾರಂಭಿಸಲು ಪ್ರೋತ್ಸಾಹಿಸಿದ್ದಾರೆ. ಈ ಪ್ರೋತ್ಸಾಹಕ್ಕಾಗಿ ಅವರಿಗೆ ದೊರೆತ ಪ್ರತಿಫಲದ ಹರಹು ಬೇರೆ ಹೇಳಬೇಕಿಲ್ಲ. ಕುಡಿಯಲು ನೀರು ಸಿಗದ ಹಳ್ಳಿಗಳಲ್ಲಿ ಕೋಕೋಕೋಲಾ ಸಿಗುತ್ತಿದ್ದಂತೆ ಒಳ್ಳೆಯ ಶಾಲೆಗಳಿಲ್ಲದ ಊರಿನಲ್ಲಿ ಗೋದಾಮುಗಳಂತಹ ಕಟ್ಟಡದಲ್ಲಿ ತಾಂತ್ರಿಕ ಕಾಲೇಜಿನ ಬೋರ್ಡು ತೂಗಹಾಕಿ ಆಡಳಿತ ವರ್ಗದವರು ತಮ್ಮ ಜೇಬುಗಳನ್ನು ತುಂಬಿಕೋಳ್ಳುವದರಲ್ಲಿ ಮೈಮರೆತಿದ್ದಾರೆ. ಇದರಿಂದಾಗಿ ತಾಂತ್ರಿಕ ವಿದ್ಯೆ ಪಡೆದು ರಾಜ್ಯದ-ದೇಶದ ಪ್ರಗತಿ ಸಾಧಿಸಲು ನೆರವಾಗಬಹುದಾಗಿದ್ದ ಬುದ್ಧಿವಂತ ವಿದ್ಯಾರ್ಥಿಗಳಿಗೆ ಎಲ್ಲಿಯೂ ಪ್ರವೇಶ ದೊರಕದೇ ಗುಮಾಸ್ತರೋ ಕಾಗದಪತ್ರ ತಪಾಸಕರೋ ಆಗಿ ಕೊಳೆಯುವಂತಾಗಿದೆ. ಅದೇ ಕಾಳಸಂತೆಯವರರ, ಲಂಚಕೋರರ ರಾಜಕಾರಣಿಗಳ ಮಕ್ಕಳು ಅತ್ಯಂತ ಕಡಿಮೆ ಗುಣ ಪಡೆದರೂ ತಂದೆಯ ಬೊಕ್ಕಸವನ್ನೇ ಅಧರಿಸಿ ತಾಂತ್ರಿಕ ಕಾಲೇಜುಗಳಲ್ಲಿ ಮೆರೆದಾಡುತ್ತಾರೆ.

ಅಮೇರಿಕೆಯಂತಹ ಅಭಿವೃದ್ಧಿ ಹೊಂದಿದ ದೇಶದಲ್ಲಿ ಒಬ್ಬ ಡಾಕ್ಟರೇಟ ಪದವಿಧರನು ೨,೦೦೦ಜನರಿಗೆ ಆಗುವಷ್ಟು ಉದ್ಯೋಗಗಳನ್ನು ನಿರ್ಮಿಸುತ್ತಾನೆಂದು ಲೆಖ್ಖಾಚಾರ ಹಾಕಲಾಗಿದೆ. ಈ ರಾಷ್ಟ್ರಗಳು ತಾಂತ್ರಿಕ ಶಿಕ್ಷಣವನ್ನು ಜನಹಿತಕ್ಕೆ, ರಾಷ್ಟ್ರ ನಿರ್ಮಾಣಕ್ಕೆ, ಬಳಸಿಕೊಂಡಿದ್ದರಿಂದ ಅವು ನಿರಂತರವೂ ಪ್ರಗತಿ ಪಥದಲ್ಲಿವೆ. ನಮ್ಮ ದೇಶದಲ್ಲಿ ಧೀಮಂತ ವಿದ್ಯಾರ್ಥಿಗಳಿಗೆ ಏನೂ ಕೊರತೆಯಿಲ್ಲ. ಆದರೆ ಅವರಿಗೆ ಶಿಕ್ಷಣದ ಅವಕಾಶಗಳೇ ಇಲ್ಲವಾಗಿವೆ. ವಿದೇಶದ ತರಬೇತಿಯಿದ್ದವರಿಗೂ ಉದರಪೋಷಣೆ ಕಷ್ಟಸಾಧ್ಯವಾಗಿ ವಲಸೆ ಹೋಗುವದೊಂದೇ ಮಾರ್ಗವಾಗಿದೆ. ಆ ದೇಶಗಳು ಅವರಿಗೆ ಸಕಲ ಸವಲತ್ತುಗಳನ್ನು ಕೊಟ್ಟು ಬರಮಾಡಿಕೊಳ್ಳುತ್ತವೆ. ಅಮೇರಿಕೆ, ಮಹಾನ್ ರಾಷ್ಟ್ರವಾಗಲು ವಿವಿಧ ದೇಶಗಳಿಂದ ಗುಳೇಹೋದ ಧೀಮಂತರ ಕೊಡುಗೆಯೇ ಕಾರಣವೆಂದು ಅವರೇ ಒಪ್ಪಿಕೊಂಡಿದ್ದಾರೆ. ಇವರಲ್ಲಿ ಭಾರತೀಯರು ಅಧಿಕ ಸಂಖ್ಯೆಯಲ್ಲಿದ್ದಾರೆಂದು ಅಭಿಮಾನ ಪಡಬೇಕೇ ಅಥವಾ ಅವರ ಲಾಭವನ್ನು ನಮ್ಮವರು ಮಾಡಿಕೊಳ್ಳುವಂತಿಲ್ಲವೆಂದು ಕಳವಳ ಪಡಬೇಕೇ ತಿಳಿಯದಾಗಿದೆ.

ದೇಶದ ಎಲ್ಲ ಕ್ಷೇತ್ರಗಳ ವಾತಾವರಣ ಕಲುಷಿತವಾದಂತೆ ಶಿಕ್ಷಣದಲ್ಲೂ ಕಳಪೆಯಾಗಿದೆ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆದರೆ ಈ ಕಳಪೆತನ ಹರಡದಂತೆ ಮಾಡಲು ಯಾವ ಯತ್ನವೂ ನಡೆಯದೇ ಇದ್ದದ್ದು ಶೋಚನೀಯ. ಕೇವಲ ಅಕ್ಷರಾಭ್ಯಾಸ ಬೇಕಾದವರಿಗೆ ಹೆಚ್ಚಿನ ಶಿಕ್ಷಣ ಕೊಡುವುದು, ಶಿಕ್ಷಕರಾಗ ಬಯಸುವವರಿಗೆ ವಿದ್ಯಾವಂತರನ್ನಾಗಿ ಮಾಡಲು ಯತ್ನಿಸುವದು. ನಿಜವಾದ ಯೋಗ್ಯತೆಯಿದ್ದವರಿಗೆ ತಾಂತ್ರಿಕ ಮತ್ತು ವೃತ್ತಿ ಶಿಕ್ಷಣವನ್ನು ಅಲ್ಲಗಳೆಯುವದು ಅಕ್ಷಮ್ಯ ಅಪರಾಧವೆನಿಸುವದು.

ಇವರೂ ನಮ್ಮ ವಿಜ್ಞಾನಿಗಳು

ಸಂಯುಕ್ತ ಸಂಸ್ಥಾನದ ಫಿಲಡೆಲ್ಫಿಯದಲ್ಲಿ ಜರುಗಿದ ಅಂತರರಾಷ್ಟ್ರೀಯ ವಿಜ್ಞಾನಗೋಷ್ಠಿಯಲ್ಲಿ ಆಹ್ವಾನದ ಮೇರೆಗೆ ಭಾರತ ಸರಕಾರವನ್ನು ಪ್ರತಿನಿಧಿಸುವ ವಿಜ್ಞಾನಿ ಓದಿದ ಸಂಶೋಧನಾ ಪ್ರಗತಿಯ ವರದಿ ಎಲ್ಲರನ್ನೂ ಅಚ್ಚರಿಗೊಳಿಸಿತು. ತಂಬಾಕು ಕಂಪನಿಯ ಉಚ್ಚ ಅಧಿಕಾರಿಯೊಬ್ಬ ತಮ್ಮ ಸಾಧನೆಯ ಬಗ್ಗೆ ಪ್ರತಿವರ್ಷವೂ ಊದುವ ತುತ್ತೂರಿಯಂತಿತ್ತು. ಭಾರತೀಯರು ಪ್ರಯೋಗಾಲಯದಲ್ಲಿ ಬಳಸಬೇಕಾದ ಸಮಯವನ್ನು ತಾವು ಮಾಡದ ಸಂಶೋಧನೆ ಕುರಿತು ವರದಿ ಮಾಡುವುದರಲ್ಲಿಯೇ ಕಳೆಯುವಂತೆ ಕಾಣುತ್ತದೆ ಎಂಬರ್ಥದಲ್ಲಿ ಪ್ರತಿನಿಧಿಯೊಬ್ಬ ಸಹೋದ್ಯೋಗಿಯ ಕಿವಿಯಲ್ಲಿ ಪಿಸು ಮಾತಿನಿಂದ ಅರುಹಿದ. ಅಕ್ಕಪಕ್ಕದವರು ಅರ್ಥಗರ್ಭಿತವಾಗಿ ಮುಗುಳಕ್ಕರು. ಅಲ್ಲಿದ್ದ ಕೆಲವೇ ಭಾರತೀಯರು ಮಾತ್ರ ವಿವೇಕಾನಂದರ ವಾಗ್ ವೈಖರಿಗೆ ಏನೂ ಕಡಿಮೆಯಿಲ್ಲವೆಂದು ವಿಜ್ಞಾನಿಯನ್ನು ಅಭಿನಂದಿಸಿದರು. ಸಭೆ ಮುಗಿದ ನಂತರ ವಿಜ್ಞಾನಿ ಪರಿಚಿತರೊಡನೆ ಭಾರತಕ್ಕೆ ತನ್ನೊಂದಿಗೆ ಒಯ್ಯಬೇಕಾಗಿದ್ದ ಭೋಗ ಸಾಮಗ್ರಿಗಳ ಯಾದಿಯನ್ನು ಒಪ್ಪಿಸಿ ಅವುಗಳ ಮೇಲಿನ ಡ್ಯೂಟಿ ತಪ್ಪಿಸುವ ವಿಧಾನ ಚರ್ಚಿಸಿದ. ಇನ್ನೊಬ್ಬನೊಡನೆ ಬಾರ್‌ಗೆ ಹೋಗುವ ವ್ಯವಸ್ಥೆ ಮಾಡಿಕೊಂಡ!

ಯಶಸ್ವಿ?

ವಿಪರೀತ ಬೇಡಿಕೆಯಿರುವ ಉದ್ದಿಮೆಗಳಲ್ಲಿ ಬಳಸಲಾಗುವ ರಾಸಾಯನಿಕವೊಂದನ್ನು ಸಸ್ಯ ಮೂಲಗಳಿಂದ ಪಡೆಯಬೇಕಾಗಿತ್ತು. ಮುಂದುವರಿದ ರಾಷ್ಟ್ರಗಳ ವಿಜ್ಞಾನಿ ತಂಡಗಳು ಇದನ್ನು ಪ್ರಯೋಗಾಲಯದಲ್ಲಿ ದೊರಕಿಸಲು ಯತ್ನಿಸಿ ವಿಫಲ ಆದವು. ಅದರೆ ಭಾರತೀಯ ಮಹಿಳೆಯೊಬ್ಬಳು ಈ ವಿಧಾನವನ್ನು ಯಶಸ್ವಿಗೊಳಿಸಿ, ಅದರ ಮೇಲೆ ಪ್ರಬಂಧ ಬರೆದು ಡಾಕ್ಟರೇಟ ಪದವಿ ಪಡೆದು ಸಂಶೋಧನ ಲೇಖನ ಕೂಡ ಪ್ರಕಟಿಸಿದಳು. ವಿಶ್ವದ ಬೇರೆ ವಿಜ್ಞಾನಿ ತಂಡಗಳು ಅವಳು ವಿವರಿಸಿದಂತೆ ಪ್ರಯೋಗಗಳನ್ನು ನಡೆಸಿದರೂ ನಿರೀಕ್ಷಿಸಿದ ರಾಸಾಯನಿಕ ಸಿದ್ಧವಾಗದ್ದರಿಂದ ಈ ಸಂಶೋಧನೆಯನ್ನು ಕಟುವಾಗಿ ಟೀಕಿಸಿದರು. ಇದರಿಂದ ಹೌಹಾರಿದ ವಿದ್ಯಾರ್ಥಿನಿಯ ಪ್ರಾಧ್ಯಾಪಕರು ಪ್ರಯೋಗ ನಡೆಯುವಾಗ ವಿವಿಧ ಹಂತಗಳಲ್ಲಿ ಪರೀಕ್ಷಿಸಿ ಮನವರಿಕೆ ಮಾಡಿಕೊಳ್ಳದೇ ವಿದ್ಯಾರ್ಥಿನಿಯಲ್ಲಿ ಸಂಪೂರ್ಣ ವಿಶ್ವಾಸವಿಟ್ಟದೇ ಈ ಪ್ರಮಾದಕ್ಕೆ ಆಸ್ಪದವಾಯಿತು, ಎಂದು ಬಹಿರಂಗವಾಗಿ ತಪ್ಪು ಒಪ್ಪಿಕೊಳ್ಳಬೇಕಾಯಿತು. ಇಷ್ಟಾದರೂ ವಿದ್ಯಾರ್ಥಿನಿಗೆ ಯಾವುದೇ ರೀತಿಯ ಶಿಕ್ಷೆಯಾಗಲಿಲ್ಲ. ಅವಳ ಪದವಿಗೂ ಖೋತಾ ಬರಲಿಲ್ಲ

ನಮ್ಮ ಉಚ್ಚ ವಿಜ್ಞಾನಿಗಳು ತಮ್ಮ ಹೆಚ್ಚಿನ ಸಮಯವನ್ನು ರಾಜಕಾರಣಿಗಳ ಮನಸ್ಸು ಒಲಿಸುವದರಲ್ಲಿ ಅಧಿಕಾರಿಗಳ ಕೃಪಾಕಟಾಕ್ಷಕ್ಕೆ ಪಾತ್ರರಾಗುವದರಲ್ಲಿ ಆಡಳಿತದಲ್ಲಿ ಇಲ್ಲವೇ ವಿದೇಶಗಳಲ್ಲಿ ಸುತ್ತಾಡುವದರಲ್ಲಿ ಕಳೆಯುವದು ಸರ್ವವಿದಿತ. ಇಷ್ಟಾದರೂ ಸಂಶೋಧನಾ ಲೇಖನಗಳು ಅವರ ಹೆಸರಿನಲ್ಲಿ ಪ್ರಕಟವಾಗುತ್ತಲೇ ಇರುವದರಿಂದ ಬೇರೆಯವರ ದುಡಿಮೆಯ

ಫಲವನ್ನು ಇವರು ತಮ್ಮದನ್ನಾಗಿ ಮಾಡಿಕೊಳ್ಳುತ್ತಾರೆಂದು ಬೇರೆ ಹೇಳಬೇಕೆಂದಿಲ್ಲ. ಪುಣೆಯ ರಾಷ್ಟ್ರೀಯ ರಾಸಾಯನಿಕ ಸಂಸ್ಥೆಯ ಹಿಂದಿನ ಮುಖ್ಯಸ್ಥರು ದೇಶಕ್ಕೇ ಶ್ರೇಯಸ್ಸು ತರುವಂತಹ ಸಂಶೋಧನಾ ಲೇಖನವನ್ನು ಅಂತರರಾಷ್ಟ್ರೀಯ ವೈಜ್ಞಾನಿಕ ನಿಯತ ಕಾಲಿಕದಲ್ಲಿ ಪ್ರಕಟಿಸಿದರು. ಪ್ರತಿಯೊಬ್ಬ ವಿಜ್ಞಾನಿಗೂ ವಿಶ್ವದ ಇನ್ನಿತರರ ಸಂಶೋಧನಾ ಚಟುವಟಿಕೆಗಳ ಅರಿವು ಇರಬೇಕೆಂಬ ಉದ್ದೇಶದಿಂದ ಇಂಥ ಶೋಧ-ಶೋಧಕರ ಕಿರುಪರಿಚಯದ ಸಂಚಿಕೆಗಳು ಕಾಲಕಾಲಕ್ಕೆ ಪ್ರಕಟವಾಗುತ್ತವೆ. ಈ ಲೇಖನದ ಪರಿಚಯ ಪ್ರಕಟವಾದ ಸಂಚಿಕೆಯ ಅಡಿಯಲ್ಲಿ ಈ ಕೆಳಗಿನ ಟಿಪ್ಪಣಿ ಬರೆಯಲಾಗಿತ್ತು. ಮಾನ್ಯ ಭಾರತೀಯ ವಿಜ್ಞಾನಿ ತಮ್ಮ ಸರಕಾರದ ವತಿಯಿಂದ ನಮ್ಮ (ಅಮೇರಿಕೆಯ) ಸಂಶೋಧನಾಲಯಕ್ಕೆ ಭೇಟಿ ಕೊಟ್ಟಾಗ ಈ ಪ್ರಯೋಗ ನೋಡಿದ್ದರಲ್ಲದೇ ವಿವರಗಳನ್ನೆಲ್ಲ ವಿಚಾರಿಸಿಕೊಂಡಿದ್ದರು. ಅವರ ಪ್ರಯೋಗಾಲಯದಲ್ಲಿ ಇಲ್ಲಿಯ ಸವಲತ್ತುಗಳು ಇಲ್ಲವಾದರೂ. ನಮ್ಮ ಪ್ರಯೋಗಗಳು ಮುಗಿಯುವ ಪೂರ್ವದಲ್ಲಿಯೇ ಕೇವಲ ನಿರೀಕ್ಷೆ ಸಮೀಕ್ಷೆಗಳ ಆಧಾರದ ಮೇಲೆಯೇ ಈ ಲೇಖನ ಬರೆದದ್ದು ಪ್ರಶಂಸನೀಯ! ಎಂಬುದು ಗಮನೀಯ.

ತಂತ್ರಗಳು

ಸರಕಾರ, ಸಾಹುಕಾರ ಸಂಸ್ಥೆಗಳಿಂದ ಹಣ ದೋಚಲು ನಮ್ಮ ವಿಜ್ಞಾನಿಗಳು ಬಳಸುವ ತಂತ್ರಗಳು ಅನೇಕ. ಒಬ್ಬನು ತೆಂಗಿನಕಾಯಿಯ ಜುಂಗನ್ನು ರಾಸಾಯನಿಕದಿಂದ ಕರಗಿಸಿದರೆ, ಏಲಕ್ಕಿಯನ್ನು ಶುಭ್ರಬಿಳಿಯಾಗಿ ಮಾಡುವೆ ಎನ್ನುವ ಇನ್ನೊಬ್ಬ. ಮತ್ತೊಬ್ಬ ಕ್ರಿಮಿ-ಕೀಟಗಳನ್ನು ಬಳಸಿಯೇ ಕೊಳಚೆ ನೀರನ್ನು ಶುಭ್ರ ಮಾಡವೆನೆಂಬ ಆಶ್ವಾಸನೆ ನೀಡುವ. ಪಶ್ಚಿಮ ಘಟ್ಟಗಳನ್ನು ಫಲ ಪುಷ್ಪಗಳಿಂದ ಬಿರಿಯುವಂತೆಮಾಡವೆನೆನ್ನುವ ಮಗದೊಬ್ಬ. ಪ್ರತಿ ಹೊಂಡವನ್ನು ಮೀನಿನ ತೋಟವನ್ನಾಗಿ ಪರಿವರ್ತಿಸುವವರು ಇದ್ದಾರೆ. ಲಕ್ಷಾಂತರ ರೂಪಾಯಿ ನೀರಾದರೂ ಅವರ ಸಂಶೋಧನೆ ಕಾಗದದಿಂದ ಕೆಳಗಿಳಿಯುವದೇ ಇಲ್ಲ. ಇದರಂತೆ ಬಡಬಗ್ಗರಿಗೆ ಸಮತೋಲ ಆಹಾರ ಪೂರೈಕೆ, ಎರಡೂ ಊಟ ಹೊತ್ತಿಗೆ ಸರಿಯಾಗಿ ಬಹು ಸಂಖ್ಯಾತರಿಗೆ ಒದಗಿಸಲಾಗದ ದೇಶ ನಮ್ಮದು. ಹೀಗಿದ್ದಾಗ ಅವರ ಊಟದಲ್ಲಿ ಪ್ರೋಟೀನ್, ಕಾರ್ಬೋಹೈಡ್ರೇಟ್‌ಗಳು ಎಷ್ಟಿರಬೇಕು? ಹೇಗಿರಬೇಕು? ಎಂದು ತಲೆ ಕೆಡಿಸಿಕೊಳ್ಳುವ ವಿಚಾರ ದೂರವೇ ಉಳಿಯಿತು. ಆದರೆ ವಿಜ್ಞಾನಿ ಎನಿಸಿಕೊಂಡವನಿಗೆ ಸಾಮಾಜಿಕ ಕಳಕಳಿ ಇರಬೇಡವೇ? ಸೋಯಾ ಬೀನ್ಸಗಳಿಂದ ಹೆಚ್ಚಿನ ಪ್ರೋಟಿನ್‌ಗಳು ಲಭ್ಯವಿದ್ದರೂ ಅದಕ್ಕಾಗಿ ಹೆಚ್ಚಿನ ವಿದೇಶ ವಿನಿಮಯ ಖರ್ಚಾಗುವದರಿಂದ ಕಡಲೆಕಾಯಿ ಹಾಲು ಮಾಡಿ ಮಕ್ಕಳಿಗೆ ಕುಡಿಸುವದು ಎಂಬ ಯೋಜನೆ. ಅದಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚಾದರೂ ಅಂಥ ಹಾಲು ಇನ್ನೂ ಸಿದ್ಧವಾಗಿಲ್ಲ. ಬಡಮಕ್ಕಳಿಗೆಲ್ಲ ಬೊಗಸೆ ತುಂಬ ಕಡಲೆಕಾಯಿ ಕೊಟ್ಟರೆ ಅವು ಬಲು ಖುಷಿಯಿಂದ ತಿಂದು ತೇಗುತ್ತಿದ್ದವು ಎಂಬ ಸುಲಭ ಸತ್ಯ ಅಂಥ ವಿಜ್ಞಾನಿಗೆ ಹಾಗೂ ಅವನ ಪೋಷಕರಿಗೂ ಸಹ ಹೊಳೆಯಲೇ ಇಲ್ಲ!

ಕಾಂಗ್ರೆಸ್ ಹುಲ್ಲಿನಂತೆ ಇಂದಿನ ದಿನಗಳಲ್ಲಿ ಇಂದಿರಾಹುಲ್ಲು ಯುಪಿಟೀರಿಯ ಅವಕಾಶ ಸಿಕ್ಕಿದೆ. ಉತ್ತರ ಕರ್ನಾಟಕದಲ್ಲಂತೂ ಕಾಡು ಕಿಚ್ಚಿನಂತೆ ಹಬ್ಬುತ್ತದೆ. ಆಫ್ರಿಕಾದಿಂದ ನಮ್ಮಲ್ಲಿ ಆಗಮಿಸಿದ ಹೊಸದರಲ್ಲಿ ಅದನ್ನು ನಿಯಂತ್ರಿಸಲು ಯಾರೂ ತಲೆ ಕೆಡಿಸಿಕೊಳ್ಳಲಿಲ್ಲ. ಅದರ ಬೆಳವಣಿಗೆ, ನಿಯಂತ್ರಿಸುವ ಪ್ರತಿಸ್ಪರ್ಧಿ ಸಸ್ಯ ವೈರಿಗಳು. ಈ ದೇಶದಲ್ಲಿ ಇಲ್ಲದ್ದರಿಂದ ಕಣ್ಣು

ಹಾಯಿಸಿದೆಡೆಯಲ್ಲೆಲ್ಲ ಈ ಕಳೆ. ಇದರ ಯಶಸ್ಸಿನ ಗುಟ್ಟೆಂದರೆ ವಿಶಿಷ್ಟವಾದ ರಾಸಾಯನಿಕವೊಂದನ್ನು ಸಿದ್ಧಮಾಡಿ, ತನ್ನ ಸುತ್ತಲೂ ಹರಡುವಂತೆಮಾಡುವುದು. ಇದರಿಂದ ದನಕರುಗಳಿಗೆ ಮೇವು ಇಲ್ಲದೇ ಮಕ್ಕಳಿಗೆ ಹಾಲು-ಹೈನು ಇಲ್ಲದೇ ಕಾಡು-ಮೃಗಗಳಿಗೆ ಬೇಟೆ ಇಲ್ಲದಂತಹ ಪರಿಸ್ಥಿತಿ ಉದ್ಭವಿಸಿದೆ. ಕಾಂಗ್ರೆಸ್ ಹುಲ್ಲು ನಿಯಂತ್ರಿಸುತ್ತೇವೆಂದು ಲಕ್ಷಗಟ್ಟಲೆ ಕೊಳ್ಳೆ ಹೊಡೆದ ಜನ ಅಂತಹದೇ ಅವಕಾಶವನ್ನು ಈ ಕಳೆಯಲ್ಲಿ ಕಾಣುತ್ತಿದ್ದಾರೆ. ಅಂತರರಾಷ್ಟ್ರೀಯ ಖ್ಯಾತಿಯ ವಿಜ್ಞಾನಿ ಎನಿಸಿಕೊಂಡವರೊಬ್ಬರು ಪತಂಗ ವರ್ಗಕ್ಕೆ ಸೇರಿದ ಕೀಟ ಒಂದರಿಂದ ಈ ಪಿಡುಗು ನಿಯಂತ್ರಿಸುತ್ತೇನೆಂದು ಡಂಗುರ ಹೊಡೆದಿದ್ದಾರೆ. ದನಕರುಗಳು ಈ ಸಸ್ಯವನ್ನು ಮುಟ್ಟದಿದ್ದರೂ ಈ ಪತಂಗದ ಮಕ್ಕಳು ಮರಿಮಕ್ಕಳು ಯಥೇಚ್ಛವಾಗಿ ಅದನ್ನು ತಿನ್ನುವುದರಿಂದ ಮೊದಲ ಹಂತದಲ್ಲಿ ಅವುಗಳ ಸಂತಾನಾಭಿವೃದ್ಧಿಯನ್ನು ಪ್ರಯೋಗಾಲಯದಲ್ಲಿ ಮಾಡುವಂತೆ ಆದ ನಂತರ ಕಳೆ ಬೆಳೆದೆಡೆಯಲ್ಲೆಲ್ಲ ಅವನ್ನು ಹರವಿದರೆ. ಹೊಟ್ಟೆಬಾಕ ಮರಿಗಳು ಈ ಸಸ್ಯದ ಅಂಗಾಂಗಗಳನ್ನು ತಿಂದು ಹೇಳ ಹೆಸರಿಲ್ಲದೇ ಮಾಡಿಬಿಡುವವಂತೆ. ಇದಕ್ಕಾಗಿ ಕೇಂದ್ರ-ರಾಜ್ಯ ಸರಕಾರಗಳು, ವಿಶ್ವ ವಿದ್ಯಾಲಯಗಳು ಮತ್ತು ಸೇವಾ ಸಂಸ್ಥೆಗಳಿಂದ ಬೃಹತ್ ಪ್ರಮಾಣದ ಧನಸಹಾಯ ಕೋರಲಾಗಿದೆ. ಇದೂ ಎಂದಿನಂತೆ ಒಂದು ಹಗಲುಗನಸು ಎಂದು ಅನಿಸದಿರದು. ಯಾವುದೇ ಕೀಟ ಒಂದೇ ಸಸ್ಯವನ್ನು ಸಂಪೂರ್ಣವಾಗಿ ತಿಂದು ಧ್ವಂಸ ಮಾಡುವದಿಲ್ಲ. ಅದರಲ್ಲಿಯೂ ಇತರ ಆಹಾರ ವಿಪುಲವಾಗಿರುವಾಗಲಂತೂ ಸಾಧ್ಯವೇ ಇಲ್ಲ. ಅಲ್ಲದೆ ಕಳೆ ತಿಂದಾದ ಮೇಲೆ ಈ ಕೀಟವರ್ಗ ಏನು ಮಾಡುವದು? ಎಂದು ವಿವರಿಸುವ ತೊಂದರೆಯನ್ನು ಈ ವಿಜ್ಞಾನಿ ತೆಗೆದುಕೊಳ್ಳಲೇ ಇಲ್ಲ. ಇದರ ಬದಲಾಗಿ ಬೇಸಗೆಯ ಕಳೆ ಒಣಗಿ ನಿಂತಾಗ. ಅವನ್ನೆಲ್ಲ ಕಿತ್ತು ಸುಟ್ಟುಹಾಕುವಂತೆ ಸ್ಥಾನೀಯರ ಮನ ಒಲಿಸಿದರೆ, ಈ ನಿಯಂತ್ರಣ ಹೆಚ್ಚು ಪ್ರಭಾವಕಾರಿಯಾದೀತು.

ಇಡ್ಲಿ, ಹೃದ್ರೋಗ

ತಮ್ಮ ಸಂಶೋಧನೆಗಳನ್ನು ದಿನ ಪತ್ರಿಕೆಯಲ್ಲಿ ಪ್ರಕಟಿಸುವ ವಿಜ್ಞಾನಿಗಳ ತಂಡ ಒಂದಿದೆ. ಅವರ ತೀರ್ಮಾನಗಳೆಲ್ಲ ನಗೆಹನಿ ಎನಿಸುವಷ್ಟು ರೋಚಕವಾಗಿರುತ್ತವೆ. ನೂರು ಜನ ಇಡ್ಲಿ ತಿನ್ನುವವರನ್ನು ಇನ್ನೊಂದು ನೂರು ಜನ ಹಾಗೆ ಮಾಡದವರನ್ನು ಪರೀಕ್ಷಿಸಿ ಮೊದಲನೇ ಗುಂಪಿನವರಲ್ಲಿ ಹೃದ್ರೋಗ ಪ್ರಮಾಣ ಕಡಿಮೆ ಇರುವದರಿಂದ, ಇಡ್ಲಿಗಳು ಹೃದ್ರೋಗವನ್ನು ತಡೆಗಟ್ಟುತ್ತವ ಎಂದು ಪತ್ರಿಕೆಗಳಲ್ಲಿ ಸಾರುತ್ತಾರೆ. ಅದೊಂದು ಮಹಾ ಸಂಶೋಧನೆ ಅನಿಸದೇ ಇದ್ದೀತೆ? ಇದರಂತೆ ಸಸ್ಯಾಹಾರಿ, ಮಾಂಸಹಾರಿಗಳಲ್ಲಿ ಮದ್ಯ ಸೇವಿಸುವವರಲ್ಲಿ ಮದ್ಯ ಸೇವಿಸದೇ ಇರುವವರಲ್ಲಿ, ವ್ಯಾಯಾಮ ಮಾಡುವವರಲ್ಲಿ, ಮಾಡದೇ ಇರುವವರಲ್ಲಿ ಕ್ಯಾನ್ಸರ್ ಮತ್ತಿತರ ವ್ಯಾಧಿಗಳನ್ನು ಇದೇ ತರದಲ್ಲಿ ಗುರುತಿಸುವ ಸಂಶೋಧನೆಯನ್ನು ಯಾವ ವಿಜ್ಞಾನಿಯೂ ಮಾಡಬಹುದು! ಇನ್ನೊಬ್ಬರು ಮಾನಸಿಕ ರೋಗದ ತೀವ್ರತೆಯ ಮೇಲೆ ಅಮಾವಾಸ್ಯೆ-ಹುಣ್ಣಿಮೆಗಳ ಪ್ರಭಾವ ಗುರುತಿಸಿದ್ದಾರೆ. ಸೂರ್ಯ ಚಂದ್ರ ಮತ್ತು ಪೃಥ್ವಿಗಳ ಗುರುತ್ವಾಕರ್ಷಣೆಯಿಂದಾಗಿ ಏರಿಳಿತಗಳು ಉಂಟಾಗುವುದರಿಂದ ಮಾನವನ ಮನಸ್ಸಿನಲ್ಲಿಯೂ ಇಂತಹ ತೆರೆಗಳು ಏಳಲು ಪೃಥ್ವಿಯ ಗುರುತ್ವಾಕರ್ಷಣ ಶಕ್ತಿಯೇ ಕಾರಣವೆಂದು ತೀರ್ಮಾನಿಸಿಯೇ ಬಿಟ್ಟರು! ಇಂಥ

ವಿಜ್ಞಾನಿಗಳು ವೈಜ್ಞಾನಿಕ ಕೂಟಗಳಲ್ಲಿ ನಸುಳಿಕೊಂಡು ತಮ್ಮ ಸಂಶೋಧನೆ ಮಂಡಿಸುವದುಂಟು. ಇಂಥ ಪ್ರಬಂಧಗಳನ್ನು ವಿಶ್ವ ವಿದ್ಯಾಲಯಕ್ಕೆ ಸಲ್ಲಿಸಿ ಡಾಕ್ಟರೇಟ ಗಿಟ್ಟಿಸಿದವರೂ ಇಲ್ಲದಿಲ್ಲ!

ಆಂಗ್ಲ ವಿಜ್ಞಾನಿಗಳು ಯಶಸ್ವಿಯಾಗಿ ಪ್ರನಾಲ ಶಿಶುವನ್ನು ಬೆಳೆಸಿದ್ದೇವೆ ಎಂದು ಸಾರಿದಾಗ ತಾವೂ ಈ ದಿಸೆಯಲ್ಲಿ ಹಿಂದೆ ಬಿದ್ದಿಲ್ಲವೆಂದು ಬಂಗಾಲಿ ವೈದ್ಯರೊಬ್ಬರು ಇದೇ ರೀತಿ ಶಿಶುವನ್ನು ಪಡೆದು ಅದು ಸುಖವಾಗಿ ಬೆಳೆಯುತ್ತಿದೆಯೆಂದು ಹೇಳಿಕೆ ನೀಡಿ ದೇಶದ ವಿಜ್ಞಾನ ಲೋಕದಲ್ಲಿ ಕೋಲಾಹಲವನ್ನೇ ಎಬ್ಬಿಸಿದರು. ಇಂಥ ಕ್ಲಿಷ್ಟ ಪ್ರಯೋಗ ಮಾಡಲು ಅವರಿಗೆ ಸೌಕರ್ಯ, ಸಲಕರಣೆ, ಪ್ರಯೋಗಾಲಯಗಳ ಸವಲತ್ತು ದೊರೆತ ಬಗೆಗೆ ವಿಚಾರಿಸಲಾಗಿ ಮನೆಯ ಬಾತ್ ರೂಂನ್ನೇ ಪ್ರಯೋಗಾಲಯವಾಗಿ ಪರಿವರ್ತಿಸಿ ದೇಶಿ ಚಾಕು, ಕತ್ತರಿಗಳನ್ನೇ ಉಪಯೋಗಿಸಿ ಅಲ್ಪವಾದ ವೆಚ್ಚದಲ್ಲಿಯೇ ಅಪೂರ್ವ ಶೋಧ ನಡೆಸಿದ ಹಿರಿಮೆ ನಮ್ಮದು ಎಂದು ಜಾರಿಕೊಳ್ಳಲೆತ್ನಿಸಿದರು! ನಾಲ್ವೆಸೆಗಳಿಂದಲೂ ಇಂಥ ಸಂಶೋಧನೆಯನ್ನು ಖಂಡಿಸಿದ್ದರಿಂದ ಸರಕಾರ ವಿಚಾರಣಾ ಸಮಿತಿಯೊಂದನ್ನು ನೇಮಿಸಲೇ ಬೇಕಾಯಿತು. ಸಂಶೋಧನಾ ತಂಡದ ಮುಖಂಡ ನಂತರ ಆತ್ಮಹತ್ಯೆ ಮಾಡಿಕೊಂಡು ಎಲ್ಲರ ಸಮಸ್ಯೆಯನ್ನು ಬಗೆಹರಿಸಿದ! ಇನ್ನೊಬ್ಬ ಬಂಗಾಲಿ ಅಂತರ ರಾಷ್ಟ್ರೀಯ ಖ್ಯಾತಿಯ ಪರಾಮಾನಶಾಸ್ತ್ರ (ಪಾರಾ ಸೈಕಾಲಜಿ) ಪಂಡಿತನೆಂದು ವ್ಯವಸ್ಥಿತ ಪ್ರಚಾರ ಮಾಡಿ ರಾಜಸ್ಥಾನ ವಿಶ್ವವಿದ್ಯಾಲಯ ತನಗಾಗಿ ಬೇರೊಂದು ವಿಭಾಗವನ್ನೇ ಪ್ರಾರಂಭಿಸುವಂತೆ ಮಾಡಿದ. ತನ್ನ ಸ್ಥಾನ ಭದ್ರಪಡಿಸಲೋಸುಗ ಧನ ಸಹಾಯದ ಟೊಳ್ಳು ಆಶ್ವಾಸನೆ ಇತ್ತು ಪರದೇಶದ ವಿದ್ಯಾರ್ಥಿಗಳನ್ನು ಬರಮಾಡಿಕೊಂಡ ನಂತರ ಆತನ ಟೊಳ್ಳುತನ ಬಯಲಿಗೆ ಬಂದು ಕಟ್ಟಡಕ್ಕೆ ಬೀಗ ಜಡಿದು. ವಿಭಾಗವನ್ನು ವಿಸರ್ಜಿಸಿ ವಿದೇಶಿ ವಿದ್ಯಾರ್ಥಿಗಳನ್ನು ತಿರುಗಿ ಕಳಸಿ ವಿಶ್ವವಿದ್ಯಾಲಯ ಪಂಡಿತನನ್ನು ಮನೆಗೆ ಕಳಿಸಬೇಕಾಯಿತು!

ವಿಜ್ಞಾನಿಗಳೆನಿಸಿಕೊಳ್ಳುವವರಲ್ಲಿಯೂ ಹೆಚ್ಚಿನವರಲ್ಲಿ ಗೊಡ್ಡು ನಂಬಿಕೆಗಳಿಂದ ಹೊರಬರಲು ಸಾಧ್ಯವಾಗಿಯೇ ಇಲ್ಲ. ಹಲ್ಲಿ ಲೊಚಗುಟ್ಟಿದಾಗ, ಬೆಕ್ಕು ಅಡ್ಡಬಂದಾಗ ಗೂಗೆ ಕೂಗಿದಾಗ, ಕೇವಲ ಹೆಣ್ಣು ಮಕ್ಕಳೇ ಹುಟ್ಟಿದಾಗ ಶುಭ ಅಶುಭ ಕಾಣುವ ಪಾಲಕರು ಬೆಳೆಯುವ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವದರಲ್ಲಿ ಹೇಗೆ ತಾನೇ ಯಶಸ್ವಿಯಾದಾರು? ಮುಂಬಡ್ತಿ ಪಡೆಯಲು ಹಿರಿಯರು ಸತ್ಯ ನಾರಾಯಣ ವ್ರತ ಆಚರಿಸುವಾಗ ಮಕ್ಕಳು, ನ್ಯೂಟನ್, ಎಡಿಸನ್, ಡಾರ್ವಿನ್ ಹೇಗಾದಾರು? ರಾಹುಕಾಲವಾದ್ದರಿಂದ ಅಂತರಿಕ್ಷಯಾನವನ್ನೇ ಮುಂದೂಡಿದ ವಿಜ್ಞಾನಿಗಳು ನಮ್ಮಲ್ಲಿರುವದು ಹಾಸ್ಯಾಸ್ಪದ. ಪದವಿ, ಸಂಶೋಧನಾಲಯಗಳ ಸೌಕರ್ಯ. ದೊಡ್ಡ ನೌಕರಿಗಳಿಂದ ಯಾರೇ ವಿಜ್ಞಾನಿಯಾಗುವದಿಲ್ಲ, ವೈಜ್ಞಾನಿಕ ಮನೋಭಾವವಿದ್ದರೆ, ಅದನ್ನು ಬೆಳಸಿಕೊಂಡರೆ, ನಿರಕ್ಷರಿಯೂ ವಿಜ್ಞಾನಿ ಎನಿಸಿಕೊಳ್ಳಬಲ್ಲ.

ಮಾವನೂರಲ್ಲದ ಮಾವಿನಕುರ್ವೆ

ಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ಜವಳಿ ಅಂಗಡಿಯ ಹನುಮಂತ ಭಕ್ತಾರ ಮಗಳ ಮದುವೆಗೆ, ಮಾವಿನಕುರ್ವೆಗೆ, ಪಿತರ ಪ್ರತಿನಿಧಿಯಾಗಿ ಹೋಗುವ ಅವಕಾಶ ಒದಗಿ ಬಂದಿತ್ತು. ಅಲ್ಲಿಯ ಸರಳ ಸುಖಮಯ ಜೀವನ, ಅನುಪಮ ಸೃಷ್ಟಿಸೌಂದರ್ಯಗಳನ್ನು ಮನವಾರೆ ಸವಿದು ಆ ಪುಟ್ಟ ಊರನ್ನೆ ಮಾವನ ಮನೆಯಾಗಿ ಮಾಡಿಕೊಳ್ಳುವ ಮನಸ್ಸಾಗಿತ್ತು. ಆದರೆ ಆಗ ಗಳಿಕೆ ಇಲ್ಲದವನಿಗೆ ಮಗಳನ್ನು ಕೊಡುವ ಧೈರ್ಯಶಾಲಿ ಅಲ್ಲಿರಲಿಲ್ಲ! ಪದವೀಧರನಾದ ಬಳಿಕ ಗೆಳೆಯ, ಸಹಪಾಠಿ ಹಾಗೂ ಆತ್ಮೀಯನಾದ ಕೇಶವ ತೇಲಂಗ್‌ನ ವಿವಾಹಕ್ಕೆ ಹೋಗುವ ಇನ್ನೊಂದು ಸದವಕಾಶ ಸಿಕ್ಕಿತು. ಆಗ ನಾನೊಬ್ಬ ಮದುಮಗನೆಂದು ಭಾವೀ ಮಾವಂದಿರ ಲಕ್ಷ ಸೆಳೆಯಲು ಯತ್ನಿಸಿ, ಕ್ಯಾಮರಾದಲ್ಲಿ ಫಿಲ್ಮ್ ಇಲ್ಲದಿದ್ದರೂ ಓಡಾಡಿ ಕನ್ನೆಯೆಯರನ್ನೂ ಸೇರಿಸಿ ಆಗ ಸಕ್ಕೇರಿಸಲು ಹಿಂಜರಿದಿರಲಿಲ್ಲ. ಆದರೆ ಆ ಬಳಿಕ ಗುಟ್ಟು ರಟ್ಟಾಗಿರಬೇಕು ಯಾವ ಮಾವಿನಕುರ್ವಾ ಕನ್ಯೆಯ ಜಾತಕವೂ ಬರಲಿಲ್ಲ! ಪುಣ್ಯಕ್ಕೆ ನೆರೆ ಊರಾದ ಕುಮಟೆಯ ಕನ್ಯಾಪಿತರು. ಧೈರ್ಯಮಾಡಿ ಮಗಳನ್ನು ಕೊಟ್ಟದ್ದರಿಂದ ಚತುರ್ಭುಜನಾದೆ. ನಂತರ ಒಮ್ಮೆ ಪತ್ನಿಗೆ ನನ್ನ ಕನಸಿನೂರಾದ ಮಾವಿನ ಕುರ್ವೆಯ ದರ್ಶನ ಮಾಡಿಸಲು ಕೇಶವನ ಅನಾಮಂತ್ರಿತ ಅತಿಥಿಯಾಗಿಯೇ ಕರೆದೊಯ್ಯುವ ವ್ಯವಸ್ಥೆ ಮಾಡಿದೆ.

ಹೊನ್ನಾವರದ ಓಮ್ಯಾ ಬಂದರದಲ್ಲಿದ್ದ ಹಾಯಿದೋಣಿಯ ನಾವಿಕರು ಸ[illegible]ತ್ರನ್ನ ಮಾವಿನ ಕುರ್ವೆಗೆ ಸವಾರಿಯಾಗಿ ಕರೆದೊಯ್ಯಲು ತುರುಸಿನ ಸ್ಪರ್ಧೆ ನಡಿಸಿದರು. ದುಮಿಂಗನ ದೋಣೆಯೇ ಮಜಬೂತಾಗಿ ಕಂಡಿದ್ದರಿಂದ ಅದನ್ನು ಏರಿದೆವು. ಪೂರ್ವದಿಕ್ಕಿನಲ್ಲಿ ಸೂರ್ಯ ದೇವನು ಮಂಜಿನ ಪರದೆಯನ್ನು ಮೆಲ್ಲಮೆಲ್ಲಗೆ ಹಿಂದೆ ಸರಿಸುತ್ತ ಪಶ್ಚಿಮ ಘಟ್ಟವನ್ನೇರಿ ಬರುತ್ತಿದ್ದಾಗ ಗಗನ ಮಂಡಲದಲ್ಲಿ ಕ್ಷಣಕ್ಷಣಕ್ಕೆ ಬದಲಾಗುತ್ತಿದ್ದ ವರ್ಣವಿನ್ಯಾಸ ಕಣ್ಣಿಗೆ ಹಬ್ಬವನ್ನುಂಟು ಮಾಡಿತು. ಚಲಚ್ಚಿತ್ರಗಳಲ್ಲಿ ಮಾತ್ರ ದಂಪತಿಗಳು ಇಂಥ ನೌಕಾವಿಹಾರ ಮಾಡುವದನ್ನು ಕಂಡಿದ್ದೆ. ಮಾವಿನ ಕುರ್ವೆಯ ಪಶ್ಚಿಮದಲ್ಲಿ ತುತ್ತತುದಿಗಿದ್ದ 'ಮೊಟ್ಟೆ'ಯ ಚಾಪೆಲ್ ಶರಾವತಿಯ ನೀರಲ್ಲಿ ಕುಣೆಯುತ್ತಿದ್ದ ತನ್ನ ಪಡಿನೆಳಲು ನೋಡಿ ನಾಚುತ್ತ ನಿಂತಿತ್ತು. ಸುತ್ತ ಮುತ್ತ ಅಸಂಖ್ಯಾತ ತೆಂಗಿನ ಮರಗಳು ಸೊಕ್ಕಿನಿಂದ ಒತ್ತಾಗಿ ಬೆಳೆದು ನಿಂತಿದ್ದವು. ಅಲ್ಲಿ ಆಶ್ರಯ ಪಡೆಯಲು ಕಾಕ ಕೋಟಿಸುತ್ತಲ ಪ್ರದೇಶದಿಂದ ಪ್ರತಿಸಂಜೆ ಇಲ್ಲಿಗೆ ಧಾವಿಸಿ ಬರುತ್ತಿದ್ದವು. ಇದೇ ತಾಣ ಬೆಳ್ಳಕ್ಕಿಗಳಿಗೂ ಆಕರ್ಷಕವಾಗಿದ್ದರಿಂದ ಕರಿ-ಬಿಳಿ ಹಕ್ಕಿಗಳಲ್ಲಿ ಕಾದಾಟ-ಚೀರಾಟಗಳು ದಿನಂಪ್ರತಿ ಘಟನೆಗಳು. ಆ ಮಂಜಾವಿನಲ್ಲಿ ಬೆಳ್ಳಕ್ಕಿ ಹಿಂಡುಗಳು ನದಿಗುಂಟ ಹಾರುತ್ತ ಪೂರ್ವಕ್ಕಿರುವ ಗೇರಸಪ್ಪೆಯತ್ತ ಹಾರುತ್ತ ಹೋಗುವ ನೋಟ ಅಮೋಘವಾದದ್ದು. ಅದೇ ಕಾಗೆಗಳು ಒಂಟಿಯಾಗಿ ಅತ್ತಿತ್ತ ಎಲ್ಲ ಕಡೆಗೆ ಗುರಿಯಿಲ್ಲದೇ ಹಾರಿ ಹೋಗಲಾರಂಭಿಸಿದ್ದವು. ಇವನ್ನೆಲ್ಲ ನೋಡಿ ನಲಿಯುತ್ತಿದ್ದಂತೆ. ನಮ್ಮ ನಾವೆ ಬಟ್ಟಕೇರಿ (ಭಟ್ಟರಕೇರಿ)ಯನ್ನು ಹಿಂದೆ ಹಾಕಿ ತೇಲಂಗನ ಮನೆಯತ್ತ ಸಾಗಿತು. ನಾವು ಬರುತ್ತಿದ್ದ ವಿಚಾರ

ಮುಂದಾಗಿಯೇ ತಲುಪಿ ಅಪರೂಪದ ಅತಿಥಿಗಳನ್ನು ಬರಮಾಡಿಕೊಳ್ಳಲು ಇಡೀ ಕುಟುಂಬ ನದಿದಂಡೆಯಲ್ಲಿ ಸೇರಿದ್ದು ಅತ್ಯಾದಾರದ ಆತ್ಮೀಯ ನೋಟವಾಗಿತ್ತು.

ಸಣ್‌ತಮ್ಮ ಕೆಂದಾಳಿ ತೆಂಗಿನಮರದಿಂದ ಶಿಯಾಳ (ಎಳೆನೀರು) ಇಳಿಸಿಕೊಟ್ಟ ಸಕ್ಕರೆ, ಉಪ್ಪು, ನಿಂಬೆಹಣ್ಣು ಸೇರಿಸಿದ ಈ ಪೇಯ ಅಮೃತದಂತಿತ್ತು. ಎಳೆತಿರುಳಿನೊಂದಿಗೆ ತಿನ್ನಲು ಜೇನುತುಪ್ಪದಂತೆ ಇದ್ದ ಕುರ್ವೆಯ ಬೆಲ್ಲ ಬಂದಿತು. ಅರ್ಧಗಂಟೆಯಲ್ಲಿ ಅವಲಕ್ಕಿ-ಸೇವು, ತುಪ್ಪದುಂಡಿಗಳು ಚಹದೊಂದಿಗೆ ಪ್ರತ್ಯಕ್ಷವಾದವು. ಮೀನುಗಾರ ಬೀರುವಿಗೆ 'ಕೂಹೂ' ಕರೆ (ದೂರದವರನ್ನು ಕರೆಯುವ ವಿಧಾನ) ಹೋಯಿತು. ಅಪರೂಪದ ನೆಂಟ್ರಿಗೆ ನಗಲಿ (ಕಾಣೆ) ಮೀನು ಹಿಡಿಕೊಂಡು ಬರಲು ಸೂಚನೆ ತಲುಪಿತ್ತು. ಅವನಿಗೂ ಅವಲಕ್ಕಿ ಚಹ-ಕವಳ (ವೀಳ್ಯ, ತಂಬಾಕು)ಗಳು ಬಂದವು. ಗೆಲುವಿನಿಂದ 'ಆಯ್ತು ವಡ್ಯಾ' ಅನ್ನುತ್ತ ಆತ ತನ್ನ ದೋಣಿ ಓಡಿಸಿದ. ಹುರಿದ ಹಾಗೂ ಪಳದಿಯ ಮೀನಿನ ಸುಗ್ರಾಸ ಭೋಜನ ಸವಿಯುತ್ತಿದ್ದಂತೆ, ಇವರ ಮಾವನ ಮನೆಯಲ್ಲೂ (ಆಗವರು ನೀರಿನ ಕೊರತೆಯ ರಾಯಚೂರದಲ್ಲಿದ್ದರು!) ಇಂಥ ಅತಿಥ್ಯಸಿಗುತ್ತಿರಲಿಲ್ಲ! ಎಂದು ನನ್ನಾಕೆ ಬಿಚ್ಚುಮನಸ್ಸಿನಿಂದ ಸಾರಿದಾಗ ಕೇಶವನ ಕುಟುಂಬದವರೆಲ್ಲ ಹೆಚ್ಚಿನ ಸಂತೋಷದಿಂದ ಗಹಗಹಿಸಿ ನಕ್ಕರು.

ಮಾವಿನ ಹಣ್ಣಿನ ಆಕಾರದಲ್ಲಿ ಇದ್ದುದರಿಂದ ಈ ನಡುಗಡ್ಡೆಗೆ ಮಾವಿನಕುರ್ವೆ ಎಂಬ ಹೆಸರು ಬಂದಿದೆಯಂತೆ. ಕೇವಲ ಮೂರು ಕಿಲೋಮೀಟರಿನಷ್ಟು ಸುತ್ತಳತೆ ಇರುವ ಈ ಕುರ್ವೆ, ಶರಾವತಿ ನದಿಯು ಹೊತ್ತು ತಂದ ಸೂಸಲು ಮಣ್ಣಿನಿಂದಾಗಿ ಅತ್ಯಂತ ಫಲವತ್ತಾಗಿದೆ. ಅಂತೆಯೇ ಅಲ್ಲಿಯ ನಿವಾಸಿಗಳು ತೆಂಗಿನ ತೋಪುಗಳಲ್ಲದೆ ಬತ್ತದ ಬೆಳೆಯನ್ನೂ ಧಾರಾಳವಾಗಿ ಕೈಕೊಂಡಿದ್ದಾರೆ. ಸ್ಥಳದ ಕೊರತೆಯಿಲ್ಲವಾದ್ದರಿಂದ ಮಹಡಿ ಕಟ್ಟದೇ ವಿಶಾಲ ಮನೆಗಳಿಗೆಲ್ಲ ಮಂಗಳೂರು ಹಂಚು ಹಾಕಿಸಿ ಸುಖಜೀವನ ನಡೆಸುತ್ತಿದ್ದಾರೆ. ನಿವೃತ್ತಿಯ ನಂತರ ಇಲ್ಲಿಯೇ ಬಂದು ಮನೆ-ಹಿತ್ತಿಲು ಖರೀದಿಸಿ ಬೀಡು ಬಿಡಬೇಕು ಎಂದ ಬಾಲ್ಯದ ಕನಸನ್ನು ಪತ್ನಿಗೆ ಹೇಳಿದಾಗ "ನನ್ನ ಮನಸ್ಸಿನಲ್ಲಿ ಮೂಡಿ ಬರುತ್ತಿದ್ದ ವಿಚಾರವನ್ನೇ ನೀವು ಬಾಯಿಬಿಟ್ಟು ಹೇಳಿದ್ದರಿಂದ ನೆಮ್ಮದಿಯಾಯಿತು ಎಂದು ಆಕೆ ಉದ್ಗರಿಸಿದಳು. ಅಲಿಗಡ ಬೀಗಗಳಿಗೆ ಉತ್ತರ ಭಾರತದಲ್ಲಿ ಭಾರಿ ಬೇಡಿಕೆ ಇದ್ದಂತೆ ಕರಾವಳಿಯಲ್ಲಿ ಮಾವಿನಕುರ್ವೆ ಬೀಗಗಳನ್ನು ತಪ್ಪದೇ ಬಳಸುತ್ತಾರೆ. ಕಳ್ಳಕಾಕರಿಗೆ ಅವುಗಳ ಆಂತರಿಕ ರಚನೆಯ ತಂತ್ರಜ್ಞಾನದ ಅರಿವು ಇಲ್ಲದ್ದರಿಂದ ಅವುಗಳ ನಕಲಿ ಕೀಲಿಕೈಗಳನ್ನು ಮೂಡಿಸುವದು ಸುಲಭ ಸಾಧ್ಯವಾದ ಮಾತಲ್ಲ. ಊರಿನ ಕಟ್ಲರಿ ಅಂಗಡಿಗಳಲ್ಲಿ ಈ ಬೀಗದ ದೊಡ್ಡ ಚಿತ್ರದೊಂದಿಗೆ ನಮ್ಮಲ್ಲಿ ಮಜಬೂತ ಮಾವಿನಕುರ್ವೆ ಬೀಗಗಳು ಸಿಗುತ್ತವೆ ಎಂಬ ಬೋರ್ಡು ತೂಗಹಾಕಿರುತ್ತಾರೆ. ಬೇಸಿಗೆ ರಜೆ, ಮದುವೆ, ಮುಂಜಿ, ದೇವದರ್ಶನಗಳಿಗೆ ದೂರದೂರದ ಊರಿನಿಂದ ಈ ದ್ವೀಪಕ್ಕೆ ಬಂದವರು ತಿರುಗಿ ಹೋಗುವಾಗ ಹಲಸಿನ ಹಪ್ಪಳ, ಮೊಗ್ಗೆಕಾಯಿ, ಕೆಸುವಿನಗಡ್ಡೆ, ಒಣಮಾವಿನ ಜೊತೆ ಕೆಲವು ಬೀಗಗಳನ್ನು ಸೇರಿಸಲು ಮರೆಯುವದಿಲ್ಲ.

ಹತ್ತಿರ ಊರುಗಳಲ್ಲೆಲ್ಲ ಮನೆಮನೆಗೆ ಹೋಗಿ ಸೇವೆಸಲ್ಲಿಸುವ ನಾಪಿತ ವರ್ಗದ ವಾಸ ಮಾವಿನಕುರ್ವೆಯಲ್ಲಿಯೇ. ಅವರು ಎಂದೂ ಸಂಪು ಹೂಡಿಲ್ಲ. ಆದರೆ ಜಡಿಮಳೆಯಿಂದಾಗಿ,

ನದಿಗೆ ಪೂರ ಬಂದಾಗ, ಹೊರ ಹೋಗಲಾಗದ ದಿನಗಳಲ್ಲಿ ಊರ ಜನರ ಕ್ಷೌರಕ್ಕೆ ಗತಿಯಿಲ್ಲದೇ ಎಷ್ಟೋ ಜನ, ಹುಚ್ಚರಾಸ್ಪತ್ರೆಯಿಂದ ಪಲಾಯನ ಮಾಡಿ ಬಂದವರಂತೆ ಭಾಸವಾಗುತ್ತದೆ. ತೆಂಗಿನ ಮರವೇರಿ ಕಾಯಿ ಉದುರಿಸುವ 'ಪಾಡೇಕಾರ' ಜನಾಂಗದವರೂ ಇಲ್ಲಿಯೇ ಠಿಕಾಣಿ ಹೊಡಿದ್ದಾರೆ. ಅವರು ಅಡ್ಡ ಪಂಚೆಯೊಂದನ್ನು ಸೊಂಟಕ್ಕೆ ಬಿಗಿದುಕೊಂಡು, ಹರಿತವಾದ ಕತ್ತಿಯನ್ನು ಸೊಂಟಕ್ಕೆ ಸಿಗಿಸಿ, ಕೈಯಲ್ಲಿ ಕತ್ತದ ಹಗ್ಗ ಹಿಡಿದು ಓಣಿ ಓಣಿ ಸುತ್ತುತ್ತಾರೆ. ತೆಂಗಿನಕಾಯಿ ಕೀಳಲು ಆಮಂತ್ರಣ ಬರುತ್ತಲೇ ಇರುತ್ತವೆ. ಕೋತಿಗಳಂತೆ ಮರವೇರಿ, ಬಲಿತ ಕಾಯಿಗಳನ್ನು ನೆಲಕ್ಕುರುಳಿಸಿ, ಅವನ್ನೆಲ್ಲ ಕಲೆಹಾಕಿ, ಬೇಕಿದ್ದರೆ ಶೂಲಮಣೆ (ಸುನಬಾಣೆ)ಯಲ್ಲಿ ತೆಂಗಿನಕಾಯಿಗಳನ್ನು ಸುಲಿದುಕೊಟ್ಟು, ತಮ್ಮ ವೇತನದ ಜೊತೆಗೆ ತಿಂಡಿ-ಕಷಾಯ, ಕವಳ (ತಾಂಬೂಲ) ಗಿಟ್ಟಿಸಿ, ಮೂರು ತಿಂಗಳ ಬಳಿಕ ತಿರುಗಿ ಬರುವ ಮಾತುಕೊಟ್ಟೇ ವಿದಾಯ ಹೇಳುವನು.

ಮಾವಿನಕುರ್ವೆಯ ಆಕರ್ಷಣೆಯನ್ನು ಹತ್ತಿರದಿಂದ ಕಂಡು ಸವಿದ ಬಳಿಕ ಹಿಂದಿರುಗಲು ಮನಸ್ಸೇ ಒಪ್ಪಲಿಲ್ಲ. ಆಮಂತ್ರಿಸಿದರೂ ಅತಿಥಿಗಳು ಬರದಿದ್ದಾಗ, ತಾವಾಗಿಯೇ ಆಗಮಿಸಿದ ದಂಪತಿಗಳ ಬಗ್ಗೆ ಕೇಶವನ ಕುಟುಂಬದವರು ವಿಶೇಷ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು ವರ್ಷಗಳು ಉರುಳಿ ನಿವೃತ್ತ ಜೀವನ ನಮ್ಮದಾದರೂ ಮಾವನಿಲ್ಲದ ಮಾವಿನಕುರ್ವೆಯಲ್ಲಿ ವಾಸಮಾಡುವ ಕನಸನ್ನು ನನಸು ಮಾಡಲಾಗಿಲ್ಲ. ಕಾರಣವಿಷ್ಟೆ! ಹಿರಿಯ ನಾಗರಿಕರಿಗೆ ಅವಶ್ಯವಿರುವ ಯಾವ ವೈದ್ಯಕೀಯ ಸವಲತ್ತು ಅಲ್ಲಿ ಇಲ್ಲ.

ಇಲ್ಲಿಯ ಅಮ್ಮನ ದೇವಸ್ಥಾನ ಜಿಲ್ಲೆಯ ಒಳ-ಹೊರಗೆ ಖ್ಯಾತಿ ಪಡೆದಿದೆ. ದೇವಸ್ಥಾನದ ಹೊರಗೆ ಭಕ್ತಾದಿಗಳಿಗೆ ಕೈಕಾಲು ತೊಳೆಯಲು ಕೂಡ್ರಿಸಿದ ನಲ್ಲಿಯ ನೀರು ಹೊರಗೆ ಹರಿದು ಹೋಗಲು ನಾವೆಯ ಆಕಾರದಲ್ಲಿ ಕಟಾಂಜನ ರಚಿಸಿದ್ದು ವಿಶಿಷ್ಟವೆನಿಸಿತು. ಈ ದೇವಾಲಯದ ಹೊರಗೋಡೆ ಮತ್ತು ಉಪ್ಪರಿಗೆಯನ್ನು ದೇವಿಯ ವಿವಿಧ ಅವತಾರಗಳ ಕಾವಿ ಚಿತ್ರಗಳಿಂದ ಅಲಂಕರಿಸಿದ್ದು ಒಂದು ಅಪೂರ್ವಕೊಡುಗೆಯಾಗಿ ಕಂಡಿತು. ಅವುಗಳಲ್ಲಿ 'ಅಷ್ಟಭುಜಾದೇವಿ' ಹಾಗೂ 'ಧೂಮ್ರಲೋಚನ ಮರ್ದಿನಿ' ಚಿತ್ರಗಳಂತೂ ಅಮೋಘವಾಗಿವೆ. ಗೋವಾ ಪರ್ತಗಾಳಿಮಠದ ಸ್ವಾಮಿಗಳು ಎಂದಾದರೊಮ್ಮೆ ಇಲ್ಲಿ ಆಗಮಿಸಿದಾಗ, ಅದ್ದೂರಿಯ ಪಾದಪೂಜೆ, ಭಜನೆ, ಭೋಜನಕೂಟಗಳು ನಡೆಯುತ್ತವಂತೆ. ಇಲ್ಲಿಯ ಗೋಪಾಲಕೃಷ್ಣ ದೇವಳ ಇನ್ನೊಂದು ಆಕರ್ಷಣೆ, ಶತಕಗಳ ಹಿಂದಿನ ಇಲ್ಲಿಯ ಭವ್ಯವಾದ ತೇರನ್ನು ಹೇಗೆ ಎಳೆಯುತ್ತಾರೆ.? ಎಂದು ಊಹಿಸುವದೂ ಕಷ್ಟವಾಯಿತು. ಆದರೆ ಜಾತ್ರೆಗೆ ಹೊನ್ನಾವರದ್ದಲ್ಲದೇ ಸುತ್ತಗ್ರಾಮಗಳ ಸಹಸ್ರಾರು ಭಕ್ತಾದಿಗಳು ಸೇರುವದರಿಂದ ಮತ್ತು ತೇರನ್ನು ಎಳೆಯುವದು ಪುಣ್ಯದ ಕೆಲಸವೆಂದು ಅವರೆಲ್ಲ ನಂಬಿದ್ದರಿಂದ ಜನಬಲದ ಕೊರತೆಯೇ ಇಲ್ಲವೆಂದು ಕೇಶವನು ವಿವರಿಸಿದ.

ಅಂದು ಹುಣ್ಣಿಮೆಯ ರಾತ್ರಿ. ಚಂದ್ರನು ಭೂಮಿಯಿಂದ ಮೇಲಕ್ಕೇರಿ ಬರುತ್ತಿದ್ದಂತೆ ನದಿ ತೀರದ ಬಂಡೆಯೊಂದರ ಮೇಲೆ ಸ್ಥಾಪಿತರಾದೆವು. ಆ ಬೆಳದಿಂಗಳಲ್ಲಿ ಪಳ ಪಳ ಹೊಳೆಯುತ್ತ ಹರಿಯುವ ನೀರು, ಅದರ ಜುಳು ಜುಳು ನಾದಕ್ಕೆ ತಲೆ ತೂಗುತ್ತನಿಂತ ತೆಂಗಿನ ಮರಗಳು, ದೂರದೂರದ ಸಹ್ಯಾದ್ರಿ ಸಾಲುಗಳು ಚಿತ್ರದೋಪಾದಿಯಲ್ಲಿ ಮರೆಯುತ್ತಿದ್ದವು. ಆಗೊಮ್ಮೆ

ಈಗೊಮ್ಮೆ ಗೂಗೆಗಳ ಕೂಗಾಟ ಕಚ್ಚಾಟವೂ ಕೇಳಿ ಬರಲಾರಂಭಿಸಿತು. ಈ ಸೌಂದರ್ಯ ಸೆರೆ ಹಾಕಿಸುವ ಸಾಮರ್ಥ್ಯದ ಕ್ಯಾಮರಾ ಇಲ್ಲವಲ್ಲ! ಎಂದು ಪರಿತಪಿಸಿದೆ. ಅನತಿದೂರದಲ್ಲಿ ಅಂಬಿಗರು ಹಾಡುತ್ತ ಜಲ್ಲು (ಹುಟ್ಟು) ಹಾಕುವದು ಕೇಳಿಬರುತ್ತಿತ್ತು. ನೀರು ಸೀಳುತ್ತ ನಾವೆಗಳು ಮುಂದುವರಿಯುವದು ಆಕರ್ಷಕ ನೋಟವಾಗಿತ್ತು. ಪ್ರವಾಸಿಗಳನ್ನು ಹೊತ್ತ ದೋಣಿಗಳು, ಹುಲ್ಲು, ಬೆಲ್ಲದ ಮಡಕೆಗಳು, ಹಂಚುಗಳನ್ನು ಹೊತ್ತ ನಾವೆಗಳು ಸಂಭ್ರಮದಿಂದ ಒಂದಾದ ಮೇಲೊಂದು ನೀರ ಮೇಲೆ ತೇಲುತ್ತ ನಡೆದಿದ್ದವು. ಅಪರೂಪದ ಈ ದೃಶ್ಯಗಳನ್ನು ನೋಡುತ್ತ ಕುಳಿತಿದ್ದೆವು. ಈ ಸೌಂದರ್ಯ ಸವಿಯುತ್ತ ಅದೆಷ್ಟು ಹೊತ್ತು ಕುಳಿತಿದ್ದೆವೆಂದು ತಿಳಿಯದು. ಮಲಗಲು ಎದ್ದಾಗ ಮಧ್ಯರಾತ್ರಿ ಮೀರಿ ಹೋಗಿತ್ತು.

ಮುಕ್ಕಣ್ಣನ ಮುರ್ಡೇಶ್ವರ

ವೀರಗಲ್ಲು, ಮಾಸ್ತಿಕಲ್ಲು, ಶಿಲಾಶಾಸನಗಳನ್ನು ಹುಡುಕುತ್ತ ಉತ್ತರಕನ್ನಡ ಜಿಲ್ಲೆಯ ಹಳ್ಳಿಗಳಲ್ಲಿ ಸುತ್ತಾಡುತ್ತಿದ್ದಾಗ ೧೯೬೨ರ ಬೇಸಿಗೆಯಲ್ಲಿ ಮೊದಲಬಾರಿಗೆ ಮುರ್ಡೇಶ್ವರದ ಮುರುಟಿದ ಈಶ್ವರಲಿಂಗದ ದರ್ಶನವಾಗಿತ್ತು. ದೇವಾಲಯವನ್ನು ತಲುಪಲು ಯಾವ ವಾಹನ ಸೌಕರ್ಯಗಳೂ ಇಲ್ಲದ್ದರಿಂದ ಕಾಲುನಡಿಗೆಗೆ ಶರಣು ಹೋಗಬೇಕಾಗಿತ್ತು. ಕಾರಿನಲ್ಲಿ ಓಡಾಡುವ ಉಚ್ಚಅಧಿಕಾರಿಗಳಿಗೆ ರಾಜಕಾರಣಿಗಳಿಗೆಂದು ಕಟ್ಟಿಸಿದ ತಂಗುದಾಣ ಬಿಕೋ, ಎಂದು ನಿಂತಿತ್ತು. ದೇವಾಲಯದ ಚಿಕ್ಕ ಮತ್ತು ದೊಡ್ಡ ತೇರುಗಳು ಬೆಚ್ಚಗಿನ ಗೂಡುಗಳಲ್ಲಿ ನಿಂತು ತಪಸ್ಸು ನಡೆಸಿದ್ದವು. ಸಾರ್ವಜನಿಕ ಬಾವಿ, ನೀರು ಸೇದುವವರಿಲ್ಲದೇ ಅನಾಥವಾಗಿತ್ತು. ಎದುರಿಗೆ ಅಬ್ಬರಿಸುತ್ತಿದ್ದ ಅರಬೀ ಸಮುದ್ರದ ಅಂಚಿಗೆ ಹತ್ತಾರು ಮೀನುಪೊತ್ತು ತಂದ ನಾವೆಗಳು ನಿಂತಿದ್ದವು. ಬಂಗಾಲಿಗಳಾಗಿದ್ದರೆ ಈ ಪರಮೇಶ್ವರನಿಗೂ ಮೀನಿನ ನೈವೇದ್ಯ ಒದಗಿಸುತ್ತಿದ್ದರೋ ಏನೋ! ತೀರ ಇಕ್ಕಟ್ಟಿನ ಕಾಲು ದಾರಿ ತುಳಿಯುತ್ತ, ಭವ್ಯವಾದ ಕಂದು ಪರ್ವತವನ್ನು ಏರಲಾರಂಭಿಸಿದಾಗ, ಬೇರೊಂದು ಲೋಕ್ಕೆ ಕಾಲಿಡುತ್ತಿದ್ದಂತೆ ಭಾಸವಾಯಿತು. ನಾಲ್ದೆಸೆಗಳಿಂದೂ ಅಬ್ಬರದ ತೆರೆಗಳು ಬಂದು ಸತತವಾಗಿ ಅಪ್ಪಳಿಸಿದರೂ, ವಿಚಲಿತವಾಗದೇ ವಿಘಟಿತವಾಗದೇ ಗಟ್ಟಿಯಾಗಿ ನಿಂತ ಈ ಪುರಾತನ ದೇವಾಲಯದ ಸ್ಥೈರ್ಯಕಂಡು ತಲೆತೂಗಲೇ ಬೇಕಾಯಿತು.

ಶಿಲೆ ಹಾಗೂಮಂಗಳೂರು ಹಂಚುಗಳಿಂದ ಮಾಡಿದ ಕಟ್ಟಡ ಹತ್ತಿರದ ಕಾಯಕಿಣಿಯ ಜೈನ ಅರಸರು ಕಟ್ಟಿಸಿದ್ದು. ಕ್ರಿ.ಶ. ೧೫೪೨ರ ಶಾಸನವೊಂದು, ಗೇರಸಪ್ಪೆಯ ಕೃಷ್ಣದೇವರಸ ನೆಂಬಾತನು, ನಂದಿ ಮಂಟಪವನ್ನು ಕಟ್ಟಿಸಿದ್ದಾಗಿ ಸಾರುತ್ತದೆ. ವಿಜಯನಗರದ ಆಳರಸು ಇಮ್ಮಡಿ ದೇವರಾಯನ ಶಾಸನವು ಇನ್ನೊಂದು ಕಂಬವನ್ನು ಅಲಂಕರಿಸಿದೆ ಅನೇಕಾನೇಕ ಶಿವಭಕ್ತರ ಹಾಗೂ ಜೈನ ಮತೀಯರ ವೀರಗಲ್ಲುಗಳು ಇಲ್ಲಿದ್ದು. ಕೆಲವೊಂದರ ಮೇಲೆ ಶಾಸನವೂ ಇದೆ. ಒಂದು ಕ್ರಿ.ಶ. ೧೪೧೪ನೇ ವರ್ಷವನ್ನು ನಮೂದಿಸಿದರೆ, ಇನ್ನೊಂದರ ಮೇಲೆ ೧೪೬೬ನೇ ವರ್ಷವನ್ನು ಕಾಣಿಸಲಾಗಿದೆ. ಇವುಗಳ ಆಧಾರದ ಮೇಲೆ ಈ ಪುಣ್ಯಕ್ಷೇತ್ರವು ಹದಿನೈದು ಹಾಗೂ ಹದಿನಾರನೆಯ ಶತಮಾನಗಳಲ್ಲಿ ಊರ್ಜಿತಾವಸ್ಥೆಯಲ್ಲಿತ್ತು ಎಂದು ಹೇಳಬಹುದು.

ಉತ್ತರಕನ್ನಡ ಜಿಲ್ಲೆಯ ಪಂಚ ಅಥವಾ ಐದು ಧಾರ್ಮಿಕ ಕ್ಷೇತ್ರಗಳಲ್ಲಿ ಇದೂ ಒಂದು ಎಂದು ಪರಿಗಣಿಸಲಾಗುತ್ತಿದೆ. ಪ್ರಚಲಿತ ಸ್ಥಳ ಪುರಾಣದ ಕತೆ ಹೀಗಿದೆ. ರಾವಣನ ತಾಯಿ ಶಿವಭಕ್ತೆಯಿದ್ದು ಶಿವನ ಆತ್ಮಲಿಂಗವನ್ನು ಪೂಜಿಸುವ ಆಸೆಯಿಂದ ಮಗನಿಗೆ ಹೇಳಿದಾಗ ಅವನು ಕಠಿಣ ತಪ್ಪಸು ಮಾಡಿ ಈಶ್ವರನನ್ನು ಒಲಿಸಿಕೊಳ್ಳುತ್ತಾನೆ. ನಿರುಪಾಯನಾದ ಶಿವನು ಪ್ರತ್ಯಕ್ಷನಾಗಿ ಲಿಂಗವನ್ನು ಕೊಡಮಾಡಿ ಅದನ್ನು ಎಂಥ ಪ್ರಸಂಗದಲ್ಲೂ ನೆಲದ ಮೇಲೆ ಇಡಕೂಡದೆಂದು ನಿರ್ದೇಶಿಸುತ್ತಾನೆ. ತಂದೆಯ ಔದಾರ್ಯ ಮನಸ್ಸಿಗೆ ಬಾರದ ಗಣೇಶನು, ಗೋಪಾಲಕನ ರೂಪ ತಾಳಿ ರಾವಣನನ್ನು ಅನುಸರಿಸುತ್ತಾನೆ. ದಾರಿಯಲ್ಲಿ ಜಲಬಾಧೆ ವಿಪರೀತವಾಗಿ ಅದನ್ನು ನಿವಾರಿಸಿಕೊಳ್ಳಲು, ಕೆಲ ಕ್ಷಣ ಲಿಂಗವನ್ನು ಹಿಡಿಯಲು, ರಾವಣನು ಹಿಂದೆ ಬರುತ್ತಿದ್ದ ಬಾಲಕನ

ನೆರವನ್ನು ಕೋರುತ್ತಾನೆ. ತಾನು ಮೂರು ಅಂಕೆ ಎಣಿಸುವದರೊಳಗೇ ಹಿಂದಿರುಗಬೇಕೆಂಬ ಒಪ್ಪಂದದ ಮೇಲೆ ಲಿಂಗವನ್ನು ಹೊರಲು ವೇಷಧಾರಿ ಗೋಪಾಲಕನು, ಆತ್ಮಲಿಂಗವನ್ನು ಪಡೆಯುತ್ತಾನೆ. ಆದರೆ ಕ್ಷಣಗಳ ಮಾಪನಕ್ಕೆ ತನ್ನದೇ ಅಳತೆ ಹಚ್ಚಿ, ಮೂರು ಅಂಕೆಗಳಾದೊಡನೆ ಗಣಪನು ಲಿಂಗವನ್ನು ನೆಲದ ಮೇಲೆ ಇಟ್ಟು ಬಿಡುತ್ತಾನೆ. ಕೋಪದಿಂದ ಸಿಡಿಮಿಡಿಯಾದ ರಾವಣನು ಸರ್ವಶಕ್ತಿಯನ್ನು ಬಳಸಿ, ಲಿಂಗವನ್ನು ಕಿತ್ತು ತೆಗೆಯಲು ಯತ್ನಿಸಿದಾಗ, ಗೋಕರ್ಣದಲ್ಲಿ ನಡೆದ ಈ ಘಟನೆಯಲ್ಲಿ ಲಿಂಗ ಕಟ್ಟಿದ ಬಟ್ಟೆಯು ಮುದುಡಿಯಾಗಿ ಹಾರಿ ಬಂದು ಮುರ್ಡೇಶ್ವರದಲ್ಲಿ ಬಿದ್ದಿತಂತೆ. ಈಶ್ವರ ಲಿಂಗದ ಆಕಾರವನ್ನೆ ಈ ಮುದುಡಿದ ಬಟ್ಟೆಯು ತಾಳಿ ಶಾಶ್ವತವಾಗಿ ಇಲ್ಲಿ ನಿಂತು ಬಿಟ್ಟಿದ್ದರಿಂದ ಮುರುಡೇಶ್ವರ ಎಂದು ಹೆಸರು ಬಂದಿತೆಂದು ವಾದಿಸುವವರು ಇದ್ದಾರೆ.

ಗರ್ಭಗೃಹದಲ್ಲಿದ್ದ ಲಿಂಗವನ್ನು ರಾವಣನು ಸ್ಥಾಪಿಸಿದ್ದು ಎಂದು ಹೇಳಲಾಗದು. ದೇವಾಲಯದ ಇದುರಿಗೆ ಅಂದರೆ ದಕ್ಷಿಣ ದಿಕ್ಕಿಗೆ ಗಣೇಶನ ಗುಡಿ ಇದೆ. ಪಶ್ಚಿಮಕ್ಕೆ ಜೋಡಿ ನಾಗಕಲ್ಲುಗಳನ್ನು ನಿಲ್ಲಿಸಲಾಗಿದೆ. ಸುತ್ತಲೂ ಕಡಲಿನ ಕರೆಯಿದ್ದು ಅಲ್ಲಿಯ ದಂಡೆಯಲ್ಲೆಲ್ಲ ಮೀನುಗಾರರ ವಸತಿಯಿದೆ. ತೆಂಗಿನ ತೋಪು ಮಾಡಿದ ಬತ್ತದ ಗದ್ದೆಗಳಿದ್ದ ಕೃಷಿಕರಿದ್ದಾರೆ. ವ್ಯಾಪಾರದಲ್ಲಿ ಒಕ್ಕೈ ಮಾಡಿಕೊಂಡ ಕೊಂಕಣೆಗರಿದ್ದಾರೆ. ಕೇವಲ ಬಡ್ಡಿವ್ಯವಹಾರದಿಂದಲೇ ಜೀವಿಸುವವರೂ ಇಲ್ಲದಿಲ್ಲ. ನವಾಯತ ಮಹಮ್ಮದೀಯರು ತೋಟ-ಗದ್ದೆಗಳೊಂದಿಗೆ ವ್ಯಾಪಾರವನ್ನು ಕೈಕೊಂಡು ನೆಮ್ಮದಿಯಿಂದ ಇದ್ದಾರೆ.

ಕ್ರಿ.ಶ. ೧೯೮೯ರಲ್ಲಿ ತಿರುಗಿ ಮುಡೇಶ್ವರದ ಮುಕ್ಕಣ್ಣನ ದರ್ಶನಕ್ಕೆ ಹೋದಾಗ ಘಟೋತ್ಕಚ ಸೃಷ್ಟಿಯಂತೆ ಎಲ್ಲವೂ ಬದಲಾಗಿತ್ತು. ಪಶ್ಚಿಮ ಕರಾವಳಿಯ ರಾಷ್ಟ್ರೀಯ ಹೆದ್ದಾರಿ (ನಂ. ೧೭)ಯಿಂದ ದೇವಾಲಯದ ವರೆಗೆ ಪಕ್ಕಾ ರಸ್ತೆಯಾಗಿತ್ತು. ಪ್ರವಾಸಿಗರಿಗೆ ಸ್ವಾಗತ ಕೋರಲು ಭವ್ಯವಾದ ಕಮಾನನ್ನು ನಿಲ್ಲಿಸಿದ್ದರು. ಆ ದಾರಿಯಲ್ಲಿ ಓಡುವ ಬಸ್ಸುಗಳೆಲ್ಲ, ಪ್ರಯಾಣಿಕ ವಾಹನಗಳೆಲ್ಲ ದೇವಸ್ಥಾನದ ವರೆಗೆ ಹೋಗಿ ಬರುತ್ತಿದ್ದವು. ಬಲುದೂರದ ಊರಿಗೆ ಹೊರಟ ವಾಹನಗಳು ಸಹ ಕತ್ರಿಯಲ್ಲಿ ಪ್ರವಾಸಿಗಳನ್ನು ಇಳಿಸಿಯೇ ಮುಂದರಿಯುತ್ತಿದ್ದವು. ಹಿಂದೊಮ್ಮೆ ಕಡಲಿಗೆ ಹೋಗುತ್ತಿದ್ದ ಅನಾಕರ್ಷಕ ಮೀನು ನಾವೆಗಳೆಲ್ಲ ಈಗ ವಿವಿಧ ಬಣ್ಣಗಳನ್ನು ಒಳಿದುಕೊಂಡು ನೋಡುಗರಿಗೆ ಸ್ವಾಗತಿಸುತ್ತಿರುವಂತೆ ವಿಹಾರಕ್ಕೆ ಸದಾ ಸಿದ್ಧವಾಗಿರುತ್ತಿದ್ದವು. ಕಡಲಭಾಗ ದಾಟಲು ಸುಸಜ್ಜಿತ ಸರ್ವಋತು ಕಾಲೀನ ರಸ್ತೆಯ ನಿರ್ಮಾಣವಾಗಿತ್ತು. ಬಂದವರಿಗೆಲ್ಲ ಸ್ವಾಗತ ಕೋರುತ್ತ ಸಾಲಂಕೃತ ಜೋಡಿ ಕಲ್ಲಿನ ಆನೆಗಳು, ಮಹಾದ್ವಾರದಲ್ಲಿ ನಿಂತಿದ್ದವು. ಎತ್ತ ನೋಡಿದರೂ ಹಬ್ಬದ ಸಡಗರ. ಜನಸಮೂಹದ ಈ ವರ್ತನೆ ಅತ್ಯಂತ ಕುತೂಹಲಕಾರಿಯಾಗಿತ್ತು.

೧೯೭೭ರಷ್ಟು ಹಿಂದೆಯೇ ಮುಡೇಶ್ವರ ದೇವಳದ ಜೀರ್ಣೋದ್ಧಾರ ಸಮಿತಿಯವರು ತಮಿಳುನಾಡಿನ ಹೆಸರಾಂತ ಶಿಲ್ಪಿ ಎಸ್.ಕೆ. ಆಚಾರಿ ಮತ್ತು ತಂಡದವರನ್ನು ಬರಮಾಡಿಕೊಂಡು ಈ ದೇವಾಲಯದ ಪುನರುತ್ಥಾನದ ಜವಾಬ್ದಾರಿಯನ್ನು ಒಪ್ಪಿಸಿದ್ದರು. ಕನ್ಯಾಕುಮಾರಿಯ ಸ್ವಾಮಿ ವಿವೇಕಾನಂದರ ಸ್ಮಾರಕವನ್ನು ಕಟ್ಟಿದ ನುರಿತ ತಂಡ ಇದಾಗಿತ್ತು. ಅವರು ತಮಗೆ ಬೇಕಾದ ಶಿಲೆಗಳನ್ನು ಬೇರೆ ಊರಿನಿಂದ ತರಿಸಿಕೊಂಡು, ಹಗಲೂ-ರಾತ್ರಿ ದುಡಿದು, ೧೯೮೫ರಲ್ಲಿ ದೇವಾಲಯದ ಮರುಕಟ್ಟಡ ಕೆಲಸವನ್ನು ಪೂರ್ತಿಗೊಳಿಸಿದರು ದ್ರಾವಿಡಶೈಲಿಯಲ್ಲಿ ಎರಡು

ಭವ್ಯಗೋಪುರಗಳನ್ನು ನಿಲ್ಲಿಸಿ, ಮೂಲದೇಗುಲ ಹಾಗೂ ಪುರಾತನ ಲಿಂಗವನ್ನು ಹಾಗೇ ಇಟ್ಟಿದ್ದಾರೆ. ಮುಕ್ಕಣ ಈಶ್ವರನ ಎದುರಿಗೆ ಹೊಸದಾಗಿ ನಂದಿಮಂಟಪ ಕಟ್ಟಲಾಗಿದೆ. ಮುಖ್ಯದೇವಾಲಯದ ಸುತ್ತಲೂ ಗಣೇಶ, ಪಾರ್ವತಿ, ಸುಬ್ರಹ್ಮಣ್ಯ, ದತ್ತಾತ್ರೇಯ, ಹನುಮಂತ ಮುಂತಾದ ದೇವತೆಗಳ ಗುಡಿಗಳಿವೆ. ಎಲ್ಲ ಕಟ್ಟಡಗಳ ಸುತ್ತಲೂ ಸಂದರ್ಭೋಚಿತವಾಗಿ ಉಬ್ಬು ಚಿತ್ರಗಳನ್ನು ಕೊರೆಯಲಾಗಿದೆ. ಆಚಿತ್ರಗಳನ್ನು ನೋಡುತ್ತಿದ್ದಂತೆ ಈ ಯಂತ್ರಯುಗದಲ್ಲೂ ಕೈಚಳಕದಿಂದ ಅ ಪ್ರತಿಮ ಶಿಲ್ಪಗಳನ್ನು ಕಂಡರಿಸಬಲ್ಲ ಶಿಲ್ಪಗಳು ಇದ್ದಾರೆಂದು ನೆನೆಸಿಕೊಂಡು ಮೈಪುಳಕಿತವಾಗುತ್ತದೆ. ಶಿಲ್ಪಗಳು ಯಾವುದೇ ಶೈಲಿ ಅಥವಾ ಸಂಪ್ರದಾಯಕ್ಕೆ ಕಟ್ಟು ಬೀಳದೇ ತಮ್ಮ ಅನುಕೂಲತೆಯ ಪ್ರಕಾರ ಚೋಳ, ಚಾಲುಕ್ಯ ಶೈಲಿಗಳ ಮಿಶ್ರಮಾದರಿಯನ್ನು ಬಳಸುತ್ತಿರುವಂತಿದೆ.

ಈ ನವೀಕರಣ ಕೇವಲ ಧರ್ಮಿಷ್ಟ ಭಕ್ತರಿಗಾಗಿ ಸೀಮಿತವಾಗಿಲ್ಲ. ಹಣದ ಹೊಳೆ ಹರಿಸಬಲ್ಲ ಪ್ರವಾಸಿಗರನ್ನೂ ಲಕ್ಷದಲ್ಲಿಟ್ಟುಕೊಂಡಿದ್ದಂತೆ ಅನಿಸುತ್ತದೆ. ದೇವಾಲಯದಿಂದ ಅನತಿ ದೂರದಲ್ಲಿ ಊರಿನ ಪಂಚತಾರಾ ಹಾಟೆಲ್ ಎಂದು ಕರೆಯ ಬಹುದಾದ ಪ್ರವಾಸಿಗರಿಗೆ ಸ್ಪೆಶಲ್ ಹೋಟೆಲ್ ಒಂದನ್ನು ಕಟ್ಟಲಾಗಿದೆ. ಮದುವೆ-ಮುಂಜಿಗಳನ್ನು ಸಾಂಗವಾಗಿ ನೆರವೇರಿಸಲು, ಕಲ್ಯಾಣ ಮಂಟಪವೂ ತಲೆಯೆತ್ತಿದೆ. ಕಡಲ ನಡುವಿನ ಬಂಡೆಯೊಂದರ ಮೇಲೆ ಉಪಾಹಾರ-ಗೃಹ ಭೋಜನಾಲಯಗಳನ್ನು ಸ್ಥಾಪಿಸಲಾಗಿದೆ. ಇವೆಲ್ಲ ಆಧುನಿಕವಾದ ಸುಧಾರಣೆಗಳಿಂದ ಪುಣ್ಯಕ್ಷೇತ್ರವು ಪ್ರವಾಸಿ ತಾಣವಾಗಿ ಪರಿಣಮಿಸಿದೆ. ಹಣಸುರಿಯುವವರಿಗೆ ಸ್ವಾಭಾವಿಕವಾಗಿಯೇ ಸಕಲ ಸೌಕರ್ಯಗಳು ಒದಗಿ ಬರುವದರಿಂದ ಹತ್ತಿರದ ಊರುಗಳ ಜನ ಮದುವೆ, ಮುಂಜಿ, ಇತರ ಕೌಟುಂಬಿಕ ಕಾರ್ಯಕ್ರಮಗಳನ್ನು ಇಲ್ಲಿಯೇ ನೆರವೇರಿಸುತ್ತಾರೆ. ವಾಸಕ್ಕಾಗಿ ಸುಸಜ್ಜಿತ ವಸತಿಗೃಹಗಳು ಎದ್ದಿವೆ. ಅನೇಕರು ವಿಶ್ರಾಂತಿಗಾಗಿ ಇಲ್ಲಿ ಆಗಮಿಸುತ್ತಾರೆ. ಊಟಿ, ಕೊಡೈಕೆನಾಲಗಳ ಅರ್ಧಖರ್ಚಿನಲ್ಲಿ ಇಲ್ಲಿ ರಜಾದಿನಗಳನ್ನು ಹಾಯಾಗಿ ಕಳೆಯಬಹುದೆಂದು ಪತ್ತೆ ಹಚ್ಚಿದ್ದಾರೆ. ಅನೇಕ ಒಳನಾಡಿನ ಪ್ರವಾಸಿಗಳು ಭೋರ್ಗರೆಯುವ ಕಡಲನ್ನು ನೋಡಿ ಹುಚ್ಚೆದ್ದು ಹೋಗುತ್ತಾರೆ. ಚಲಚ್ಚಿತ್ರ ಇಲ್ಲವೇ ದೂರದರ್ಶನಗಳಲ್ಲಿ ನೋಡುವ ಜಲಕ್ರೀಡೆಗಳನ್ನು ತಾವೂ ಕೈ ಕೊಳ್ಳಹೋಗಿ, ಅನಿರ್ಬಂಧಿತ ಕಡಲಿನ ಪ್ರವೃತ್ತಿ ಅರಿಯದೇ ಸಾವನ್ನಪ್ಪುವವರು ಅದೆಷ್ಟೂ ಜನ. ಛಾಯಾಗ್ರಹಣ ಪ್ರೇಮಿಗಳು ಕಡಲ ಮಧ್ಯದ ತಾಣದಲ್ಲಿ ನಿಂತು ಮೈ ಮರೆತು, ಕ್ಲಿಕ್ಕಿಸಲು ಇಲ್ಲವೇ ಕ್ಲಿಕ್ಕಿಸಿಕೊಳ್ಳಲು ಹೋಗಿ ಕಡಲು ಪಾಲಾದ ಉದಾಹರಣೆಗಳಿವೆ. ಆದ್ದರಿಂದ ಮುರ್ಡೇಶ್ವರಕ್ಕೆ ಹೋಗುವವರು ಕಡಲ ಸಾಹಸಕ್ಕೆಳಸದೇ ಇರುವದೇ ಮೇಲು!

ಪುರಾತನ ಕಾಲದ ದೇವಾಲಯ ಶಿಲ್ಪ ಹೇಗಿತ್ತು? ಅದರ ಪಳೆಯುಳಿಕೆಗಳು ಎಂತಿದ್ದವು? ಎಂದು ಅರಿಯಲಿಚ್ಛಿಸುವವರು ಹತ್ತಿರದ ಕಡಲ ತೀರಕ್ಕೆ ಭೇಟಿ ಕೊಡಬೇಕು. ಸುಂದರವಾದ ಕೆತ್ತನೆಯ ಕಂಬಗಳು, ಶಿಲಾಫಲಕಗಳು, ಯಾರಿಗೂ ಬೇಡವಾಗಿ, ಪ್ರತಿಯೊಂದು ತೆರೆಯ ಹೊಡೆತಕ್ಕೆ ತೆರೆದು ಬಿದ್ದಿವೆ. ದೇವಾಲಯದ ಆವಾರದಲ್ಲಿಯೇ ಒಂದು ಸಂಗ್ರಹಾಲಯವನ್ನು ನಿರ್ಮಿಸಿ, ಅಲ್ಲಿ ಇವುಗಳನ್ನು ಇರಿಸಿದ್ದರೂ ನಡೆಯುತ್ತಿತ್ತು. ಇಲ್ಲದಿದ್ದರೆ ಯಾವುದಾದರೂ ಕಲಾಲಯಕ್ಕೆ ಕೊಡುಗೆಯಾಗಿ ಕೊಡಬಹುದಾಗಿತ್ತು.

ಹೊನ್ನಾವರದ ಹಿರಿಮೆ (ಉತ್ತರ ಕನ್ನಡ ಜಿಲ್ಲೆ)

ಸೃಷ್ಟಿಕರ್ತನು ಹೊನ್ನಾವರದ ಸ್ಥಾನ ರಚನೆ ಮಾಡುವಾಗ ಆಹ್ಲಾದದ ಶಿಖರದಲ್ಲಿದ್ದಿರಬೇಕು! ಅಂತೆಯೇ ನಿಸರ್ಗ ಸೌಂದರ್ಯದಲ್ಲಿ ಇದು ಅದ್ವಿತೀಯ ಪಟ್ಟಣವೆನಿಸಿಕೊಂಡಿದೆ. ಭೂದೇವಿ ಇಂಥ ಸಿರಿಸೊಬಗಿನಿಂದ ಮೆರೆದ ಊರುಗಳು ವಿಶ್ವದಲ್ಲಿ ಅಪರೂಪವೆಂದೇ ಹೇಳಬೇಕು ಭೋರ್ಗರೆಯುವ ಅರಬೀಸಮುದ್ರ. ಹಿಟ್ಟು ಹಾಸಿದಂತಹ ಮಳಲ ಕಡಲದಂಡೆ, ಸರೋವರವೆಂಬ ಭ್ರಮೆ ಹುಟ್ಟಿಸುವ ವಿಸ್ತಾರವಾದ ಶರಾವತಿ ನದಿ, ಗಾಳಿ ಬೀಸದಾಗ ಸೂಯ್ ಸೂಯ್ ಎಂದು ಉಸಿರಾಡುವ ಗಾಳಿಮರಗಳ ತೋಪುಗಳು ಕಣ್ಣು ಹಾಯಿಸಿದಲ್ಲೆಲ್ಲ ಎತ್ತರವಾಗಿ ಬೆಳೆದು ನಿಂತ ತೆಂಗಿನ ಮರಗಳು, ಊರ ರಕ್ಷಕರಂತೆ ನಿಂತಿರುವ ಗುಡ್ಡಬೆಟ್ಟಗಳು, ಹಸಿರ ಹಚ್ಚಡ ಹೊತ್ತು ಕಣ್ಣಿಗೆ ಹಬ್ಬ ವುಂಟುಮಾಡುವ ಸಹ್ಯಾದ್ರಿ ಪರ್ವತದ ಶಿಖರಾವಳಿಗಳು, ಇವೆಲ್ಲವನ್ನು ಒಂದೊಂದಾಗಿ ಕಾಲು ನಡಿಗೆಯಲ್ಲೇ. ಕೆಲವೇ ಗಂಟೆಗಳಲ್ಲಿ ಕ್ರಮಿಸಿ, ಆಸ್ವಾದಿಸಬಹುದಾಗಿದೆ. ಇಂಥ ಸೌಂದರ್ಯಭರಿತ ಊರು ಪಶ್ಚಿಮ ಕರಾವಳಿಯ ಇತಿಹಾಸದಲ್ಲಿ ಬಲುದೊಡ್ಡ ಪಾತ್ರವಹಿಸಿದೆ ಎಂದು ನಂಬುವದು ಕಷ್ಟ!

ಊರಿನ ರಚನೆಯಾದರೂ ಪ್ರಾಚೀನವಾದ ಗ್ರೀಕ್, ರೋಮನ್ ನಗರಗಳನ್ನು ನೆನಪಿಗೆ ತರುವಂತೆ ವಿಶಿಷ್ಟವಾದದ್ದು. ಟಪ್ಪರ್ ಹಾಲ್, ಊರಿನ ಹೃದಯ ಸ್ಥಾನದಲ್ಲಿದ್ದು, ಆರು ರಾಜಮಾರ್ಗಗಳ ಸಂಗಮ ಅಲ್ಲಿಯೇ ಆಗುತ್ತದೆ. ಅಂತೆಯೇ ಅಲ್ಲಿಂದ ನಡೆಯುತ್ತ ಊರಿನ ಯಾವ ಮೂಲೆಯನ್ನಾದರೂ ಸೇರಬಹುದು. ಈ ಆಯಕಟ್ಟಿನ ಸ್ಥಳದಿಂದ ಪೂರ್ವಕ್ಕೆ ಸಹ್ಯಾದ್ರಿ ಪರ್ವತದ ಚುಂಗು ಪಶ್ಚಿಮಕ್ಕೆ ಅರಬೀ ಸಮುದ್ರ ದಕ್ಷಿಣಕ್ಕೆ ಶರಾವತಿ ನದಿ, ಉತ್ತರಕ್ಕೆ ಬಡಗಣಿ ಹೊಳೆ. ಬಂದರು, ಕೆಳಗಿನ ಪಾಳ್ಯ, ಗುಡ್ಡಗಳು, ಶೆಟ್ಟಿಕೆರೆ, ರಾಮತೀರ್ಥಗಳು ಈ ಊರಿನ ಮುಖ್ಯ ತಾಣಗಳು. ಹೊನ್ನಾವರಕ್ಕೆ ಎರಡು ಸಹಸ್ರ ವರ್ಷಗಳ ದೀರ್ಘ ಇತಿಹಾಸವಿದೆ. ಆದರೆ ಕೆಲ ದಶಕಗಳ ಹಿಂದೆ ಇದೊಂದು ಐತಿಹಾಸಿಕ ಕುರುಹುಗಳನ್ನು ಹೊತ್ತು ನಿಂತ ಹಿರೇಹಳ್ಳಿಯಾಗಿ ಉಳಿಯಿತು.

ಕಾಲಕಾಲಕ್ಕೆ ಈ ಊರಿಗೆ ಭೇಟಿಯಿತ್ತ ವಿದೇಶೀಯರು ತಮ್ಮ ನಾಲಿಗೆ ಹೊರಳಿದಂತೆ, ಇದರ ಹೆಸರನ್ನು ಬದಲಾಯಿಸುವ ಸ್ವಾತಂತ್ರ್ಯ ತೆಗೆದುಕೊಂಡಿದ್ದಾರೆ. ಉತ್ತರ ಆಫ್ರಿಕದ ಮೊರೊಕ್ಕೊದಿಂದ ಬಂದಿದ್ದ ಇಬ್ನ್ ಏ. ಬತೂತ್ (ಕ್ರಿ.ಶ. ೧೩೦೪-೬೯)ನು ಹಿನಾವ್ರ್! ಎಂದು ಉಚ್ಚರಿಸಿದರೆ. ಪರ್ಶಿಯದ ಅಬ್ದುಲ್ ರಝಾಕ್‌ನು (ಕ್ರಿ.ಶ. ೧೪೧೩-೮೨) ಮನೋರ್ ಎಂದಿದ್ದಾನೆ.! ವಿಜಯನಗರಕ್ಕೆ ಕ್ರಿ.ಶ. ೧೫೨೦ರಲ್ಲಿ ಭೇಟಿಯಿತ್ತ ಪೋರ್ತುಗಾಲದ ಡುಮಿಂಗೋ ಪ್ಯಾಸ್‌ನು ಹೊನೋರ್ ಎಂದರೆ ಕ್ರಿ.ಶ. ೧೫೮೪ರಲ್ಲಿ ಗೋವಾದ ವೈಸ್‌ರಾಯ್ ಆಗಿ ಬಂದ, ಪೋರ್ತುಗಾಲದ ಡಾ। ರು.ಆರ್ತ್ ಡಿ ಮೆನೆಝಿಸ್‌ನು ಒನೇರ್ ಎಂದಿದ್ದಾನೆ. ಜರ್ಮನಿಯಲ್ಲಿ ಹೆಚ್ಚು ಕಡಿಮೆ ಇದೇ ಹೆಸರಿನ ಹಾನೋವರ್ ಎಂಬ ಪ್ರಸಿದ್ಧ ಐತಿಹಾಸಿಕ ಸ್ಥಳವಿರುವದು ಕುತೂಹಲಕಾರಿ! ಊರ ಹೆಸರಿನ ಉತ್ಪತ್ತಿಯ ಕುರಿತು ವಾದ-ವಿವಾದಗಳು ಇದ್ದೇ ಇವೆ. ರಾಣಿ

ಹೊನ್ನಮ್ಮಳ ಹೆಸರನ್ನು ಹೊಂದಿದೆ ಎಂದು ಕೆಲವರೆಂದರೆ ವಿದೇಶದೊಂದಿಗೆ ಹೊನ್ನಿನ ವ್ಯಾಪಾರದ ಮುಖ್ಯ ಸ್ಥಳವಾಗಿದ್ದರಿಂದ ಈ ನಾಮ ವಿಶೇಷ ಎನ್ನುತ್ತಾರೆ. ಆಳರಸರ ಆಸ್ಥಾನದವರು ಶಾಸನಗಳನ್ನು ಕಂಡರಿಸುವಾಗ ಸಂಸ್ಕೃತ ವ್ಯಾಮೋಹದಿಂದ ಹೊನ್ನಾವರವನ್ನು ಸುವರ್ಣಾಪುರವೆಂದು ಪರಿವರ್ತಿಸಿದ್ದು ಇದೆ. ಆದರೆ ಜನಸಾಮಾನ್ಯರು ತಮ್ಮ ಮೆಚ್ಚಿನ ಹೊನ್ನೂರಿನ ಹೆಸರ ಬದಲಾವಣೆಯನ್ನು ಒಪ್ಪಿಕೊಳ್ಳಲೇ ಇಲ್ಲ.

ಇಬ್ನ್.ಎ. ಬತೂತ ಭೇಟಿಯಿತ್ತಾಗ ಇಲ್ಲಿಯ ಬಹುಸಂಖ್ಯಾತ ಮುಸಲ್ಮಾನರು, ಸೂಫಿ ಪಂಥ ಒಪ್ಪಿಕೊಂಡ ಶಾಂತಿಯುತ, ಧಾರ್ಮಿಕ ನಡೆ ನುಡಿಯ ನಾಗರಿಕರಿದ್ದರು. ಅವರ ಹೆಂಗಳೆಯರು ಸುಂದರಿಯರಾಗಿದ್ದರು. (ಅರ್ಥಾತ್ ಅವರು ಬುರ್ಖಾಗಳಿಂದ ಆವೃತರಾಗಿರುತ್ತಿರಲಿಲ್ಲ!) ಹೊನ್ನಾವರವನ್ನು ಆಳುತ್ತಿದ್ದ ಜಮಾಲ್ ಉದ್ದೀನ್ ಮೊಹಮ್ಮದ, ಹರಿಯಪ್ಪನೆಂಬ ಅರಸನ ಮಾಂಡಲಿಕನಿದ್ದು ಆತನ ಬಳಿ ಧೈರ್ಯ, ಸಾಹಸಗಳಿಗೆ ಹೆಸರಾದ ಆರು ಸಹಸ್ರ ಮಲಬಾರಿ ಸೈನಿಕವಿದ್ದರಂತೆ. ಬಹಮನಿ ಸೇನಾಧಿಪತಿ, ಮಲಿಕ್-ಉಲ್-ತುಜಾರ್ ನೊಂದಿಗೆ ಕಲಿತನದಿಂದ ಕಾದಿದರೂ ಸೋಲಬೇಕಾಗಿದ್ದರಿಂದ ಕ್ರಿ.ಶ. ೧೪೭೯ರಲ್ಲಿ ಮೂರ್ ಸೈನಿಕರೆಲ್ಲ ಹೊನ್ನಾವರ ಬಿಟ್ಟು ಹೋಗಿ ಗೋವಾದಲ್ಲಿ ನೆಲೆ ನಿಲ್ಲಬೇಕಾಯಿತು. ಆ ಬಳಿಕ ಪಟ್ಟಕ್ಕೆ ಬಂದಾತ ಪೋರ್ಚುಗೀಸರ ಆಪ್ತನಾಗಿದ್ದರಿಂದ ಅವರಿಗೆ ೧೫೪೭ರಲ್ಲಿ ಈ ಊರಿನಲ್ಲಿ ಫ್ಯಾಕ್ಟರಿ (ವಖಾರಿ) ಸ್ಥಾಪಿಸಲು ಅನುವು ಮಾಡಿಕೊಟ್ಟ ನಂತರ ಕ್ರಿ.ಶ. ೧೫೬೮ರಲ್ಲಿ ಕೋಟೆಯನ್ನೂ ಕಟ್ಟಲಾಯಿತು. ಆದರೆ ಕ್ರಿ.ಶ. ೧೫೭೧ರಲ್ಲಿ ಕಾಳಗದಲ್ಲಿ ಸೋತ ಅವರು ಯುದ್ಧದ ಹಡಗುಗಳನ್ನು ಹಾಳುಗಡವಿ, ಊರನ್ನು ಸುಟ್ಟು ಬೂದಿಮಾಡಿದರು.

ಈಗ ಬ್ರಿಟಿಶರು ಆಗಮಿಸಿದರು. ಕ್ರಿ.ಶ. ೧೭೨೭ರಲ್ಲಿ ತಮ್ಮದೊಂದು ಫ್ಯಾಕ್ಟರಿ ಪ್ರಾರಂಭಿಸಿದರು. ಪ್ರತಿವರ್ಷ ೨೧೦ ಟನ್‌ದಷ್ಟು ಕರಿಮೆಣಸನ್ನು ಖರೀದಿಸಿ ತಮ್ಮ ದೇಶಕ್ಕೆ ರಫ್ತು ಮಾಡಲು ಅನುವು ಮಾಡಿಕೊಂಡರು. ಮುಂದೆ ೧೭೬೩ರಲ್ಲಿ ಹೈದರ್ ಅಲಿ ಹೊನ್ನಾವರವನ್ನು ಆಕ್ರಮಿಸಿ ಅದನ್ನು ಯುದ್ಧಕಾಲೀನ ಬಂದರ್ ಆಗಿ ಪರಿವರ್ತಿಸಿ ಸೈನ್ಯವನ್ನಿಟ್ಟನು. ಆದರೆ ಮುಂದೆ ಟಿಪ್ಪುಸುಲ್ತಾನನು, ಬ್ರಿಟಿಶರ ಕೈಲಿ ತನಗೆ ಸೋಲು ಕಟ್ಟಿಟ್ಟಿದ್ದು! ಎಂದು ಮನವರಿಕೆ ಆದೊಡನೆ ಹೊನ್ನಾವರ ಬಂದರನ್ನೂ ಸುಟ್ಟು ನೆಲ ಸಮ ಮಾಡಿದನು. ೧೭೯೯ರ ಶ್ರೀರಂಗಪಟ್ಟಣದ ಯುದ್ಧದಲ್ಲಿ, ಟಿಪ್ಪುವು ಕೊಲ್ಲಲ್ಪಟ್ಟದ್ದರಿಂದ ಮಸಣವಾಗಿದ್ದ ಹೊನ್ನಾವರದಲ್ಲಿ ಐದೇ ಐದು ಅಂಗಡಿಗಳು ತೆರೆಯಲ್ಪಟವು. ಕ್ರಿ.ಶ. ೧೮೦೧ರಲ್ಲಿ ಬ್ರಿಟಿಶ್ ಪ್ರವಾಸಿ ಬುಕ್ಯಾನನ್‌ನು ಭೇಟಿ ನೀಡಿದಾಗ, ಆಗಷ್ಟೆ ಓಡಿ ಹೋಗಿದ್ದ ವ್ಯಾಪಾರಿಗಳು, ನಾಗರಿಕರು, ಹಿಂದಿರುಗಿ ಬಂದು ವ್ಯಾಪಾರ ಉದ್ಯೋಗಗಳನ್ನು ಪ್ರಾರಂಭಿಸಿದ್ದರಷ್ಟೆ. ಬ್ರಿಟಿಶರು ಸಂಪೂರ್ಣ ಕನ್ನಡ ಜಿಲ್ಲೆಗೆ ಹೊನ್ನಾವರವನ್ನೆ ಮುಖ್ಯ ಪಟ್ಟಣವನ್ನಾಗಿ ಮಾಡಿದ್ದರಿಂದ ಅಲ್ಲಿ ಕೋರ್ಟು, ಕಛೇರಿ, ಜೈಲುಗಳನ್ನು ಸ್ಥಾಪಿಸಲಾಯಿತು. ಆದರೆ ಈ ದೊಡ್ಡ ಜಿಲ್ಲೆಯನ್ನು ಕ್ರಿ.ಶ. ೧೮೬೨ರಲ್ಲಿ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳೆಂದು ಇಬ್ಭಾಗ ಮಾಡಿ ಉತ್ತರ ಕನ್ನಡ ಜಿಲ್ಲೆಗೆ ಕಾರವಾರವನ್ನು ಜಿಲ್ಲೆಯ ಆಡಳಿತ ಕೇಂದ್ರವನ್ನಾಗಿ ಮಾಡಿದ್ದರಿಂದ ಹೊನ್ನಾವರದ ಮಹತ್ವ ಕುಗ್ಗುತ್ತ ಬಂದಿತು.

ಕೆಲವೇ ದಶಕಗಳ ಹಿಂದೆ ಹೊನ್ನಾವರದ ಗತೇತಿಹಾಸದ ಕುರುಹುಗಳು ಸುರಕ್ಷಿತವಾಗಿದ್ದವು. ಊರಮಧ್ಯದಲ್ಲಿಯೇ ಟಿಪುಸುಲ್ತಾನನು ಕಟ್ಟಿಸಿದ ಭವನ ಇತ್ತು. ಮಳೆ-ಗಾಳಿ ಬಿಸಿಲಿಗೆ ಹಾಳುಬಿದ್ದು

ಭೂತ-ಬಂಗ್ಲೆ ಆಗಿ ಮಾರ್ಪಟ್ಟಿತ್ತು. ಜನರು ಅಲ್ಲಿ ಹಾಯುವದಕ್ಕೂ ಹೆದರುತ್ತಿದ್ದರು. ಸಂತ ಗಾಡಗೆ ಬುವಾರು ಹೊನ್ನಾವರಕ್ಕೆ ನಾಲ್ವತ್ತರ ದಶಕದಲ್ಲಿ ಭೇಟಿಯಿತ್ತಾಗ ಸ್ಥಾನಿಯರೆಲ್ಲ ವರ್ಗಣಿ ಶೇಖರಿಸಿ, ಆ ಬಂಗ್ಲೆಯನ್ನು ಶುದ್ಧಗೊಳಿಸಿ, ಸಾರ್ವಜನಿಕರಿಗೆ ಸಭೆ-ಊಟೋಪಚಾರಗಳ ವ್ಯವಸ್ಥೆ ಮಾಡಿ ಬುವಾರ ಕೀರ್ತನೆ ವ್ಯಾಖ್ಯಾನಗಳಿಗೆ ಅನುವು ಮಾಡಿಕೊಟ್ಟರು. ನಂತರ ಆ ಸ್ಥಳಕ್ಕೆ ಮಹತ್ವ ಬಂದು ಅಲ್ಲಿ ಚಲಚ್ಚಿತ್ರ ಮಂದಿರವೊಂದು ನಿರ್ಮಾಣವಾಯಿತು. ಈಗ ಸರಕಾರಿ ಆಸ್ಪತ್ರೆ ತಲೆಯೆತ್ತಿದ ಸ್ಥಳದಲ್ಲಿ ಪೋರ್ಚುಗೀಜರು ಕಟ್ಟಿಸಿದ ಕೋಟೆಯ ಅವಶೇಷಗಳಿದ್ದವು. ವಖಾರಿಯಿದ್ದ ಜಾಗವೇ ಮುಂದೆ ಸ್ಥಾನೀಯರು ಸಗಟು ವ್ಯಾಪಾರಕ್ಕಾಗಿ ಬಳಸಿಕೊಳ್ಳಲು ಸಹಾಯಮಾಡಿತು. ಅನತಿದೂರದಲ್ಲಿ ಧರ್ಮಿಷ್ಠ ವರ್ತಕನೊಬ್ಬ ಕಟ್ಟಿಸಿದ ಶೆಟ್ಟಿಕೆರೆ (ಕೋಟೆಕೆರೆ ಯೆಂದೂ ಇದಕ್ಕೆ ಹೆಸರಿದೆ) ಸುಸ್ಥಿತಿಯಲ್ಲಿತ್ತು. ಶರಾವತಿ ನದಿತೀರದಲ್ಲಿ, ಸಾಗರಗಾಮಿ ಹಡಗುಗಳ ಮೇಲೆ ಸರಕುಗಳನ್ನು ಹೇರಲು ಬಳಸುತ್ತಿದ್ದ ಕ್ರೇನು ನಿದ್ರಾವಸ್ಥೆಯಲ್ಲಿತ್ತು. ಕೈದಿಗಳಿಗೆ ನಿರ್ಮಿತವಾದ ಜೈಲು "ಕಸಬಾ ಗಂಡು ಮಕ್ಕಳ ಶಾಲೆ"ಯಾಗಿ ಪರಿವರ್ತನಗೊಂಡಿತ್ತು. ಊರಿಗೆ ಹೊಂದಿದ್ದ ಗಣೇಶನ ದೇವಸ್ಥಾನದ ಆವಾರದಲ್ಲಿಯೇ ಆಪಾದಿತರನ್ನು ಗಲ್ಲಿಗೇರಿಸುವ ಗದ್ದಿಗೆ ಹಾಗೂ ಎರಡು ಬಾವಿಗಳು ಇದ್ದವು. ಇನ್ನೊಂದು ಗುಡ್ಡದ ಮೇಲೆ ೩೬ ಅಡಿ ಎತ್ತರದ ಕಂಭವಿದೆ. ಅದಕ್ಕೆ ಜೋಡಿಸಿದ ಶಿಲಾಫಲಕವು ಮೈಸೂರು ಆಳರಸರೊಡನೆ ಎಸಗಿದ ಯುದ್ಧದಲ್ಲಿ ಬ್ರಿಟಿಶ್ ಸೈನ್ಯಾಧಿಕಾರಿ ಕರ್ನಲ್ ಹಿಲ್‌ನು ಗೇರಸಪ್ಪಾದಲ್ಲಿ ೨೦-೧-೧೮೫೪ರಲ್ಲಿ ಮಡಿದದ್ದರಿಂದ ಅವನ ಪಾರ್ಥಿವ ಶರೀರವನ್ನು ಇಲ್ಲಿ ಸಮಾಧಿ ಮಾಡಿ ಗೋರಿಯನ್ನು ಕಟ್ಟಲಾಗಿದೆಯೆಂದು ಸಾರುತ್ತದೆ. ಹಿಂದಿನ ದಿನಗಳಲ್ಲಿ ಮೂರು ವರ್ಷಗಳಿಗೊಮ್ಮೆ ಅಸ್ತಂಭವನ್ನು ಸ್ವಚ್ಛಗೊಳಿಸಿ ಸುಣ್ಣಬಳಿಯುವ ಪರಿಪಾಠ ಇತ್ತು. ಹೈದರಲಿ, ಟೀಪುಸುಲ್ತಾನ, ಪೋರ್ಚುಗೀಜರು ಹಾಗೂ ಬ್ರಿಟಿಶರು ಸೈನ್ಯವನ್ನು ಸದಾ ಸಿದ್ಧವಿಡಲು ಹಡಗಿನ ತಂಗುದಾಣವಾಗಿದ್ದ ಶರಾವತಿ ತೀರದ ಭಾಗಕ್ಕೆ ಕೆಳಗಿನ ಪಾಳ್ಯವೆಂದೂ, ಅದಕ್ಕೆ ಸಮಾನಾಂತರವಾಗಿ ಕೊಂಚ ಎತ್ತರದ ಸುತ್ತವರಿದ ವಸತಿ ಭಾಗವನ್ನು ಮೇಲಿನ ಪಾಳ್ಯವೆಂದೂ ಕರೆಯುತ್ತಿದ್ದು ಇಂದಿಗೂ ಈ ಶಬ್ದಗಳು ಪ್ರಚಲಿತವಾಗಿವೆ.

ನನ್ನ ಬಾಲ್ಯದಲ್ಲಿ ಜನಜಂಗಳಿಗೆ ಬೇಸತ್ತು ಶಾಂತಿಯನ್ನು ಹುಡುಕಿಕೊಂಡು ಕಾಡಿಗೆ ಹೋಗಬೇಕಾಗಿಯೇ ಇರಲಿಲ್ಲ! ಊರಕೊಂಚ ಹೊರಗೆ ಫಲ-ಪುಷ್ಪ ಭರಿತವಾದ ತೋಟದ ವಡಗೇರಿ ಇದೆ. ಅಲ್ಲಿ ವಿಪುಲವಾಗಿ ಬೆಳೆಯುತ್ತಿದ್ದ ಗೇರು (ಗೋಡಂಬಿ) ಹಣ್ಣು, ಮಾವು, ನೇರಳೆ, ಮುಳ್ಳು ಹಣ್ಣುಗಳನ್ನು ತಿನ್ನದೇ ಊರ ಮಕ್ಕಳು ಬೆಳೆದಿದ್ದ ನೆನಪಿಲ್ಲ! ಅದೊಂದು ಪಕ್ಷಿಧಾಮವೂ ಹೌದು, ಕಾಡು ಪಾರಿವಾಳಗಳು ಪ್ರಿಯತಮೆಯನ್ನು ಗುಟುರ್! ಗುಟುರ್! ಗುಕ್! ಎಂದು ಆರ್ತವಾಗಿ ಕೂಗಿ ಕರೆದರೆ, ಗುಟ್ರಗುಮ್ಮವೊಂದು ಮರ ತುತ್ತ ತುದಿಯೇರಿ ಗುಟ್ರುಕ್! ಗುಟ್ರುಕ್! ಎಂದು ಗಗನ ದತ್ತ ಮುಖ ಮಾಡಿ ಹಾಡುತ್ತಿರುತ್ತದೆ. ಕಪ್ಪು ಬಿಳಿ ಸಿಸಿಲೆಯ ಸಿಳ್ಳನ್ನು ರೂಢಿಸಕೊಳ್ಳಲು ಒಂದು ತಿಂಗಳು ಸತತವಾಗಿ ಯತ್ನಿಸಿದರೂ ಸಾಧ್ಯವಾಗದಷ್ಟು ಸಪುರರವಾದದ್ದು. ಮರಕುಟಿಗಗಳು ಹುಳ-ಪುಪ್ಪಡಿಗಳ ಶೋಧದಲ್ಲಿ ಅಲ್ಲಿಂದಿಲ್ಲಿ ಹಾರಾಡುವದರಲ್ಲಿ ಮೈಮರೆತಿರುತ್ತವೆ. ವಿರಮಿಸುವ ಗೊರವಂಕ ನಾಶೀಪುಡಿ ಬಣ್ಣದ್ದಾಗಿ ಗೋಚರಿಸಿದರೆ. ಹಾರುವಾಗ ಶ್ವೇತವರ್ಣಕ್ಕೆ ಪರಿವರ್ತನೆಗೊಂಡಂತೆ ಕಾಣುವದು ಸೋಜಿಗ! ಪಿಕಳಾರ ಹಕ್ಕಿ, ಹೆಚ್ಚಿನ ಸಮಯವನ್ನು ಪತ್ನಿಯೊಂದಿಗೆ ಕಾಮಚೇಷ್ಟೆಯಲ್ಲಿ ಕಳೆಯುತ್ತದೆ. ಕಪ್ಪು ಮೂತಿಯ ಕೋತಿಗಳು "ಇಂದಿಗೆ ಇಷ್ಟು

ಹಾಳುಗೆಡವಿದ್ದು ಸಾಕು!" ಎಂದು ತಮ್ಮ ವಿಶ್ರಾಂತಿ ಸ್ಥಾನವನ್ನು ಸೇರುತ್ತವೆ. ಕತ್ತಲಾಗುತ್ತಿದ್ದಂತೆ ತಕ್ಕುನರಿಗಳು ತಮ್ಮ ಆಡಗುದಾಣಗಳಿಂದ ಹೊರಬಂದು ಕುಯ್ಯೊ! ಕುಯ್ಯೊ! ಎಂದು ತಮ್ಮ ಇತರ ಬಾಂಧವರನ್ನು ಕೂಗಿ ಕರೆಯಲಾರಂಭಿಸುತ್ತವೆ. ಅದೃಷ್ಟ ಚೆನ್ನಾಗಿದ್ದರೆ. ನೀರು ಕುಡಿಯುಲೆಂದು ಹೊರ ಬಂದ ಹುಲಿರಾಯನ ದರ್ಶನವೂ ಲಭಿಸೀತು! ಇಂತಹ ದಿನಗಳನ್ನು ಕಂಡ ಭಾಗ್ಯ ನನ್ನದು.

ಗಗನದ ಉತ್ತರಕ್ಕಿರುವ 'ರಾಮತೀರ್ಥ', ನಿಸರ್ಗದತ್ತವಾದ ಸ್ವಚ್ಛ, ಬೆಚ್ಚಗಿನ ನೀರಿನ ಝರಿ. ವಿದೇಶೀ ಪ್ರವಾಸಿಗರೂ ಇದನ್ನು ಮನವಾರೆ ಮೆಚ್ಚಿಕೊಂಡು, ಅದರ ಬಗ್ಗೆ ಬರೆದಿದ್ದಾರೆ. ಇಟಾಲಿಯ ಪೀಟ್ರೊ ಡೆಲ್ಲಾವಾಲೆ ಇಲ್ಲಿ ಕ್ರಿ.ಶ. ೧೬೨೩ರಲ್ಲಿ ಭೇಟಿಕೊಟ್ಟ. ಈ ಬೆಚ್ಚಗಿನ ನೀರುಗುಡ್ಡದ ಅಂತರಾಳದಿಂದ ಹರಿದುಬಂದು, ಕಲ್ಲಿನಿಂದ ಕಟ್ಟಿದ ಕೆರೆಯಲ್ಲಿ ಧುಮುಕುತ್ತದೆ. ಎಂದು ಬರೆದಿದ್ದಾನೆ. ಹ್ಯಾಮಿಲ್ಟನ್‌ನು ಕ್ರಿ.ಶ. ೧೭೨೦ರಲ್ಲಿ ಅಲ್ಲಿಯ ದೇವಸ್ಥಾನದಿಂದ ಐವತ್ತು ಮೆಟ್ಟಿಲು ಇಳಿದು ಹೋದರೆ ರಾಮತೀರ್ಥವನ್ನು ತಲುಪಬಹುದು, ಎಂದಿದ್ದಾನೆ. ಕೆರೆ ಒಂದಾಳು ಆಳವಾಗಿದ್ದು ಅಲ್ಲಿ ಕಂದು ಬಣ್ಣದ ಮೀನು ಸಾಕಿದ್ದಾರೆ. ಮಂಗಳ ವಾದ್ಯಗಳನ್ನು ನುಡಿಸಿದಗೊಮ್ಮೆ ಅವು ಗುಂಪುಗುಂಪಾಗಿ ನೀರ ಮೇಲ್ಗಡೆಗೆ ಪ್ರತ್ಯಕ್ಷವಾಗುವವು. ಅವುಗಳನ್ನು ಅತಿಸುಲಭವಾಗಿ ಹಿಡಿಯ ಬಹುದಾಗಿದ್ದರೂ, ಅವು ದೇವರ ಮೀನುಗಳಾಗಿದ್ದರಿಂದ ಯಾರೂ ಅವುಗಳ ಗೊಡವೆಗೆ ಹೋಗುವದೇ ಇಲ್ಲ. ಪ್ರತಿವರ್ಷವೂ ಸಹಸ್ರಾರು ಯಾತ್ರಿಕರು ಇಲ್ಲಿ ಬಂದು ಮಿಂದು ಪಾವನರಾಗುತ್ತಾರೆ. ವರ್ಷಕ್ಕೊಮ್ಮೆ ಜರುಗುವ ಜಾತ್ರೆಯಲ್ಲಿ ಪೂಜಾವಿಗ್ರಹವನ್ನು ನಾಲ್ಕು ಗಾಲಿಯ ತೇರಿನಲ್ಲಿ ಪ್ರತಿಷ್ಠಾಪಿಸಿ ಭಕ್ತಾದಿಗಳೆಲ್ಲ ಊರ ಬೀದಿ ಬೀದಿಗಳಲ್ಲಿ ಎಳೆದುಕೊಂಡು ಹೋಗುತ್ತಾರೆ.


ಇಂಥ ಸುಂದರ ತಾಣದ, ಸಂರಕ್ಷಣೆಗಾಗಿ ಊರವರು ತಲೆಕೆಡಿಸಿಕೊಂಡೇ ಇಲ್ಲವೆನ್ನುವದು ಅತಿ ಖೇದದ ಮಾತು. ಊರಲ್ಲಿ ನೋಡಿದೆಡೆ ತಿಪ್ಪೆರಾಶಿ, ಕೊಳಚೆ, ಗೂಡಂಗಡಿಗಳು. ರಾಷ್ಟ್ರೀಯ ಕರಾವಳಿ ಹೆದ್ದಾರಿ ಹಾಗೂ ಕೊಂಕಣ ರೇಲ್ವೆ ಮಾರ್ಗಗಳು ಈ ಊರೊಳಗಿಂದಲೇ ಹಾದು ಹೋಗುತ್ತವೆ. ಇದ್ದರಿಂದ ನಾಗರಿಕರಿಗೆ ಅನುಕೂಲವಾಗುವ ಬದಲು ಕಳ್ಳಕಾಕರಿಗೆ, ಸ್ಮಗ್ಲರ್ ಹಾಗೂ ಪೋಚರ್‌ಗಳಿಗೆ ತಮ್ಮ ಕಾಯಕಗಳನ್ನು ನಿಶ್ಚಿಂತೆಯಿಂದ ನೆರವೇರಿಸಿ ಪಲಾಯನವಾಗಲು ಅವಕಾಶ ಕಲ್ಪಿಸಿದಂತಾಗಿದೆ. ಕೊಲೆ-ಸುಲಿಗೆಗಳು ಎಂದಿಲ್ಲ ದಪ್ಪ ಹೆಚ್ಚಾಗಿವೆ. ಇಕ್ಕಟ್ಟಿನ ರಸ್ತೆ - ಪೇಟೆ-ಬೀದಿಗಳಲ್ಲಿ ಯಾವಾಗ-ಎಂಥ ಅನಾಹುತ ಸಂಭವಿಸೀತು, ಎಂದು ಹೇಳುವಂತಿಲ್ಲ. ಇದೇ ನವೆಂಬರ ತಿಂಗಳಲ್ಲಿ ತುಳಸೀ ಹಬ್ಬದ ದಿನದಂದು, ಪಟಾಕ್ಷಿ ಅಂಗಡಿಯೊಂದಕ್ಕೆ ಬೆಂಕಿಬಿದ್ದು, ರಾತ್ರಿ ಹತ್ತು ಗಂಟೆಯಿಂದ ನಸುಕಿನ ಮೂರು ಗಂಟೆಯವರೆಗೆ ಉರಿಯಿತು. ದೂರದೂರಿನಿಂದ ಏಳು ಅಗ್ನಿ ಶಾಮಕಗಳು ಧಾವಿಸಿ ಬರಬೇಕಾಯಿತು. ಇಷ್ಟಾದರೂ ಹೊನ್ನಾವರ ಊರಿನಲ್ಲಿ ಈ ಮೊದಲು ಬೆಂಕಿ ಅನಾಹುತಗಳ ಹಾನಿ ಸಂಭವಿಸುತ್ತಲೇ ಇದ್ದರೂ, ಊರಿಗೆ ಒಂದಾದರೂ ಅಗ್ನಿಶಾಮಕವನ್ನು ತರಿಸುವ ಯೋಚನೆಯನ್ನು ವ್ಯಾಪಾರಿ ಸಂಘದವರೂ ಮಾಡಲಿಲ್ಲ. ನಾಗರಿಕರೂ ಕೈಕೊಳ್ಳಲಿಲ್ಲ. ತೀರಾ ಪ್ರಾಥಮಿಕವಾದ ಇಂಥ ಸವಲತ್ತು ಹೊಂದಿದ್ದರೆ. ಕೋಟ್ಯವಧಿ ರೂಪಾಯಿಗಳ ಸರಕು ಸುಟ್ಟು ಹೋಗುವದನ್ನು ತಪ್ಪಿಸಬಹುದಾಗಿತ್ತಲ್ಲವೇ?

ಡಾ. ಕೃಷ್ಣಾನಂದ ಕಾಮತ್ ಕನ್ನಡದ ಸೃಜನಶೀಲ ಬರಹಗಾರರಲ್ಲಿ ಚಿರಪರಿಚಿತ ಹೆಸರು. ವಿಜ್ಞಾನಿ, ಛಾಯಾಗ್ರಾಹಕ, ಲಲಿತ ಪ್ರಬಂಧಕಾರ, ವಿಜ್ಞಾನ ಬರಹಗಾರ, ಪ್ರವಾಸಿ ಲೇಖಕ, ಹಾಸ್ಯ ಬರಹಗಾರ, ಜನಾಂಗೀಯ ಅಧ್ಯಯನ ವಿದ್ವಾಂಸ ಹೀಗೆ ಡಾ. ಕಾಮತ್‌ರವರು ಬಹು ಶ್ರುತರಾಗಿದ್ದಾರೆ. 'ನಾನು ಅಮೆರಿಕೆಗೆ ಹೋಗಿದ್ದೆ' ಯಿಂದ 'ಬಸ್ತರ್‌ಯಾತ್ರೆ' ಯವರೆಗಿನ ಅವರ ಸಾಹಿತ್ಯ ರಚನೆಯ ವೈವಿದ್ಯತೆಗೆ ಪ್ರಶಸ್ತಿಗಳು ಸನ್ಮಾನಗಳು ಹುಡುಕಿಕೊಂಡು ಬಂದಿವೆ.

ಇರುವೆಯ ಇರುವು, ಪ್ರಾಣಿ ಪರಿಸರ, ಮುಂತಾದ ಜನಪ್ರಿಯ ವೈಜ್ಞಾನಿಕ ಕೃತಿಗಳು, ಮಾದರಿ ಬರವಣಿಗೆ ಎಂದು ಗುರ್ತಿಸಿಕೊಂಡಿವೆ.

ಪ್ರವಾಸವನ್ನು ರಸವತ್ತಾಗಿ ಅನುಭವಿಸಿ ಸರಳವಾಗಿ, ನಿರೂಪಿಸುವುದು ಇವರ ಹೆಚ್ಚುಗಾರಿಕೆ. ಪ್ರವಾಸ ಕೈಗೊಂಡು ವರ್ಷಗಳೇ ಉರುಳಿದ್ದರೂ ಇವರ ಅನುಭವದ ಪ್ರಸ್ತುತತೆ ಕಿಂಚಿತ್ತೂ ಕಡಿಮೆಯಾಗಿಲ್ಲ. ಹಿರಿಯರು ಪ್ರವಾಸ ಮುಗಿಸಿ ಮನೆಗೆ ಬಂದಾಗ ಊಟ ಮಾಡುತ್ತಾ ಮನೆಯವರೆಲ್ಲರ ಜೊತೆ ಅನುಭವ ಹಂಚಿಕೊಳ್ಳುವ ಆತ್ಮೀಯತೆ ಇಲ್ಲಿನ ಬರಹಗಳಲ್ಲಿದೆ. ಜೊತೆಗೆ ಕಾಮತರ ನವಿರಾದ ಹಾಸ್ಯಪ್ರಜ್ಞೆ ನಮ್ಮನ್ನು ಕಚುಗುಳಿಯ ಅನುಭವದೊಂದಿಗೆ ಆವರಿಸಿಕೊಳ್ಳುತ್ತದೆ.

ಪ್ರವಾಸಿಯ ಪ್ರಬಂಧಗಳು ಲಲಿತ ಪ್ರಬಂಧದ ನವಿರು, ಸ್ವೋಪಜ್ಞತೆ ಮತ್ತು ಪ್ರವಾಸ ಸಾಹಿತ್ಯದ ಕತೆಗಾರಿಕೆಯ ತಂತ್ರವನ್ನು ಸುಂದರವಾಗಿ ಮೇಳೆಸಿಕೊಂಡಿವೆ.



ಶ್ರೀವಾರಿ ಪ್ರಕಾಶನ

ನಂ. 19/6, ನಾಗಪ್ಪ ಬೀದಿ, ಪ್ಯಾಲೇಸ್ ಗುಟ್ಟಹಳ್ಳಿ
ಬೆಂಗಳೂರು-560 003. ☎ : 3444311